ಅಧ್ಯಕ್ಷರು :— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಹೀಗೆ ಎಲ್ಲಾ ಸಚಿವರ ಪರವಾಗಿ ಮಾನ್ಯ ಭೈರೇಗೌಡರು ಒಬ್ಬರೇ ಕಾಗದಪತ್ರಗಳನ್ನು ಮಂಡಿಸುತ್ತಿದ್ದಾರೆ. ಯಾರಾದರೂ ಒಬ್ಬಿಬ್ಬರು ಸದನದಲ್ಲಿ ಇರದಿದ್ದರೆ ಅಂಥವರ ಪರವಾಗಿ ಇವರು ಮಂಡಿಸಲು ಅಡ್ಡಿ ಇಲ್ಲ. ಅದನ್ನು ಬಿಟ್ಟು ಇಲ್ಲಿ ಇರುವವರ ಪರವಾಗಿಯೂ ಹೀಗೆ ಒಬ್ಬರು ಮಂಡಿಸುವುದು ಸರಿಯೇ? ಹಾಗಾದರೆ ರೂಲ್ಸ್, ಪ್ರೊಸೀಜರ್ಸ್ ಮುಂತಾಗಿ ಏಕೆ ಇರಬೇಕು?

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ಇದು ಸರಿಯೇ ಎಂಬ ಬಗ್ಗೆ ತಾವು ಅಪ್ಪಣೆ ಕೊಡಿಸಬೇಕು. ಯಾರಾದರೂ ಸದನದಲ್ಲಿ ಇರಲಿಲ್ಲ ಅಂದರೆ ಅವರ ಪರವಾಗಿ ಇನ್ನೊಬ್ಬರು ಮಂಡಿಸಬಹುದು. ಇಲ್ಲಿ ಇರುವವರ ಪರವಾಗಿಯೂ ಕೂಡ ಇವರು ಅವರ ಹೆಸರಿನಲ್ಲಿರತಕ್ಕಂಥ ಕಾಗದಪತ್ರಗಳನ್ನು ಮಂಡಿಸುತ್ತೇನೆ ಎಂದು ಹೇಳಿದರೆ ಎಷ್ಟು ಅಪಹಾಸ್ಯವಾಗುತ್ತದೆ? ಇದು ಸರಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ಹೇಗೂ ಖಾತೆ ರಹಿತ ಮಂತ್ರಿಗಳು ಇದ್ದಾರಲ್ಲ? ಅವರಿಗೆ ಈ ತರಹದ ಕೆಲಸಗಳನ್ನು ಕೊಟ್ಟುಬಿಡಲಿ..

ಅಧ್ಯಕ್ಷರು :— ಶ್ರೀರಾಮರೆಡ್ಡಿಯವರು ಹೇಳಿದ್ದು ಒಳ್ಳೆಯ ಸಜೆಶನ್....

4. ವರದಿಯನ್ನೊಪ್ಪಿಸುವುದು.

ಶ್ರೀ ಕೆ. ಶರಣಪ್ಪ (ಅಧ್ಯಕ್ಷರು, ಹಕ್ಕು ಬಾಧ್ಯತಾ ಸಮಿತಿ) :— ಮಾನ್ಯ ಅಧ್ಯಕ್ಷರೇ, ಹಕ್ಕು ಬಾಧ್ಯತಾ ಸಮಿತಿಯ ನಾಲ್ಕನೇ ವರದಿಯನ್ನು ತಮ್ಮ ಅನುಮತಿ ಪಡೆದು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ವರದಿಯನ್ನು ಒಪ್ಪಿಸಲಾಯಿತು. ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟ ಸೂಚನೆ ನಿನ್ನೆ ಬಂದಿದೆ, ಅದನ್ನು ಮುಂದಕ್ಕೆ ತೆಗೆದುಕೊಳ್ಳುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ.

ರಾಜ್ಯದಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡಿರುವುದು.

+ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ, ಪಂಚಾಯತ್ ಚುನಾವಣೆಗಳನ್ನು ರಾಜ್ಯದಲ್ಲಿ ಮುಂದೂಡಿರುವ ಬಗ್ಗೆ, ಸುಗ್ರೀವಾಜ್ಞೆಯನ್ನು ಮಾಡಿರುವುದರ ಬಗ್ಗೆ, ಹಾಗೂ ಅಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂಥ ಪ್ರಮುಖ

ವಿಚಾರಗಳ ಬಗ್ಗೆ ನಿನ್ನೆ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ತಾವುಗಳು ಒಂದು ಸಾರಿ ಅಡ್ಮಿಟ್ ಮಾಡಿಕೊಂಡು ತದನಂತರ ಬೇಕಾದರೆ ಬೇರೆಯದನ್ನು ತೆಗೆದುಕೊಳ್ಳಬೇಕೆಂದು ನಮ್ಮ ಕೋರಿಕೆ. ಯಾಕೆಂದರೆ ವಿಷಯದ ಮಹತ್ವ ಹೊರಟು ಹೋಗಬಹುದೆಂದು ನಮ್ಮ ಅನಿಸಿಕೆ.

ಅಧ್ಯಕ್ಷರು :— ನಾನು ಇಷ್ಟೇ ಹೇಳಲು ಇಷ್ಟಪಡುತ್ತೇನೆ. We are not taking it up under adjournment motion. ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಅದನ್ನು ತೆಗೆದುಕೊಳ್ಳುತ್ತಾ ಇಲ್ಲ. ನಿನ್ನೆ ಅವರು ಬಂದಾಗಲೂ ಕೂಡ ಇದನ್ನು ನಿಯಮ 69ರ ಕೆಳಗೆ ಕನ್‌ವರ್ಟ್ ಮಾಡುತ್ತೇನೆ ಎಂದು ಹೇಳಿದ್ದೇನೆ. ಇದನ್ನು ಈ ಕೂಡಲೇ ಡಿಸ್‌ಕಶನ್‌ಗೆ ತೆಗೆದುಕೊಳ್ಳಲು ಯಾವ ಸಮಸ್ಯೆಯೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ, ತಮ್ಮ ಅವಧಿಯಲ್ಲಿಯೇ ಇದುವರೆಗೂ ನಡೆದುಕೊಂಡು ಬಂದ ಸತ್ ಸಂಪ್ರದಾಯದ ಪ್ರಕಾರ, ಯಾವುದೇ ನಿಲುವಳಿ ಸೂಚನೆಯ ಪ್ರಕಾರ ಇಲ್ಲಿ ನಾವು ಪ್ರಸ್ತಾಪ ಮಾಡಿದಾಗ, ಎಲ್ಲಾ ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ತಮಗೆ ಮನವರಿಕೆ ಮಾಡಿಕೊಡುವಲ್ಲಿ ನಾವು ವಿಫಲರಾದರೆ ಅದನ್ನು ತಾವು ತಳ್ಳಿಹಾಕಿದ್ದೀರಿ. ಆಗ ವಿಷಯಕ್ಕೆ ವ್ಯಾಪಕತೆ ಬರುತ್ತದೆ. ಚರ್ಚೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೇ, ಮೊದಲು ಈ ವಿಷಯ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟು, ತದನಂತರ ಶೂನ್ಯವೇಳೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಸಾಮಾನ್ಯವಾಗಿ ಪ್ರಿಲಿಮಿನರಿ ಸಬ್‌ಮಿಶನ್ ಮಾಡುವುದು, ಆಮೇಲೆ ಅವರು ಕ್ಲಾರಿಫಿಕೇಶನ್ ಕೊಡುವುದು, ಆ ಮೇಲೆ ನಾನು ಅಡ್ಮಿಟ್ ಮಾಡುವುದು ಮುಂತಾಗಿ ಪ್ರೊಸೀಜರ್ಸ್‌ಗೆ ಏಕೆ ಸಮಯವನ್ನು ವ್ಯಯ ಮಾಡಬೇಕು? ಈಗ ಶೂನ್ಯ ವೇಳೆಗಾಗಿ 16 ನೋಟೀಸ್‌ಗಳು ಇದ್ದುವು. ಅದರಲ್ಲಿ 11 ಮಾನ್ಯ ಬಿಜೆಪಿ ಸದಸ್ಯರುಗಳು ಕೊಟ್ಟಿರುವುದು ಇವೆ. ಆದ್ದರಿಂದ ಈ ವಿಚಾರವನ್ನು ಮೊದಲು ತೆಗೆದುಕೊಂಡು ಆ ಮೇಲೆ ಶೂನ್ಯವೇಳೆ ತೆಗೆದುಕೊಳ್ಳುತ್ತೇನೆ. ಈಗ ಮಾನ್ಯ ಪ್ರಕಾಶ್‌ರವರು -ಪಂಚಾಯತ್ ರಾಜ್ ಚುನಾವಣೆಗಳನ್ನು ಮುಂದೂಡಿರುವ ವಿಚಾರದಲ್ಲಿ ನಿನ್ನೆ ಅವರು ಏನು ಪ್ರಸ್ತಾಪ ಮಾಡಿದ್ದರು, ಈಗ ನಿಯಮ 69ರ ಪ್ರಕಾರ ಕೂಡಲೇ ವಿಷಯ ಪ್ರಸ್ತಾಪವನ್ನು ಅವರು ಮಾಡುತ್ತಾರೆ. ಸದಸ್ಯರುಗಳು ಪ್ರಸ್ತಾಪ ಮಾಡಿದ ನಂತರ ತಾವುಗಳು ಉತ್ತರಿಸಲು ತಯಾರಾಗಿರಿ. ಮಾನ್ಯ ಈಶ್ವರಪ್ಪನವರು ಪ್ರಾರಂಭ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಗ್ರಾಮಪಂಚಾಯತಿಯ ಚುನಾವಣೆಗಳನ್ನು ಮುಂದಕ್ಕೆ ಹಾಕಿ, ಒಂದು ರೀತಿಯಲ್ಲಿ ರಾಜ್ಯದ ವ್ಯವಸ್ಥೆಯನ್ನು ತಟಸ್ಥಗೊಳಿಸುವ ಮತ್ತು ಪ್ರಜೆಗಳ ಹಕ್ಕನ್ನು ಮೊಟಕುಗೊಳಿಸುವ ಕಾರ್ಯವನ್ನು ಮಾಡಿದ್ದಾರೆ ಎಂಬ ವಿಚಾರವನ್ನು ತುಂಬಾ ನೋವಿನಿಂದ ಹೇಳಬೇಕಾಗಿದೆ. ಜನತಾದಳ ಸರಕಾರದವರು ತಿದ್ದುಪಡಿಯನ್ನು ತಂದು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವಂಥ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಮಾನ್ಯ ರಾಜ್ಯಪಾಲರು ಕೂಡ ಸುಗ್ರೀವಾಜ್ಞೆಯ ಮುಖಾಂತರ ಪ್ರಜಾಪ್ರಭುತ್ವದ ಅವಹೇಳನ ಮಾಡುವ ದಿಕ್ಕಿನಲ್ಲಿ ಒಂದು ಹೆಜ್ಜೆಯನ್ನು ಮುಂದಿಟ್ಟು ಹೋಗಿದ್ದಾರೆ ಎಂಬ ಮಾತನ್ನು ತುಂಬಾ ನೋವಿನಿಂದ ಹೇಳಬೇಕಾಗಿದೆ. ಏಕೆಂದರೆ ಇವರಂತೂ ರಾಜಕಾರಣ ಮಾಡುವಂತಹ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಆಗಬಾರದಂಥ ಅನಾಹುತಗಳು ರಾಜ್ಯದಲ್ಲಿ ಆಗಿ ರಾಜ್ಯದಲ್ಲಿ ಆಡಳಿತ ಇದೆಯೋ, ಇಲ್ಲವೋ ಎಂಬ ಅನುಮಾನ ಉಂಟಾಗಿ ಒಂದು ರೀತಿಯ ರಾಜಕಾರಣ ಮಾಡಿ ಮತ್ತೆ ಚುನಾವಣೆ ನಡೆದರೆ ತಮ್ಮ ಸೋಲು ಖಚಿತವೆಂಬ ತೀರ್ಮಾನವನ್ನು ಮಾಡಿಕೊಂಡು ಇವೊತ್ತು ತಿದ್ದುಪಡಿ ತರುವಂಥ ಪ್ರಯತ್ನ ಮಾಡುತ್ತಾ ಇದ್ದಾರೆ. ನಮ್ಮ ರಾಜ್ಯಪಾಲರು ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗಿತ್ತು. ಈ ಸುಗ್ರೀವಾಜ್ಞೆಗೆ ಯಾವ ಕಾರಣಕ್ಕಾಗಿಯೂ ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ಕೊಡಬಾರದಾಗಿತ್ತು. ಇದೊಂದು ಗಂಡಾಂತರ ತಿದ್ದುಪಡಿಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಕೈಗೆ ತೆಗೆದುಕೊಂಡು ಅಡ್ಮಿಸಿಬಿಲಿಟಿಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನನ್ನ ಆಕ್ಷೇಪಣೆ ಇರುವುದಿಲ್ಲ. ಈಗ ಇರತಕ್ಕಂಥ ನಿಯಮಾವಳಿಗಳ ಪ್ರಕಾರ ಅದನ್ನು ಚರ್ಚೆಗೆ ತೆಗೆದುಕೊಳ್ಳಲು ಆಗುವುದಿಲ್ಲ. ತಮ್ಮ ಮನ ಒಲಿಸಿ ಅವರು ತೆಗೆದುಕೊಳ್ಳುವುದಾದರೆ ನನ್ನ ಅಭ್ಯಂತರವಿಲ್ಲ.

(ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದನ್ನು ನಿಯಮ 69ರ ಪ್ರಕಾರ ಕನ್‌ವರ್ಟ್ ಮಾಡಿದರೂ ಕೂಡ ಇದು ಸಬ್‌ಜ್ಯುಡೀಸ್ ಆಗಿರುವುದರಿಂದ ಪ್ರಸ್ತಾಪಿಸಲು ಬರುವುದಿಲ್ಲ.

ಛೇರ್ಮನ್ :— ಈಗಾಗಲೇ ಈ ಬಗ್ಗೆ ಒಂದು ತೀರ್ಮಾನವನ್ನು ಕೊಟ್ಟು ಪ್ರಸ್ತಾಪ ಮಾಡಲು ಅವಕಾಶವನ್ನು ಕೊಟ್ಟಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೇ, ಕೌಲ್ ಅಂಡ್ ಶಕ್ಧರ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂಥ ರಿಟ್ ಪಿಟಿಶನ್ ನಂಬರ್ 3679...

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೇ, ನಾವು ಕೋರ್ಟಿನಲ್ಲಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡುವುದಿಲ್ಲ. ನಮ್ಮ ಪ್ರಜಾಪ್ರಭುತ್ವದ ಅಡಿಯಲ್ಲಿ ವ್ಯವಸ್ಥೆಯ ಟರ್ಮ್ ಮುಗಿದಿರುವ ವಿಚಾರದ ಬಗ್ಗೆ ನಾವು ಪ್ರಸ್ತಾಪ ಮಾಡುತ್ತೇವೆ. ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೀರಲ್ಲ ಅದರ ಬಗ್ಗೆ ನಾವು ಪ್ರಸ್ತಾಪ ಮಾಡುತ್ತೇವೆ. ಈ ವಿಚಾರದ ಬಗ್ಗೆ ಕೋರ್ಟ್‌ನಿಂದ ಸ್ಟೇ ಕೂಡ ಇಲ್ಲ ಎಂಬುದನ್ನು ಹೇಳಲು ಇಷ್ಟಪಡುತ್ತೇವೆ. ಇನ್ನು ಅತೀ ಹೆಚ್ಚು .ಅಂದರೆ 6 ತಿಂಗಳುಗಳಲ್ಲಿ ಚುನಾವಣೆಯನ್ನು ನಡೆಸಲೇಬೇಕು. ಇಲ್ಲಿ ಸಂವಿಧಾನದಲ್ಲಿ ನೀಡಿರತಕ್ಕಂಥ ಹಕ್ಕುಗಳ ಬಗ್ಗೆ ಅಪಪ್ರಚಾರವಾಗಿದೆ. ನಾವು ಕೋರ್ಟ್‌ನಲ್ಲಿರುವ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ನ್ಯಾಯಾಲಯದ ಮುಂದೆ ಇರುವ ರಿಟ್ ಪಿಟಿಶನ್ ನಂಬರ್ 3679 ಮತ್ತು 3826 ಇವೆರಡಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಚುನಾವಣೆಯನ್ನು ಮುಂದೂಡಿ, ಚುನಾವಣೆಯನ್ನು ಮಾಡದೇ ಇರತಕ್ಕಂಥಾದ್ದಕ್ಕೆ, ಚುನಾವಣೆ ನಡೆಸಲು ಸರಕಾರಕ್ಕೆ ಆದೇಶ ಕೊಡಿ ಎಂಬ ವಿಚಾರದಲ್ಲಿ ಪ್ರಸ್ತಾಪನೆಯಾಗಿ, ಈ ವಿಚಾರದಲ್ಲಿ ಈಗಾಗಲೇ 24ನೇ ಫೆಬ್ರವರಿ ಮತ್ತು 1, 2, ಮಾರ್ಚ್‌ನಲ್ಲಿ ಹೀಯರಿಂಗ್ ಮುಂತಾಗಿ ಮುಗಿದುಹೋಗಿದೆ. Judgement of the court is reserved. law is very clear... ತಾವು ಹಿರಿಯರಿದ್ದೀರಿ, ಕೌಲ್ ಅಂಡ್ ಶಕ್ದರ್‌ನಲ್ಲಿ `The rule whether a motion which relates to a matter which is under adjudication by a court of law...

ಶ್ರೀ ವಾಟಾಳ್ ನಾಗರಾಜ್ :— ನ್ಯಾಯಾಲಯಕ್ಕೆ ಹೋದಾಕ್ಷಣಕ್ಕೆ ಅದು ನ್ಯಾಯ್ಯಾಂಗಚ್ಯುತಿ ಆಗುವುದಿಲ್ಲ, ಇನ್ನೂ ತೀರ್ಪೆ ಅವರು ಕೊಟ್ಟಿಲ್ಲ, ಆದ್ದರಿಂದ ಇದು ನ್ಯಾಯಾಲಯ ನಿಂದನೆಯೂ ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಇದರಲ್ಲಿ ಸಂವಿಧಾನಕ್ಕೆ ಅಪಚಾರವಾಗಿದೆ.

SRI PRAMILA NESARGI : It is not the question that is challenged. ಅವರು ಹೇಳಿದ್ದಾರೆ ಎಲೆಕ್ಷನ್ ಮಾಡಿ ಎಂದು it is not the question whether you hold the election, or not ನಾವು ಕೇಳುತ್ತಿರುವುದು it is not valid ಕೋರ್ಟ್ ಆರ್ಡರನ್ನು ನೀವು ಕೇಳುತ್ತೀರೋ ಬಿಡುತ್ತೀರೋ ಬೇರೆ ವಿಷಯ.

ಶ್ರೀ ಎಂ.ಪಿ. ಪ್ರಕಾಶ್ :— ನಾನು ಹೇಳಿದ ಮೇಲೆ ನೀವು ಕೇಳಿ, ನಾನು ಹೇಳಿದರೆ ನೀವು ಹೇಗೆ ಕೇಳುತ್ತೀರಿ? ದಯಮಾಡಿ ನನಗೊಂದು ಅವಕಾಶ ಕೊಡಿ, ತಾವು ಒಪ್ಪದೇ ಇರಬಹುದು ಆ ಮಾತು ಬೇರೆ.

ಛೇರ್ಮನ್ :— ಮಾನ್ಯ ಸಚಿವರೇ, ತಾವೇನು ಪ್ರಸ್ತಾವನೆ ಮಾಡಿದ್ದೀರಿ, ನೀವು ನಿಮ್ಮ ಪತ್ರ ಓದುತ್ತಿದ್ದೀರೆ ವಿನಾಃ ಕೋರ್ಟಿನಲ್ಲಿ ಪ್ರಸ್ತಾಪಿಸಿರುವ ಇಶ್ಯೂಗಳೇನು? ಎಂಬುದೇನೂ ನಮ್ಮ ಮುಂದಿಲ್ಲ. ಈಗತಾನೇ ಅವರು ಎತ್ತಿರುವುದು ರೆಲೆವೆಂಟೊ ಅಥವಾ ಇರೆಲೆವೆಂಟೋ ಅಲ್ಲವೋ ಎಂಬ ಪ್ರಶ್ನೆ ಏಳುವುದು.

ಶ್ರೀ ಎಂ.ಪಿ. ಪ್ರಕಾಶ್ :— ತಮ್ಮ ಗಮನಕ್ಕೆ ತರುತ್ತಿದ್ದೇನೆ ಈ ವಿಚಾರದಲ್ಲಿ ಅಡ್ವೊಕೇಟ್ ಜನರಲ್‌ರು ಪ್ರಸ್ತಾಪಿಸಿರುವುದು ಕೂಡ The subject matter in the above petition on Karnataka Panchayat Raj (Amendment) Karnataka Ordinance No.4 the first of the petition the prayer is for a direction to the State Government and the State Election Commission to hold elections to all the Gram Panchayats in the State of Karnataka within the time stipulated by Article 243 of the Constitution of India, in the second petition they challenged the validity of Karnataka Ordinance No.1 of 1999 ಹೀಗಾಗಿ ಅಲ್ಲಿ ಎರಡೂ ವಿಚಾರಗಳು ಪ್ರಸ್ತಾಪಿತವಾಗಿವೆ. ಒಂದು, ನೀವು 243ನೇ ವಿಧಿ ಪ್ರಕಾರ 6 ತಿಂಗಳೊಳಗಾಗಿ ಚುನಾವಣೆ ಮಾಡಬೇಕಾದ ಅಗತ್ಯ ಇರುವುದರಿಂದ ಮಾನ್ಯ ಈಶ್ವರಪ್ಪನವರು ಪ್ರಸ್ತಾಪಿಸಿದಂತೆ ರಾಜ್ಯಾಂಗಕ್ಕೆ ಅಪಚಾರ ಮಾಡಲಾಗಿದೆ ಎಂಬುದು ಅದು ಆಗಿದೆಯೋ ಇಲ್ಲವೋ ಎಂಬುದೂ ಈ ರಿಟ್ ಪಿಟಿಶನ್‌ನಲ್ಲಿ ಸೇರಿಕೊಂಡಿದೆ. ಎರಡನೆಯ ರಿಟ್ ಪಿಟಿಶನ್‌ನಲ್ಲಿ ಸುಗ್ರೀವಾಜ್ಞೆ ರಾಜ್ಯಪಾಲರು ಹೊರಡಿಸಿರುವುದು ಎಷ್ಟು ಸಾಧು ಎಂದು ಅವರು ಪ್ರಾರಂಭ ಮಾಡಿದರು ಆ ರಾಜ್ಯಾಂಗದ ವಿಚಾರವೂ ಎರಡನೇ ರಿಟ್ ಪಿಟಿಶನ್‌ನಲ್ಲಿದೆ. ಇವೆರಡರ ಬಗ್ಗೆಯೂ ಸಮಗ್ರ ವಿಚಾರಣೆ 24ನೇ ಫೆಬ್ರವರಿ, 1 ಮತ್ತು 2ನೇ ಮಾರ್ಚ್‌ನಲ್ಲಿ ಆಗಿ ನ್ಯಾಯಾಲಯವು ಅದರ ತೀರ್ಪನ್ನು ಕಾದಿರಿಸಿದ್ದಾರೆ. ಆದ್ದರಿಂದ, ಅದೇ ವಿಚಾರಗಳನ್ನು ನಾವು ಚರ್ಚೆ ಮಾಡುವುದು ಸಾಧುವಲ್ಲ ಎಂಬುದು ಒಂದನೆಯದು, ಅದಕ್ಕಾಗಿ ಮತ್ತೆ ಈ ವಿಚಾರವನ್ನು ನಾವು ಮತ್ತೆ ಪ್ರಸ್ತಾಪಿಸಬೇಕಾದ ಅಗತ್ಯ ಇಲ್ಲ. ಆದರೆ ಕೌಲ್ ಅಂಡ್ ಶಕ್ದರ್‌ನಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ.

> `` The rule whether a motion which relates to a matter which is under adjudication by a court of law should be admitted or discussed in the House

> has to be interpreted strictly. While on the one hand the Chair has to ensure that no discussion in the House should prejudice the course of Justice, the Chair has also to see that the House is not debarred from discussing an urgent matter of public importance on the ground that a similar, allied or linked matter is before a court of law. The test of sub-judice in my opinion should be that the matter sought to be raised in the House is substantially identical with the one on which a court of law has to adjudicate. Further, in case the Chair holds that a matter is sub-judice, the effect of this ruling is that the discussion on the matter is postponed till judjement of the court is delivered. The bar of sub-judice will not apply thereafter, unless the matter becomes sub judice again on an appeal to a higher court"...

Sir, now the matter is before the Court for delivering the judgement and it is only a matter of few days also because Ist and 2nd March, arguments have been advanced before the Hon'ble Court High Court by both the sides on a similar identical matters. Therefore, my humble request for the House, not to precipitate the matter. We are not taking shelter. Apart from that, .. ಇದೇ ವಿಚಾರದಲ್ಲಿ ಅಧ್ಯಾದ್ಯಾಪನವನ್ನು ನಾವು ತೆಗೆದು ಮತ್ತೆ ತಿದ್ದುಪಡಿ ರೂಪದಲ್ಲಿ ತರಬೇಕಾಗುತ್ತದೆ; 4 ಮತ್ತು 5ನೇ ವಿಧಿಬಿಂದುಗಳಿಗೆ ಸಂಬಂಧಿಸಿದಂತೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅಧ್ಯಕ್ಷರೇ ನಾವು ಪ್ರಸ್ತಾಪಿಸುವುದು ಸಬ್ ಜ್ಯುಡಿಸಾಗುತ್ತದೆ ಎಂದು ನಿಮಗೆ ಅನ್ನಿಸಿದರೆ ಆಗ ಅದನ್ನು ನಾವು ಟಚ್ ಮಾಡಲು ಇಷ್ಟಪಡುವುದಿಲ್ಲ. ನವೆಂಬರ್ ತಿಂಗಳಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇದೇ ಸದನದಲ್ಲಿ ನಾನೊಂದು ಗುರುತರವಾದ ಆರೋಪ ಮಾಡಿದ್ದೆ. ನೀವು ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡುವ ಷಡ್ಯಂತರ ಮಾಡುತ್ತಿದ್ದೀರಿ ಎಂದು ಆಗ ಅವರೇ

ಕೊಟ್ಟಿದ್ದ ಉತ್ತರ ಗ್ರಾಮಪಂಚಾಯತಿಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಚುನಾವಣಾ ಆಯುಕ್ತರು ಜನವರಿ ಮೊದಲ ವಾರದಲ್ಲಿ ಹೊರಡಿಸುವುದು, ಆ ಚುನಾವಣೆಗಳನ್ನು ಮುಂದೂಡಲು ಸರ್ಕಾರ ಸಂಚು ಹೂಡಿದೆ ಎಂಬ ಆರೋಪವನ್ನು ತಳ್ಳಿಹಾಕಿ ಜನವರಿ ಕೊನೆಯ ವಾರದಲ್ಲಿ ಚುನಾವಣೆ ನಡೆಸುವುದಾಗಿ ತಿಳಿಸಿದರು. ಅಂದರೆ ಸದನದಲ್ಲಿ ಭರವಸೆ ಕೊಟ್ಟಿದ್ದನ್ನು ಜಾರಿಗೆ ತರದಿದ್ದುದು ಹಕ್ಕು ಚ್ಯುತಿಯಾಗಿದೆ, ಇದೇನು ಕಡಿಮೆಯಲ್ಲ, ನೀವು ತಿದ್ದುಪಡಿ ತರಬೇಕೆನ್ನುವುದಾದರೆ 1994 ರಿಂದ ನೀವು ಅಧಿಕಾರದಲ್ಲಿದ್ದಿರಿ, ಆಗ ಏಕೆ ತರಲಿಲ್ಲ? ಈಗ ಅನುಕೂಲಸಿಂಧು ರಾಜಕಾರಣ ಮಾಡಿ ರಾಜಕೀಯ ಪ್ರೇರಣೆಯಿಂದ, ಚುನಾವಣೆ ಸೋಲಿನ ಭಯದಿಂದ ಪ್ರಜಾತಂತ್ರ ವ್ಯವಸ್ಥೆಯ ಕಗ್ಗೊಲೆ ಮಾಡಲು ಹೊರಟಿದ್ದೀರಿ, ರಾಜ್ಯಾಂಗಕ್ಕೇನು ಅಪಚಾರ ಮಾಡುತ್ತಿದ್ದೀರಿ ಅದರ ಬಗ್ಗೆ ನಾವು ಚರ್ಚೆ ಕೇಳುತ್ತಿರುವುದು. ಇಲ್ಲಿ ನಾವು ಕೋರ್ಟನ್ನು ಪ್ರಶ್ನೆ ಮಾಡುತ್ತಿಲ್ಲ. ಇಲ್ಲಿ ಹಕ್ಕುಚ್ಯುತಿ ಮಾಡಿ ವ್ಯವಸ್ಥೆಗೆ ಕಳಂಕ ತಂದಿದ್ದೀರಿ- ಇದರಲ್ಲಿ ಮಾತನಾಡುವಾಗ ಸರಿಯಲ್ಲವೆಂದು ಅಧ್ಯಕ್ಷರು ಭಾವಿಸಿದರೆ ಅದನ್ನು ನಾವು ಮುಟ್ಟುವುದಿಲ್ಲ.

ಛೇರ್ಮನ್ :— ಮಾನ್ಯ ಈಶ್ವರಪ್ಪ ಕೊಟ್ಟಿರುವ ನೋಟಿಸ್‌ನ್ನು ಓದಿದರೆ, ಹೈಕೋರ್ಟ್ ನಲ್ಲಿರುವ ಇಶ್ಯೂಗಳು ಇಲ್ಲಿ ಕಂಡುಬರುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರದಷ್ಟೇ ಅಲ್ಲ, ನಾವು ನೀಡಿರುವ ನೋಟೀಸ್‌ನಲ್ಲಿ ಸಬ್‌ಜ್ಯುಡೀಸ್ ಆಗುವುದನ್ನು ಮನ್‌ಶನ್ ಮಾಡಿಲ್ಲ. ನಾವು ಕೊಟ್ಟಿದ್ದು ಹೀಗಿದೆ; ಕರ್ನಾಟಕ ಪಂಚಾಯಿತಿ ಕಾಯಿದೆ, 1993ಕ್ಕೆ ತಿದ್ದುಪಡಿ ಮಾಡಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ ಗ್ರಾಮಪಂಚಾಯಿತಿಗಳ ಸಂಖ್ಯೆ ಮೊಟಕುಗೊಳಿಸಿ ಅವುಗಳಿಗೆ ನಡೆಸಬೇಕಾದ ಚುನಾವಣೆ ಮುಂದೂಡಿರುವ ಕುರಿತು- ಇಷ್ಟೇ ಇದೆ. ಅವರು ಹೇಳಿದಂತೆ ಸಬ್ ಜ್ಯುಡೀಸಾಗುವುದನ್ನು ಇಲ್ಲಿ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಇದನ್ನು motion on adjourment and matter of public importance ನಿಯಮ 60ರ ಕೆಳಗೆ ಇದ್ದಿದ್ದರೆ ಪ್ರಸ್ತಾಪಿಸಲು ಬರುತ್ತಿರಲಿಲ್ಲ. ಆದರೆ ತಾವು ನಿಯಮ 60ರ ಕೆಳಗೆ ಇದನ್ನು ತೆಗೆದುಕೊಳ್ಳುವುದು ಬೇಡವೆಂದು ರೂಲ್ 69ಗೆ ಕನ್‌ವರ್ಟ್ ಮಾಡಿದಿರಿ. ಅಂದರೆ you have admitted alreay. Once you have admitted it means ಎಲ್ಲ ರೂಲ್ಸನ್ನು ಬದಿಗಿಟ್ಟು ತೆಗೆದುಕೊಳ್ಳುವ ಸರ್ವಾಧಿಕಾರ ನಿಮಗಿದೆ. You have taken up this, you have admitted, the Hon'ble Minister is making a submission. No point of order is there.

ಛೇರ್ಮನ್ :— ಮಾನ್ಯ ಈಶ್ವರಪ್ಪನವರು ಕೊಟ್ಟಿರುವ ನೋಟಿಸ್‌ನಲ್ಲಿ it is purely gemeral in nature ಹೈಕೋರ್ಟಿನಲ್ಲಿರುವುದರಲ್ಲಿ specific issues are

there ಓದಿ ನೋಡಿ: ಕರ್ನಾಟಕ ಗ್ರಾಮಪಂಚಾಯಿತಿ ಪ್ರಯೋಗ ವಿಶ್ವದ ಗಮನ ಸೆಳೆದಿತ್ತು. ಆದರೆ ಈಗ ಆ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದು ರಾಜ್ಯ ಸರ್ಕಾರಕ್ಕೆ ಕಳಂಕ ತರುವುದರ ಜೊತೆಗೆ ದೇಶದ ಎಲ್ಲಾ ಕಡೆ ಪಂಚಾಯತ್ ರಾಜ್ ವ್ಯವಸ್ಥೆಗೆ ದೊಡ್ಡ ಪೆಟ್ಟನ್ನು ಕೊಟ್ಟಂತಿದೆ: ಆಂದರೆ ಇಂತಹ ಕ್ರಮದಿಂದ ಉಂಟಾದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡತಕ್ಕದ್ದೇ ಅವರಿಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇಲ್ಲಿ ನ್ಯಾಯಾಧೀಶರ ಬಗ್ಗೆ ಚರ್ಚೆ ಮಾಡಿದ್ದೇವೆ, ಅಲ್ಲಿನ ತೀರ್ಪಿನ ಬಗ್ಗೆ ಪ್ರಸ್ತಾಪವಾಗಿದೆ. ಈ ಮನೆಗೆ ಸಾರ್ವಭೌಮ ಅಧಿಕಾರ ಇದೆ.

ಛೇರ್ಮನ್ :— ಅದರ ಆಧಾರದ ಮೇಲೆಯೇ ಚರ್ಚೆಗೆ ನಿಯಮ 69 ಕೆಳಗೆ ಅವಕಾಶ ಕೊಟ್ಟಿರುವುದು.

ಶ್ರೀ ಎಂ.ಪಿ. ಪ್ರಕಾಶ್ :— ತಾವೇನು ಅಂತಿಮವಾಗಿ ನಿರ್ಣಯ ಮಾಡುತ್ತೀರಿ, ಅದರ ಬಗ್ಗೆ ನಮ್ಮದೇನೂ ತಕರಾರಾಗಲಿ ಆಕ್ಷೇಪಣೆಗಳಾಗಲಿ ಇರುವುದಿಲ್ಲ.

12.40 ಪಿ.ಎಂ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :— ತಾವು ರೂಲಿಂಗನ್ನು ಕೊಟ್ಟಮೇಲೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರು ಎತ್ತಿದ್ದನ್ನು ನೀವು ನಿಯಮ 69 ರಲ್ಲಿ ಪರಿವರ್ತನೆ ಮಾಡಿರುವುದರಿಂದ ಈಗಾಗಲೇ ನಿರ್ಣಯ ಆಗಿರುವುದರಿಂದ ಈ ತಾಂತ್ರಿಕ ಆಕ್ಷೇಪಣೆಗಳನ್ನು ಎತ್ತಬಾರದು ಎನ್ನುವಂಥ ಮಾತಿನಲ್ಲಿ ಒಂದು ಸಾಧುತ್ವವಾದರೂ ಇದೆ. ತಾವು ಎತ್ತಿರುವ ವಿಚಾರದ ಬಗ್ಗೆ ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಹೇಳಿದರು, ಈ ಎರಡು ಪ್ರಶ್ನೆಗಳು ವಿಭಿನ್ನವಾಗಿದೆ, ಸಾಮಾನ್ಯವಾದಂಥ ವಿಷಯಗಳಿಂದ ಇಲ್ಲಿ ಯಾವುದು ನ್ಯಾಯಾಲಯದ ಮುಂದೆ ತೀರ್ಪಿಗಾಗಿ ಕಾದಿರಿಸಲ್ಪಟ್ಟಿದೆಯೋ ಅದೇ ವಿಚಾರಗಳನ್ನು ತಾವು ಮುಂದುವರಿಸಿ ತಾವು ನೋಡಿದರೆ ಪಂಚಾಯಿತಿ ಚುನಾವಣೆಗಳನ್ನು ಅನಿರ್ದಿಷ್ಟಕಾಲ ಮುಂದೂಡಲು ರಾಜ್ಯ ಜನತಾ ದಳದ ಸರ್ಕಾರದ ನಿರ್ಧಾರವು ಅಸಮರ್ಥನೀಯವಾಗಿದೆ. ಮತ ರಾಜಕೀಯ ಈ ತೀರ್ಮಾನದ ಹಿಂದೆ ಅಡಕವಾಗಿರುವಂತೆ ಇದೆ. ರಾಜ್ಯದಲ್ಲಿ ಜನತಾದಳವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಶೋಚನೀಯ ಸ್ಥಿತಿ ಎನ್ನಲಿ, ಸಾಯುವಂಥ ಪರಿಸ್ಥಿತಿ ಎನ್ನಲಿ, ಅದರ ಬಗ್ಗೆ ನಮಗೇನೂ ಇಲ್ಲ.

ಆದರೆ ಪಂಚಾಯಿತಿ ರಾಜ್ಯದ ಈ ರೀತಿಯಾದ ನಿಲುವಿನಿಂದ ರಾಜ್ಯಾಂಗಕ್ಕೆ ಅಪಚಾರ ಮಾಡಿದ್ದೀರಿ, ಚುನಾವಣೆಗಳನ್ನು ಮುಂದೂಡಿದೆ ಎಂದು ಇಲ್ಲಿ ಹೇಳಿದ್ದಾರೆ. ಆದರೆ ಅವರು ಹೇಳಿದಂತೆ 69ಕ್ಕೆ ಕನ್‌ವರ್ಟ್ ಆಗಿರುವುದು ಆದ ಮೇಲೆ ನೀವು ಚರ್ಚೆ ಮಾಡುವುದಾಗಿದ್ದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದು ಸಬ್‌ಜೂಡೀಸ್ ಇದೆಯೋ ಇಲ್ಲವೋ ಎನ್ನುವುದನ್ನು ಬೇಕಾದರೆ ವಾದ ಮಾಡೋಣ. Once it is admitted, it is finished.

ಶ್ರೀ ಎಂ.ಪಿ. ಪ್ರಕಾಶ್ :— ಅಧ್ಯಕ್ಷರೆ, I understand that point. I am not going against that ನಿಯಮ 69 ರಲ್ಲಿ ಆದರ ಉದ್ದೇಶ ಇರುವುದ ಇಷ್ಟೆ. ಯಾವುದೇ ಒಂದು, ಇಲ್ಲಿ ಮಾಡಿರುವ ಚರ್ಚೆ ಈ ನ್ಯಾಯವನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ಅನಾವಶ್ಯಕವಾಗಿ ಅವರ ಮೇಲೆ ಪ್ರಭಾವ ಬೀರಬಾರದು ಎನ್ನುವುದು, ಆ ದೃಷ್ಟಿಯಿಂದ ಆಕ್ಷೇಪಣೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಪಂಚಾಯತ್ ರಾಜ್ ಸಚಿವರಾದ ಪ್ರಕಾಶ್‌ರವರು ಈ ಚರ್ಚೆಗೆ ಅವರು ಅವಕಾಶವನ್ನು ಕೊಡಬೇಕಾಗಿತ್ತು. ಕಾರಣವೆಂದರೆ ಈ ಚುನಾವಣೆಯನ್ನು ಮುಂದೂಡುವುದೇ ಸರಿ ಇಲ್ಲ ಎಂದು ಹೇಳಿ ರಾಜೀನಾಮೆ ಕೊಡುವುದಕ್ಕೆ ಹೊರಟ್ಟಿದ್ದರು. ಈ ಚುನಾವಣೆ ಮುಂದೂಡುವುದು ಸರಿ ಇಲ್ಲ ಎಂದು ಹೇಳಿ ತಾವು ರಾಜೀನಾಮೆ ಕೊಟ್ಟಿದ್ದು ಉಂಟು. ಈ ಚರ್ಚೆಗೆ ನೀವೇ ಸ್ವಾಗತ ಮಾಡಬೇಕು. ಪ್ರಜಾತಂತ್ರ ವ್ಯವಸ್ಥೆ ಕೆಳಗೆ ಬೀಳುತ್ತಿದೆ ಎಂದು ಈ ಚರ್ಚೆಗೆ ನೀವೇ ಅವಕಾಶವನ್ನು ಕೊಡಬೇಕಾಗಿತ್ತು. ನಿಮ್ಮ ನಿಲುವೇನಾಯಿತು? ತಾವು ರಾಜೀನಾಮೆ ಕೊಟ್ಟ ನಿಲುವೇನಾಯಿತು?

ಶ್ರೀ ಕೆ.ಎನ್. ನಾಗೇಗೌಡ :— ಪಾಯಿಂಟ್ ಆಫ್ ಆರ್ಡರ್.

ಛೇರ್ಮನ್ :— ರೂಲ್ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :— ಇದನ್ನು ಮುಚ್ಚಿಟ್ಟುಕೊಳ್ಳಬೇಕಾದ ಅಗತ್ಯವೇ ಇಲ್ಲ. ನಮ್ಮ ನಡವಳಿಕೆಗಳು ಇಲ್ಲಿ ದಾಖಲಾಗುತ್ತವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, Once it is admitted, there is no question of going back. You have already given permission for discussion.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಒಂದು ಸಾರಿ ಅಡ್ಮಿಟ್ ಆದರೂ ಕೂಡ,...

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾವು ಇರಿಗೇಷನ್ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ಅಡ್ಮಿಟ್ ಆದರೂ ಕೂಡ ಅಡ್ಮಿಟ್ ಆಗಿರುವ ಬಗ್ಗೆ ಇನ್ನೊಂದು ಸಾರಿ ರೀಕನ್‌ಸಿಡರ್ ಮಾಡಿ ಎಂದು ಹೇಳುವುದಕ್ಕೆ ಬಂದೆ.

ಛೇರ್ಮನ್ :— ಆ ಸನ್ನಿವೇಶ ಮುಂದೆ ಹೋಗಿದೆ. ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಮತ್ತೇನು ಆದರಲ್ಲಿ? ಮುಂದೆ ಹೋಗಿದೆ. ಈಗ ಮತ್ತೆ ಏಕೆ ವಾಪಸ್ ಹೋಗುತ್ತೀರಿ? You should have taken this opportunity much earlier.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಅಧ್ಯಕ್ಷರ ತೀರ್ಪನ್ನೇ ಪ್ರಶ್ನೆ ಮಾಡಿದಂತೆ ಆಯಿತು. ಇದು ನೇರವಾದ ಹಕ್ಕುಚ್ಯುತಿ ಆಗುತ್ತದೆ. ಮಾನ್ಯ ಸದಸ್ಯರು ಹಕ್ಕುಚ್ಯುತಿ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, He wants to challenge the ruling. He is challenging your authority.

ಶ್ರೀ ವಾಟಾಳ್ ನಾಗರಾಜ್ :— ಈಗ ತಮ್ಮ ತೀರ್ಪನ್ನೇ ಪ್ರಶ್ನೆ ಮಾಡುತ್ತಿರುವುದು.

ಛೇರ್ಮನ್ :— ಹಾಗೆ ನನ್ನನ್ನು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ನೇರವಾಗಿ ತಮ್ಮ ಅಧ್ಯಕ್ಷ ಸ್ಥಾನವನ್ನೇ ಪ್ರಶ್ನೆ ಮಾಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ :— ತಾವು ಯಾವುದೇ ಒಂದು ರೂಲಿಂಗ್‌ನ್ನು ಕೊಟ್ಟರೂ ಕೂಡ ಆ ರೂಲಿಂಗ್ ಬಗ್ಗೆ ರೀ-ಕನ್‌ಸಿಡರ್ ಮಾಡಬೇಕು. ಆ ರೂಲಿಂಗ್ ಬಗ್ಗೆ ಅಪೀಲ್ ಮಾಡಿಕೊಳ್ಳುವುದಕ್ಕೆ, ಆ ರೂಲಿಂಗನ್ನು ಮರುಪರಿಶೀಲನೆ ಮಾಡಿ ಎಂದು ಹೇಳುವುದಕ್ಕೆ ಈ ಸದನದ ಸದಸ್ಯರಿಗೆ ನಿಯಮಾವಳಿಯೊಳಗೆ ಹಕ್ಕು ಇದೆ

ಎಂದು ಹೇಳಿ ಸೀನಿಯರ್ ಮೆಂಬರ್ ವಾಟಾಳ್ ನಾಗರಾಜ್ ತಿಳಿದುಕೊಳ್ಳಬೇಕು. ಅವರು ನಿಯಮ 61 ರಲ್ಲಿ ನೋಟೀಸ್‌ನ್ನು ಕೊಟ್ಟಿದ್ದರು, ನಿಯಮ 61 ರಲ್ಲಿ ಮೋಷನ್ ಆಗುತ್ತೆ, ಯಾವುದಾದರೂ ಕೋರ್ಟಿನಲ್ಲಿ ವಿಚಾರ ಇದ್ದರೆ ಅದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ನಿಯಮ 62(7) ಐಟಂನಲ್ಲಿ ಕ್ಲಿಯರ್‌ಆಗಿ ಇದೆ. ತಾವು ಅದನ್ನು ಕನ್‌ವರ್ಟ್ ಮಾಡಿ 69 ರಲ್ಲಿ ತೆಗೆದುಕೊಳ್ಳಿ ಎಂದು ಹೇಳಿದ್ದೀರಿ ನಿಯಮ 69 ಅದು ಮೋಷನ್ ಅಲ್ಲ. ಪಬ್ಲಿಕ್ ಇಂಪಾರ್ಟೆನ್ಸ್ ಎಂದು ಬರುತ್ತದೆ. ಪಬ್ಲಿಕ್ ಇಂಪಾರ್ಟೆನ್ಸ್ ಬಂದರೂ ಕೂಡ ನಿಯಮ 77 ರಲ್ಲಿ ಏನು ಹೇಳುತ್ತದೆ ಎಂದರೆ ಯಾವುದೇ ವಿಚಾರ ಈಗಾಗಲೇ ಪ್ರಕಾಶ್‌ರವರು ಹೇಳಿದರು, as per the Article 251 of the constitution ಯಾವುದೇ ವಿಚಾರವಾಗಲಿ ಈ ಸದನದಲ್ಲಿ ಚರ್ಚೆ ಮಾಡಬೇಕಾದರೆ a motion or a subject or half-an-hour discussion or a matter of public importance, ಕೋರ್ಟ್‌ನಲ್ಲಿ ಇದ್ದರೆ ಸಬ್‌ಜ್ಯುಡೀಸ್ ಆಗುತ್ತೆ ಎಂದು ಚರ್ಚೆ ಮಾಡಬಾರದು ಎಂದು ಗಮನಕ್ಕೆ ಬಂದರೆ ಸಾಕು.

ಶ್ರೀ ಎಂ. ವೀರಪ್ಪಮೊಯಿಲಿ :— ಸಬ್ ಜ್ಯುಡೀಸ್‌ನ್ನು ನಾವು ಬಹಳ ಉದ್ದಕ್ಕೆ ಎಳೆಯಬಾರದು. ಏಕೆಂದರೆ ಸಬ್ ಜ್ಯುಡೀಸ್ ಎಲ್ಲಿ ಬರುತ್ತದೆ. It is a question of interpretation of law and the constitutional matter. ಎಲ್ಲಿ ಬರುತ್ತದೆ? ಕೋರ್ಟಿನಲ್ಲಿ ಯಾವುದಾದರೂ ಒಂದು ಮರ್ಡರ್ ಕೇಸ್, ಒಂದು ಕ್ರಿಮಿನಲ್ ಕೇಸ್ ಮತ್ತೊಂದು ಯಾವುದಾದರೂ ಬಂದರೆ it is stands on a matter of deciding on facts. ಅದು ಬರುತ್ತದೆ. you say, have influenced. ಇದರಲ್ಲಿ ಇನ್‌ಫ್ಲೂಯೆನ್ಸ್ ಮಾಡುವ ಪ್ರಶ್ನೆ ಎಲ್ಲಿದೆ? It is the question of interpretation of pancahayat Act and the question of interpretation of Constitutional law. ಇದನ್ನೆಲ್ಲಾ ನೀವು ಸಬ್‌ಜ್ಯುಡೀಸ್ ಚೌಕಟ್ಟಿನಲ್ಲಿ ತರಲಿಕ್ಕೆ ಆಗುವುದೇ ಇಲ್ಲ. Sub-judice and Resjudicata ಎರಡೂ ಕೂಡ ಲೆಜಿಸ್ಲೇಷನ್ ಬಗ್ಗೆ ಅಪ್ಲೆ ಆಗುವುದಿಲ್ಲ. It is a question of legislation ಆರ್ಟಿಕಲ್ 226, 227ರ ಪ್ರಕಾರ ಅವರು ರಿಟ್ ಪಿಟಿಷನನ್ನು ಹಾಕಿದ್ದಾರೆ. It is a question of interpretation of Panchayat Act and the Constitutional law. ಒಂದು ವೇಳೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟರೂ ಕೂಡ ಅದರ ಮೇಲೆ ಲಿಜಿಸ್ಲೇಷನ್ ಮಾಡುವ ಹಕ್ಕು ಹಕ್ಕು ಎಲ್ಲಿದೆ? ಅದು Resjudicata ಆಗುವುದಿಲ್ಲ. ಅದೇ ಪ್ರಕಾರ ಅದೇ princepleನ್ನು ಸಬ್‌ಜ್ಯುಡೀಸ್‌ಗೂ ಕೂಡ ಅಪ್ಲೆ ಆಗುತ್ತದೆ. Legislature is the paramount body to make legislation, to make law, even if the matter is pending before Supreme Court or privy council. ಆದುದರಿಂದ I am afraid, we

are wasting the time of the House. ಎಲ್ಲದಕ್ಕೂ ಕೂಡ ಸಬ್‌ಜ್ಯುಡೀಸ್, Resjudicata ತಂದುಬಿಟ್ಟರೆ this House will become functus. officio. ಈ ಲಿಜಿಸ್ಲೇಚರ್ ವರ್ಕ್ ಮಾಡುವುದಕ್ಕೆ ಆಗುವುದೇ ಇಲ್ಲ. ಆದ್ದರಿಂದ ದಯಮಾಡಿ ಅದರ ಬಗ್ಗೆ ಹೆಚ್ಚು ಡೆಲಿಬರೇಷನ್ ಮಾಡಬೇಡಿ.

SRI M.P. PRAKASH: Sir, let it not go on the records as such. I have to set the records straight. It is not as though we wanted to waste the time of the Hon'ble House. The matter is of public importance and therefore it has to be disucssed. The matter which is now being adjudicated before the Court and which is reserved for judgement, cannot be discussed here, so as to influence the process of law.

MR. CHAIRMAN: If we enter into a disucssion so fas as that issue is concerned, it is a vital matter. Let us not go in detail and waste our time.

SRI M.P. PRAKASH: I do not want to take shelter under the technicalities. I myself have said that we have no objection to answer it also. But at the same time, we want to bring to your notice that this is a matter which is sub-judice.

MR. CHAIRMAN: It is well within your right.

+ ಶ್ರೀ ಕೆ.ಎಸ್. ಈಶ್ವರಪ್ಪ:— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಇಡೀ ದೇಶಕ್ಕೆ ಒಂದು ರೀತಿ ಮಾದರಿಯಾಗಿತ್ತು. ಮಾದರಿಯಾಗಿಯೂ ಕೂಡ ಇದೆ. ಇವತ್ತು ಈ ಕರ್ನಾಟಕ ರಾಜ್ಯದ ಸರ್ಕಾರ ಈ ಜನತಾದಳದ ಸರ್ಕಾರ ಈ ತಿದ್ದುಪಡಿಯನ್ನು ಮಾಡಿ ಇಡೀ ದೇಶಕ್ಕೇನೆ ಒಂದು ರೀತಿ ಕರ್ನಾಟಕ ತಲೆ ತಗ್ಗಿಸುವ ಹಾಗೆ ಮಾಡಿಬಿಟ್ಟಿತು ಎಂದು ತುಂಬಾ ನೋವಿನಿಂದ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪ್ರಕಾಶ್‌ರವರು ಗಮನಿಸಬೇಕು. ಜಾರ್ಜ್ ಮ್ಯಾಥ್ಯೂ ಎನ್ನುವವರು ಈ ಸರ್ಕಾರದ ಬಗ್ಗೆ ಹೇಳಿದ್ದಾರೆ. ಪಂಚಾಯತ್ ರಾಜ್ ವ್ಯವಸ್ಥೆಗೆ ಕರ್ನಾಟಕದ ಪೆಟ್ಟು ಅವರು ಹೇಳಿದ್ದಾರೆ. ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದು ರಾಜ್ಯ ಸರ್ಕಾರಕ್ಕೆ ಕಳಂಕ ತರುವುದರ ಜೊತೆಯಲ್ಲೇ ದೇಶದ ಎಲ್ಲಾ ಕಡೆ ಪಂಚಾಯಿತಿ ರಾಜ್ ವ್ಯವಸ್ಥೆಗೆ ದೊಡ್ಡ ಪೆಟ್ಟನ್ನು

ಕೊಟ್ಟಂತೆ ಇದೆ ಎಂದು ದೆಹಲಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನ ನಿರ್ದೇಶಕರಾದ ಜಾರ್ಜ್ ಮ್ಯಾಥ್ಯೂ ಅವರು ಹೇಳಿದ್ದಾರೆ. ಅವರು ಮಂಗಳವಾರ ಮಾಡಿದ ಈ ಹೇಳಿಕೆಯಲ್ಲಿ ಈ ವಿಚಾರವನ್ನು ಅಂದರೆ ಗ್ರಾಮಪಂಚಾಯಿತಿ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದು ಸುಪ್ರೀಂ ಕೋರ್ಟಿನ ಸಂವಿಧಾನ ಪೀಠಕ್ಕೆ ಕೊಂಡೊಯ್ಯಬೇಕೆಂದು ಸಲಹೆ ಮಾಡಿದ್ದಾರೆ. ಜಾರ್ಜ್ ಮ್ಯಾಥ್ಯೂ ಅವರು ದೀರ್ಘಕಾಲ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಬೆಳವಣಿಗೆಯ ಅಧ್ಯಯನ ನಡೆಸಿದವರಲ್ಲಿ ಒಬ್ಬರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಂದು ಕಾಲಕ್ಕೆ ಇಡೀ ದೇಶಕ್ಕೆ ಕರ್ನಾಟಕ ಮಾದರಿಯಾಗಿತ್ತು. ಎನ್ನುವುದನ್ನು ಅವರು ಹೇಳಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ. ಹೇಳಿಕೆಯ ಮುಖ್ಯಾಂಶಗಳು ಈ ರೀತಿ ಇವೆ. ಕರ್ನಾಟಕ ಆಳುವ ಪಕ್ಷಕ್ಕೆ ಆತ್ಮಹತ್ಯಾದಾರಿಯನ್ನು ಹಿಡಿಯುವ ಉದ್ದೇಶವಿರುವಂತಿದೆ. ಸನ್ಮಾನ್ಯ ಪ್ರಕಾಶ್ ರವರು ಗಮನಿಸಬೇಕು. ಇದನ್ನು ನಾನು ಹೇಳಿದ್ದಲ್ಲ. ಹಿರಿಯರಾದ ಜಾರ್ಜ್ ಮ್ಯಾಥ್ಯೂರವರು ಹೇಳಿರುವುದು. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಗತಿಗೆ ಗಣನೀಯ ಕಾಣಿಕೆ ನೀಡುತ್ತಿದ್ದ ಈ ರಾಜ್ಯದ ಸಚಿವಸಂಪುಟ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದಕ್ಕೆ ಹಾಕಲು ನಿರ್ಧರಿಸಿರುವುದು ಅನೇಕರಿಗೆ ಆಘಾತವಾಗಿದೆ. ಈ ರೀತಿ ಇಡೀ ದೇಶಕ್ಕೆ ಮಾದರಿಯಾಗಿದ್ದಂಥ ನಮ್ಮ ರಾಜ್ಯ ಇವತ್ತು ಇಡೀ ದೇಶದಲ್ಲಿಯೇ ತಲೆ ತಗ್ಗಿಸುವ ಹಾಗೆ ಈ ಸರ್ಕಾರ ಮಾಡಿಬಿಟ್ಟಿತು. ಇವತ್ತು ಇವರು ಮಾಡಿರತಕ್ಕ ಆಟ, ಕೇವಲ ದೇಶಕ್ಕೆ ಅಲ್ಲ, ಪ್ರಜಾಪ್ರಭುತ್ವದ ಬಗ್ಗೆ...

ಛೇರ್ಮನ್ :— ಮಾನ್ಯ ಗೃಹ ಸಚಿವರು ಮೇಲ್ಮನೆಗೆ ಹೋಗಬೇಕಾಗಿದೆ. ಅವರದ್ದು ಯಾವುದೋ ಒಂದು ಹೇಳಿಕೆ ಇದೆ, ಹೇಳಿಕೆ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮೂರು ಪ್ರಶ್ನೆ ಬರುತ್ತವೆ. ಇಲ್ಲೂ ಶೂನ್ಯ ವೇಳೆಯ ವಿಚಾರ ಎರಡು ಇದೆ, ಮಾನ್ಯ ಈಶ್ವರಪ್ಪನವರ ವಿಚಾರವೂ ಇದೆ. ಇದನ್ನು ನಾಳೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಶೂನ್ಯ ವೇಳೆಯ ವಿಚಾರವನ್ನು ಇನ್ನೂ ಪ್ರಸ್ತಾಪ ಮಾಡಿಲ್ಲ.

ಛೇರ್ಮನ್ :— ನೀವು ಹೇಳತಕ್ಕದ್ದು ನಾಳೆ ತೆಗೆದುಕೊಳ್ಳಬೇಕು ಎಂದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ನನ್ನ ಹೇಳಿಕೆಯನ್ನು ನಾಳೆ ಹೇಳುತ್ತೇನೆ ಎಂದು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಪ್ರಸ್ತಾಪ ಮಾಡಲಿ, ನಂತರ ಮಾನ್ಯ ಮಂತ್ರಿಗಳು ಬರಲಿ. ಅಲ್ಲಿ ಮುಗಿಸಿಕೊಂಡು ಬಂದ ಮೇಲೆ ಇಲ್ಲಿ ಅವರು ಹೇಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಹೇಳುವುದನ್ನು ಅವರು ಕೇಳಿಸಿಕೊಳ್ಳುತ್ತಿಲ್ಲ. ಕೇಳುವ ತಾಳ್ಮೆ ಅವರಿಗೆ ಇರಬೇಕು. ಶೂನ್ಯ ವೇಳೆಯ ವಿಚಾರದಲ್ಲಿ ನಾನು ಉತ್ತರವನ್ನು ನಾಳೆ ಕೊಡುತ್ತೇನೆ. ನಮ್ಮ ಗೃಹ ರಾಜ್ಯ ಸಚಿವರು ಇಲ್ಲಿರುತ್ತಾರೆ. ನಾಳೆ ಹೇಳಿಕೆ ಕೊಡುತ್ತಾರೆಂದು ಹೇಳಿದೆ.

ಛೇರ್ಮನ್ :— ಅಡ್ಡಿ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಶೂನ್ಯ ವೇಳೆ ಬರುವುದರಲ್ಲಿ ಮಧ್ಯಾಹ್ನ ಬರುತ್ತದೆ ಅಷ್ಟು ಹೊತ್ತಿಗೆ ಶೂನ್ಯವೇಳೆ ಮುಗಿದು ಹೋಗಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಧ್ಯಾಹ್ನ ಶೂನ್ಯ ವೇಳೆ ವಿಚಾರ ಬಂದರೆ ನಾನು ಮಧ್ಯಾಹ್ನ ಉತ್ತರ ಕೊಡುತ್ತೇನೆ. ಏಕೆಂದರೆ ವಿಧಾನ ಪರಿಷತ್ತಿನ ಸದಸ್ಯರೂ ಸಹ ವಿಧಾನಸಭೆಗೆ ಹೋಗಿ ನೋಡಿ, ಅಲ್ಲೂ ಮಂತ್ರಿಗಳು ಇರುವುದಿಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಇದ್ದೇವೆ ಎಂದು ಹೇಳುವುದಕ್ಕೆ ನಾನು ಎದ್ದು ನಿಂತು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಇವರೊಬ್ಬರು ಅಲ್ಲಿ ಇಲ್ಲಿ ಇರುವ ಹಾಗೆ ಪ್ರಯತ್ನ ನಡೆಸುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಎಲ್ಲಾ ಕಡೆ ಇರುತ್ತೀರಿ, ಸರ್ವವ್ಯಾಪಿ. ಗ್ರಾಮೀಣ ಜನತೆಗೆ ಇದ್ದಂತಹ ಹಕ್ಕನ್ನು ಇವರು ಕಸಿದುಕೊಂಡರು. ಏಕೆಂದರೆ ಇದು ಒಂದು ಪ್ರಜಾಸತ್ತೆಗೆ ಮಾಡಿದಂತಹ ದೊಡ್ಡ ಅವಮಾನ. ಅವರಿಗೆ ಸಿಕ್ಕಂತಹ ಒಂದು ಅವಕಾಶ. ಚುನಾವಣೆ ಸಂದರ್ಭದಲ್ಲಿ ಯಾರನ್ನು ಬಳಸಿಕೊಳ್ಳಬೇಕು, ಯಾರನ್ನು ಗೆಲ್ಲಿಸಿಕೊಳ್ಳಬೇಕು? ಈ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಅಧಿಕಾರವನ್ನು ಇವರಿಗೆ ಕೊಟ್ಟವರು ಯಾರು? ಈ ರೀತಿ ತಿದ್ದುಪಡಿ ಮಾಡಿ ಇಡೀ ರಾಜ್ಯದ ಜನತೆಗೆ ನೀವು ದ್ರೋಹ ಮಾಡಿದ ಹಾಗೆ ಆಗಲಿಲ್ಲವೇ? ಏಕೆಂದರೆ ಇವರು ಮತ್ತೆ ಹೇಳಿಕೆ ಕೊಡುತ್ತಾರೆ. 'ಪಾರದರ್ಶಿಕ ನಿಲುವು ತಳೆದಿರುವುದರಿಂದ' ಹಾಲಿ ಇರುವ ಸದಸ್ಯರನ್ನೇ ಮತ್ತೆ ಚುನಾವಣೆ ಮುಂದೂಡಿ ನಾಮಕರಣ ಮುಖೇನ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಇಡೀ ರಾಜ್ಯದ ಜನ ಇವತ್ತು ಅವರಿಗೆ ಇರತಕ್ಕ ಹಕ್ಕನ್ನು ಕಸಿದುಕೊಳ್ಳುವಂತಹ ವ್ಯವಸ್ಥೆಯೇ ನಿಮ್ಮ ಪಾರದರ್ಶಿಕತೆಯೋ? ಸಂವಿಧಾನದಲ್ಲಿ ಇದ್ದಂತಹ ವ್ಯವಸ್ಥೆಯನ್ನು ಕಿತ್ತು ಹಾಕುವುದಕ್ಕೆ ರಾಜ್ಯದ ಜನ ನಿಮಗೆ ಅಧಿಕಾರ ಕೊಟ್ಟರೇ ಅವರ ಓಟಿಂಗ್ ರೈಟ್ಸ್‌ಅನ್ನು ಕಸಿದುಕೊಳ್ಳುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು? ನಾನು ಹೇಳುತ್ತೇನೆ. ರಾಜೀನಾಮೆ ಕೊಟ್ಟಾಗ ನಾನು ತುಂಬಾ ಸಂತೋಷಪಟ್ಟಿದ್ದೆ. ಒಬ್ಬರಾದರೂ ಕೂಡ ಮಾಜಿ ಮಂತ್ರಿ ಈ ಕರ್ನಾಟಕ ರಾಜ್ಯದಲ್ಲಿದ್ದಾರೆ, ನಾನು ಅಭಿನಂದನೆ ಕೊಟ್ಟು ಸ್ವಾಗತ ಮಾಡಿದ್ದೆ ಪರವಾಗಿಲ್ಲ, ಎಂ.ಪಿ. ಪ್ರಕಾಶ್ ಎನ್ನುವಂತಹ ಹಿರಿಯರು ಕೇವಲ

ಸಿಕ್ಕಂತಹ ಸಂದರ್ಭದಲ್ಲಿ ನಾನು ಇಡೀ ರಾಜ್ಯದ ಪರವಾಗಿದ್ದೇನೆ, ಅವರ ಹಕ್ಕಿನ ಪರವಾಗಿದ್ದೇನೆ. ಸಂವಿಧಾನವನ್ನು ನಾನು ಉಳಿಸುತ್ತೇನೆ. ಆ ಮಂತ್ರಿ ಕುರ್ಚಿಯನ್ನು ಕಿತ್ತಿ ಎಸೆಯುತ್ತೇನೆ. ಈ ಮಾತನ್ನು ಅವರು ಹೇಳಿದಾಗ ನಾನು ತುಂಬಾ ಸಂತೋಷಪಟ್ಟಿದ್ದೆ. ಆದರೆ ಅದು ರಾಜಕೀಯ. ರಾಜೀನಾಮೆ ಒಂದು ನಾಟಕ. ನಾಟಕ, ಬೇರೆ ಏನೂ ಅಲ್ಲ. 51, 61, 71, ಎಷ್ಟೋ ಜನ ಮಂತ್ರಿಗಳು ಇದ್ದಾರೆ. ಆ ಗುಂಪಿನಲ್ಲಿ ನಾನು ಒಬ್ಬ ಹಿರಿಯ ಮಂತ್ರಿಗಳು ಬಂದು ಹೇಳಿಧರಂತೆ, ಮುಖ್ಯಮಂತ್ರಿಗಳು ಬಂದು ಬೇರೆ ಒತ್ತಾಯ ಮಾಡಿದರು ಅದಕ್ಕೋಸ್ಕರ ನಾನು ರಾಜೀನಾಮೆ ವಾಪಸ್ ತೆಗೆದುಕೊಂಡೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಎಂ.ಪಿ. ಪ್ರಕಾಶ್ ಅವರ ಬಗ್ಗೆ ನಮಗೆ ವಿಶ್ವಾಸ ಇದೆ. ಗ್ರಾಮ ಪಂಚಾಯತಿ ವ್ಯವಸ್ಥೆ ಬಗ್ಗೆ ವಿಶ್ವಾಸ ಇರುವಂತಹ ವ್ಯಕ್ತಿಗಳು ನೀವು ಎಂದು ಜನ ನಂಬಿದ್ದಾರೆ. ಒಂದು ಕಾಲದಲ್ಲಿ ಇದೇ ಸದನದಲ್ಲಿ ನಾವು ಇದ್ದಾಗ, ಹಿರಿಯ ಸದಸ್ಯರಾದಂತಹ ಮಾನ್ಯ ಘೋರ್ಪಡೆಯವರು ಇದ್ದಾರೆ, ಶ್ರೀ ಕೆ.ಎಚ್. ಪಾಟೀಲ್ ಅವರು ಇದೇ ಸಂದರ್ಭ ಬಂದಿದ್ದಾಗ ರಾಜೀನಾಮೆ ಕೊಟ್ಟಿದ್ದರು. ನಮ್ಮ ಉದ್ದೇಶ ಚರ್ಚೆಯಲ್ಲಿ ಏನು ಇದೆ ಎಂದರೆ ನೀವು ಈಗಾಗಲೇ ತಪ್ಪು ಹೆಜ್ಜೆ ಇಟ್ಟಿದ್ದೀರಿ, ನಾವು ಇಲ್ಲಿ ಚರ್ಚೆ ಮಾಡುತ್ತೇವೆ. ಚರ್ಚೆ ಆದ ನಂತರ ನೀವು ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಂಡು ಚುನಾವಣೆಯನ್ನು ನಡೆಸುತ್ತೀರಿ ಎನ್ನುವಂತಹ ವಿಶ್ವಾಸ ಇದೆ. ಇಲ್ಲದೇ ಹೋದರೆ ಕೊನೆಯ ಪಕ್ಷ ನಿಮಗೆ ಮನವರಿಕೆ ಆದಮೇಲೆ, ಸ್ವಾಭಿಮಾನದ ಮೇಲೆ ನೀವು ರಾಜೀನಾಮೆ ಕೊಟ್ಟು ಹಿಂದೆ ಕುಳಿತುಕೊಳ್ಳುತ್ತೀರಿ ಎಂಬ ವಿಶ್ವಾಸವೂ ನನಗೆ ಇದೆ. ಅದಕ್ಕಾಗಿ ಮುಂಚೆನೇ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ನೀವೆಲ್ಲಾ ಹೇಳಿದ ಮೇಲೆ ಅವರು ನೊಂದಿದ್ದಾರೆ. ಅವರು ಅವತ್ತೇ ಕ್ಯಾಬಿನೆಟ್‌ನಿಂದ ಹೊರಗಡೆ ಬಂದರು, ರಾಜೀನಾಮೆ ಕೊಡುವುದಕ್ಕೆ, ಏನೋ ಒತ್ತಾಯಕ್ಕೆ ಮಣಿದು ಅವರು ಅಲ್ಲಿ ಕುಳಿತಿರುವುದರಿಂದ ನೀವೆಲ್ಲಾ ಮಾತನಾಡಿದ ಮೇಲೆ ಅವರು ರಾಜೀನಾಮೆ ಕೊಡಬೇಕು ಎಂದು ಇರುವುದರಿಂದ ಈಗಲೇ ನೀವು ಟೀಕೆ ಮಾಡುವುದರಿಂದ ಅವರ ತೀರ್ಮಾನಕ್ಕೆ ಧಕ್ಕೆ ಬಂದಂತೆ ಆಗುತ್ತದೆ. ಮುಂದುವರಿಯಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏತಕ್ಕೆ ಹೇಳಿದೆ ಎಂದರೆ ಅನೇಕ ಜನ ಹಿಂದಿನ ಮಂತ್ರಿಗಳು ಈ ರೀತಿ ರಾಜೀನಾಮೆ ನಾಟಕ ಮಾಡಿದ್ದರು. ಅವರೂ ಕೂಡ ಯಾರೋ ಒತ್ತಾಯ ಮಾಡಿದರು, ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದರು. ನಾನು ವಿಧಾನಸಭೆಯಲ್ಲಿ ಅವರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ನಾನು ಅವರ ಹೆಸರನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಎಂ.ಪಿ. ಪ್ರಕಾಶ್ ಅಂತಹ ಹಿರಿಯರು, ಅನೇಕ ವಿಚಾರದಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಒಂದು ರೀತಿಯ ಭೀಷ್ಮನ ರೀತಿ ಪ್ರಯತ್ನ ನಡೆಸುತ್ತಿದ್ದೀರಿ. ನಿಮ್ಮ ಪ್ರಯತ್ನವನ್ನೂ ನಿಜಕ್ಕೂ ನಾವು

ಮೆಚ್ಚಿದೆವು. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿ ಆಗುತ್ತಿರುವ ಸಂದರ್ಭದಲ್ಲಿ ಎಂ.ಪಿ. ಪ್ರಕಾಶ್ ಅಂತಹ ಹಿರಿಯರನ್ನು ನಾವು ನೆನಪು ಮಾಡುಕೊಳ್ಳುತ್ತಿದ್ದೇವೆ. ಮಾನ್ಯ ಘೋರ್ಪಡೆಯವರು ರಾಜೀನಾಮೆ ಕೊಟ್ಟಿದ್ದನ್ನು ನಮ್ಮ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದರು, ಅದನ್ನು ಸ್ವಾಗತ ಸಹ ಮಾಡಿದ್ದಾರೆ.ಆ ರೀತಿಯ ನಾಯಕರು ರಾಜಕಾರಣದಲ್ಲಿರಬೇಕು ಎಂದು ಹೇಳಿದ್ದಾರೆ. ಆದರೆ ನಿಮಗೆ ಏನಾಯಿತು? ಇನ್ನು ಐದು ತಿಂಗಳು ಇರುತ್ತೀರೋ, ಆರು ತಿಂಗಳು ಇರುತ್ತೀರೋ ಮೂರು ದಿನ ಇರುತ್ತೀರೋ ಎನ್ನುವ ಪ್ರಶ್ನೆ ಅಲ್ಲ. ಪ್ರಶ್ನೆಗಳು ಖಂಡಿತ ಅಲ್ಲ. ನಮ್ಮ ಪ್ರಶ್ನೆ ಇರುವುದು ಮೌಲ್ಯದ ಬಗ್ಗೆ. ಈ ಒಂದು ಮಂತ್ರಿಮಂಡಲದಲ್ಲಿ ಕೆಲವು ವ್ಯಕ್ತಿಗಳಾದರೂ ಕೂಡ ಮೌಲ್ಯವನ್ನು ವೈಚಾರಿಕವಾಗಿ ಒಪ್ಪಿಕೊಂಡು ಕುರ್ಚಿಯನ್ನು ತಳ್ಳಿ ಆ ಮೌಲ್ಯಕ್ಕೋಸ್ಕರ ಜೀವನ ನಡೆಸಿ, ರಾಜಕಾರಣ ಮಾಡುತ್ತಿರುವಂತಹ ವ್ಯಕ್ತಿಗಳಲ್ಲಿ ನೀವೊಬ್ಬರು ಎಂದು ನಾನು ಅಂದುಕೊಂಡಿದ್ದೇನೆ. ನಾನು ಅಲ್ಲಿಂದ ಮುಂದುವರಿಯುವುದಿಲ್ಲ. ನಮ್ಮ ನಾಯಕರು ಹೇಳಿದ್ದಾರೆ. ಇನ್ನು ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಿಮಗೆ ಅವಕಾಶ ಇದೆ. ನಾವು ಇವತ್ತು ಕೆ.ಎಚ್ ಪಾಟೀಲ್ ಅವರನ್ನು ನೆನೆಸಿಕೊಂಡೆವು. ಇವತ್ತು ಘೋರ್ಪಡೆಯವರನ್ನು ನೆನೆಸಿಕೊಂಡಿದ್ದೇವೆ. ಕಾಂಗ್ರೆಸ್‌ನ ನೂರಾರು ಹಗರಣಗಳನ್ನು ಹೇಳುವವರು ಇದ್ದೇವೆ. ಅವರ ವಿಚಾರವನ್ನು ನಾವು ಒಪ್ಪಲಿಕ್ಕೆ ಸಾಧ್ಯ ಇಲ್ಲ. ಆದರೆ ಆ ವ್ಯಕ್ತಿಗಳು ಮಾಡಿದಂತಹ ಕಾರ್ಯ, ಆ ಸಂವಿಧಾನಕ್ಕೆ ದ್ರೋಹ ಆಗುತ್ತಿರುವಂತಹ ಸಂದರ್ಭದಲ್ಲಿ ಅವರು ಮಾಡಿದ ಕೆಲಸವನ್ನು ನಾವು ನೆನೆಸಿಕೊಳ್ಳುತ್ತಿದ್ದೇವೆ. ಏಕೆ? ಈ ರೀತಿ ವೈಚಾರಿಕ ವಿಚಾರಗಳು ಬಂದಾಗ ಆ ಮಂತ್ರಿ ಮಂಡಲದಲ್ಲಿ ಏನೇ ತೀರ್ಮಾನ ಆದರೂ ಕೂಡ ಆ ಕುರ್ಚಿಗೋಸ್ಕರ ನಾವು ಇಲ್ಲ ಎನ್ನುವಂತಹ ತೀರ್ಮಾನ ಮಾಡಿದಂತಹ ಇಬ್ಬರು ಹಿರಿಯರು ಇದ್ದಾರೆ. ಆ ವಿಚಾರವನ್ನು ನೀವು ಇವತ್ತು ಮಾಡಿದರೆ ಮುಂದೆ ಅಕಸ್ಮಾತ್ ಈ ರೀತಿ ತಿದ್ದುಪಡಿ ಇಡೀ ದೇಶದಲ್ಲಿ ತಂದಾಗ ಆ ಮಂತ್ರಿಗಳು ಕೂಡ ರಾಜೀನಾಮೆ ಕೊಡುವಂತಹ ಪ್ರಯತ್ನಗಳನ್ನು ನಡೆಸಬಹುದು. ಕರ್ನಾಟಕ ಅದಕ್ಕೆ ಮಾದರಿ ಆಗಿದೆ ಎನ್ನುವುದಕ್ಕೆ ನೀವು ಒಬ್ಬರೂ ಕೂಡ ಆ ಒಂದು ಪಟ್ಟಿಯಲ್ಲಿ ಸೇರುತ್ತೀರಿ. ಇಲ್ಲ ಯಾವತ್ತಿನ ತನಕ ಈ ಸರ್ಕಾರ ಇರುತ್ತದೆಯೋ ಇರುವಷ್ಟು ದಿನ ಮಂತ್ರಿಯಾಗಿರಬೇಕು. ನನ್ನ ಆಸೆನೂ ಅಷ್ಟೆ. ನಾನು ಇನ್ನು ಮಂತ್ರಿಯಾಗಿ ಮುಂದುವರಿಯಬೇಕು ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಉತ್ತರ ಕೊಡುವ ತನಕ ನಿಮಗೆ ಅವಕಾಶ ಇದೆ. ತೀರ್ಮಾನ ತೆಗೆದುಕೊಳ್ಳಿ. ಈ ತಿದ್ದುಪಡಿ ತಂದಿದ್ದಾರೆ. ಪ್ರಾಮಾಣಿಕವಾಗಿ ನೀವು ತಿದ್ದುಪಡಿ ತರಬೇಕು ಎನ್ನುವಂತಹ ಅಪೇಕ್ಷೆ ಇದ್ದಿದ್ದರೆ? ಏಕೆಂದರೆ ಇವರು ಬಂದಾಗ ಮಂಡಲ ಪಂಚಾಯತಿ ಎನ್ನುತ್ತಾರೆ. ಅವರು ಬಂದಾಗ ಗ್ರಾಮಪಂಚಾಯತಿ ಎನ್ನುತ್ತಾರೆ. ಮತ್ತೆ ಇವರು ಬಂದಾಗ ಇದೇ ಪ್ರಕಾರ ಎರಡು ಸಾರಿ ನಡೆದಿದೆ. ಇನ್ನು ಮುಂದೆ ಇವರೂ ಬರುವುದಿಲ್ಲ, ಅವರೂ

ಬರುವುದಿಲ್ಲ, ಆ ಪ್ರಶ್ನೆ ಬೇರೆ. ಆದರೆ ಪ್ರಶ್ನೆ ಇರುವುದು ಇವತ್ತೇ ಈ ತೀರ್ಮಾನ ಆಗಿದ್ದಾ? ನೀವು ಬಂದು ಎಷ್ಟು ವರ್ಷವಾಯಿತು? 1994ನೇ ಇಸವಿಗೆ ನೀವು ಬಂದವರು. ಮತ್ತೆ ಹೋಗುತ್ತಿದ್ದೀರಿ. ಹೋದ ವರ್ಷದ ತನಕ ಈ ತಿದ್ದುಪಡಿ ತರಬೇಕು ಎಂದು ನಿಮಗೆ ಅನ್ನಿಸಲಿಲ್ಲವಾ? ನಾಲ್ಕು ವರ್ಷ ಮಲಗಿದ್ದೀರಾ? ಈ ತಿದ್ದುಪಡಿ ತರಬೇಕು ಎಂದು ಆವತ್ತು ನಿಮಗೆ ಅನ್ನಿಸಲಿಲ್ಲವಾ? ಅವತ್ತಿನಿಂದ ಇವತ್ತಿನ ತನಕ ಕೂಡ ಹೇಳಿ, ಮತ್ತೆ ಮತ್ತೆ ನಮ್ಮ ನಾಯಕರಾದ ಶ್ರೀ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ನೀವು ನೇರವಾದಂತಹ ಉತ್ತರವನ್ನು ಕೊಟ್ಟಿದ್ದೀರಿ. ಯಾವ ಕಾರಣಕ್ಕೂ ನಾವು ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ. ಸದನಕ್ಕೆ ಗೌರವ ಬೇಡವಾ ಸ್ವಾಮಿ? ಹಕ್ಕು ಚ್ಯುತಿ. ನಾನು ಏಕೆ ಹೇಳುತ್ತೇನೆ ಎಂದರೆ ಈ ಒಂದು ಪದಗಳಿಗೂ ಈಗ ಗೌರವ ಹೋಗುತ್ತಿದೆ. ವಿಧಾನಸಭೆಯಲ್ಲಿ ಕೊಟ್ಟಂತಹ ಆಶ್ವಾಸನೆ, ಅದೇ ಹೇಳಿಕೆ. ಬೇರೆ ಯಾರೂ ಅಲ್ಲ, ಎಂ.ಪಿ. ಪ್ರಕಾಶ್ ಅಂತಹ ಹಿರಿಯರು ಕೊಟ್ಟಿದ್ದು. ಇನ್ನು ಮೇಲೆ ಇವರಿಗೆ ಗೌರವ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಸದನಕ್ಕೂ ಗೌರವ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಅದಕ್ಕೋಸ್ಕರ ವಿಧಾನಸಭೆಯಲ್ಲಿ ತಾವೇನು ಒಂದು ಹೇಳಿಕೆ ಹೇಳಿದ್ದೀರಿ..

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈಗ ತಾವು ಹೇಳಿದಿರಿ. ನಾನು ಕೂಡ ಸಂವಿಧಾನವನ್ನು ನೋಡಿದೆ. ಏಕೆಂದರೆ ನಿಮಗೆ ಮೊದಲನಿಂದಲೂ ಕಾಂಗ್ರೆಸ್ ನೋಡಿದರೆ ಅಲರ್ಜಿ. ಏಕೆಂದರೆ ಮೊದಲಿನಿಂದಲೂ ಮಾತನಾಡುವ ಧಾಟಿ ಅದು.

ಶ್ರೀ ಕೆ.ಎಸ್. ಈಶ್ವರಪ್ಪ :— ಮೊದಲಿನಿಂದ ಅಲ್ಲ ಸ್ವಾಮಿ ವಿಶೇಷವಾಗಿ ತುರ್ತು ಪರಿಸ್ಥಿತಿ ಬಂದಾಗಿನಿಂದ ಆಳಿದರಲ್ಲಾ. ಭ್ರಷ್ಟಾಚಾರ ಮಾಡಿದರಲ್ಲ, ಹಗರಣ ನಡೆಸಿದರಲ್ಲ, ಅಲ್ಲಿಂದಲೂ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಕೇಂದ್ರ ಸರ್ಕಾರ ನಿದ್ರೆ ಮಾಡುತ್ತಿದೆಯೇ ಸುಮ್ಮನೇ ಹಗರಣ ಎಂದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ :— ಅಂತಹದನ್ನು ನೀವು ಬಿಹಾರದಲ್ಲಿ ಸಪೋರ್ಟ್ ಮಾಡುತ್ತೀರಲ್ಲ

ಶ್ರೀಮಲ್ಲಿಕಾರ್ಜುನ ಖರ್ಗೆ :— ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಬಂದ ಮೇಲೆ part-9 of constitution ತಾವು ಒಪ್ಪುತ್ತೀರಿ ಎಂದು ನಾನು

ತಿಳಿದುಕೊಂಡಿದ್ದೇನೆ. A three-tier system of panchayats, namely village level, district panchayats at the district level and the intermidiate level between village and the districts, ಅಂದರೆ ತಾಲ್ಲೂಕು, ವಿಲೇಜ್ ಮತ್ತು ಜಿಲ್ಲೆ. ಈ ಮೂರಕ್ಕೆ ಸಂವಿಧಾನ ಒಪ್ಪಿಗೆ ಕೊಟ್ಟಿದೆ. ಅದನ್ನು ತೆಗೆದುಹಾಕುವುದಕ್ಕೊ ಅಧಿಕಾರ ಇಲ್ಲtill the constitution is amended. ಅಲ್ಲಿಯವರೆಗೆ ನಾವು ಇದನ್ನು ಮೂವ್ ಮಾಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಅದಕ್ಕೇ ಹೇಳುವುದಕ್ಕೆ ಹೊರಟಿರುವುದು. ಈಗ ನನ್ನ ಪ್ರಶ್ನೆ ಇಷ್ಟೆ. ಸನ್ಮಾನ್ಯ ಪ್ರಕಾಶ್‌ಅವರು ಇಲ್ಲಿ ಆಶ್ವಾಸನೆ ಕೊಟ್ಟರು. ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಎಲ್ಲಾ ವಿರೋಧ ಪಕ್ಷಗಳ ಒಂದು ಸಭೆಯನ್ನು ಕರೆದರು. ಮುಖ್ಯಮಂತ್ರಿಗಳು ತಾವು ಕೂಡ ಬಂದಿದ್ದೀರಿ. ಸಾಕಷ್ಟು ಚರ್ಚೆ ಆಯಿತು. ಚರ್ಚೆಯಾಗಿ ಆ ಸಭೆಯಲ್ಲೂ ಕೂಡ ಚುನಾವಣೆ ಮುಂದೆ ಹೋಗುವುದಿಲ್ಲವೆನ್ನುವ ವಿಚಾರ ತುಂಬಾ ಸ್ಪಷ್ಟವಾಯಿತು. ಇದೇನಿದು ಹುಡುಗಾಟಿಕೆ? ರಾಜೀನಾಮೆ ನಾಟಕದ ತರಹ ಇದೂ ಒಂದು ತರಹದ ನಾಟಕವೇ? ಏಕೆಂದರೆ, ಒಬ್ಬ ವ್ಯಕ್ತಿ, ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ಅವನ ನಡವಳಿಕೆ ಯಾವ ರೀತಿ ಇದೆಯೆನ್ನುವುದನ್ನು ಇಡೀ ರಾಜ್ಯದ ಜನರು ನೋಡುತ್ತಿರುತ್ತಾರೆ. 1994ರಿಂದ ಇವೊತ್ತಿನ ತನಕವೂ ತಾವು ಅಧಿಕಾರದಲ್ಲಿದ್ದು ಇದರ ಬಗ್ಗೆ ತಿದ್ದುಪಡಿ ಮಡಾಬೇಕೆನ್ನುವಂಥ ಅಪೇಕ್ಷೆ ಕುರಿತು ಏನು ಹೇಳುತ್ತಿದ್ದೀರಿ, ಈ ವ್ಯವಸ್ಥೆಗೆ ಒಂದು ರೀತಿಯ ಶಕ್ತಿ ಬರಬೇಕು, ಅದಕ್ಕೋಸ್ಕರ, ತಿದ್ದುಪಡಿ ತರಲಾಗುತ್ತಿದೆಯೆಂದು. ತಿದ್ದುಪಡಿ ತರುತ್ತಿರುವುದು ತುಂಬಾ ಸಂತೋಷ. ಆದರೆ, ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಈ ಕುರಿತು ಚರ್ಚೆ ಮಾಡಿ ತಿದ್ದುಪಡಿ ಮಾಡಬಹುದಾಗಿತ್ತಲ್ಲವೇ? ತಾವು ಸಂವಿಧಾನಕ್ಕೆ ದ್ರೋಹವೆಸಗುತ್ತಿದ್ದೀರಿ. ನಿಮ್ಮ ಕೈಯಲ್ಲಿ ಅವಕಾಶವಿರುವಂಥ ಸಂದರ್ಭದಲ್ಲಿ ಹೀಗೆ ನಡೆದರೆ ಹೇಗೆ? ತಮ್ಮ ಸರ್ಕಾರದ ಪ್ರತಿಯೊಂದು ಹೇಳಿಕೆಗಳಲ್ಲೂ ಕೂಡ ನಾವು ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ದಲಿತರ ನಾಯಕತ್ವ ಬೆಳೆಸುವುದಕ್ಕೆ ಇದ್ದೇವೆಂಬ ಮಾತನ್ನು ಹೇಳಿಕೊಂಡು ಬಂದಿರಿ. ಆದರೆ, ತಿದ್ದುಪಡಿಯಲ್ಲಿ ಮಾಡುತ್ತಿರುವುದೇನು? 5,200 ರಿಂದ 2,800 ಕ್ಕೆ ಇಳಿಸುತ್ತಿದ್ದೀರಿ, ಅಷ್ಟೇ ಅಲ್ಲ. ಎಷ್ಟೋ ಜನ ಹಿಂದುಳಿದ ವರ್ಗದವರು ಅಧ್ಯಕ್ಷರಾಗುವವರಿದ್ದರು, ಉಪಾಧ್ಯಕ್ಷರಾಗುವವರಿದ್ದರು, ಸದಸ್ಯರಾಗುವವರಿದ್ದರು. ತಿದ್ದುಪಡಿಯಿಂದ ಅವರ ನಾಯಕತ್ವಕ್ಕೆ ಕೊಡಲಿಪೆಟ್ಟು ಕೊಟ್ಟಂತಾಗುವುದಿಲ್ಲವೇ? 64,000 ರಿಂದ 26,400ಕ್ಕೆ ಇಳಿಸಿದ್ದೀರಲ್ಲ, ದಲಿತ ಹಾಗೂ ಹಿಂದುಳಿದ ವರ್ಗದವರನ್ನು ಮರೆತು ಹೋದಿರಾ? ಅವರು ಅಧ್ಯಕ್ಷರಾಗಲು ನೀವೇ ಅವರಿಗೆ ಅವಕಾಶ ಮಾಡಿಕೊಟ್ಟಿರಿ, ನೀವೇ ಅವರಿಗೆ ಸದಸ್ಯ ಸ್ಥಾನ ಕೊಟ್ಟಿದ್ದೀರಿ. ಈಗ ತಿದ್ದುಪಡಿ ತಂದು ಏಕೆ ಅವರನ್ನು ಹಾಳು

ಮಾಡುತ್ತಿದ್ದೀರಿ? ನಾವು ಪಕ್ಷದಲ್ಲಿ ಬಡಿದಾಟ ಮಾಡಿಕೊಂಡಿರುವುದರಿಂದ ಚುನಾವಣೆಯಲ್ಲಿ ಸೋತುಹೋಗುತ್ತೇವಾದ್ದರಿಂದ ಅದಕ್ಕೋಸ್ಕರ ಚುನಾವಣೆಯನ್ನು ಮುಂದೆ ಹಾಕುತ್ತೇವೆಂದು ಅಲ್ಪಸಂಖ್ಯಾತರಿಗೆ, ದಲಿತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ದ್ರೋಹ ಮಾಡಲು ನೀವು ತೀರ್ಮಾನ ಮಾಡಿದ್ದೀರಲ್ಲ, ಇದಕ್ಕೆ ನಿಮ್ಮ ಮನಸ್ಸು ಒಪ್ಪುತ್ತದೆಯೇ? ಇದು ನ್ಯಾಯವೇ?

ಶ್ರೀ ಸಿ.ಆರ್. ಸಗೀರ್ ಅಹಮದ್ :— ನನಗೆ ಬಹಳ ಸಂತೋಷವಾಗುತ್ತಿದೆ. ಬಿ.ಜೆ.ಪಿ.ಯ ನನ್ನ ಸ್ನೇಹಿತರಾದ ಮಾನ್ಯ ಈಶ್ವರಪ್ಪನವರು ಅಲ್ಪಸಂಖ್ಯಾತರ ಬಗ್ಗೆ ಸ್ವಲ್ಪ ಕಾಳಜಿ ತೋರಿಸುವವರಾಗಿರುವುದಕ್ಕೆ ಸಂತೋಷವಾಗುತ್ತಿದೆ.

ಶ್ರೀ ಬಿ.ಬಿ. ಶಿವಪ್ಪ :— ಕಾನೂನಿನಲ್ಲಿರುವುದನ್ನು ಮಾನ್ಯ ಈಶ್ವರಪ್ಪನವರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಸಗೀರ್ ಅಹಮದ್‌ರವರು ಇವೊತ್ತು ನಿಜವಾದ ಬಣ್ಣಕ್ಕೆ ಬಂದರು. ಇಲ್ಲಿಯವರೆಗೆ ಅವರ ನಿಜವಾದ ಕಲ್ಪನೆ ಏನಿತ್ತು ಎಂದರೆ ಬಿ.ಜೆ.ಪಿ. ಎಂದರೆ ಅಲ್ಪಸಂಖ್ಯಾತರ ವಿರೋಧಿಗಳು ಎಂದು. ಆದರೆ, ಇವೊತ್ತು ಬಿ.ಜೆ.ಪಿ.ಯವರು ಎಂದರೆ ಏನು ಎನ್ನುವುದನ್ನು ನಿಜವಾಗಿಯೂ ಅವರು ಅರ್ಥ ಮಾಡಿಕೊಂಡಿರುವುದಕ್ಕೆ ನನಗೆ ಸಂತೋಷವಾಗಿದೆ.

ಶ್ರೀ ಅರಗ ಜ್ಞಾನೇಂದ್ರ :— ಕಾಂಗ್ರೆಸ್‌ನವರಂತೆ ನಾವು ಅಲ್ಪಸಂಖ್ಯಾತರನ್ನು ವೋಟ್ ಬ್ಯಾಂಕ್ ಎಂದು ಮಾಡಿಕೊಂಡಿರಲಿಲ್ಲ. ಅವರುಗಳನ್ನು ನಾವು ಮನುಷ್ಯರೆಂದು ನೋಡಿದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ :— ಬಿ.ಜೆ.ಪಿ. ಎಂದರೆ ತಪ್ಪು ಗ್ರಹಿಕೆಯಿದ್ದು, ಅದರ ಬಗ್ಗೆ ಸರಿಯಾದಂಥ ಗ್ರಹಿಕೆ ಇದ್ದರೆ ಒಳ್ಳೆಯದು. ಹಿಂದಿನ ಸರ್ಕಾರಗಳು ಹಜ್ ಯಾತ್ರೆಯಲ್ಲಿ ಪಾಲ್ಗೊಳ್ಳುವ ಪ್ರತಿ ಯಾತ್ರಾರ್ಥಿಗಳಿಗೆ 5,000-6,000 ರೂಪಾಯಿಗಳಂತೆ ಖರ್ಚು ಮಾಡುತ್ತಿದ್ದವು. ಈ ಬಾರಿ 15,000-16,000 ರೂಪಾಯಿಗಳಂತೆ ಖರ್ಚು ಮಾಡುತ್ತಿವೆ. ಹಾಗೆಯೇ ಹಿಂದಿನ ಕೇಂದ್ರ ಸರ್ಕಾರಗಳು ಹಜ್ ಯಾತ್ರಾರ್ಥಿಗಳಿಗೆ ಹತ್ತು ಕೋಟಿ ರೂಪಾಯಿಗಳಿಂದ ಪ್ರಾರಂಭವಾಗಿ ಮೂವತ್ತು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುತ್ತಿತ್ತು. ಇಂದಿನ ಕೇಂದ್ರ ಸರ್ಕಾರ ರೂ. 120 ಕೋಟಿಗಳಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಅಲ್ಲದೇ, ಹಿಂದೆ ಪ್ರತಿ ಬಾರಿ 10,000-12,000 ಹಜ್ ಯಾತ್ರಿಕರನ್ನು ಕಳುಹಿಸುತ್ತಿದ್ದು, ಇವೊತ್ತು ಸುಮಾರು 60,000 ಹಜ್ ಯಾತ್ರಿಕರನ್ನು ಕಳುಹಿಸಿಕೊಡುತ್ತಿದೆ. ಆದುದರಿಂದ, ಗೋಸುಂಬೆ ಬಣ್ಣದ ಕಾಂಗ್ರೆಸ್ ಜೊತೆ ಯಾರ್‍ಯಾರಿದ್ದೀರಿ, ಈಗಲಾದರೂ ಸರಿಯಾದ ರೀತಿಯಲ್ಲಿ ಮನ ಪರಿವರ್ತನೆಗೊಳಿಸಿಕೊಂಡು ರಾಷ್ಟ್ರದ ವಾಸ್ತವಿಕ ಸತ್ಯ ಸಂಗತಿಯನ್ನು ತಿಳಿದುಕೊಳ್ಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಿಜಕ್ಕೂ ಯಡಿಯೂರಪ್ಪನವರು ಹೇಳಿದ್ದನ್ನು ಒಪ್ಪಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಸದಸ್ಯರಾದ ಮಾನ್ಯ ಸಗೀರ್ ಅಹಮದ್ ರವರಿಗೆ ನಾನು ಒಂದು ಸವಾಲು ಹಾಕುತ್ತೇನೆ. ನೀವು ನನ್ನ ಕ್ಷೇತ್ರವಾದ ಶಿವಮೊಗ್ಗಕ್ಕೆ ಬನ್ನಿ. ಅಲ್ಪಸಂಖ್ಯಾತರಿರುವ ಕ್ಷೇತ್ರದಲ್ಲಿ ನೀವು ಚುನಾವಣೆಗೆ ನಿಂತುಕೊಳ್ಳಿ, ನಾನೂ ನಿಂತುಕೊಳ್ಳುತ್ತೇನೆ. ಚುನಾವಣೆಯಲ್ಲಿ ನಾನು ಸೋತರೆ ರಾಜೀನಾಮೆ ಕೊಡುತ್ತೇನೆ. ನೀವು ಸೋತರೆ ರಾಜಕೀಯವನ್ನು ಬಿಡುತ್ತೀರಾ? ಏಕೆಂದರೆ, ಭಾರತೀಯ ಜನತಾ ಪಕ್ಷವು ಅಲ್ಪಸಂಖ್ಯಾತರ ವಿರೋಧಿಯೆಂದು ಕಳೆದ ಐವತ್ತು ವರ್ಷಗಳಿಂದ ಹೇಳಿಕೊಂಡು ಇವರೆಲ್ಲಾ ಅಧಿಕಾರಕ್ಕೆ ಬಂದರು. ಆದರೆ, ಬಿ.ಜೆ.ಪಿ.ಯವರಾದ ನಾವು ಇವೊತ್ತು ಚುನಾವಣೆಯಲ್ಲಿ ಯಾವ್ಯಾವ ಕ್ಷೇತ್ರಗಳಿಂದ ಗೆದ್ದು ಬಂದಿದ್ದೇವೆಯೋ ಅಲ್ಲೆಲ್ಲಾ ಅಲ್ಪಸಂಖ್ಯಾತರು ನೆಮ್ಮದಿಯಿಂದ, ಆನಂದದಿಂದ ನಮ್ಮ ಜೊತೆ ಅಣ್ಣ-ತಮ್ಮಂದಿರಂತೆ ವಾಸ ಮಾಡುತ್ತಿದ್ದಾರೆ. ಅದನ್ನು ನೋಡಿ ಇವರಿಗೆ ಸಹಿಸುವುದಕ್ಕಾಗುತ್ತಿಲ್ಲ.

ಛೇರ್ಮನ್ :— ಮಾನ್ಯ ಈಶ್ವರಪ್ಪನವರೆ, ಈಗ ತಾವು ವಿಷಯಕ್ಕೆ ಬರಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಛೇರ್ಮನ್‌ರವರೆ,"ಪಂಚಾಯಿತಿ ಸದಸ್ಯರ ಅಧಿಕಾರ ಮುಂದುವರಿಕೆಗೆ ನಿರ್ಧಾರ- ಗ್ರಾಮ ಪಂಚಾಯಿತಿಗಳಿಗೆ ಮತ್ತೆ ಚುನಾವಣೆ ನಡೆಯುವವರೆಗೆ ಆಯಾ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನೇ ನಾಮಕರಣದ ಮೂಲಕ ಮುಂದುವರೆಯಲು ಇಂದು ಇಲ್ಲಿ ನಡೆದ ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ." ಎಂದು ಇದೆ. ಇದನ್ನು ನಿರ್ಧರಿಸುವುದಕ್ಕೆ ನೀವ್ಯಾರು? ರಾಜ್ಯದ ಜನರು ಕೊಟ್ಟಂಥ ಅಧಿಕಾರವನ್ನು ಮೊಟಕುಗೊಳಿಸಿದ್ದಾಯಿತು, ಅವರ ಸಮಯ ಮುಗಿದು ಹೋಯಿತು, ಯಾರನ್ನು ತಿರಸ್ಕರಿಸುವುದಕ್ಕೆ ಜನರು ತೀರ್ಮಾನಿಸಿದ್ದರೋ ಅವರನ್ನೇ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರನ್ನಾಗಿ ಮುಂದುವರೆಸುತ್ತಿದ್ದೀರಲ್ಲಾ, ಇದ್ಯಾವ ನ್ಯಾಯ? ಹೇಗೆ ಅವರನ್ನು ಅಧಿಕಾರದಲ್ಲಿ ಮುಂದುವರೆಸುತ್ತೀರಿ? ನಿಮಗೆ ಯಾರು ಅಧಿಕಾರ ಕೊಟ್ಟರು? ಆಡಳಿತಾಧಿಕಾರಿಗಳನ್ನು ನೇಮಿಸಲು ಅವಕಾಶವಿದ್ದರೂ ಅದು ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿರುತ್ತದೆ. ಆದುದರಿಂದ ಹಾಲಿ ಇರುವ ಚುನಾಯಿತರನ್ನೇ ಪುನರ್ ನಾಮಕರಣ ಮಾಡಲು ನಿರ್ಧರಿಸಲಾಗಿದೆ. ಎಂದು ಇವರು ಏನು ಹೇಳುತ್ತಾರೆ, ಯಾರೋ ಒಬ್ಬ ಅಧಿಕಾರಿಯನ್ನು ಕರೆದುಕೊಂಡು ಬಂದು ಅಲ್ಲಿ ಕೂರಿಸುವುದಕ್ಕಿಂತ ಯಾರ್ಯಾರು ಈಗಾಗಲೇ ಜನರಿಂದ ತಿರಸ್ಕೃತರಾಗಿ ಅವರ ಸಮಯ ಮುಗಿದು ಹೋಗಿದೆಯೋ ಅವರಿಗೆ ನಾವು ಅವಕಾಶ ಮಾಡಿಕೊಡುತ್ತೇವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಆಡಳಿತಾಧಿಕಾರಿಗಳಿಗೆ ಅವಕಾಶ

ಕೊಡದೆ ಸಮಯ ಮೀರಿರುವವರ ಕೈಗೆ ಇವರು ಅವಕಾಶ ಕೊಟ್ಟಿದ್ದು ಏಕೆ? ಮತ್ತೆ ಏನು ಹೇಳುತ್ತಾರೆಂದರೆ, 'ಈ ವಿಚಾರದಲ್ಲಿ ಸರ್ಕಾರ ಪಾರದರ್ಶಕ ನಿಲುವನ್ನು ತಳೆದಿರುವುದರಿಂದಲೇ ಹಾಲಿ ಇರುವ ಸದಸ್ಯರನ್ನೇ ಮತ್ತೆ ಚುನಾವಣೆ ನಡೆಯುವವರೆಗೆ ನಾಮಕರಣ ಮಾಡಲು ನಿರ್ಧಾರ ಕೈಗೊಳ್ಳಲಾಯಿತು'ಎಂದು. ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನಾದವನು ಏನು ಮಾಡಿದ್ದಾನೆ, ಬಿಟ್ಟಿದ್ದಾನೆ ಎಂಬ ಬಗ್ಗೆ ಏನೂ ಹೇಳುವುದಿಲ್ಲ. ಆದರೆ, ಅಲ್ಲಿಯ ಜನರು ಅವರಿಗೆ ಕೊಟ್ಟಂಥ ಸಮಯ ಇಷ್ಟೇ. ಆ ಸಮಯ ಮೀರಿ ಅಧ್ಯಕ್ಷರು, ಉಪಾಧ್ಯಕ್ಷರನ್ನಾಗಿ ನಾಮಕರಣ ಮಾಡುವುದಕ್ಕೆ ನಿಮಗೆ ಯಾವುದೇ ಅಧಿಕಾರವಿಲ್ಲ. ಆದರೆ, ಇವೊತ್ತು ಈ ಪ್ರಯತ್ನ ನಡೆಸುತ್ತಿದ್ದೀರಲ್ಲ, ಶಾಸಕರು ಐದು ವರ್ಷಗಳ ಕಾಲ ಇರುತ್ತಾರೆ, ಎಂ.ಪಿ.ಯಾದವರು ಐದು ವರ್ಷಗಳವರೆಗೆ ಇರುತ್ತಾರಲ್ಲ, ಅವರಿಗೆ ಅವಕಾಶ ಕೊಡಿ. ಮತ್ತೇಕೆ ಚುನಾವಣೆ? ಅವರನ್ನೇ ಮತ್ತೆ ಎಂ.ಎಲ್.ಎ. ಆಗಿ, ಎಂ.ಪಿ.ಆಗಿ ಚುನಾವಣೆ ನಡೆಯುವ ತನಕ ಹದಿನೈದು ವರ್ಷ ಮುಂದುವರೆಯುವವರೆಗೂ ಚುನಾವಣೆ ಬೇಡ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಸರ್ಕಾರವೇ ಒಂದು ವರ್ಷ ಮುಂದುವರೆಯುವಂತೆ ಸಚಿವ ಸಂಪುಟ ತೀರ್ಮಾನ ಮಾಡಲಿ. ಇವರೇ ಒಂದು ವರ್ಷ ಮುಂದುವರಿದರೆ ಸರಿ ಆಗುತ್ತದಲ್ಲ, ಅಥವಾ ಇವರೇ ನಾಮಕರಣ ಮಾಡಿಕೊಂಡರೆ ಆಗುತ್ತದಲ್ಲ. ಸನ್ಮಾನ್ಯ ಗುಂಡೂರಾವ್ ರವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಆ ರೀತಿ ಮಾಡಿದ್ದಾಯಿತು.

ಶ್ರೀ ಎಂ.ಪಿ. ಪ್ರಕಾಶ್ :— ಇದೆಲ್ಲವೂ ಆಗಿರುವ ಪಕ್ಷದಲ್ಲೇ ತಾವಿದ್ದೀರಿ, ಅದ್ಯಾವುದೂ ಗೊತ್ತಿಲ್ಲದೆ ಎಲ್ಲಾದಕ್ಕೂ ಈ ರೀತಿ ಹೇಳುವುದಕ್ಕೆ ಹೋಗಬೇಡಿ. 1977 ರಲ್ಲಿ ತಮ್ಮದೇ ಪಕ್ಷವಾದ ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟು ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾದಾಗ ನಿಮಗೆಲ್ಲರಿಗೂ ಒಂದೊಂದು ವರ್ಷದ ಅವಧಿಯನ್ನು ಹೆಚ್ಚಿಸಿದರು. ಅದನ್ನು ತಾವು ಯೋಚನೆ ಮಾಡಿ, ನಮಗೆ ಹೇಳುವುದಕ್ಕೆ ಬರಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಸನ್ಮಾನ್ಯ ಪ್ರಕಾಶ್‌ರವರೆ, ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಮಾಡಿರುವ ತಪ್ಪನ್ನು ತಾವು ಈ ರೀತಿಯಾಗಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಂ.ಪಿ.ಪ್ರಕಾಶ್ :— ಆ ಬಗ್ಗೆ ಸಗೀರ್ ಅಹಮದ್‌ರವರಿಗೆ ಹೇಳುವ ಅಧಿಕಾರವಿಲ್ಲವೆಂದು ಹೇಳಿದೆ. ಆದರೆ, ನಿಮಗೆ ಅದರ ಬಗ್ಗೆ ಹೇಳುವ ಅಧಿಕಾರವಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಅವರಿಗೆ ಅಧಿಕಾರವಿಲ್ಲ, ಆದರೆ, ಏನು ಆಗುತ್ತದೆಂದರೆ...

ಶ್ರೀ ಸಿ.ಆರ್. ಸಗೀರ್ ಅಹಮದ್ :— ನನಗೆ ಅಧಿಕಾರವಿಲ್ಲವೆಂದು ನೀವು ಅವರ ಜೊತೆ ಹೇಗೆ ಹೇಳುತ್ತೀರಿ?

ಶ್ರೀ . ಎಂ. ವೀರಪ್ಪ ಮೊಯಿಲಿ :— ಈಗ ಒಂದು ವಿಚಾರದ ಬಗ್ಗೆ ಪರಸ್ಪರ ಚರ್ಚೆಯಾಗುತ್ತಿದ್ದು, ನಾವು ಮೌನ ವಹಿಸಿ ಕುಳಿತುಕೊಳ್ಳಬೇಕೆಂದರೆ ಕಷ್ಟವಾಗುತ್ತದೆ. ಏಕೆಂದರೆ, ಸಚಿವರಾದ ಎಂ.ಪಿ. ಪ್ರಕಾಶ್ ರವರು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನೀವು ಕಾನೂನನ್ನು ತಿದ್ದುಪಡಿ ಮಾಡಿ ಅಥವಾ ಸಂವಿಧಾನವನ್ನು ತಿದ್ದುಪಡಿ ಮಾಡಿ ಒಂದು ವರ್ಷ, ಎರಡು ವರ್ಷ, ಐದು ವರ್ಷಗಳವರೆಗೆ ಅವಕಾಶ ಮಾಡಿಕೊಡಿ, ನಾವು ಆಕ್ಷೇಪವೆತ್ತುವುದಿಲ್ಲ. ಆದರೆ, ಇಲ್ಲಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ನೀವು ಸಂವಿಧಾನಕ್ಕೆ ತಿದ್ದುಪಡಿ ಮಾಡದೆ, ಪಂಚಾಯತ್ ರಾಜ್ ಕಾನೂನಿಗೆ ತಿದ್ದುಪಡಿ ಮಾಡದೆ ನೀವು ಪುನರ್ ನಾಮಕರಣ ಮಾಡಿದ್ದೀರಲ್ಲ, ಅದಕ್ಕೆ ಮಾನ್ಯ ಸದಸ್ಯರಾದ ಸಗೀರ್ ಅಹಮದ್ ರವರು ತಮ್ಮ ಆಕ್ಷೇಪವೆತ್ತಿದ್ದಾರೆ. ತಾವು ಮಾತನಾಡುತ್ತಾ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ತಂದಿರುವುದು ಅನಪೇಕ್ಷಿತ. ಏಕೆಂದರೆ, ಅಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಿದ ನಂತರ ಆರು ವರ್ಷ ಮಾಡಿದ್ದೇ ಹೊರತು ಸಂವಿಧಾನವನ್ನು ತಿದ್ದುಪಡಿ ಮಾಡದೆ, ಕಾನೂನನ್ನು ತಿದ್ದುಪಡಿ ಮಾಡದೆ ಆರು ವರ್ಷಗಳ ಅವಕಾಶ ಕೊಡಲಿಲ್ಲ. ಆದುದರಿಂದ, ತಾವು ಮಾತನಾಡುವಾಗ ಹಗುರವಾಗಿ ಮಾತನಾಡಬಾರದು. ಸಂವಿಧಾನದತ್ತ ತಮ್ಮ ದೃಷ್ಟಿಯಿರಬೇಕು. ಸಂವಿಧಾನದ ಬಗ್ಗೆ ವಿಶ್ವಾಸವಿಲ್ಲದೆ ಇವೊತ್ತು ನೀವು ಏನು ಪ್ರಶ್ನಿಸುತ್ತಿದ್ದೀರಿ, ಅದು ಸಂವಿಧಾನವನ್ನೇ ಪ್ರಶ್ನಿಸಿದಂತಾಗುತ್ತದೆಯೇ ಹೊರತು ದಿವಂಗತ ಶ್ರೀಮತಿ ಇಂದಿರಾಗಾಂಧಿಯವರನ್ನು ಪ್ರಶ್ನಿಸಿದಂತಾಗುವುದಿಲ್ಲ. ಆದುದರಿಂದ ತಾವು ಎದ್ದು ನಿಂತು ಮಾತನಾಡುವಾಗ ಗಂಭೀರವಾಗಿ ಮಾತನಾಡಬೇಕು. ಬಹಳ ಹಗುರವಾದ ಧೋರಣೆಯನ್ನು ಸಂವಿಧಾನದ ವಿರುದ್ಧವಾಗಿ ತೆಗೆದುಕೊಳ್ಳುವುದು ಬಹಳ ತಪ್ಪಾಗುತ್ತದಾದ್ದರಿಂದ ತಮಗೆ ಇಂದಿರಾಗಾಂಧಿಯವರ ಹೆಸರನ್ನು ಪ್ರಸ್ತಾಪಿಸಿರುವುದಕ್ಕೆ ಯೋಗ್ಯತೆಯಿಲ್ಲ, ಆ ಅರ್ಹತೆಯೂ ನಿಮಗಿಲ್ಲ.

1.10 ಪಿ.ಎಂ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಇಂದಿರಾಗಾಂಧಿಯವರ ಬಗ್ಗೆ ತಮಗೆ ಎಷ್ಟು ಗೌರವವಿದೆಯೋ ಅಷ್ಟೇ ಗೌರವ ನಮಗೂ ಇದೆ. ನಾನು ಏನು ಮಾತನಾಡಬೇಕು ಎಂಬ ಬಗ್ಗೆ ತಾವು ಪದೇ ಪದೇ ನನಗೆ ಉಪದೇಶ ಮಾಡುವ ಅಗತ್ಯವಿಲ್ಲ. ತಾವು ಮುಖ್ಯಮಂತ್ರಿಗಳಾಗಿದ್ದವರು,

ಹಿರಿಯರು, ತಮ್ಮ ಬಗ್ಗೆ ಅಪಾರವಾದಂಥ ಗೌರವ ನಮಗಿದೆ. ಇಂದಿರಾಗಾಂಧಿಯೆಂದಕೂಡಲೆ ಅದು ಕಾಂಗ್ರೆಸ್‌ನವರ ಸ್ವತ್ತಲ್ಲ. ಅವರು ಇಡೀ ದೇಶದ ಸ್ವತ್ತು. ಈ ಉಪಖಂಡ ಅತ್ಯಂತ ಪ್ರಬಲ ಮಹಿಳಾ ನಾಯಕರನ್ನು ಸೃಷ್ಟಿ ಮಾಡಿದೆಯೆಂದು ನಾವು ಮಾತನಾಡುವ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ನಾನು ಮಾತನಾಡುವುದು ಅನಾವಶ್ಯಕವಾಗಿದ್ದರೆ, ಕೆ.ಎಸ್. ಈಶ್ವರಪ್ಪನವರು ಪ್ರಸ್ತಾಪ ಮಾಡುವಾಗ ಅನಾವಶ್ಯಕವಾಗಿ ಮಾನ್ಯ ಸಗೀರ್ ಅಹಮದ್‌ರವರು ತಾವು ಒಂದು ಲಘು ಘಳಿಗೆಯನ್ನು. ತಾವೇ ಒಂದು ನಿರ್ಧಾರವನ್ನು ತೆಗೆದುಕೊಂಡು ಮುಂದುವರೆಸಿಕೊಳ್ಳಿ ಎಂದು ಹೇಳಿದರು. ಆ ರೀತಿ ಮುಂದುವರೆಸಿರತಕ್ಕವರು ತಾವು, ಇಂದಿರಾಗಾಂಧಿಯವರ ಕಾಲದಲ್ಲಿ ಒಂದು ವರ್ಷ ಮುಂದೆ ಹೋಯಿತು, ಸಂವಿಧಾನ ತಿದ್ದುಪಡಿ ಮಾಡಿರತಕ್ಕದ್ದು ಅನಪೇಕ್ಷಣೀಯ, ಅದನ್ನು ಮಾಡಬಾರದಿತ್ತು, ಸ್ವಹಿತ ಕಾರ್ಯಕ್ಕಾಗಿ ಆ ರೀತಿ ಮಾಡಿದ್ದಾರೆ, ಆ ಕಾಲದಲ್ಲೇ ಇದು ಆಗಿದೆ ತಾವು ಕೂಡ ಇದನ್ನು ಗಮನಹರಿಸಬೇಕೆಂದು ನಾನು ಹೇಳಿದೆ. ಆ ರೀತಿ ಮಾಡಿದ್ದರ ಪರಿಣಾಮವಾಗಿ 1977ರಲ್ಲಿ ತಾವು ಏನು ಅನುಭವಿಸಿದ್ದೀರಿ, ಇದು ಎಲ್ಲರಿಗೂ ಗೊತ್ತಿದೆ. ಯಾರದೋ ಒಬ್ಬರ ಹೆಸರನ್ನು ಹೇಳಿದರೆ ಅವರೇ ಇವರು ಎಂದು ಭಾವಿಸುವ ಅಗತ್ಯವಿಲ್ಲ. ನಾವು ಇಲ್ಲಿ ವಸ್ತುನಿಷ್ಠವಾಗಿ ವಿಚಾರದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಛೇರ್ಮನ್‌ರವರೆ, ಈ ರೀತಿ ಗ್ರಾಮಪಂಚಾಯಿತಿಯ ಚುನಾವಣೆಯನ್ನು ಮುಂದೆಹಾಕುವುದರಿಂದ ಇವರು ಒಂದುರೀತಿಯಲ್ಲಿ ಮುಂದುವರೆಯಬಹುದೇ ವಿನಹ ರಾಜ್ಯದ ಜನರು, ಗ್ರಾಮೀಣ ಜನರು ಎಷ್ಟರ ಮಟ್ಟಿಗೆ ತೊಂದರೆ ಅನುಭವಿಸಬೇಕು? ಕೇಂದ್ರ ಸರ್ಕಾರದಿಂದ ಬರತಕ್ಕ ರಾಜ್ಯ ಸರ್ಕಾರದ ಹಣದ ವಿನಿಯೋಗದಲ್ಲಿ ಎಷ್ಟೊಂದು ತೊಂದರೆಯಾಗುತ್ತದೆ? ಕೇಂದ್ರದಿಂದ ಬಂದಿರುವ ಹಣವನ್ನೂ ಇವರು ಬಳಸುತ್ತಿಲ್ಲ, ಇವರೂ ಕೂಡ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಇನ್ನು ಮುಂದೆ ಎಲ್ಲೆಲ್ಲಿ ಚುನಾಯಿತ ಸಂಸ್ಥೆಗಳು ಇರುವುದಿಲ್ಲವೋ ಅಲ್ಲಿಗೆ ಕೇಂದ್ರದಿಂದ ಬರತಕ್ಕ ಅನುದಾನದಲ್ಲಿ ಇಪ್ಪತ್ತು ಪರ್‌ಸೆಂಟ್ ಕಡಿಮೆಯಾಗುತ್ತದೆ. ಇನ್ನು ಮುಂದೆ ಬರುವುದು ಎಂಭತ್ತು ಪರ್ ಸೆಂಟ್ ಮಾತ್ರ. ತಾವು ಮಾಡಿರುವ ತಪ್ಪಿನಿಂದಾಗಿ ರಾಜ್ಯದ ಜನರೇಕೆ ಕಷ್ಟವನ್ನು ಅನುಭವಿಸಬೇಕು?ಇವರು ಗ್ರಾಮಾಂತರ ಪ್ರದೇಶದ ಬಡವರ ಕುಡಿಯುವ ನೀರನ್ನು, ಮನೆಗಳನ್ನು ಹಾಳುಮಾಡಿದರು. ಗ್ರಾಮೀಣ ಬಡವರ ನೆಮ್ಮದಿಯ್ನು ಕಾಪಾಡುವ, ಅವರ ಸುಖವನ್ನು ಏಳಿಗೆಗೊಳಿಸುವುದರ ಬದಲಾಗಿ ಅವರಿಗೆ ಸೇರಬೇಕಾಗಿರತಕ್ಕ ಹಣಕ್ಕೆ ಕಲ್ಲು ಹಾಕತಕ್ಕ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು? ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ಹೋಗುತ್ತದೆ. ಇದು ನ್ಯಾಯವೇ? ಮಾನ್ಯ ಪ್ರಕಾಶ್ ರವರಿಗೆ, ಅವರ ಸರ್ಕಾರಕ್ಕೆ ಹೇಳುವುದೇನೆಂದರೆ, ತಮ್ಮ ಸರ್ಕಾರಕ್ಕೆ ಇನ್ನೂ ಕಾಲಾವಕಾಶವಿದೆ, ಒಂದು ದಿಟ್ಟಹೆಜ್ಜೆಯನ್ನು ತಾವು

ಇಡಬೇಕು. ಚುನಾವಣೆಯಾಗಲಿ ನಾವು ಗೆಲ್ಲುತ್ತೇವೆ ಎಂದು ಎಲ್ಲಾ ಪಕ್ಷದವರು ಹೇಳುತ್ತಿದ್ದಾರೆ. ಚುನಾವಣೆಯಾದರೆ ರಾಜ್ಯದ ಜನರ ಮನಸ್ಸಿನ ಭಾವನೆಗಳು ಹೊರಗಡೆ ಬರುತ್ತದೆ. ರಾಜ್ಯದ ರಾಜಕಾರಣಕ್ಕೆ ಕೈಗನ್ನಡಿಯನ್ನು ಹಿಡಿದಂತಾಗುತ್ತದೆ. ಜೊತೆಗೆ ಸಂವಿಧಾನವನ್ನು ಎತ್ತಿಹಿಡಿದಂತೆ ಆಗುತ್ತದೆ. ಜನತಾದಳ ಸರ್ಕಾರ ಈ ದೇಶಕ್ಕೆ ವಿಕೇಂದ್ರಿಕರಣ, ಸ್ಥಳೀಯ ಸಂಸ್ಥೆಗಳಿಗೆ ಅವಕಾಶದ ವ್ಯವಸ್ಥೆಯನ್ನೇನು ಮಾಡಿಕೊಟ್ಟಿದ್ದರೋ ಆ ಮೌಲ್ಯಕ್ಕೆ ಇವರು ಬೆಲೆ ಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಗ್ರಾಮೀಣ ಜನತೆಗೆ ದ್ರೋಹ, ಸಂವಿಧಾನಕ್ಕೆ ದ್ರೋಹ, ಮಾಡಿದಂತಾಗುತ್ತದೆ. ಜೊತೆಗೆ ಕರ್ತವ್ಯ ವೈಫಲ್ಯವನ್ನು ಮಾಡಿದಂತಾಗುತ್ತದೆ. ಆದ್ದರಿಂದ ಇವರಿಗೆ ಪ್ರಜಾತಂತ್ರದ ವ್ಯವಸ್ಥೆ ಬೇಕೋ ಅಥವಾ ಸರ್ವಾಧಿಕಾರ ಸಾಮ್ರಾಜ್ಯ ಬೇಕೋ ಎಂಬುದನ್ನು ಇವರೇ ಆಯ್ಕೆ ಮಾಡಿಕೊಳ್ಳಲಿ. ಯಾರು ಬದುಕುತ್ತಾರೋ ಯಾರು ಸಾಯುತ್ತಾರೋ ಯಾರಿಗೂ ಗೊತ್ತಿಲ್ಲ. ಆದರೆ ಅಧಿಕಾರದಲ್ಲಿರುವ ಯಾರು ಏನು ಮಾಡಿದರು ಎಂಬುದನ್ನು ಜನರು ನೂರಾರು ವರ್ಷ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಈ ವ್ಯವಸ್ಥೆಯನ್ನು ತಂದಿರುವ ಈ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ರಾಜ್ಯದ, ದೇಶದ ಗಮನವನ್ನು ಸೆಳೆಯಬೇಕಾದ ದೃಷ್ಟಿಯಿಂದ ತಾವೇನು ತಪ್ಪು ಮಾಡಿದ್ದೀರಿ ಅದನ್ನು ತಿದ್ದಿಕೊಳ್ಳುವ ಸಲುವಾಗಿ ತಾವೇನು ಸುಗ್ರೀವಾಜ್ಞೆಯನ್ನು ಮಾಡಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ರಾಜ್ಯಪಾಲರಿಗೆ ನಿರ್ಣಯವೊಂದನ್ನು ಮಾಡಿಕಳಿಸಿ. ತಮಗೆ ಇನ್ನೂ ಅವಕಾಶವಿದೆ. ಹಿಂದಿನ ವ್ಯವಸ್ಥೆಯ ಪ್ರಕಾರ ಚುನಾವಣೆ ನಡೆಸಬೇಕಾಗುತ್ತದೆ, ಆದ್ದರಿಂದ ತಕ್ಷಣವೇ ಚುನಾವಣೆಯನ್ನು ಮಾಡಿ. ತಿದ್ದುಪಡಿ ಮಾಡಬೇಕು ಎಂಬ ಬಗ್ಗೆ ಮುಂದಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಮುಂದಿನ ಚುನಾವಣೆಯಲ್ಲಿ ನಾವು, ನೀವು, ಮತ್ತೊಬ್ಬರು ಯಾರು ಅಧಿಕಾರಕ್ಕೆ ಬರುತ್ತಾರೋ ಅದು ಬೇರೆ ವಿಚಾರ. ಸರ್ಕಾರ ಚುನಾವಣೆ ಮಾಡಲು ತಯಾರಾಗಿದ್ದರೆ ನಾನು ಸ್ವಾಗತಿಸುತ್ತೇನೆ. ಇದರ ಸಲುವಾಗಿ ಮಾನ್ಯ ಪ್ರಕಾಶ್ ರವರು ರಾಜೀನಾಮೆ ಕೊಡುವ ಮಟ್ಟಕ್ಕೆ ಹೋಗಿದ್ದರಿಂದ ಸರ್ಕಾರಕ್ಕೆ ಇದರಲ್ಲಿ ಆಸಕ್ತಿ ಇಲ್ಲವೆಂದು ತೀರ್ಮಾನವಾಗಿದೆಯೆಂದು ನಾನು ಭಾವಿಸುತ್ತೇನೆ. ಐವತ್ತೊಂದು ಸಚಿವರ ಗುಂಪಿನಲ್ಲಿ ತಮ್ಮ ಕೂಗು ಯಾರಿಗೂ ಕೇಳಿಸಲಿಲ್ಲ. ತಮಗೆ ಇದರಿಂದ ನೋವಾಗಿದೆ. ಪತ್ರಿಕೆಗಳಲ್ಲಿ ಇದರ ಬಗ್ಗೆ ಬಹಳಷ್ಟು ವರದಿಗಳು ಬಂದಿದೆ. ರಾಜ್ಯದ ಮಾಜಿ ಹಿರಿಯರು ರಾಜಕಾರಣಿಯಾದ ಮಾನ್ಯ ಬಿ.ಜಿ. ಬಣಕಾರ್ ರವರು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಒಂದು ವರದಿಯನ್ನು ಬರೆದಿದ್ದಾರೆ. ಅವರು ಬಹಳ ಮನನೊಂದು ಆ ವರದಿಯನ್ನು ಬರೆದಿದ್ದಾರೆ. ಈ ವ್ಯವಸ್ಥೆನೇ ಸಂವಿಧಾನಕ್ಕೆ ಮಾಡಿರುವ ದ್ರೋಹ ಎಂಬ ಅಂಶವನ್ನು ಅವರು ಅದರಲ್ಲಿ ಹೇಳಿದ್ದಾರೆ. ಸಂವಿಧಾನದ 243 ಇ,3ಎ, ಆರ್ಟಿಕಲ್ ನ ಪ್ರಕಾರ ಇದು ಕಡ್ಡಾಯವಾಗಿದೆಯೆಂದು ಎಲ್ಲ ಅಂಶಗಳನ್ನು ಬರೆದಿದ್ದಾರೆ. ತುಂಬ ಸೂಕ್ಷ್ಮವಾಗಿ ಗ್ರಾಮೀಣ ಪ್ರದೇಶದ ಅವಿದ್ಯಾವಂತರಿಗೂ ಅರ್ಥವಾಗುವ ರೀತಿಯಲ್ಲಿ

ಬರೆದಿದ್ದಾರೆ. ತಾವು ವಿದ್ಯಾವಂತರಾಗಿದ್ದೀರಿ, ತಿಳುವಳಿಕೆಯುಳ್ಳವರಾಗಿದ್ದೀರಿ, ಸರ್ಕಾರವನ್ನು ಅನೇಕ ವರ್ಷ ನಡೆಸಿಕೊಂಡು ಬಂದಿದ್ದೀರಿ, ಪ್ರಾಮಾಣಿಕ ರಾಜಕಾರಣಿಯೆಂದು ಹೆಸರು ಪಡೆದಿದ್ದೀರಿ, ಈ ಸರ್ಕಾರವನ್ನು ಒತ್ತಾಯ ಮಾಡಿ ಆ ದಿಕ್ಕಿನಲ್ಲಿ ಗ್ರಾಮಪಂಚಾಯಿತಿಗಳ ಚುನಾವಣೆ ಮಾಡಲು ಯಶಸ್ವಿಯಾಗಿ ನಿಮ್ಮ ಜೊತೆ ನಾವು ಸದಾ ಇರುತ್ತೇವೆ. ಆಕಸ್ಮಾತ್ ಉಳಿದವರೆಲ್ಲ ನಮಗೆ ಅಧಿಕಾರವೆ ಬೇಕು ಎಂದು ತೀರ್ಮಾನ ಮಾಡಿದರೆ ತಾವು ಅದರ ವಿರುದ್ಧ ಪುಟಿದು ಎದ್ದೇಳಿ. ತಾವು ನಮ್ಮ ರಾಜ್ಯದ ಮಾದರಿ ರಾಜಕಾರಣಿಯಾಗಿದ್ದೀರಿ. ನಾನು ಜೀವಪೂರ್ತ ಮೌಲ್ಯಾಧಾರಿತ ರಾಜಕಾರಣ ಮಾಡುತ್ತೇನೆ, ನಾನು ಎಡಬಿಡಂಗಿ ರಾಜಕಾರಣ ಮಾಡುವುದಿಲ್ಲವೆಂದು ಹೇಳಿ ರಾಜೀನಾಮೆ ಕೊಟ್ಟು ಹೊರಗೆ ಬರಬೇಕೆಂದು ಕೈಮುಗಿದು ಹೇಳುತ್ತೇನೆ. ಇಲ್ಲದಿದ್ದರೆ ಈ ರಾಜ್ಯದಲ್ಲಿರುರ ಸಾವಿರಾರು ರಾಜಕಾರಣಿಗಳ ಜೊತೆಗೆ ತಾವೂ ಒಬ್ಬರಾಗುತ್ತೀರಿ. ಅವರುಗಳು ರಾಜ್ಯದ ಜನರಿಗೆ ಯಾವ ರೀತಿಯಾಗಿ ದ್ರೋಹ ಮಾಡುತ್ತಿದ್ದಾರೆ ಅದಕ್ಕಿಂತ ಸಿಂಹಪಾಲು ತಮ್ಮದಾಗುತ್ತದೆ. ಸರ್ಕಾರ ತಕ್ಷಣ ಚುನಾವಣೆ ಮಾಡಬೇಕು ಇಲ್ಲದಿದ್ದರೆ ತಾವು ರಾಜೀನಾಮೆ ಕೊಟ್ಟು ಬರಬೇಕು, ಇವೆರಡರಲ್ಲಿ ಒಂದನ್ನು ಮಾಡದೆ ಬೇರೆ ದಾರಿ ಯಾವುದೂ ಇಲ್ಲ. ಈ ವಿಚಾರವನ್ನು ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಲು ತಮ್ಮ ಮುಂದೆ ಇಟ್ಟಿದ್ದೇನೆ. ಇದರ ಬಗ್ಗೆ ಪೂರ್ಣ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಛೇರ್ಮನ್‌ರವರೆ, ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಮಾನ್ಯ ಈಶ್ವರಪ್ಪನವರು ಇದರ ಬಗ್ಗೆ ಸವಿಸ್ತಾರವಾಗಿ ಎಲ್ಲವನ್ನೂ ತಿಳಿಸಿದ್ದಾರೆ. ಗ್ರಾಮೀಣ ಅಭಿವೃದ್ಧಿ ಸಚಿವರಾದ ಮಾನ್ಯ ಪ್ರಕಾಶ್ ರವರಿಗೆ ಸರ್ಕಾರ ಮಾಡಿರುವ ತೀರ್ಮಾನ ತಪ್ಪಾಗಿದೆಯೆಂದು ಈಗಾಗಲೇ ಮನದಟ್ಟಾಗಿದೆ. ಸಂವಿಧಾನಕ್ಕೆ ದ್ರೋಹ ಮಾಡತಕ್ಕ ಕೆಲಸ ಇದಾಗಿದೆ, ಜನತೆಯ ಹಕ್ಕನ್ನು ಕಿತ್ತುಕೊಳ್ಳತಕ್ಕ ಕೆಲಸ ನಮ್ಮಿಂದಾಗಿದೆಯೆಂದು ಅವರಿಗೆ ಮನವರಿಕೆಯಾದಮೇಲೆ ಅವರು ಮಂತ್ರಿಮಂಡಲದಿಂದ ಹೊರಗಡೆ ಬಂದು ರಾಜೀನಾಮೆ ಕೊಡತಕ್ಕ ಮಾತನ್ನು ಸಹ ಹೇಳಿದ್ದಾರೆ. ಈ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕು ಎಂಬ ನಿಜವಾದಂಥ ಕಳಕಳಿ ತಮಗೆ ಇದ್ದಿದ್ದರೆ ಕಳೆದ ನಾಲ್ಕೂಕಾಲು ವರ್ಷದಲ್ಲಿ ಯಾವುದೇ ಸಂದರ್ಭದಲ್ಲಿ ಇದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿ ಮುಂದಿನ ಚುನಾವಣೆಯನ್ನು ಈ ಬದಲಾವಣೆಯೊಂದಿಗೆ ಮಾಡುತ್ತೇವೆಂದು ಹೇಳಿದ್ದರೆ, ಈ ಮನೆಯ ವಿಶ್ವಾಸವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿದ್ದರೆ, ಇದರ ಬಗ್ಗೆ ತಮಗೆ ಪ್ರಾಮಾಣಿಕ ಕಳಕಳಿ ಇದೆಯೆಂದು ಅನ್ನಿಸುತ್ತಿತ್ತು. ಆದರೆ, ಸೋಲುವ ಭಯದಿಂದ ಈ ವ್ಯವಸ್ಥೆಯನ್ನೆ ತಿರುಚುವ ಪ್ರಯತ್ನವೇನಾಗಿದೆ ಇದು ತಮಗೆ ತಮ್ಮ ಸರ್ಕಾರಕ್ಕೆ ಗೌರವವನ್ನು ತರುವ

ಸಂಗತಿಯಾಗುವುದಿಲ್ಲ. ಸಂವಿಧಾನಬದ್ಧವಾಗಿ ಕೆಲಸ ಮಾಡುತ್ತೇವೆಂದು ಪ್ರಮಾಣವಚನವನ್ನು ಸ್ವೀಕಾರ ಮಾಡಿದಂಥ ನಾವು ಇಂದು ಪ್ರಜಾತಂತ್ರದ ಕಗ್ಗೊಲೆ ಮಾಡುವಂಥದ್ದು ಸರಿಯಲ್ಲ. ಸಂವಿಧಾನಕ್ಕೆ ಅಪಚಾರ ಮಾಡತಕ್ಕ ತಾವು ಒಂದು ಕ್ಷಣ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕಿಲ್ಲ. ನಮ್ಮ ವ್ಯವಸ್ಥೆಯ ಪ್ರಕಾರ, ಸಂವಿಧಾನದ 73ನೇ ತಿದ್ದುಪಡಿಯ ಪ್ರಕಾರ ಯಾವುದಾದರೂ ವಿಶೇಷವಾದ ಸಂದರ್ಭದಲ್ಲಿ ಆರು ತಿಂಗಳೊಳಗಾಗಿ ಚುನಾವಣೆಗಳಾಗಬೇಕು ಎಂದು ಇದೆಯೇ ವಿನಹ ಚುನಾವಣೆಯನ್ನು ಯಾವುದೇ ಕಾರಣಕ್ಕೆ ಮುಂದೂಡುವ ಅವಕಾಶ ತಮಗೆ ಇಲ್ಲವೆಂಬ ವಿಚಾರವನ್ನು ನಾನು ತಮಗೆ ಹೇಳುವ ಅಗತ್ಯವಿಲ್ಲ. ಮಾನ್ಯ ದೇವೇಗೌಡರು ಪ್ರಧಾನಿಗಳಾದ ಸಂದರ್ಭದಲ್ಲಿ ಲೋಕಸಭೆಯಲ್ಲಿ ಅವರು ಮೊದಲ ದಿನ ಮಾತನಾಡುವ ಸಂದರ್ಭದಲ್ಲಿ ನಾನು ಇದ್ದೆ. ಅವರು ಬಹಳ ಹೆಮ್ಮೆಯಿಂದ ಗ್ರಾಮಪಂಚಾಯಿತಿಯ ವ್ಯವಸ್ಥೆಯನ್ನು ಯಾವ ರೀತಿ ನಾನು ಜಾರಿಗೆ ತಂದಿದ್ದೇವೆ, ಇಡೀ ದೇಶಕ್ಕೆ ಇದನ್ನು ಯಾವ ರೀತಿ ವಿಸ್ತರಣೆ ಮಾಡಬೇಕೆಂದಿದ್ದೇವೆ ಎಂಬ ಬಗ್ಗೆ ಅವರು ಹೇಳಿದಾಗ ನನಗೂ ಎದೆಯುಬ್ಬಿಬಂತು. ಆ ಮಾತನ್ನು ಹೇಳಿದಂಥ ತಾವು ಇವತ್ತು ಸ್ವಾರ್ಥ ರಾಜಕಾರಣಕ್ಕಾಗಿ ತಮ್ಮ ಅಂತಃಕಲಹದ, ಕಚ್ಚಾಟದ ಈ ಪರಿಸ್ಥಿತಿಯಲ್ಲಿ ಹೇಗಾದರು ಮಾಡಿ ವಿಧಾನಸಭಾ ಚುನಾವಣೆ ನಡೆಯುವವರೆಗೆ ಗ್ರಾಮಪಂಚಾಯಿತಿಗಳ ಚುನಾವಣೆಯನ್ನು ಮುಂದೂಡುವಂಥ ಹುನ್ನಾರವೇನು ತಾವು ಮಾಡಿದಿರಿ ಅದಕ್ಕೆ ತಾವು ಬಲಿಯಾದುದು ತಮಗೆ ಗೌರವ ತರತಕ್ಕ ಸಂಗತಿಯಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ದುಃಖ ತರುವ ಸಂಗತಿ ಏನೆಂದರೆ ಈ ವ್ಯವಸ್ಥೆ ಇವತ್ತು ಹೇಗೆ ನಡೆಯುತ್ತಿದೆ? ತಾವು ಸಚಿವರಾಗಿದ್ದಂತಹ ಕಾಲದಲ್ಲಿ 1993ರ ಪಂಚಾಯಿತಿ ಕಾಯ್ದೆ ಪ್ರಕಾರ ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಪರಿಶೀಲನಾ ಸಭೆಗಳನ್ನು ನಡೆಸಲು ಸ್ಥಾಯಿ ಸಮಿತಿಗಳ ರಚನೆ ಆಗಬೇಕಾಗಿತ್ತು. 5673 ಗ್ರಾಮ ಪಂಚಾಯಿತಿಗಳಲ್ಲಿ 500 ಕ್ಕೂ ಹೆಚ್ಚು ಪಂಚಾಯಿತಿಗಳಲ್ಲಿ ಸ್ಥಾಯಿ ಸಮಿತಿಗಳ ರಚನೆ ಆಗಿಲ್ಲ. ಇದು ಇವತ್ತು ನಡೆದುಕೊಂಡು ಹೋಗುತ್ತಿರುವಂತಹ ಒಂದು ಪರಿಸ್ಥಿತಿಯಾಗಿದೆ. ಅದೇ ರೀತಿ ಯಾವ ಹಳ್ಳಿಯವನು ಅಧ್ಯಕ್ಷನಾಗುತ್ತಾನೋ ಅವನು ಆ ಹಳ್ಳಿಯ ಅಭಿವೃದ್ಧಿಯ ಕಡೆಗೆ ಹೆಚ್ಚು ಒತ್ತು ಕೊಡುವಂತಹ ಸಂಭವಿರುವುದರಿಂದ ಈ ರೀತಿ ಒಂದು ಬದಲಾವಣೆಯನ್ನು ನಾವು ಮಾಡಲಿಕ್ಕೆ ಹೊರಟಿದ್ದೇವೆ ಎಂಬ ಮಾತನ್ನು ತಾವು ಹೇಳುತ್ತಿದ್ದೀರಿ. ನಾನು ತಮಗೆ ಕೇಳಿಲಿಕ್ಕೆ ಇಚ್ಛಿಪಡುತ್ತೇನೆ, ಇವತ್ತು ಗ್ರಾಮ ಪಂಚಾಯಿತಿಗಳ ಸಂಖ್ಯೆಗಳು ಕಡಿಮೆಯಾಗುವುದರಿಂದ ಹಣ ಹೆಚ್ಚು ಬರುತ್ತದೆ ಎನ್ನುವಂತಹ ನಿಮ್ಮ ಕಲ್ಪನೆ ಹೇಗೆ ಸರಿ? ಉದಾಹರಣೆಗೆ, 400 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವಂತಹ ಅವಕಾಶ ಇವತ್ತು ಇದೆ. 2-3 ದೊಡ್ಡ ಗ್ರಾಮಗಳು ಸೇರಿ

ಒಂದು ಗ್ರಾಮ ಪಂಚಾಯಿತಿಯಾಗುತ್ತದೆ. ಇವತ್ತು ಆ ಗ್ರಾಮ ಪಂಚಾಯಿತಿಯಲ್ಲಿ ಯಾವನು ಅಧ್ಯಕ್ಷನಾಗುತ್ತಾನೆ, 8-10 ಗ್ರಾಮಗಳನ್ನು ಸೇರಿಸಿ ದೊಡ್ಡ ಗ್ರಾಮ ಪಂಚಾಯಿತಿಗಳನ್ನು ತಾವು ಮಾಡುವುದರಿಂದ, ಆ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ತನ್ನ ಹಳ್ಳಿಯೇ ಅತ್ಯಂತ ಪ್ರಾಮುಖ್ಯವಾದುದು ಎಂದು ಅವನಿಗೆ ಅನಿಸುತ್ತದೆ. ಆತ ಇನ್ನೊಂದು ಹಳ್ಳಿಯ ಕಡೆಗೆ ಗಮನ ಕೊಡುವುದಿಲ್ಲ ಅಂತೇಳಿಯೇ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಮಾಡಿ ಸಣ್ಣ ಗ್ರಾಮ ಪಂಚಾಯಿತಿಗಳ ರಚನೆಯ ಬಗ್ಗೆ ತಾವೇ ಚಿಂತನೆ ಮಾಡಿ ಇದನ್ನು ಮಾಡಿದ್ದೀರಿ. ಈ ರೀತಿ ಇವತ್ತು 400 ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಮಾಡುವುದನ್ನು ಬದಲಾವಣೆ ಮಾಡಿ, ಇವತ್ತು 1999ನೇ ತಿದ್ದುಪಡಿ ಪ್ರಕಾರ 1,000 ಜನಸಂಖ್ಯೆಗೆ ಒಂದು ಪಂಚಾಯಿತಿ ಮಾಡುವಂತಹ ಕಾಲದಲ್ಲಿ ತಾವು 6,000 ಜನಸಂಖ್ಯೆಗೆ ಒಂದು ಪಂಚಾಯಿತಿ ಮಾಡಲಿಕ್ಕೆ ಹೊರಟಿದ್ದೀರಿ. 5,655 ಪಂಚಾಯಿತಿಗಳು ಇರುವುದನ್ನು 2,536ಕ್ಕೆ ಇಳಿಸಲು ತಾವು ಹೊರಟಿದ್ದೀರಿ. ಅಂದರೆ ಸುಮಾರು 64 ಸಾವಿರ ಚುನಾಯಿತ ಸದಸ್ಯರುಗಳು ಇರುವಂತಹ ಈ ವ್ಯವಸ್ಥೆಯನ್ನು ಕೇವಲ 26,400ಕ್ಕೆ ಇಳಿಸುವಂತಹ ಪ್ರಯತ್ನವನ್ನು ತಾವು ಮಾಡಲಿಕ್ಕೆ ಹೊರಟಿದ್ದೀರಿ. ಇದು ಸರಿಯೇ? ಎರಡನೆಯದಾಗಿ, ನಿಮ್ಮ ಅವಧಿಯಲ್ಲೇ ಇವತ್ತು ಒಂದು ಪಂಚಾಯಿತಿ ಒಂದು ಲಕ್ಷದಂತೆ ಇವತ್ತು 5,655 ಪಂಚಾಯಿತಿಗಳಿಗೆ 56 ಕೋಟಿ 55 ಲಕ್ಷ ರೂಪಾಯಿಗಳ ಗ್ರಾಂಟ್ ಬರುತ್ತಿದೆ. ನೀವು ಈ ಪಂಚಾಯಿತಿಗಳನ್ನು ದೊಡ್ಡದು ಮಾಡುವುದರಿಂದ, ಗ್ರಾಂಟ್ ಹಣವನ್ನು ನೀವು ಎಲ್ಲಿಂದ ತರುತ್ತೀರಿ? ಎಲ್ಲಿಂದ ಜಾಸ್ತಿ ಹಣ ಅನುದಾನವಾಗಿ ಬರುತ್ತದೆ? ಮೂರು ಹಳ್ಳಿಗೆಂದು ಹಣ ಬಂದಾಗ ಅದೇ ಹಣವನ್ನು ಖರ್ಚು ಮಾಡುತ್ತಿದ್ದರು. ಹೆಚ್ಚು ಹಣ ಕೊಟ್ಟು ಹತ್ತು ಹಳ್ಳಿ ಸೇರಿಸಿ, ನೀವೊಂದು ಪಂಚಾಯಿತಿ ಮಾಡುವುದರಿಂದ ನಿಮ್ಮ ಸಾಧನೆ ಏನು ಮಾಡಿದಂತಾಯಿತು? ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹಳ್ಳಿಗಳಲ್ಲಿ ಯಾವ ರೀತಿ ಹಳ್ಳಿಯ ಸರ್ವಾಂಗೀಣ ಅಭಿವೃದ್ಧಿಗೋಸ್ಕರ ಅವರು ಕೆಲಸ ಮಾಡಬೇಕು ಎನ್ನುವಂತಹ ಕಳಕಳಿ ಇರುವಂತಹ ಚುನಾಯಿತ ಪ್ರತಿನಿಧಿಗಳನ್ನು ಅವರೇ ಆಯ್ಕೆ ಮಾಡಿಕೊಂಡು ಕೆಲಸ ಮಾಡುವಂತಹ ವ್ಯವಸ್ಥೆಯೊಂದು ಏನಿತ್ತು ಅದಕ್ಕೆ ಕೊಡಲಿ ಪೆಟ್ಟು ಹಾಕುವಂತಹ ಒಂದು ಪ್ರಯತ್ನ ನೀವೇನು ಮಾಡುತ್ತಿದ್ದೀರಿ, ಇದು ತಮಗೆ ಶೋಭೆ ತರುವ ಸಂಗತಿಯಲ್ಲ. ಅದಕ್ಕಾಗಿ ಈಗಲಾದರೂ ಆ ದಿಸೆಯಲ್ಲಿ ತಾವು ಯೋಚನೆಯನ್ನು ಮಾಡಿ. ನಾನು ನಿಮ್ಮನ್ನು ಕೇಳುತ್ತೇನೆ. ತಾವು ಮೂರು ತಿಂಗಳಿಗೊಮ್ಮೆ ನಾಲ್ಕು ಕ್ವಾರ್ಟರ್ ನಲ್ಲಿ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು. ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂತಹ ಈ ಹಣದಲ್ಲಿ ತಾವು ಇದುವರೆಗೂ ಒಂದೇ ಕ್ವಾರ್ಟರ್ ಹಣ ಬಿಡುಗಡೆ ಮಾಡಿದ್ದೀರಿ, ಕೆಲವು ಕಡೆ ಮಾತ್ರ ಎರಡನೇ ಕ್ವಾರ್ಟರ್‌ನ ಹಣ ಬಿಡುಗಡೆ ಮಾಡಿದ್ದೀರಿ. ಇವತ್ತು ಮಾರ್ಚ್ ತಿಂಗಳಿನಲ್ಲಿ ನಾವಿದ್ದೇವೆ. ಮೂರು ತಿಂಗಳಿಗೊಂದರಂತೆ ನಾಲ್ಕು ಕಂತುಗಳ

ಹಣ ತಾವು ಬಿಡುಗಡೆ ಮಾಡಬೇಕಿತ್ತು, ನಾಲ್ಕು ಕಂತಿನ ಹಣವನ್ನು ನಾಲ್ಕು ಕ್ವಾರ್ಟರ್ ನಲ್ಲಿ ತಾವು ಪೂರ್ಣವಾಗಿ ಬಿಡುಗಡೆ ಮಾಡಬೇಕಾದಂತಹ ಸಂದರ್ಭದಲ್ಲಿ, ಬಿಡುಗಡೆ ಮಾಡಿದ ಹಣವೂ ಕೂಡ ತಲುಪಿಲ್ಲ. ಮೊದಲನೇ ಕಂತಿನ ಹಣವನ್ನು ನೀವು ಬಿಡುಗಡೆ ಮಾಡಿದಿರಿ, ಎರಡನೆಯ ಕಂತಿನ ಹಣವನ್ನು ಬಿಡುಗಡೆ ಮಾಡಿದಾಗ, ಬಹುಪಾಲು ಆ ಹಣವನ್ನು ಕೆ.ಇ.ಬಿ.ಗೆ ಅಜೆಸ್ಟ್ ಮಾಡಿಕೊಂಡಿದ್ದೀರಿ. ಅಂದರೆ ಗ್ರಾಮ ಪಂಚಾಯಿತಿಗಳ ಸದಸ್ಯರುಗಳು ಯಾರಿದ್ದಾರೆ? ಯಾರು ಗೌರವದಿಂದ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಕೆಲಸಗಳನ್ನು ಮಾಡುತ್ತಿದ್ದರು, ಅವರ ಗ್ರಾಮ ಪಂಚಾಯಿತಿಗಳಿಗೆ ನೀವು ಹಣವನ್ನೇ ಬಿಡುಗಡೆ ಮಾಡದೇ, ಆ ಗ್ರಾಮ ಪಂಚಾಯಿತಿಯ ವ್ಯವಸ್ಥೆಯ ಕಲ್ಪನೆಯನ್ನೇ ತಿರುಗು ಮುರುಗು ಮಾಡುವಂತಹ ಪ್ರಯತ್ನ ಇವತ್ತು ನಿಮ್ಮ ಕಾಲದಲ್ಲಿ ಆಗಿದೆಯಲ್ಲಾ? ಇದು ಎಷ್ಟರಮಟ್ಟಿಗೆ ನಿಮಗೆ ಶೋಭೆ ತರುವ ಸಂಗತಿಯಾಗಿದೆ. ಇದಕ್ಕಾಗಿ ತೆಗೆದಿಟ್ಟ ಹಣ ಎಲ್ಲಿ ಹೋಯಿತು? ಮೂರು ತಿಂಗಳಿಗೊಮ್ಮೆ ಬಿಡುಗಡೆ ಮಾಡಬೇಕಾದ ಹಣವನ್ನು ಸರಿಯಾಗಿ ಬಿಡುಗಡೆ ಮಾಡದೆ ಜನತೆಗೆ ಅನ್ಯಾಯ ಮಾಡುವಂತಹ ಒಂದು ಪ್ರಯತ್ನವನ್ನು ತಾವು ಏಕೆ ಮಾಡಿದ್ದೀರಿ? ನೀವು ಆ ಬಗ್ಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಬೇಕು. ಒಂದು ವರ್ಷದಲ್ಲಿ ಈ ಮಾರ್ಚ್‌ನೊಳಗಾಗಿ ನಾಲ್ಕು ಕಂತುಗಳಲ್ಲಿ ಎಷ್ಟು ಹಣವನ್ನು ಗ್ರಾಮ ಪಂಚಾಯಿತಿಗಳಿಗೆ ತಾವು ಬಿಡುಗಡೆ ಮಾಡಬೇಕಾಗಿತ್ತು? ಎಷ್ಟು ಬಿಡುಗಡೆ ಮಾಡಿದ್ದೀರಿ? ಮುಂದಿನ ವರ್ಷಕ್ಕೆ ಆ ಹಣ ಕೊಡುವುದರಿಂದ, ಈ ವರ್ಷದ ಪ್ರಗತಿ ಆದಂತೆ ಆಗುತ್ತದೆಯೇ? ಇದು ಸರಿಯೇ? ಈ ಬಗ್ಗೆಯೂ ಕೂಡ ತಾವು ದಯಮಾಡಿ ಯೋಚನೆಯನ್ನು ಮಾಡಬೇಕಾಗಿದೆ. ಇವತ್ತು ಕೇಂದ್ರದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರ ಬಂದಮೇಲೆ ಇದೆಲ್ಲವನ್ನೂ ಚಿಂತನೆ ಮಾಡಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚು ಒತ್ತು ಕೊಡುವಂತಹ ಪ್ರಯತ್ನ ಈಗ ನಡೆಯುತ್ತಿದೆ. ಇವತ್ತು ಗ್ರಾಮ ಪಂಚಾಯಿತಿಗಳ ಕೆಲವು ಸದಸ್ಯರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾದ ಮೇಲೆ ಗ್ರಾಮ ಪಂಚಾಯಿತಿಗಳಿಗಿಂತ ಗ್ರಾಮ ಸಭೆಗಳಿಗೆ ಹೆಚ್ಚು ಒತ್ತನ್ನು ಕೊಡುವಂತಹ ಒಂದು ಐತಿಹಾಸಿಕ ನಿರ್ಣಯವನ್ನು ಇವತ್ತು ನಾವು ತೆಗೆದುಕೊಂಡಿದ್ದೇವೆ. ಇದು ಈ ಮೊದಲೇ ಇದ್ದರೂ, ಅದನ್ನು ನೀವು ಕಾರ್ಯರೂಪಕ್ಕೆ ತಂದಿರಲಿಲ್ಲ. ಯಾರೇ ಫಲಾನುಭವಿಗಳನ್ನೇ ಆಗಲೀ ಗ್ರಾಮ ಸಭೆಗಳೇ ಆಯ್ಕೆ ಮಾಡಬೇಕು ಎನ್ನುವಂತಾದ್ದನ್ನು ಕಾರ್ಯರೂಪಕ್ಕೆ ಬರುವಂತೆ ತಾವು ನೋಡಿಕೊಳ್ಳಲಿಲ್ಲ. ಅದಕ್ಕಾಗಿ ಈಗ ಒಂದು ಆಜ್ಞೆಯನ್ನೇ ಹೊರಡಿಸಿ ಗ್ರಾಮ ಸಭೆಗಳಲ್ಲೇ ಯಾವ ಸವಲತ್ತುಗಳು ಸಿಗಬೇಕೋ ಎನ್ನುವುದು ತೀರ್ಮಾನವಾಗುವಂತೆ ಮಾಡಲಾಗಿದೆ. ನಾನು ಒಪ್ಪಿಕೊಳ್ಳುತ್ತೇನೆ, ಎಲ್ಲಿ ಸಾಕಷ್ಟು ಎಚ್ಚರ ಮೂಡಿಸಿರುವಂತಹ ಸಮಾಜ ಇದೆ, ಜಾಗ್ರತರಿದ್ದಾರೆ, ಅಲ್ಲಿ ಪಂಚಾಯಿತಿಗಳು ಚೆನ್ನಾಗಿ ಕೆಲಸ ಮಾಡುತ್ತಿರಬಹುದು. ಉಳಿದೆಲ್ಲಾ ಬಹುತೇಕ ಕಡೆಗಳಲ್ಲಿ ಗ್ರಾಮ

ಪಂಚಾಯಿತಿಗಳ ಸದಸ್ಯರು ಈ ರೀತಿ ಬಂದಂತಹ ಸವಲತ್ತುಗಳನ್ನು ದುರುಪಯೋಗ ಮಾಡಿಕೊಂಡಂತಹ ಆರೋಪಗಳು ಅನೇಕ ಕಡೆ ಇರುವುದರಿಂದ, ಈ ಗ್ರಾಮ ಸಭೆಗಳಿಗೆ ಹೆಚ್ಚು ಒತ್ತನ್ನು ಕೊಡುವಂತಹ ಒಂದು ಐತಿಹಾಸಿಕ ನಿರ್ಣಯ ಮತ್ತು ರಾಜ್ಯ ಸರ್ಕಾರಗಳಿಗೆ ಹಣವನ್ನು ಕೊಡುವುದರಿಂದ ಬೇರೆ ಬೇರೆ ಬಾಬುಗಳಿಗೆ ಹಣವನ್ನು ಉಪಯೋಗ ಮಾಡಿಕೊಂಡು, ವರ್ಷದ ಕೊನೆಯವರೆಗೂ ಹಣವನ್ನು ಬಿಡುಗಡೆ ಮಾಡದೇ ಸತಾಯಿಸುವಂತಹ ಒಂದು ಪ್ರಯತ್ನ ಇವತ್ತು ನಿಮ್ಮ ಜನತಾದಳ ಸರ್ಕಾರದಲ್ಲಿ ಏನು ಆಗಿದೆಯೋ ಇದನ್ನು ಮನಗಂಡು ಜಿಲ್ಲಾ ಪಂಚಾಯಿತಿಗಳ ಮೂಲಕ ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ಹಣವನ್ನು ಕೊಡುವಂತಹ ಒಂದು ಐತಿಹಾಸಿಕ ನಿರ್ಣಯವನ್ನೂ ಸಹ ಕೇಂದ್ರ ಸರ್ಕಾರ ಇವತ್ತು ತೆಗೆದುಕೊಂಡಿರುವಂತದ್ದು ನಿಮಗೆಲ್ಲಾ ಗೊತ್ತಿರುವಂತಹ ಸಂಗತಿಯೇ ಆಗಿದೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಸಂದರ್ಭದಲ್ಲಿ ಅಥವಾ ಮಸೂದೆ ಮೇಲಿನ ಚರ್ಚೆಯ ಸಂದರ್ಭಗಳಲ್ಲಿ ನಾನು ಈ ಮಾತನ್ನು ಹೇಳಬಹುದಾಗಿತ್ತು. ಆದಾಗ್ಯೂ ಈಗ ಅದನ್ನು ಹೇಳುತ್ತಿದ್ದೇನೆ. ಸನ್ಮಾನ್ಯ ಪ್ರಕಾಶ್‌ರವರೇ ತಮಗೆ ಗೊತ್ತಿದೆ, ರಾಜ್ಯದಲ್ಲಿರುವಂತಹ ಜಿಲ್ಲಾ ಪಂಚಾಯಿತಿಗಳಲ್ಲಿ 1998-99 ನೇ ಸಾಲಿನಲ್ಲಿ 3 ಲಕ್ಷ 17 ಸಾವಿರದ 418 ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರಿಗೆ ಕೊಡುವಂತಹ ಯೋಜನಾ ವೇತನ 242 ಕೋಟಿ 29 ಲಕ್ಷ ರೂಪಾಯಿಗಳಾಗಿದೆ. ಅಂದರೆ ಒಟ್ಟು ಈ ಸಿಬ್ಬಂದಿಗೆ 1946 ಕೋಟಿ 77 ಲಕ್ಷ ರೂಪಾಯಿಗಳನ್ನು ಕೇವಲ ಸಂಬಳ ಸಾರಿಗೆಗಳನ್ನು ಕೊಡುವುದಕ್ಕಾಗಿಯೇ ನಾವು ವೆಚ್ಚ ಮಾಡುತ್ತಿದ್ದೇವೆ. ಜಿಲ್ಲಾ ಪಂಚಾಯಿತಿಗಳಲ್ಲಿ 20ಕ್ಕಿಂತ ಹೆಚ್ಚು ಲೆಕ್ಕ ಶೀರ್ಷಿಕೆಗಳಿದ್ದು, 18 ವೇತನ ಶ್ರೇಣಿಯ ನೌಕರರಿದ್ದಾರೆ. 1997-98ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಗಳ ನೌಕರರುಗಳಿಗೆ ಕೊಟ್ಟಂತಹ ಒಟ್ಟು ವೇತನ ಎಷ್ಟು? ಭತ್ಯೆಗಳೆಷ್ಟು? ಎನ್ನುವುದನ್ನು ಮಾನ್ಯ ಮಂತ್ರಿಗಳು ತಾವು ಉತ್ತರ ಕೊಡುವಾಗ ಹೇಳಬೇಕು. ಇವತ್ತು ಕಳೆದ ನಾಲ್ಕು ವರ್ಷಗಳಲ್ಲಿ ನಿಮ್ಮ ಕಾಲದಲ್ಲಿ ಪ್ರಯೋಗ ಆದಮೇಲೂ ಸಹಾ ಸಂಬಳ ಸಾರಿಗೆಗಳಿಗೆ ನಾವು ಒಟ್ಟು ಎಷ್ಟು ವೆಚ್ಚ ಮಾಡುತ್ತಿದ್ದೇವೆ? ಯೋಜನಾ ಮತ್ತು ಯೋಜನೇತರಗಳಲ್ಲಿ ಅವುಗಳಿಗೆ ಎಷ್ಟೆಷ್ಟು ವೆಚ್ಚ ಮಾಡುತ್ತಿದ್ದೇವೆ? ಎಂಬುದು ಗೊತ್ತಿಲ್ಲದಂತಹ ವ್ಯವಸ್ಥೆಗಳು ಇರುವಂತಹ ಪರಿಸ್ಥಿತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. ವೇತನ ಭತ್ಯೆವೆಚ್ಚದ ಬಗ್ಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯೇ ಇಲ್ಲದಿರುವುದರಿಂದ ನಮಗೆ ಅದು ಗೊತ್ತಾಗುತ್ತಿಲ್ಲ. ಇದರಿಂದಾಗಿ ಶಾಸಕಾಂಗವನ್ನು ಮತ್ತು ಸಾರ್ವಜನಿಕರನ್ನು ಒಂದು ರೀತಿಯ ಅಂಧಕಾರದಲ್ಲಿ ಇಡುವಂತಹ ಪ್ರಯತ್ನ ನಿಮ್ಮ ಕಾಲದಲ್ಲಿ ಆಗುತ್ತಿದೆಯೇ, ಈ ದಿಸೆಯಲ್ಲಿ ಅಧ್ಯಯನ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನಿಮ್ಮ ಅಧಿಕಾರಿಗಳಿಂದ ಆಗಿದೆಯೇ? ಒಟ್ಟು ಜಿಲ್ಲಾ ಪಂಚಾಯಿತಿಗಳಿಗೆ ಖರ್ಚು ಮಾಡುತ್ತಿರುವಂತಹ ಹಣದಲ್ಲಿ ಶೇಕಡ 70 ರಷ್ಟು ಭಾಗ ಹಣವನ್ನು ಸಂಬಳ ಸಾರಿಗೆಗಳಿಗೆ ನಾವು ಖರ್ಚು ಮಾಡುತ್ತಿರುವಂತಹ ಅಂಕಿ

ಅಂಶಗಳ ಬಗ್ಗೆ ನಿಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. 1998-99ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಪಂಚಾಯಿತಿಗಳಿಗೆ ಬಜೆಟ್‌ನಲ್ಲಿ ಒದಗಿಸಿದ ಯೋಜನಾ ಮೊತ್ತ 1447 ಕೋಟಿ 4 ಲಕ್ಷ ರೂಪಾಯಿಗಳು, ಯೋಜನೇತರ ಮೊತ್ತ 2,357 ಕೋಟಿ 2 ಲಕ್ಷ ರೂಪಾಯಿಗಳಾಗಿವೆ. ಅಂದರೆ ಒಟ್ಟು ಒದಗಿಸಿದ ಮೊತ್ತ 3,804 ಕೋಟಿ 6 ಲಕ್ಷ ರೂಪಾಯಿಗಳಾಗಿವೆ. ಇದರಲ್ಲಿ ಒಟ್ಟು ವೇತನ ಸಂಬಂಧವಾಗಿ ನಾವು ಎಷ್ಟು ಕೊಟ್ಟಿದ್ದೇವೆ ಎಂದರೆ, ಯೋಜನೆಯಲ್ಲಿ ಅದರ ಮೊತ್ತ 242 ಕೋಟಿ 29 ಲಕ್ಷ ರೂಪಾಯಿಗಳಾದರೆ, ಯೋಜನೇತರದಲ್ಲಿ ಅದರ ಮೊತ್ತ 1,704 ಕೋಟಿ 48 ಲಕ್ಷ ರೂಪಾಯಿಗಳಾಗಿವೆ. ಅಂದರೆ ಒಟ್ಟು ವೇತನಕ್ಕಾಗಿ 1946 ಕೋಟಿ 77 ಲಕ್ಷ ರೂಪಾಯಿಗಳನ್ನು ಬರೀ ನಾವು ವೇತನಕ್ಕಾಗಿಯೇ ಖರ್ಚು ಮಾಡಿದ್ದೇವೆ. ಜಿಲ್ಲಾ ಪಂಚಾಯಿತಿಗಳ ಸಿಬ್ಬಂದಿಗೆ ಕೊಡುವಂತಹ ವೇತನ, ಸರ್ಕಾರದಿಂದ ಬರುವಂತಹ ಅನುದಾನದಲ್ಲಿ ಶೇಕಡ 51. 18 ರಷ್ಟು ಮಾತ್ರ ಎಂದು ತಾವು ಲೆಕ್ಕ ತೋರಿಸಿದ್ದೀರಿ. ಆದರೆ ವಿವಿಧ ಭತ್ಯೆಗಳಿಗೆ ನಾವೇನು ಖರ್ಚು ಮಾಡುತ್ತೇವೆ ಅದರ ಬಗ್ಗೆ ತಾವು ಲೆಕ್ಕ ತೋರಿಸಿದ್ದೀರಿ. ಆದರೆ ವಿವಿಧ ಭತ್ಯೆಗಳಿಗೆ ನಾವೇನು ಖರ್ಚು ಮಾಡುತ್ತೇವೆ ಅದರ ಬಗ್ಗೆ ತಾವು ಎಲ್ಲೂ ಕೂಡ ನಮಗೆ ಲೆಕ್ಕ ಕೊಡಲಿಲ್ಲ. ನಿಮಗೊಂದು ಉದಾಹರಣೆಯನ್ನು ನಾನು ಕೊಡುತ್ತೇನೆ. 1998-99ನೇ ಸಾಲಿನಲ್ಲಿ ಲೋಕೋಪಯೋಗಿ ಕಾಮಗಾರಿ ಇಲಾಖೆಯಲ್ಲಿ 9,294 ಜನ ಸಿಬ್ಬಂದಿ ಇಡೀ ರಾಜ್ಯದಲ್ಲಿದ್ದಾರೆ. ಇವರೆಲ್ಲರಿಗೆ ಕೊಡುವಂತಹ ವೇತನದ ಮೊತ್ತ 58 ಕೋಟಿ 17 ಲಕ್ಷ ರೂಪಾಯಿಗಳು. ರಸ್ತೆ ಸೇತುವೆ ಇನ್ನಿತರ ಕೆಲಸಗಳಿಗೆ ಖರ್ಚು ಮಾಡುವಂತಹ ಹಣದ ಮೊತ್ತ 77 ಕೋಟಿ 88 ಲಕ್ಷ ರೂಪಾಯಿಗಳಾಗಿವೆ. ಹೀಗಾದರೆ ಆ ವ್ಯವಸ್ಥೆ ಏನಾಗಬಹುದು? ವೈದ್ಯಕೀಯ ಮತ್ತು ಜನಾರೋಗ್ಯ ಕುಟುಂಬ ಕಲ್ಯಾಣ ವಲಯಕ್ಕೆ ಒದಗಿಸಿದಂತಹ ಯೋಜನಾ ಮತ್ತು ಯೋಜನೇತರ ವೆಚ್ಚ 313 ಕೋಟಿ 76 ಲಕ್ಷ ರೂಪಾಯಿಗಳಾಗಿವೆ. ಈ ವಲಯದಲ್ಲಿ 43, 980 ಜನ ಸಿಬ್ಬಂದಿಗೆ ಕೊಡುವ ವೇತನ 328 ಕೋಟಿ 82 ಲಕ್ಷ ರೂಪಾಯಿಗಳು ಅಂದರೆ, ಕೇವಲ 45 ಕೋಟಿ ರೂಪಾಯಿಗಳನ್ನು ಇಡೀ ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದಂತೆ ವೈದ್ಯಕೀಯ ಮತ್ತು ಜನಾರೋಗ್ಯಕ್ಕೆ ನೀವು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಇಷ್ಟು ಹಣವಾದ ಅಭಿವೃದ್ಧಿಯಾಗುತ್ತಾ? ಕೃಷಿ ಹಾಗೂ ತೋಟಗಾರಿಕೆ ಅಭಿವೃದ್ಧಿ ಇಲಾಖೆ ಇಷ್ಟೊಂದು ಮಹತ್ವವಾದ ಇಲಾಖೆಗೆ ತಾವು ಯೋಜನೆ ಹಾಗೂ ಯೋಜನೇತರ ಒಟ್ಟು ವೆಚ್ಚ ತಾವು ಮಾಡುವುದು 95.53 ಲಕ್ಷ ರೂಪಾಯಿಗಳು ಆದರೆ, ಈ ಇಲಾಖೆಯ ನೌಕರರಿಗೆ 9,924 ಜನ ನೌಕರರಿಗೆ ಸಂಬಳ ಸಾರಿಗೆ 69.12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. 26.41 ಲಕ್ಷ ರೂಪಾಯಿಗಳನ್ನು ಮಾತ್ರ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗೆ ಖರ್ಚು ಮಾಡುತ್ತಿದ್ದೀರಿ. ನಾನು ಏಕೆ ಇದನ್ನು ಪ್ರಸ್ತಾಪ

ಮಾಡುತ್ತಿದ್ದೇನೆಂದರೆ, ಇದು ಕೆಲವರಿಗೆ ಅಪ್ರಸ್ತುತ ಎನ್ನಬಹುದು, ಅಂದರೆ ಈ ಪಂಚಾಯಿತಿ ವ್ಯವಸ್ಥೆಯಲ್ಲಿ ಸಂಬಳಸಾರಿಗೆಗೆ ಶೇಕಡ 70 ಭಾಗದಷ್ಟು ಹಣವನ್ನು ಖರ್ಚು ಮಾಡಿ ಉಳಿದಂತಹ 30 ಭಾಗದ ಹಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ನೀವು ಖರ್ಚು ಮಾಡುವಂತಹ ಪರಿಸ್ಥಿತಿ ಒಂದು ಕಡೆ ಆಗಿದೆ. ಇನ್ನೊಂದು ಕಡೆ ಗ್ರಾಮ ಪಂಚಾಯಿತಿಗೆ ತಾವು ಹಣವನ್ನು ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ. ಕೊಡುವಂತಹ ಒಂದು ಲಕ್ಷ ರೂಪಾಯಿಯಗಳಲ್ಲಿ .ಒಂದು ಕಂತು ಮಾತ್ರ ಬಿಡುಗಡೆ ಮಾಡಿದ್ದೀರಿ, ಎರಡನೇ ಕಂತು ಮತ್ತು 3ನೇ ಕಂತಿನ ಹಣ ಬಿಡುಗಡೆ ಮಾಡಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ಒಂದು ಕಡೆ ನಾಲ್ಕು ವರ್ಷಗಳಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಕಾರ್ಯ ರೂಪಕ್ಕೆ ಬಂದು ಅಭಿವೃದ್ಧಿ ಕಾರ್ಯದ ಕಡೆ ತಾವು ಗಮನ ಕೊಡಲಿಲ್ಲ, ಇನ್ನೊಂದು ಕಡೆ ಇರುವಂತಹ ವ್ಯವಸ್ಥೆ ಬುಡ ಮೇಲು ಮಾಡುವಂತಹ ಪ್ರಯತ್ನ ತಾವು ಮಾಡುತ್ತಿದ್ದೀರಿ. ಅದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ನಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಕೇವಲ ಅಧಿಕಾರದ ಆಸೆಗಾಗಿ ಈ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಶಡ್ಯಂತರ ಏನು ನೀವು ಮಾಡುತ್ತಿದ್ದೀರಿ ಇದನ್ನು ಕೈ ಬಿಟ್ಟು ಮೊದಲನೇ ವ್ಯವಸ್ಥೆಯಂತೆ ಶಿಕ್ಷಣ ಚುನಾವಣೆ ಮಾಡಿ ನಾಳೆ ವಿಧಾನ ಸಭಾ ಚುನಾವಣೆ ಬಂದಾಗ ಯಾವ ಬದಲಾವಣೆ ತರಬೇಕೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳವರೂ ಹೇಳೋಣ. ಜನ ಯಾರನ್ನು ಒಪ್ಪಿ ಆಶೀರ್ವಾದ ಮಾಡುತ್ತಾರೆ, ಅಂತಹ ಬದಲಾವಣೆಯನ್ನು ತರುವುದನ್ನು ಮುಂದೆ ಬರುವಂತಹ ಸರ್ಕಾರದವರು ಮಾಡಲಿ. ಅದನ್ನು ಮಾಡದೆ ಇವತ್ತು ಸಂವಿಧಾನಕ್ಕೆ ಅಪಚಾರ ಮಾಡಿ ಈ ರೀತಿ ಬದಲಾವಣೆ ತರುವ ಪ್ರಯತ್ನ ಮಾಡುತ್ತಿದ್ದೀರಿ. ಇದನ್ನು ಕೈ ಬಿಟ್ಟು ಆಕಸ್ಮಾತ್ ಅದನ್ನು ಮಾಡುವುದಕ್ಕೆ ಆಗದೆ ಸರ್ಕಾರದ ಮನವೊಲಿಸುವುದಕ್ಕೆ ತಮ್ಮಿಂದ ಆಗದೆ ಇದ್ದರೆ ದಯಮಾಡಿ ತಮ್ಮ ಸ್ಥಾನಕ್ಕಾದರೂ ರಾಜೀನಾಮೆ ಕೊಟ್ಟು ಗೌರವವನ್ನು ಕಾಪಾಡುವ ಕೆಲಸ ತಾವು ಮಾಡಬೇಕೆನ್ನುವ ಒತ್ತಾಯವನ್ನು ನಾನು ಈ ಸದನದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಸ್ತಾಪ ಆದಂತಹ ಈ ವಿಷಯದ ಮೇಲೆ ಕೆಲವೊಂದು ವಿಚಾರಗಳನ್ನು ನಾನು ಈ ಸದನದ ಮುಂದಿಡುತ್ತಿದ್ದೇನೆ. ಬಹುಶಃ ಆ ವಿಚಾರಗಳನ್ನು ತಿಳಿದುಕೊಂಡ ಮೇಲೆ ಮಾನ್ಯ ಸಚಿವರಾದ ಎಮ್.ಪಿ. ಪ್ರಕಾಶ್‌ರವರು ಅವರು ಈಗಾಗಲೇ ನಡೆದುಕೊಂಡು ಬಂದ ದಾರಿ ಏನಿದೆ, ಆ ದಾರಿಯನ್ನು ಬಿಟ್ಟು ಚುನಾವಣೆಯನ್ನು ಘೋಷಣೆ ಮಾಡತಕ್ಕಂಥದ್ದು ತ್ವರಿತವಾಗಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸಂವಿಧಾನದ ವಿರುದ್ಧ, ಕಾನೂನಿನ ವಿರುದ್ಧ ಯಾವುದೇ ಕೆಲಸವನ್ನು ಅವರು ಮಾಡಲಾರರು ಎಂದು

ನಾನು ಭಾವಿಸಿದ್ದೇನೆ. ಒಂದು ವೇಳೆ ಕಾನೂನಿನ ವಿರುದ್ಧ ಅಥವಾ ಸಂವಿಧಾನದ ವಿರುದ್ಧ ಅವರು ತೀರ್ಮಾನ ತೆಗೆದುಕೊಂಡರೆ ಇದು ನಿಜವಾಗಿಯೂ ದುರ್ದೈವದ ಸಂಗತಿ. ಮತ್ತು ಪ್ರಜಾಪ್ರಭುತ್ವದ ಕೊಲೆ ಯಾರಿಂದ ಆಗುತ್ತಿದೆ ಎಂದರೆ ಯಾರು ಈ ಅಧಿಕಾರದ ವಿಕೇಂದ್ರಿಕರಣ ಆಗಬೇಕೆಂದು ಹೇಳಿ, ಡಾ: ಲೋಹಿಯಾರವರ ತತ್ವದ ಮೇಲೆ ಚೌಕಂಬ ಅದರ ತತ್ವವನ್ನು ಸಾರಿ ಜನಗಳಿಗೆ ಹೇಳುವಂತಹ ವ್ಯಕ್ತಿಗಳಿಂದ ಈ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ ಎಂದರೆ ಇದು ಅತಿಶಯೋಕ್ತಿ ಅಲ್ಲ. ಇವತ್ತು ನೀವು ಹೇಳಿ ಪಂಚಾಯತ್ ರಾಜ್ ಬರಬೇಕೆಂದು ಜೀವನದ ಉದ್ದಕ್ಕೂ ಹೇಳಿಕೊಂಡು ಬಂದವರು ಅದನ್ನು ಅಸ್ತಿತ್ವಕ್ಕೆ ತರುವುದಕ್ಕೆ ಎಲ್ಲ ಪ್ರಯತ್ನ ಮಾಡುತ್ತೇವೆಂದು ಬೋಧನೆ ಮಾಡಿದ್ದೇ ಮಾಡಿದ್ದುದು. ಆದರೆ ಏನು ಮಾಡಿದಿರಿ? ಅಧ್ಯಕ್ಷರೆ, ಇವತ್ತು ನಮ್ಮ ಮುಂದೆ ಸಂವಿಧಾನ ಇದೆ. ಈ ಸಂವಿಧಾನ ಅತ್ಯಂತ ಶ್ರೇಷ್ಟ. ಲೆಜಿಸ್ಲೇಚರ್ ಆಗಲಿ, ಪಾರ್ಲಿಮೆಂಟಾಗಲಿ, ಪಂಚಾಯಿತಿಯಾಗಲಿ, ನಾವು ಎಲ್ಲರೂ ಕೂಡ ಈ ಒಂದು ಸಂವಿಧಾನದ ಪ್ರಕಾರ ನಡೆದುಕೊಳ್ಳತಕ್ಕಂತಹ ಪ್ರಮಾಣ ಮಾಡಿ ನಾವು ಅಧಿಕಾರಕ್ಕೆ ಬರುತ್ತೇವೆ. ಆದರೆ ಈ ಸಂವಿಧಾನವನ್ನೇ ಮೂಲೆಗೆ ಬಿಸಾಕಿದ್ದಾರೆ. ಇವತ್ತು ನಮ್ಮ ಚುನಾವಣೆಗಳು ತಾಲ್ಲೂಕು ಪಂಚಾಯಿತಿ ಚುನಾವಣೆಗಳು, ಜಿಲ್ಲಾ ಪಂಚಾಯಿತಿ ಚುನಾವಣೆಗಳು ಹೇಗೆ ನಡೆಯುತ್ತವೆ, ಸಂವಿಧಾನದಲ್ಲಿ 72 ಮತ್ತು 74ರ ತಿದ್ದುಪಡಿ ಬಂದ ಮೇಲೆ ಜಿಲ್ಲಾ ಪಂಚಾಯಿತಿಗೆ ಮತ್ತು ಮುನಿಸಿಪಾಲಿಟಿಗೆ ಒಂದು ವಿಶೇಷವಾದಂತಹ ಸ್ಥಾನ ಸಂವಿಧಾನದಲ್ಲಿ ಸಿಕ್ಕಿತ್ತು. ಆ ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೇ ಕಾರಣಕ್ಕೆ ಚುನಾವಣೆಯನ್ನು ಮುಂದೂಡಬಾರದು. ಚುನಾಯಿತ ಸದಸ್ಯರೇ ಪುನಃ ಅಧಿಕಾರಕ್ಕೆ ಬರಬೇಕು. ನಾಮಿನೇಷನ್ ಮಾಡತಕ್ಕಂತಹ ಪದ್ಧತಿ ನಮ್ಮ ಕಾನೂನು ಅಡಿಯಲ್ಲಿ ಇಲ್ಲ ಮತ್ತು ಚುನಾವಣೆ ಮುಂದೂಡತಕ್ಕಂಥದ್ದು ಸಂವಿಧಾನದಲ್ಲೂ ಕೂಡ ಇಲ್ಲ. ಇವರು ಏನು ಹೇಳುತ್ತಿದ್ದಾರೆ ಈಗಿರತಕ್ಕಂತಹ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಈ ಥ್ರೀ ಟೈರ್ ಸಿಸ್ಟಮ್ ಏನಿದೆ ಅಷ್ಟೊಂದು ಸರಿ ಇಲ್ಲ, ಇದನ್ನು 1985-86 ರಲ್ಲಿ ಅವರ ಸರ್ಕಾರ ಇದ್ದಾಗೆ ಏನು ಚುನಾವಣೆಯಾಯಿತು, ಒಂದು ಮಂಡಲ ಮತ್ತು ಜಿಲ್ಲಾ ಇವು ಟೂ ಟೈರ್ ಸಿಸ್ಟಮ್ ಇತ್ತು, ಈ ಟೂ ಟೈರ್ ಸಿಸ್ಟಮ್ ತಂದು ಅದಕ್ಕೆ ಜೀವ ತುಂಬಿ ಶಕ್ತಿ ಕೊಟ್ಟು ಪ್ರಜಾಪ್ರಭುತ್ವ ತತ್ವದ ಪ್ರಕಾರ ನಾವು ಅದಕ್ಕೆ ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಟ್ಟು ಬಹಳ ಭದ್ರ ಪಡಿಸುತ್ತೇವೆಂದು ಹೇಳಿದಿರಿ, ಆದರೆ ನೀವು ಮಾಡಿದ್ದು ಏನು? ಈ ಸಂವಿಧಾನದ ಪ್ರಕಾರ ಮತ್ತು ನಮ್ಮ ನಿಮ್ಮ ಹೇಳಿಕೆ ಪ್ರಕಾರ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ, ಅದಕ್ಕೆ ವಿರುದ್ಧವಾಗಿ ಪ್ರಜಾಪ್ರಭುತ್ವವನ್ನು ಅಭದ್ರಗೊಳಿಸತಕ್ಕಂತಹ ಹೇಳಿಕೆ ಇದರಲ್ಲಿ ಇದೆ. ಥ್ರೀ ಟೈರ್ ಸಿಸ್ಟಮ್ ಮತ್ತು ಟೂ ಟೈರ್ ಸಿಸ್ಟಮ್ ಮಾಡುವುದಕ್ಕೆ ಯಾವ ಸಂವಿಧಾನದಲ್ಲಿ ಪ್ರಾವಿಷನ್ ಇದೆ ಹೇಳಿ, ತಾವು ಇದನ್ನು

ಮನವರಿಕೆ ಮಾಡಿಕೊಟ್ಟರೆ ನಾನು ನೀವು ಹೇಳಿದ್ದನ್ನು ಕೇಳುತ್ತೇನೆ.

``Article 243 Definition: In this part 9.

"Panchayats: In this part unless the context otherwise required, District means a district in a State; Gramasabha means, a body consisting of persons registered in the electoral roll relating to the village comprises within the area of the panchayat at the village level.

Intermediate level means, a level between the village and district level specified by the Governor of the State by a public notification to the interermediate level for the purpose of this part:

ಸಂವಿಧಾನದಲ್ಲಿ ಥ್ರೀ ಟೈರ್ ಸಿಸ್ಟಮ್‌ನ ಒಪ್ಪಿಗೆಯಾಗಿದೆ. ಥ್ರೀ ಟೈರ್ ಸಿಸ್ಟಮ್ ಈ ಮೂರು ಸೇರಿ ಪಂಚಾಯತ್ ರಾಜ್ ಆಗಿರುವುದು. ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಇಂಟರ್ ಮೀಡಿಯೇಟ್ ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಜಿಲ್ಲಾ ಪಂಚಾಯಿತಿ. ಈ ಮೂರಕ್ಕೂ ಕೂಡ ಸಂವಿಧಾನದಲ್ಲಿ ಮಾನ್ಯತೆ ಇದೆ. ಈ ಮೂರು ಸ್ಥಳೀಯ ಸಂಸ್ಥೆಗಳಿಗೂ ಕೂಡ ಎಲೆಕ್ಟೆಡ್ ಬಾಡೀಸ್. ಇದಕ್ಕೆ ನಾಮಿನೇಟ್ ಮಾಡತಕ್ಕಂತಹ ಅಧಿಕಾರ ನಿಮಗೆ ಇಲ್ಲ. ಈ ಮೂರರಲ್ಲೂ ಕೂಡ ಅಮೆಂಡ್‌ಮೆಂಟ್ ಆಗುವವರೆಗೆ ಕಡಿಮೆ ಮಾಡತಕ್ಕಂತಹ ಹಕ್ಕೂ ಕೂಡ ಇಲ್ಲ. ನಿಮಗೆ ಅಧಿಕಾರ ಯಾರು ಕೊಟ್ಟಿದ್ದಾರೆ, ಸಂವಿಧಾನ ತಿದ್ದುಪಡಿ ಆಗುವುದಕ್ಕೆ ಮುಂಚೆ ರಾಜ್ಯಪಾಲರ ಭಾಷಣದಲ್ಲಿ ಪುಟ ಆರು ಮತ್ತು ಪ್ಯಾರ 14ರಲ್ಲಿ ನಾವು ಪುನಃ ಹಿಂದಿನ ಪದ್ಧತಿ ತರುತ್ತೇವೆಂದು ಹೇಳುತ್ತಾರೆ. ತಮ್ಮ ಭಾಷಣದಲ್ಲಿಯೂ ಕೂಡ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೀರಿ. ನೀವು ಹೇಗೆ ಮಾಡಿದರೆ ನಿಮ್ಮಂತಹ ವಿಚಾರವಂತರು, ಬುದ್ಧಿ ಜೀವಿ ಓದತಕ್ಕಂತಹವರು, ಸಂವಿಧಾನ ಗೊತ್ತಿದ್ದವರೂ ಈ ಸಂವಿಧಾನಕ್ಕೆ ಅಪಚಾರ ಮಾಡತಕ್ಕಂತಹ ಕೆಲಸ ಹೇಗೆ ಮಾಡಿದಿರಿ ಎಂದು ನಾನು ಈ ಪ್ರಶ್ನೆ ಕೇಳಿದೆ. ಇದಕ್ಕೆ ತಾವು ಉತ್ತರ ಕೊಟ್ಟರೆ ನಾನು ಹೇಳುತ್ತೇನೆ, ಏನೋ ನಮ್ಮ ತಪ್ಪು, ನಾವು ಏನೋ ಸಂವಿಧಾನವನ್ನು ಸರಿಯಾಗಿ ಓದಿಕೊಂಡಿಲ್ಲ, ಅಥವಾ ನಮಗೆ ಇಂಟ್ರಪ್ರಿಟ್ ಮಾಡುವುದಕ್ಕೆ ಸರಿಯಾಗಿ ಬರುತ್ತಿಲ್ಲವೆಂದು ನಾವು ನಿಮ್ಮ ಹೇಳಿಕೆಯನ್ನು ಒಪ್ಪಿಕೊಳ್ಳಬಹುದು. ಆದರೆ ಸಂವಿಧಾನದಲ್ಲಿ ಕ್ಲಿಯರ್ ಕಟ್ ಆಗಿ ಪ್ರಾವಿಷನ್ ಇದ್ದರೂ ಕೂಡ ಆ ಪ್ರಾವಿಷನ್ ಬದಿಗಿಟ್ಟು ನೀವು ಇವತ್ತು ಚುನಾವಣೆಯನ್ನು ಮುಂದೂಡತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಇದೇ

ಪ್ರಜಾಪ್ರಭುತ್ವದ ಕೊಲೆ. ಇಲ್ಲೇ ಪಂಚಾಯಿತಿಗಳ ಕುತ್ತಿಗೆಯನ್ನು ತಾವು ಹಿಸುಕುತ್ತಿದ್ದೀರಿ. ಇಲ್ಲದಿದ್ದರೆ ತಾವು ಏನು ಮಾತುಗಳನ್ನು ಹೇಳಿದ್ದೀರಿ, ಏನು ನುಡಿದಿದ್ದೀರಿ, ಆ ರೀತಿಯಾಗಿ ತಾವು ನಡೆದಿಲ್ಲ. ತಾವು ಬಹಳಷ್ಟು ಹೇಳಬಹುದು, ನಾನು ಕ್ಯಾಬಿನೆಟ್‌ನಲ್ಲಿ ರಾಜೀನಾಮೆ

1.40 ಪಿ.ಎಂ.

ಕೊಡುವುದಕ್ಕೆ ಹೋಗಿದ್ದೆ. ನಾನೂ ಕೂಡ ಕ್ಯಾಬಿನೆಟ್‌ಗೆ ರಾಜೀನಾಮೆ ಕೊಡುವುದಕ್ಕೆ ಹೋಗಿದ್ದೆ ಎಂದು ನೀವು ಹೇಳಬಹುದು. ನೀವು ರಾಜೀನಾಮೆ ಕೊಡುವುದಕ್ಕೆ ಹೋಗಿರಲೂಬಹುದು. ಆದರೆ ಫಲಿತಾಂಶವೇನು? ನಿಮಗೆ ಸಮಜಾಯಿಶಿ ಕೊಟ್ಟ ಮೇಲೆ ನೀವು ಮನೆಗೆ ಬಂದಿದೆ. ಆ ರೀತಿ ನೀವು ಮಾಡದೆ ಯಾವು ತತ್ವವಿದೆ ಆ ತತ್ವದ ಮೇಲೆ ನಿಂತು ಸಂವಿಧಾನ ವಿರುದ್ಧವಾದ ನಿಲುವು ಎಂದು ನೀವು ಹೇಳಬೇಕಾಗಿತ್ತು. ಸಂವಿಧಾನವಿರುದ್ಧವಿರುವುದರಿಂದ ಅಂಥವುಗಳನ್ನು ತೀರ್ಮಾನ ಮಾಡಲು ಕ್ಯಾಬಿನೆಟ್‌ಗೂ ಕೂಡ ಅಧಿಕಾರವಿಲ್ಲವೆಂದು ಹೇಳಬೇಕಾಗಿತ್ತು. ಅಂಥ ಆರ್ಡಿನೆನ್ಸ್‌ಗೆ ಸಹಿ ಮಾಡುವುದಕ್ಕೆ ರಾಜ್ಯಪಾಲರಿಗೂ ಕೂಡ ಅಧಿಕಾರವಿಲ್ಲ. ಹೀಗಿರುವಾಗ xxx ನಾನು ಅದರ ಬಗ್ಗೆ ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬಯುಸುತ್ತೇನೆ. ಸಂವಿಧಾನವಿರುದ್ಧವಾದ ಯಾವ ಆರ್ಡಿನೆನ್ಸ್‌ಗಳನ್ನು ರಾಜ್ಯಪಾಲರಿಗೆ ನೀವು ಕಳುಹಿಸುತ್ತೀರೋ ಅಂಥ ಆರ್ಡಿನೆನ್ಸ್‌ಗೆ ರಾಜ್ಯಪಾಲರು ಸಹಿಯನ್ನು ಮಾಡಿ ಕಳುಹಿಸುತ್ತಾರೆಂದರೆ ಅದು ನಿಜವಾಗಿಯೂ ಕೂಡ ಸಂವಿಧಾನಕ್ಕೆ ಮಾಡಿದ ಅಪಚಾರವಾಗುತ್ತದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಮಾನ್ಯ ಛೇರ್‌ಮನ್‌ರವರೆ, xxxxxx ಎನ್ನುವುದು ಕಡತದಲ್ಲಿ ಹೋಗಬಾರದು. ಏಕೆಂದರೆ ರಾಜ್ಯಪಾಲರ ಹುದ್ದೆ ಗುರುತರವಾದ ಮತ್ತು ಜವಾಬ್ದಾರಿಯುತವಾದ ಹುದ್ದೆಯಾಗಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ರಾಜ್ಯಪಾಲರಿಗೆ xxxxxx ಎಂದು ಹೇಳುತ್ತೇನೆ. ನೀವು ರಾಜ್ಯಪಾಲರಿಗೆ ತಪ್ಪು ಮಾಹಿತಿ ಕೊಟ್ಟು ಸಹಿ ಮಾಡಿಸಿಕೊಂಡಿದ್ದೀರಿ.

ಛೇರ್‌ಮನ್ :— ರಾಜ್ಯಪಾಲರಿಗೆ ಮೋಸ ಮಾಡಿದ್ದಾರೆ ಎನ್ನುವ ಪದವನ್ನು ಕಡತದಿಂದ ತೆಗೆಸುತ್ತೇನೆ.

---

xxx ಈ ಪದಗಳನ್ನು ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಯಾವುದೇ ರಾಜ್ಯಪಾಲರು ತಮ್ಮ ಕ್ರಮವನ್ನು ಯಾವುದೇ ವಿಚಾರದಲ್ಲಿ ತೆಗೆದುಕೊಳ್ಳಬೇಕಾದರೆ ಅವರು ತಮ್ಮ ಸಂಪೂರ್ಣವಾದ ವಿವೇಚನೆಯನ್ನು ಮತ್ತು ವಿವೇಕವನ್ನು ಉಪಯೋಗಿಸಿಕೊಂಡೇ ಕ್ರಮ ತೆಗೆದುಕೊಳ್ಳುತ್ತಾರೆ. ಆ ರೀತಿಯಲ್ಲಿಯೇ ವಿವೇಚನೆ ಮತ್ತು ವಿವೇಕವನ್ನು ಉಪಯೋಗಿಸಿಕೊಂಡೇ ಆರ್ಡಿನೆನ್ಸ್‌ಗೆ ಸಹಿ ಹಾಕಿರುವುದು. ಇದರ ವಿಚಾರವಾಗಿಯೇ ನ್ಯಾಯಾಲಯದಲ್ಲಿ ಅದಕ್ಕೆ ಸಂಬಂಧಪಟ್ಟ ಹಾಗೆ ವ್ಯವಹಾರ ನಡೆಯುತ್ತಿದೆ. ಈ ಕಾರಣಕ್ಕಾಗಿಯೇ ನಾನು ಆಗಲೇ ಸಬ್‌ಜ್ಯುಡೀಸ್ ಆಗುತ್ತದೆ ಎನ್ನತಕ್ಕಂಥ ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಂಡೆ. ಖರ್ಗೆಯವರು ಉದ್ದೇಶಪೂರ್ವಕವಾಗಿ ಅಂದಿರಲಿಕ್ಕಿಲ್ಲ. ಆದರೆ ಅವರು ಮಾತನಾಡುವಾಗ ಎಂದು ಹೇಳಿದ್ದಾರೆ. ಆ ರೀತಿ ಹೇಳಿದರೆ ರಾಜ್ಯಪಾಲರ ಹುದ್ದೆಗೆ ಅಪಮಾನ ಮಾಡಿದ ಹಾಗೆ ಆಗುತ್ತದೆ. ಇದಲ್ಲದೇ ರಾಜ್ಯಪಾಲರು ತಮ್ಮ ಕರ್ತವ್ಯ ನಿರ್ವಹಿಸುವಾಗ ತಪ್ಪಾಗಿ ನಿರ್ವಹಿಸಿದ್ದಾರೆ ಎನ್ನುವ ಅರ್ಥ ಬರುತ್ತದೆಯಲ್ಲದೇ ಅವರು ಆ ಹುದ್ದೆಗೆ ಸಮರ್ಥರಲ್ಲ ಎನ್ನುವ ಭಾವನೆ ಬರುವ ಹಾಗೆ ಆಗುತ್ತದೆ. ಆದುದರಿಂದ ದಯಮಾಡಿ ವಿರೋಧ ಪಕ್ಷದ ನಾಯಕರು ಆ ರೀತಿಯಲ್ಲಿ ಹೇಳಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ ಆರ್ಟಿಕಲ್ 243(ಇ) ಪ್ರಕಾರ ಆರ್ಡಿನೆನ್ಸ್ ಕಳುಹಿಸಿದ್ದು ಸರಿ ಇದೆ ಮತ್ತು ಅಂಥ ಆರ್ಡಿನೆನ್ಸ್ ರಾಜ್ಯಪಾಲರು ರುಜು ಹಾಕಿದ್ದು ಸರಿ ಇದೆ ಎಂದು ಸಚಿವರಾದ ಪ್ರಕಾಶ್ ರವರು ತಮ್ಮ ಆತ್ಮಸಾಕ್ಷಿಯಾಗಿ ಹೇಳಿದರೆ ನಾನು ಖಂಡಿತವಾಗಿ ಕ್ಷಮೆಯನ್ನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಛೇರ್‌ಮನ್‌ರವರೆ, ನನ್ನ ಆತ್ಮಸಾಕ್ಷಿ ವಿಚಾರಕ್ಕೆ ಸಂಬಂಧಪಟ್ಟಂತೆ 243(ಇ)ನೇ ಆರ್ಟಿಕಲ್ ವಿಚಾರದ ಬಗ್ಗೆ ಮಾತನಾಡುವಾಗ ನಾನು ಹೇಳುತ್ತೇನೆ. ಆರ್ಟಿಕಲ್ 243(ಇ) ವಿಚಾರದಲ್ಲಿ ವ್ಯಕ್ತಿಗತವಾಗಿ ಯಾವ ನಿಲುವನ್ನು ತೆಗೆದುಕೊಳ್ಳಬೇಕಾಗಿತ್ತು ಎಂಬ ಬಗ್ಗೆ ನಾನು ಸ್ಪಷ್ಟವಾದ ಉತ್ತರವನ್ನು ಮುಂದೆ ಕೊಡುತ್ತೇನೆ. ಆದರೆ ಈಗ ಪ್ರಶ್ನೆ ಬಂದಿರುವುದೇನೆಂದರೆ ರಾಜ್ಯಪಾಲರ ಹುದ್ದೆಯ ಘನತೆಗೆ ಯಾವುದೋ ಕಾರಣಕ್ಕಾಗಿ ಕುಂದು ತರಬಾರದು ಎಂಬುದೇ ಆಗಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ರಾಜ್ಯಪಾಲರ ಬಗ್ಗೆ ಮಾತನಾಡಲೇ ಇಲ್ಲ. ಅವರ ಘನತೆಗೆ ಕುಂದುಂಟಾಗುವಂತೆ ಪದಗಳನ್ನು ನಾನು ಬಳಸಲೇ ಇಲ್ಲ. ನಾನು ಈ ಸರ್ಕಾರದ ಬಗ್ಗೆ ಮಾತನಾಡಿ ಸರ್ಕಾರ ಕುತಂತ್ರವನ್ನು ಮಾಡಿ ಯಾವುದೋ ರೀತಿಯಲ್ಲಿ xxx ಹಾಕಿಸಿಕೊಂಡಿದೆ ಎಂದು ಹೇಳಿದೆ.

---

xxx ಈ ಪದಗಳನ್ನು ಛೇರ್‌ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್:— xxx ಹಾಕಿಸಿಕೊಳ್ಳಲಾಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— xxx ಎನ್ನುವ ಪದವನ್ನು ಬಿಟ್ಟುಬಿಡಿ. ನೀವು ಕುತಂತ್ರ ಮಾಡಿ ರಾಜ್ಯಪಾಲರಿಂದ ಆರ್ಡಿನೆನ್ಸ್‌ಗೆ ಸಹಿ ಹಾಕಿಸಿಕೊಂಡಿದ್ದೀರಿ.

MR. CHAIRMAN: Governor has taken a decision with all consciousness. It may be wrong, it may be right, it is subject to interpretation.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಛೇರ್‌ಮನ್‌ರವರೆ, ನಮ್ಮಲ್ಲಿ ಏನಾಗಿತ್ತೆಂದರೆ ಒಂದು ವಿಚಾರದಲ್ಲಿ ಸರಿಯಿಲ್ಲವೆಂದ ತಕ್ಷಣ ಮಾನ್ಯ ಘೋರ್ಪಡೆಯವರು ತಕ್ಷಣ ರಾಜೀನಾಮೆ ಕೊಟ್ಟು ಹೊರಗೆ ಬಂದರು.

ಶ್ರೀ ಎಂ.ಪಿ. ಪ್ರಕಾಶ್:— ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ ಮಾನ್ಯ ಘೋರ್ಪಡೆಯವರು ಹಾಕಿಕೊಟ್ಟಂಥ ಮೇಲ್ಪಂಕ್ತಿಯನ್ನು ನಾನು ಅನುಸರಿಸಿಲ್ಲವೆನ್ನುವುದನ್ನು ನಾನು ಹೇಳಿದ್ದೇನೆ. ಆ ವಿಚಾರದಲ್ಲಿ ನೇರವಾಗಿ ನನಗೆ ನೀವು ಟೀಕೆ ಮಾಡಬಹುದು. ಸರ್ಕಾರಕ್ಕೂ ಟೀಕೆ ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ಆದರೆ ರಾಜ್ಯಪಾಲರಿಗೆ xxxxxx ಎನ್ನುವ ಮಾತನ್ನು ನೀವು ಹೇಳುವ ಮೂಲಕ ರಾಜ್ಯಪಾಲರ ವೃತ್ತಿಯನ್ನು ಅನಾವಶ್ಯಕವಾಗಿ ಈ ಚರ್ಚೆಗೆ ಎಳೆದು ತರಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ರಾಜ್ಯಪಾಲರ ಬಗ್ಗೆ ನಾನು ಹೇಳಲಿಲ್ಲ. ಆದರೆ ಇವರು ರಾಜ್ಯಪಾಲರಿಗೆ ರಾಜ್ಯದ ಜನರಿಗೆ ಮೋಸ ಮಾಡಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:— ಖರ್ಗೆಯವರ ಅಭಿಪ್ರಾಯದಲ್ಲಿ ರಾಜ್ಯಪಾಲರಿಗೆ ದಾರಿ ತಪ್ಪಿಸಿದ್ದಾರೆ ಎನ್ನುವ ಅರ್ಥ ಬರುತ್ತದಷ್ಟೆ.

ಛೇರ್‌ಮನ್ :— ದಾರಿ ತಪ್ಪುವುದಕ್ಕೆ ರಾಜ್ಯಪಾಲರೇನು ದಡ್ಡರೇ?

SRI MALLIKARJUNA KHARGE: Sir, they have played a fraud on the Constitution. ನಾನು ಹತ್ತು ಬಾರಿ ಹೇಳಿದ್ದೇನೆ. ರಾಜ್ಯಪಾಲರ ಬಗ್ಗೆ ನಾನು ಹೇಳಲಿಲ್ಲ. ಇವರು xxx ಹಾಕಿಸಿಕೊಂಡಿದ್ದಾರೆ. ಇವರೇ ಪಂಚಾಯತ್ ರಾಜ್‌ನ್ನು ಕೊಲೆ ಮಾಡಿದ್ದು. ಇದನ್ನು ಸಹ ಮಾಡಿದ್ದು ಇವರೇ ಆದರೂ ಇಲ್ಲವೆಂದು ಹೇಳುತ್ತಿದ್ದಾರೆ.

---

xxx ಈ ಪದಗಳನ್ನು ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಛೇರ್‌ಮನ್‌ರವರೆ, ರಾಜ್ಯಪಾಲರಿಗೆ XXXXXX ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದು ಕಡತದಲ್ಲಿ ಹೋಗಿದೆ. ಆ ಮಾತುಗಳನ್ನು ಹಿಂದಕ್ಕೆ ವಿರೋಧ ಪಕ್ಷದ ನಾಯಕರೆ ತೆಗೆದುಕೊಳ್ಳಬೇಕು.

ಛೇರ್‌ಮನ್ :— ರಾಜ್ಯಪಾಲರ ಸ್ಥಾನಕ್ಕೆ ಅಗೌರವ ಬರತಕ್ಕಂಥ ಯಾವ ಯಾವ ಮಾತುಗಳನ್ನು ಆಡಲಾಗಿದೆಯೋ ಅವೆಲ್ಲವೂ ಕಡತದಲ್ಲಿ ಬರುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ವಿರೋಧ ಪಕ್ಷದ ನಾಯಕರೆ ಆ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ ಎಂದು ಹೇಳಬೇಕು.

ಛೇರ್‌ಮನ್ :— ಅಂಥ ಮಾತುಗಳನ್ನೆಲ್ಲಾ ತೆಗೆದುಹಾಕಲಾಗಿದೆ.

ಶ್ರೀ ವೈಜನಾಥ ಪಾಟೀಲ್ :— ಮಾನ್ಯ ಛೇರ್‌ಮನ್‌ರವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ರಾಜ್ಯಪಾಲರಿಗೆ XXX ಎನ್ನುವ ಮಾತುಗಳನ್ನು ಆಡಿದ್ದಾರೆ. ರಾಜ್ಯಪಾಲರು ಹೋಗುತ್ತಾರೆಂದರೆ ಅವರು ಆ ಹುದ್ದೆಗೆ ನಾಲಾಯಕ್ ಎನ್ನುವ ಅರ್ಥ ಬರುತ್ತದೆಯಾದ್ದರಿಂದ ಆ ಮಾತುಗಳನ್ನು ವಿರೋಧ ಪಕ್ಷದ ನಾಯಕರು ಹಿಂದಕ್ಕೆ ತೆಗೆದುಕೊಳ್ಳಬೇಕು.

ಛೇರ್‌ಮನ್ :— ಆ ಪದಗಳನ್ನೆಲ್ಲಾ ತೆಗೆದುಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ ಮಾನ್ಯ ವಿರೋಧ ಪಕ್ಷದ ನಾಯಕರ ಸ್ಥಾನ ಹೆಚ್ಚಿನ ಘನತೆಯನ್ನು ಹೊಂದಿರತಕ್ಕಂಥದ್ದು. ಆದುದರಿಂದ, ವಿರೋಧ ಪಕ್ಷದ ನಾಯಕರೇ ತಾವು ಆಡಿದ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ ಎಂದು ಸದನದಲ್ಲಿ ಹೇಳಿದರೆ ಬಹಳ ಒಳ್ಳೆಯದು. ಏಕೆಂದರೆ ಅವರು ತೂಕದ ಮತ್ತು ಎತ್ತರದ ವ್ಯಕ್ತಿಯಾಗಿ ಆ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರು ಉದ್ರೇಕದಲ್ಲಿ ಮಾತನಾಡುವಾಗ ಆ ರೀತಿಯಲ್ಲಿ ತಪ್ಪು ಮಾತನಾಡಿರಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ತಪ್ಪು ದಾರಿಗೆಹೋಗಿ ಬೇರೆಯವರನ್ನೂ ಕೂಡ ತಪ್ಪು ದಾರಿಗೆ ಎಳೆಯುವುದಕ್ಕೆ ಹೋಗುತ್ತಿದ್ದೀರಿ. ಮಾನ್ಯ ಛೇರ್‌ಮನ್‌ರವರೆ, ನೀವು ಕಡತವನ್ನು ತರಿಸಿ ನೋಡಿ, ರಾಜ್ಯಪಾಲರ ಬಗ್ಗೆ ಮಾತನಾಡಿದ ಪದಗಳೇನಾದರೂ ಇದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆ ಮಾತುಗಳನ್ನು ನೀವು ಬೇಕಾದರೆ ಕಡತದಿಂದ ತೆಗೆದುಹಾಕಿ. ನಾನು ನಿಮಗೆ ಪೂರ್ಣ ಅಧಿಕಾರವನ್ನು ಕೊಡುತ್ತೇನೆ.

XXX ಈ ಪದಗಳನ್ನು ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಛೇರ್‌ಮನ್‌ರವರಿಗೆ ಅಧಿಕಾರ ಕೊಡುತ್ತೇನೆ ಎಂದು ಹೇಳುತ್ತಿದ್ದೀರಿ, ಆ ಅಧಿಕಾರ ಕೊಡುವುದಕ್ಕೆ ನೀವ್ಯಾರು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ರಾಜ್ಯಪಾಲರ ಬಗ್ಗೆ ನಾನು ಮಾತನಾಡಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದೆ. ನಾನು ಮಾತನಾಡಿದ ಮಾತುಗಳು ಸದನದ ಘನತೆ ಮತ್ತು ಗೌರವಕ್ಕೆ ಕುಂದುಂಟಾಗುವಂಥದ್ದು ಆಗಿದ್ದರೆ ಆ ಮಾತುಗಳನ್ನು ಕಡತದಿಂದ ತೆಗೆದುಹಾಕುವುದಕ್ಕೆ ನನ್ನದೇನೂ ಯಾವ ರೀತಿಯ ವಿರೋಧವೂ ಇರುವುದಿಲ್ಲ. ಒಪ್ಪಿಕೊಳ್ಳುತ್ತೇನಲ್ಲ. ಆ ಮಾತು ಕಡತದೊಳಗೆ ಇರಬಾರದು ಅಥವಾ ಅವರ ಹೆಸರನ್ನು ನಾವು ತೆಗೆದುಕೊಂಡಿದ್ದರೆ, ಅನ್‌ಕಾನ್ಸಿಟಿಟ್ಯೂಷನಲ್ ಇದ್ದರೆ, ಈ ಸದನದ ಘನತೆ ಗೌರವಕ್ಕೆ ಕುಂದು ಬಂದರೆ ಅದನ್ನು ತೆಗೆದುಹಾಕುವುದಕ್ಕೆ ನನ್ನದೇನೂ ವಿರೋಧವಿಲ್ಲ. ಅಡ್ಡಿ ಇಲ್ಲ.

SHRI M.P. PRAKASH : There will not be any grace in qualified apology or qualified withdrawal of words.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಲ್ಲಿ ಆ ಪ್ರಶ್ನೆಯೇ ಬರುವುದಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ಅದನ್ನು ತೆಗೆದು ಹಾಕಬಹುದು. ಆದರೆ ಒಂದು ಮಾತು ಏನು ಸಂವಿಧಾನದಲ್ಲಿ ಕಟ್ಟುನಿಟ್ಟಾಗಿ ಹೇಳಿದ್ದಾರೆ ಅದರ ತದ್ವಿರುದ್ಧವಾಗಿ ಈ ಸರ್ಕಾರ ನಡೆದುಕೊಂಡಿದೆ. ಮತ್ತು ಆ ತತ್ವದ ವಿರುದ್ಧವಾಗಿ ಆರ್ಡಿನೆನ್ಸ್ ಇಷ್ಯೂ ಮಾಡಿದೆ. ಆದರೆ ಇಷ್ಟೊಂದು ತಪ್ಪುಗಳನ್ನು ಇಟ್ಟುಕೊಂಡು ಕೂಡ ಬಹಳ ಧೈರ್ಯದಿಂದ ಇವರು ಹೊರಗಡೆ ಅಡ್ಡಾಡುತ್ತಿದ್ದಾರೆ. ನಾವು ಮಾಡಿದ್ದೆಲ್ಲಾ ಸರಿ, ಮತ್ತೆ ಅವರು ಮುಂದೆ ಏನು ಮಾಡಬೇಕೆಂದು ಇದ್ದಾರೋ ಅದನ್ನೂ ಕೂಡ ಈ ರಾಜ್ಯಪಾಲರ ಭಾಷಣದಲ್ಲಿ ಅವರು ಹೇಳಿಸಿದ್ದಾರೆ. ಅಲ್ಲದೆ ನಾವು ಯಾವರೀತಿಯಾಗಿ ಮಾಡಬೇಕೆಂದು ಇದ್ದೇವೆ, ಯಾವರೀತಿಯಾಗಿ ಈ ತಿದ್ದುಪಡಿಯನ್ನು ತಂದು ಈ ಒಂದು ಲೋಕಲ್ ಅಥಾರಿಟಿಯನ್ನು ಸ್ಟ್ರೆಂಥನ್ ಮಾಡಬೇಕು ಎನ್ನುವುದರ ಬಗ್ಗೆ ಕೂಡ ಹೇಳಿದ್ದಾರೆ. ಈ ಮಾತುಗಳನ್ನು ನೀವು ಯಾವಾಗಲೂ ಹೇಳುತ್ತಿದ್ದೀರಿ ಎಂದರೆ ಸಂವಿಧಾನದಲ್ಲಿ ಅದಕ್ಕೆ ಎಂದರೆ ನಿಮ್ಮ ಮಾತಿಗೆ ಪುಷ್ಟಿ ಸಿಗತಕ್ಕಂಥ ಕಲಂ ಯಾವುದಿದೆ? ಇಲ್ಲವಾದರೆ 243ಕ್ಕೆ ಅಮೆಂಡ್ ಮೆಂಟ್ ಆಗೋವರೆಗೂ ಕೂಡ ನಿಮಗೆ ಆ ಒಂದು ಅಧಿಕಾರ ಇಲ್ಲ. ಅಂದರೆ ಈ ರಾಜ್ಯದ ಜನತೆಗೆ ನೀವು ತಪ್ಪುದಾರಿಗೆ ಎಳೆಯುತ್ತಿದ್ದೀರೋ ಇಲ್ಲವೋ ಎನ್ನುವ ಪ್ರಶ್ನೆ ಬರುತ್ತದೆ.

ಛೇರ್‌ಮನ್ :— ಇದರಲ್ಲಿ ಒಂದು ಮುಖ್ಯವಾದ ಇಷ್ಯೂ ಎಂದರೆ ಪಂಚಾಯಿತಿಯ ಚುನಾವಣೆಯನ್ನು ಮುಂದೂಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂಥ ಅಧಿಕಾರ ಇದೆಯೇ ಇಲ್ಲವೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇಲ್ಲ, That is what I am telling. ನಾನು ಹೇಳುವುದು ಕೇಳಿ. Article 243- "Duration of Panchayat etc. Every Panchayat unless sooner dissolved under any law for the time being in force, shall continue for five years from the date appointed for its first meeting and no longer. No amendment of any law for the time being in force shall have the effect of causing dissolution of the Panchayat at any level which is functioning immediately before such amendment till the expiration of the duration specified in clause (1). An election to constitute a Panchayat shall be completed." ಎಂದರೆ ನಾನು ಹೇಳತಕ್ಕಂಥಾದ್ದು ಏನೆಂದರೆ ನೋ ಲಾಂಗರ್ ಎಂದರೆ ಮೊದಲು ಏನು ಇತ್ತು ಆರು ತಿಂಗಳೊಳಗಾಗಿ ಮಾಡಿಕೊಡತಕ್ಕಂಥಾದ್ದು ಇತ್ತು. ಇವರಿಗೆ ಈಗ ಆ ಅಧಿಕಾರ ಇಲ್ಲ. ಆದರೆ ಅವರು ಏನು ಮಾಡಿದರು ಎಂದರೆ ಏನಾದರೂ ಒಂದು ಕುಂಟು ನೆಪ ಹುಡುಕಬೇಕು ಎಂದು ಹೇಳಿ. ಈಗ ಪುನಃ ಮಂಡಲ್ ಪಂಚಾಯತ್, ಜಿಲ್ಲಾ ಪಂಚಾಯತ್ ಟೂ ಟಯರ್ ಸಿಸ್ಟಂ ತರುತ್ತೇವೆ. ಥ್ರೀ ಟಯರ್ ಸಿಸ್ಟಂ ಸಮಾಧಾನಕರವಾಗಿ ಕೆಲಸ ಮಾಡುತ್ತಿಲ್ಲ, ಅದಕ್ಕಾಗಿ ನಮಗೆ ಸಮಯ ಬೇಕು ಎಂದು ಹೇಳಿ, ಆ ದೃಷ್ಟಿಯಿಂದ ಇವತ್ತು ಈ ಒಂದು ಆರ್ಟಿಕಲ್ 243 (ಇ) ಆಗಲಿ 243 ಆಗಲಿ ಅದಕ್ಕೆ ಒಂದು ಅಪಚಾರ ಬಗೆಯತಕ್ಕಂಥ ರೀತಿಯಲ್ಲೇ ಇವರು ನಡೆದುಕೊಳ್ಳುತ್ತಿದ್ದಾರೆ.

ಛೇರ್‌ಮನ್ :— ಪಂಚಾಯತ್ ಆಕ್ಟ್‌ನಲ್ಲಿ ಏನಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಪಂಚಾಯತ್ ಆಕ್ಟ್‌ನಲ್ಲಿ ಇದೆ. ಅದನ್ನು ಬೇಕಾದರೆ ಓದುತ್ತೇನೆ. ಎಲ್ಲಾ ಅವರಿಗೆ ಗೊತ್ತಿದೆ. ಆದರೆ ಏನಾಗಿದೆಯೆಂದರೆ ನಿಜವಾಗಿ ಹೇಳಬೇಕಾದರೆ ಇದನ್ನು ಡಿಫೆಂಡ್ ಮಾಡತಕ್ಕಂಥ ಶಕ್ತಿ ಅವರಿಗೆ ಇಲ್ಲ. ಮಾರಲ್ ಕರೇಜ್ ಇಲ್ಲ. ಏಕೆಂದರೆ ಅವರು ಏನೇನು ಹೇಳಬೇಕು ಎಂದು ಅಲ್ಲಿ ಪ್ರೊಟೆಸ್ಟ್ ಮಾಡಿ ಬಂದಿದ್ದಾರೆ. ತಾವೇನು ಕಾನ್‌ಷಿಯಸ್ ವಿರುದ್ಧ ಇಲ್ಲಿ ಏನೇ ಮಾತನಾಡಬೇಕಾದರೂ ಜೆ.ಹೆಚ್. ಪಟೇಲರಿಗೆ ಸಮಾಧಾನ ಮಾಡುವುದಕ್ಕೋಸ್ಕರ ಮಾಡಬೇಕೇ ಹೊರತು ಅವರ ಆತ್ಮಸಾಕ್ಷಿಯಿಂದ ಇದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮತ್ತು ತಮ್ಮ ಮುಂದೆ "Introduction to the Constitution of India-Durga Das Basu" ಇದರಲ್ಲೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಇದರಲ್ಲಿ ಏನು ಹೇಳಿದ್ದಾರೆ, "Part 9 of the Constution envisages that three tier system of panchayats namely the village level, district and the intermediate panchayat which stands between the village and district panchayats in the State where the

population is above. ``That is different. That means 3 tier system is accepted, it is binding constitutionally. ಅದಕ್ಕಾಗಿ ಇವರು ಎಂದೂ ಕೂಡ ಅದನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಯಾವ ಮಾತು ಕೂಡ ನಿಮ್ಮ ಅಧಿಕಾರದಲ್ಲಿ ಇಲ್ಲ. ನಿಮ್ಮ ಅಧೀನದಲ್ಲಿ ಇಲ್ಲ.

ಛೇರ್‌ಮನ್ :— ಈಗ ಪ್ರಶ್ನೆ ಇರುವುದು ಪಂಚಾಯತ್ ಚುನಾವಣೆಗಳನ್ನು ಮುಂದೂಡಿರತಕ್ಕಂಥಾದ್ದರಲ್ಲಿ..

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಹೇಳಿದ್ದೇನೆಂದರೆ 1987-92ರ ಅವಧಿಯಲ್ಲಿ ಇಂತಹ ಮಂಡಲ್ ಪಂಚಾಯತ್‌ಗಳು ದೊಡ್ಡ ಸಂಸ್ಥೆಗಳೆಂದು ಮಾಡಿದ್ದು, 1987 ರಲ್ಲಿ ಏನು ಕಾನೂನು ಇತ್ತು ತಾವೇ ಹೇಳಿ ನೋಡೋಣ. ಈ ಮಾತನ್ನು ಅವರೇ ಇದರಲ್ಲಿ ಹೇಳಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಇದರಲ್ಲಿ ಇಲ್ಲ ಎಂದು ಆ ಮಾತು ಹೇಳಿ ಬೇರೆ. ಅನಂತರ ನಾಮಿನೇಟ್ ಮಾಡಬೇಕಾದಂಥಾದ್ದು ಕೂಡ ಯಾವ ಕಾನೂನಿನಲ್ಲಿ ಇಲ್ಲ ಸಂವಿಧಾನದಲ್ಲಿ ಇಲ್ಲ, ಪಂಚಾಯತ್ ಆ್ಯಕ್ಟಿನಲ್ಲಿ ಕೂಡ ಇಲ್ಲ. ಹಾಗಾದರೆ ಅದನ್ನು ಹೇಗೆ ಮಾಡುತ್ತಾರೆ? ಏಕೆಂದರೆ ಅವರ ಹೇಳಿಕೆಗಳಲ್ಲಿ ಕೂಡ ಬಂದಿವೆ. ಒಂದು ಬಾರಿ ಅಲ್ಲ ಹತ್ತು ಸಲ ಹೇಳಿಕೆಯನ್ನು ಕೊಟ್ಟಿದ್ದಾರೆ ಸೆಪ್ಟೆಂಬರ್ 7, 1998 ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಮೈಸೂರಿನಲ್ಲಿ ಒಂದು ಹೇಳಿಕೆ ಕೊಡುತ್ತಾರೆ. ಅದೇನೆಂದರೆ ಪಂಚಾಯತ್ ಆ್ಯಕ್ಟಿನಲ್ಲಿ ಇರುವುದು ಅಷ್ಟೊಂದು ಸರಿಯಿಲ್ಲ. ಆದುದರಿಂದ ಅದಕ್ಕೆ ನಾವು ತಿದ್ದುಪಡಿಯನ್ನು ತಂದು ಇನ್ನು ಹೆಚ್ಚಿನ ಶಕ್ತಿಯನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಎಂದರೆ ಈಗಿರತಕ್ಕಂಥ 5,676 ಪಂಚಾಯಿತಿಗಳನ್ನು ಮೊಟಕುಗೊಳಿಸಿ, ಕಡಿಮೆ ಮಾಡಿ ನಾವು ಬಹಳ ಎಫೆಕ್ಟೀವ್ ಆಗಿ ದೊಡ್ಡ ದೊಡ್ಡ ಪಂಚಾಯಿತಿಗಳನ್ನು ಮಾಡುತ್ತೇವೆನ್ನುವ ಮಾತನ್ನು ಅವರು ಹೇಳಿದರು. ಅದಕ್ಕೆ ತಕ್ಕಂತೆ ಮುಂದೆ ನಡೆದುಕೊಂಡು ಬಂದರು. ಅದಕ್ಕೆ ಇವತ್ತು ಏನಾಗಿದೆಯೆಂದು ಅವರೇ ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ಎಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಅಂದರೆ ಎಷ್ಟು ಪಂಚಾಯಿತಿಗಳಲ್ಲಿ 10 ಸಾವಿರಕ್ಕಿಂತ ಕಡಿಮೆ ಇನ್‌ಕಂ ಇದೆ, ಎಷ್ಟು ಪಂಚಾಯಿತಿಗಳಲ್ಲಿ 20ಸಾವಿರಕ್ಕಿಂತ ಕಡಿಮೆ ಇದೆ, ಎಷ್ಟು ಪಂಚಾಯಿತಿಗಳಲ್ಲಿ 50 ಸಾವಿರಕ್ಕಿಂತ ಕಡಿಮೆ ಇದೆ ಎನ್ನುವುದನ್ನು ಅಂಕಿಸಂಖ್ಯೆಗಳನ್ನು ಹೇಳಿ ಅವರು ಸ್ಟೇಟ್‌ಮೆಂಟ್ ಕೂಡ ಕೊಟ್ಟರು. ಈ ಅಂಕಿಅಂಶಗಳು ಕೊಟ್ಟಿದ್ದಾರೆಂದರೆ ಈಗ ಇರತಕ್ಕಂಥ ಪಂಚಾಯಿತಿಗಳನ್ನು ಕಡಿಮೆ ಮಾಡತಕ್ಕಂಥಾದ್ದು ಎಂದು. ಹಿಂದಿನ ಪದ್ಧತಿಗೆ ಎಂದರೆ 1987ರಲ್ಲಿ ಅದಂತಹ ಪದ್ಧತಿಗೆ ಹೋಗುತ್ತೇವೆಂದರೆ ಮಂಡಲ್ ಮತ್ತು ಜಿಲ್ಲಾ ಪಂಚಾಯಿತಿಗೆ ಹೋಗತಕ್ಕಂಥಾದ್ದಕ್ಕೆ ಯಾವ ಅಧಿಕಾರ ಕೂಡ ಇಲ್ಲ. ಮತ್ತು ನಾಮಿನೇಟ್ ಮಾಡತಕ್ಕಂಥ ಅಧಿಕಾರ ಕೂಡ ಇಲ್ಲ. ಈ ಒಂದು ಸ್ಥಿತಿಯಲ್ಲಿ

ಇರತಕ್ಕಂಥ ನೀವು ಇವತ್ತು ಯಾವ ಆಧಾರದ ಮೇಲೆ ಇದನ್ನು ಮುಂದಕ್ಕೆ ಹಾಕಿದಿರಿ ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಅದಕ್ಕೆ ಸಂವಿಧಾನದ ವಿರುದ್ಧ ನಾವು ಯಾರೇ ನಡೆದುಕೊಂಡರೂ ಕೂಡ, ಆ ಸರ್ಕಾರ ನಿಜವಾಗಲೂ ಸಂವಿಧಾನಕ್ಕೆ ಅಪಚಾರ ಬಗೆದ ಹಾಗೆ ಆಗುತ್ತದೆನ್ನುವ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. They have to apologise before the people. ನಾವು ತಪ್ಪು ಮಾಡಿದ್ದೇವೆ, ಸಂವಿಧಾನದ ವಿರುದ್ಧ ನಡೆದುಕೊಂಡಿದ್ದೇವೆ, ತಪ್ಪಾಗಿದೆ, ನಮ್ಮನ್ನು ಕ್ಷಮಿಸಿ ಎಂದು ಜನತೆಯ ಕ್ಷಮೆಯನ್ನು ಅವರು ಕೇಳಬೇಕಾಗುತ್ತದೆ. ಅದಕ್ಕೆ ಹಿಂದೆ ಒಂದು ಮುಂದೆ ಒಂದು ಹೇಳತಕ್ಕಂಥಾದ್ದು ಅಲ್ಲ. ಆದರೆ ಒಂದು ಮಾತು ನಾವು ಒಪ್ಪುತ್ತೇವೆ. ಯಾವಾಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ತಾವು ಏನು ಹೇಳಬೇಕು ಅದನ್ನು ನೇರವಾಗಿ ಹೇಳಿಬಿಡುತ್ತಾರೆ. ನಿನ್ನೆ ನಾನು ಅವರಿಗೆ ಮನೆಗಳನ್ನು ಏಕೆ ಈ ರೀತಿ ಹಂಚಿದ್ದೀರಿ. ಬಹಳ ಡಿಸ್ಕ್ರಿಮಿನೇಟ್ ಆಗಿದೆ, ಅದು ಸರಿಯಿಲ್ಲ ಎಂದು ಕೇಳಿದ್ದಕ್ಕೆ, ಅವರು ಚುನಾವಣೆ ಬಂದಿದೆ ಅದಕ್ಕೆ ಹೀಗೆ ಮಾಡಿದ್ದೇವೆ, ಏನು ಮಾಡುವುದು ಎಂದು ಹೇಳಿದರು. ನಿಮಗೂ ಚುನಾವಣೆ ಇದೆ, ನಮಗೂ ಚುನಾವಣೆ ಇದೆ, ಎಂದರೆ ಚುನಾವಣೆಗೋಸ್ಕರ ಇದನ್ನು ನೀವು ಮುಂದೆ ಹಾಕಿದರೆ, ನಿಮ್ಮ ಒಳ ಜಗಳಕ್ಕೋಸ್ಕರ ಇದನ್ನು ಮುಂದೆ ಹಾಕಿದರೆ ಎಷ್ಟರಮಟ್ಟಿಗೆ ನೀವು ಸಂವಿಧಾನಕ್ಕೆ ಮರ್ಯಾದೆಯನ್ನು, ಗೌರವವನ್ನು ಕೊಡುತ್ತಿದ್ದೀರಿ ಎನ್ನುವುದನ್ನು ಹೇಳಿ. ಎಂದರೆ ನನಗೆ ಇದು ಗೊತ್ತಾಯಿತು ಅಧ್ಯಕ್ಷರೆ, ಇವರ ಒಳಜಗಳ ಮತ್ತು ಒಬ್ಬರ ಕಾಲು ಹಿಡಿದು ಒಬ್ಬರು ಜಗ್ಗತಕ್ಕಂಥಾದ್ದು ಹಾಗೂ ಚುನಾವಣೆ ಏನು ಬರುತ್ತಿದೆ, ಈ ಚುನಾವಣೆಯಲ್ಲಿ ನಮಗೆ ಫೇಸ್ ಮಾಡುವುದಕ್ಕೆ ಆಗುವುದಿಲ್ಲ, ಈ ಪಂಚಾಯತ್ ಚುನಾವಣೆಯಲ್ಲಿ ನಮಗೆ ಜನರ ಮುಂದೆ ಹೋಗುವುದಿಲ್ಲ, ಮುಖ ಇಲ್ಲ ಎಂದೇಳಿ ಇವತ್ತಿನ ದಿವಸ ಇದನ್ನು ಪೋಸ್ಟ್‌ಪೋನ್ ಮಾಡಿದ್ದಾರೆ ಹೊರತು ಜನರ ಹಿತದೃಷ್ಟಿಯಿಂದ, ಡಿ-ಸೆಂಟ್ರಲೈಸೇಷನ್ ಆಫ್ ಪವರ್ ಹಿತದೃಷ್ಟಿಯಿಂದ ಗ್ರಾಮೀಣಾಭಿವೃದ್ಧಿ ದೃಷ್ಟಿಯಿಂದ ಇವರು ಮಾಡಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ರಾಜಕೀಯ ದುರುದ್ದೇಶದಿಂದ ಇದನ್ನು ಇವತ್ತು ಪೋಸ್ಟ್‌ಪೋನ್ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಅದಕ್ಕೆ ಈಗ ಅನೇಕ ಜಿಲ್ಲಾ ಪಂಚಾಯತ್ ಅವರ ಕೈಯಲ್ಲಿದೆ. ತಾಲ್ಲೂಕು ಪಂಚಾಯತ್ ಅವರ ಕಾಲದಲ್ಲಿ ಚುನಾವಣೆಯಾಗಿದೆ. ಇವು ಇರಲಿ. ಇವುಗಳ ಜೊತೆಯಲ್ಲಿ ಏನಾದರೂ ಮಾಡಿ ಗ್ರಾಮ ಪಂಚಾಯತ್ ಇವತ್ತು ಅದಕ್ಕೂ ಉಪಯೋಗ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಾಮಿನೇಟ್ ಮಾಡಿಕೊಂಡು ಮತ್ತೆ ಅವರು ಸ್ಟೇಟ್‌ಮೆಂಟ್ ಏನು ಕೊಟ್ಟಿದ್ದಾರೆಂದರೆ, ಎಲ್ಲೆಲ್ಲಿ ಅವರಿಗೆ ಬೇಕು ಅಲ್ಲಿ ರೀ ನಾಮಿನೇಟ್ ಮಾಡಬಹುದು, ಬೇರೆಯವರನ್ನು ಕೂಡ ಮಾಡಬಹುದು ಎಂದು ಅವರು ಹೇಳಿದ್ದಾರೆ. ಎಲ್ಲೆಲ್ಲಿ ಪಂಚಾಯತ್ ಅಧ್ಯಕ್ಷರು ಇದ್ದಾರೆ ಅವರನ್ನು ನಾಮಿನೇಷನ್ ಮಾಡುವ ಮುಖಾಂತರ

ಮುಂದುವರೆಸತಕ್ಕಂಥಾದ್ದು, ಅವರು ನಿಮ್ಮ ಪಾರ್ಟಿಯವರು ಇರಲಿ, ನಮ್ಮ ಪಾರ್ಟಿಯವರು ಇರಲಿ. ಕೊನೆಯಲ್ಲಿ ನೀವು ಏನು ಹೇಳುತ್ತೀರಿ ಎಂದರೆ ಚುನಾವಣೆ ಬಂದಿದೆ ಅದಕ್ಕೆ ನಾವು ನಮ್ಮ ಪಾರ್ಟಿಯವರನ್ನು ಮಾಡಿಕೊಂಡಿದ್ದೇವೆ, ಏನು ಮಾಡುತ್ತೀರೋ ಮಾಡಿ ಎಂದು. ನಮ್ಮ ಕಡೆ "ಎಲ್ಲಾ ಬಿಟ್ಟೋರು ಊರಿಗೆ ದೊಡ್ಡೋರು" ಎಂದು ಹೇಳುತ್ತಾರೆ. ಆ ರೀತಿಯಲ್ಲಿ ಸರ್ಕಾರದವರಿಗೆ ನ್ಯಾಯ, ನೀತಿ, ರೂಲ್, ರೆಗ್ಯುಲೇಷನ್, ಜುಡಿಶಿಯಸ್ಲಿ ಥಿಂಕ್ ಮಾಡುವಂಥಾದ್ದು ಇಲ್ಲ. ಯಾವುದೇ ಒಂದು ಅಧಿಕಾರವನ್ನು ಕೊಟ್ಟರೆ ಅದನ್ನು ಜುಡೀಶಿಯಸ್ ಆಗಿ ಉಪಯೋಗ ಮಾಡಿಕೊಳ್ಳಬೇಕೆನ್ನುವಂಥಾದ್ದು ಇಲ್ಲ. ಅದನ್ನು ಇವತ್ತು ಇವರು ಡಿಕ್ಟೇಟರ್ ಟೈಪ್‌ನಲ್ಲಿ ಏನು ಅನಿಸುತ್ತದೆಯೋ ಹಾಗೆ ಮಾಡುತ್ತಿದ್ದಾರೆ. ಅವರು ನಿನ್ನೆ ಚುನಾವಣೆಯ ದೃಷ್ಟಿಯಿಂದ ಇದನ್ನು ಮಾಡಿಕೊಳ್ಳುತ್ತಿದ್ದೇವೆಂದು ಹೇಳಿದ್ದರು, ಅದು ಇದಕ್ಕೂ ಅನ್ವಯಿಸುತ್ತದೆ. ಇವತ್ತು ಚುನಾವಣೆಯ ದೃಷ್ಟಿಯಿಂದಲೇ ಇದನ್ನು ಮಾಡುತ್ತಾ ಇದ್ದಾರೆ, ಎರಡನೆಯದು ಐದು ವರ್ಷದ ಟರ್ಮ್ ಹೆಚ್ಚಿಗೆ ಮಾಡುವುದಕ್ಕೆ ಅದರಲ್ಲಿ ಅವಕಾಶವಿಲ್ಲ. ಅದಕ್ಕಾಗಿ ಈ ಕಾನ್ಸಿಟಿಟ್ಯೂಷನಲ್ ಮ್ಯಾಟರ್ ಏನು ಇದೆ, ಇದರಲ್ಲಿ ಯಾವುದೇ ಹಕ್ಕು ಕೂಡ ಇಲ್ಲ, ಅಧಿಕಾರವೂ ಇಲ್ಲ, ಮುಂದೆ ಆಗುವಂಥಾದ್ದು ಇವರ ಕೈಯಲ್ಲಿ ಇಲ್ಲ. ಈ ದೃಷ್ಟಿಯಿಂದ ಪಂಚಾಯತ್ ಚುನಾವಣೆ ಏನು ಇದೆ, ಇದನ್ನು ಮುಂದೆ ಹಾಕಿರುವುದು ತಪ್ಪು. ಆ ಆರ್ಡಿನೆನ್ಸ್ ಅನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕು, ಚುನಾವಣೆಯನ್ನು ಘೋಷಣೆ ಮಾಡಬೇಕು ಮತ್ತು ಈ ಚುನಾವಣೆ ಪ್ರಕ್ರಿಯೆ ಏನು ಇದೆ ಅದು ನಡೆಯಬೇಕು. ಅದು ಬಿಟ್ಟು ಯಾವುದೇ ಸರ್ಕಾರ ಸಂವಿಧಾನದ ವಿರುದ್ಧ ನಡೆದುಕೊಂಡರೆ ಅದಕ್ಕೆ ಛೀಮಾರಿ ಹಾಕಬೇಕಾಗುತ್ತದೆ, ಇಲ್ಲದಿದ್ದರೆ ಈ ಸದನದಲ್ಲಿ ಸಮರ್ಥನೆ ಮಾಡಿಕೊಳ್ಳಬೇಕು. ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡದೇ ಇದರ ಕಾರ್ಯವೈಖರಿಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡುತ್ತೇನೆ.ಇವತ್ತು ಈ ಪಂಚಾಯತ್ ಆ್ಯಕ್ಟ್ ಪ್ರಕಾರ ನಡೆದುಕೊಂಡಿಲ್ಲ, ಸಂವಿಧಾನದ ಪ್ರಕಾರವವೂ ನಡೆದುಕೊಂಡಿಲ್ಲ, ಮತ್ತು ಈ ವ್ಯವಸ್ಥೆಯನ್ನು ಅವರು ಸ್ಟ್ರೆಂಥನ್ ಮಾಡಬೇಕೆನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದರು. ಅದು ಕೂಡ ಇದರಲ್ಲಿ ಆಗಿಲ್ಲ, ಅದಕ್ಕಾಗಿ ನಾನು ತಮ್ಮ ಮುಖಾಂತರ ಅವರನನ್ನು ಕೇಳಿಕೊಳ್ಳುವುದೇನೆಂದರೆ ಈ ಸಂವಿಧಾನದ ವಿರುದ್ಧ ಅವರು ಏನು ನಡೆದುಕೊಂಡಿದ್ದಾರೆ ಅದನ್ನು ಸರಿಪಡಿಸಬೇಕು, ಇಲ್ಲದಿದ್ದರೆ ನಿಜವಾಗಲೂ ಅನ್ಯಾಯವಾಗುತ್ತದೆನ್ನುವಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಛೇರ್‌ಮನ್ :— ಈಗ ಸಭೆ ಮುಕ್ತಾಯಗೊಂಡು ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಕಲಾಪವು ಮಧ್ಯಾಹ್ನ 2.02 ಗಂಟೆಗೆ ಮುಕ್ತಾಯಗೊಂಡು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3.20 ಗಂಟೆಗೆ ಪ್ರಾರಂಭವಾಯಿತು)

(ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನಲಂಕರಿಸಿದ್ದರು)

ಶ್ರೀ ವಾಟಾಳ್ ನಾಗರಾಜ್ :—ಮಾನ್ಯ ಅಧ್ಯಕ್ಷರೆ, 3 ದಿವಸಗಳಿಂದ ಸದನಕ್ಕೆ ಪ್ರೇತ ಕಳೆ ಬಂದಿದೆ. ಇದರಿಂದ ನನಗೆ ಬಹಳ ನೋವಾಗುತ್ತಿದೆ. ಇಷ್ಟು ಹೊತ್ತು ಬೆಲ್ ಬಾರಿಸುತ್ತಿದ್ದಾರೆ ಮತ್ತು ಆಳುವ ಪಕ್ಷದಲ್ಲಿ 4 ಜನ ಮಂತ್ರಿಗಳಿದ್ದಾರೆ, ಈಗ ಒಬ್ಬರು ಬಂದರು, ಎಲ್ಲರನ್ನೂ ಸೇರಿಸಿದರೆ 10 ಜನರೂ ಇಲ್ಲ. ಇದೇನು ಪರಿಸ್ಥಿತಿ? ಶಾಸನಸಭೆಯ ಇತಿಹಾಸದಲ್ಲಿ, ಹಿಂದೆ ಅನೇಕ ಬಾರಿ ಈ ರೀತಿ ಆಗಿದ್ದರೂ, ಹೊಸದಾಗಿ ನಿನ್ನೆ ಮೊನ್ನೆ, ಇಂದು ಈ ರೀತಿಯಾಗಿದೆ. ಇಂಥ ಸಂದರ್ಭದಲ್ಲಿ ಈ ಸದನಕ್ಕೆ ಇವರು ಎಷ್ಟು ಗೌರವ ಕೊಡುತ್ತಿದ್ದಾರೆ? ಮಂತ್ರಿಗಳಿರಬಹುದು, ಆ ಪಕ್ಷದ ಶಾಸಕರಿರಬಹುದು, ಈ ಸದನದ ಗಾಂಭೀರ್ಯತೆಯನ್ನು ಕಾಪಾಡಬೇಕು. ಸದನದಲ್ಲಿ ಎಂತಹ ಚರ್ಚೆಯಾಗಬೇಕಾಗಿದೆ, ಈ ಸದನದ ಮಹತ್ವವೇನು ಎಂಬುದನ್ನು ಯಾರೂ ಅರ್ಥ ಮಾಡಿಕೊಂಡಿಲ್ಲ. ಹೀಗಾದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಅವರು ಕಡೇ ಘಳಿಗೆಯಲ್ಲಿದ್ದಾರೆ. ಅದಕ್ಕೋಸ್ಕರ ಪರಿಸ್ಥಿತಿ ಹೀಗಾಗಿದೆ.

ಅಧ್ಯಕ್ಷರು :— ಸಕಲವೂ ನನ್ನ ಸೌಭಾಗ್ಯವಯ್ಯ.

ಶ್ರೀವಾಟಾಳ್ ನಾಗರಾಜ್ :— ತಾವು ಪುರಂದರದಾಸರ, ಕನಕದಾಸರ ತರಹ ಹೇಳಿದರೆ ಆಗುವುದಿಲ್ಲ.

ಅಧ್ಯಕ್ಷರು :— ಪುರಂದರ, ಕನಕದಾಸರಲ್ಲದೆ, ಚಕ್ರವರ್ತಿಯಾಗಲು ಸಾಧ್ಯವೆ?

ಶ್ರೀ ವಾಟಾಳ್ ನಾಗರಾಜ್ :— ಇದು ವೈರಾಗ್ಯದ ಪರಿಸ್ಥಿತಿ. ಈ ಪರಿಸ್ಥಿತಿ ಸರಿಯಲ್ಲ. ಇದು ಅತ್ಯಂತ ನಾಚಿಕೆಗೇಡಿತನವಾಗುತ್ತದೆ. ಈ ಸದನಕ್ಕೆ ತೋರುವ ಅಗೌರವಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆ ಬಗ್ಗೆ, ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದೂಡಿರುವ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಯುತ್ತಿದೆ. ಹೀಗಿರುವಾಗ, ಗ್ರಾಮ ಪಂಚಾಯಿತಿಗಳಿಂದ ಆಯ್ಕೆಯಾಗಿ ಬಂದಿರುವ ಸದಸ್ಯರುಗಳೆ ಇಲ್ಲಿ ಬಹುಪಾಲು ಇಲ್ಲವೆಂದರೆ, ಇದರ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಹೇಗೆ ಮಾಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ:— 111 ಜನ ಸದಸ್ಯರಲ್ಲಿ 49 ಜನ ಮಂತ್ರಿಗಳಿದ್ದಾರೆ. ಅವರಲ್ಲಿ ಅರ್ಧದಷ್ಟಾದರೂ ಹಾಜರಾದರೆ ಕೋರಂ ಭರ್ತಿಯಾಗುತ್ತದೆ. ಉಳಿದವರು ಬೇಕಾದರೆ ಮನೆ ಕೆಲಸಗಳಿಗೆಂದು ಹೋಗಲಿ. ಅವರಿಗೆ ಪದೇ ಪದೇ ಹೇಳಿ ಕರೆದುಕೊಂಡು ಬರಬೇಕೇ? ಅವರನ್ನು ಕರೆದುಕೊಂಡು ಬರಲು ಪೋಲೀಸರಿಗಾದರೂ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇದರ ಬಗ್ಗೆ ತಾವು ಸಿಟ್ಟು ಮಾಡಿಕೊಳ್ಳುತ್ತಿದ್ದಿರಿ. ಈಗೇಕೋ ಮೌನವನ್ನಾಚರಿಸುತ್ತಿದ್ದೀರಿ.

ಅಧ್ಯಕ್ಷರು :— ನನ್ನ ಆರೋಗ್ಯ ಸರಿಯಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ರಾಜಕೀಯದ ಆರೋಗ್ಯವೋ ಹೇಗೆ?

ಅಧ್ಯಕ್ಷರು :— ರಾಜಕೀಯವನ್ನು ಬಿಟ್ಟಿದ್ದೇನೆಂದು ನಿನ್ನೆಯೇ ಹೇಳಿದ್ದೇನೆ. ಇಲ್ಲಿಂದ ತಮಾಷೆಗಾಗಿ ಹೇಳುತ್ತೇವೆಯೇ?

ಶ್ರೀ ವಾಟಾಳ್ ನಾಗರಾಜ್ :— ನಾವು ಅದಕ್ಕೆ ತಯಾರಾಗಿಲ್ಲ. ನಿಮ್ಮನ್ನು ಉಳಿಸುತ್ತೇವೆ. ನಾವೆಂದೂ ನಿಮ್ಮನ್ನು ಬಿಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮಗೆ ಅಪರೂಪಕ್ಕೆ ಆರೋಗ್ಯ ಸರಿಯಿಲ್ಲ. ಮುಖ್ಯ ಮಂತ್ರಿಗಳು ಪರ್ಮನೆಂಟಾಗಿ ಹಾಗೇ ಇರುತ್ತಾರೆ. ಆದರೆ, ಸದನದ ಆರೋಗ್ಯ ಕೆಡಬಾರದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಗ್ರಾಮ ಪಂಚಾಯಿತಿಗಿಂತ, ಅವರದೇ ದೊಡ್ಡ ಪಂಚಾಯಿತಿಯಾಗಿರಬೇಕೆಂದು ಕಾಣಿಸುತ್ತದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸೋಮವಾರದಿಂದ ಇಲ್ಲಿಯವರೆಗೆ, ಅವರನ್ನು ಬಿಡುವುದಿಲ್ಲವೆಂಬುದು ನಮಗೆ ಗೊತ್ತಾಗಿದೆ.

ಅಧ್ಯಕ್ಷರು :— ನೀವು ಮಾಡುತ್ತಿರುವ ಅಪಾದನೆಯಿಂದ ಕೂಡ ಮುಕ್ತನಾಗುವ ಪ್ರಯತ್ನಪಡುತ್ತಿದ್ದೇನೆ. ಅವರನ್ನೂ ನನ್ನ ಹತ್ತಿರಕ್ಕೆ ಬಂದಿಲ್ಲ. ಅಪಾದನೆ ನನ್ನ ಮೇಲಿರುವುದು ನಿಜ. ಅದರಲ್ಲಿ ಸ್ವಲ್ಪ ಸತ್ಯಾಂಶವಿದೆ. ಆದ್ದರಿಂದ, ನನ್ನನ್ನು ಬಿಡುಗಡೆ ಮಾಡಿಕೊಳ್ಳಲು ಪ್ರಯತ್ನಪಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು :— ನಮಗೆ ಅವಕಾಶವೇ ಸಿಗುತ್ತಿಲ್ಲ.

ಅಧ್ಯಕ್ಷರು :— ನನಗೆ ಇಡೀ ಭೂಲೋಕ ರೌಂಡ್ ಆಗಿದೆ. ಹಿಂದೂ ಇಲ್ಲ, ಮುಂದೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸರ್ಕಾರದವರಿಗೆ ಒಂದು ಸಲವಾದರೂ ಹೇಳಿ. ಕುಸ್ತಿ ಆಡುವುದಕ್ಕಾಗುವುದಿಲ್ಲ. ಇದೇನು ಗರಡಿಯೇ? ಅರ್ಗ್ಯುಮೆಂಟ್ ಮಾಡಬಹುದು, ಹೇಳಬಹುದು, ರೆಪ್ರೆಸೆಂಟ್ ಮಾಡಬಹುದು, ಆದರೆ, ಕೇಳುವವರು ಬೇಕಲ್ಲವೇ? ಯಾರಿಗೆ ಹೇಳುವುದು? ಅಧಿವೇಶನ ಕರೆಯಿರಿ ಎಂದು ಹೇಳುತ್ತೇವೆ, ಕರೆದರೆ, ಇಲ್ಲಿ ಕೇಳುವವರಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :— ಅದಲ್ಲದೆ, ತಮಗೆ ಮಂತ್ರಿಸ್ಥಾನ ಸಿಗಲಿಲ್ಲವೆಂಬ ಕೂಗು ಬೇರೆ. ಕೆಲವರಿಗೆ ಯಾವ ಕೇಡಿಗೆ ಕೊಡಬೇಕು? ಪ್ರಾಮಾಣಿಕವಾಗಿ ಕುಳಿತಿರುವವರ ಬಗ್ಗೆ ನಮಗೆ ಗೌರವವಿದೆ. ತಾವು ಹಿರಿಯ ಸಚಿವರಿದ್ದೀರಿ, ಪ್ರಾಮಾಣಿಕವಾಗಿ ಹೇಳಿ. ಸದನದಲ್ಲಿ ಯಾವ ಪಕ್ಷ ಎಂಬುದನ್ನು ಮರೆತುಬಿಡೋಣ. ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಶಾಸನ ಸಭೆಯಲ್ಲಿ ಈ ಪರಿಸ್ಥಿತಿಯಾಗಬೇಕೆ? ನಾನು 1967ನೇ ಇಸವಿಯಿಂದ ನೋಡಿದ್ದೇನೆ, ಯಾವತ್ತೂ ಈ ತರಹದ ಪರಿಸ್ಥಿತಿಯನ್ನು ನೋಡಲಿಲ್ಲ.

+ ಶ್ರೀ ಎಂ.ವೈ. ಘೋರ್ಪಡೆ (ಸಂಡೂರ್) :— ಕೆಲವು ವಿಷಯಗಳನ್ನು ನಾನಿಲ್ಲಿ ಪ್ರಸ್ತಾಪ ಮಾಡುವುದು ಅನಿವಾರ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಎಲ್ಲರಿಗೂ ಗೊತ್ತಿರುವ ಹಾಗೆ, ಪಂಚಾಯತ್ ರಾಜ್ ಸಮಿತಿಯ ಕಾಲಾವಧಿ 5 ವರ್ಷಗಳು. ಇದನ್ನು ಹೆಚ್ಚಿಸಲಿಕ್ಕೆ ಕಾನೂನಿನ ಪ್ರಕಾರ ಯಾರಿಗೂ ಸಾಧ್ಯವಿಲ್ಲ-ಮತ್ತು ಮೊಟಕು ಮಾಡಲಿಕ್ಕೂ ಸಾಧ್ಯವಿಲ್ಲ. ನಾವು, ನೀವು ಮಾಡಿರುವ ಕಾನೂನಿನಲ್ಲೇ ಇದು ಸ್ಪಷ್ಟವಾಗಿದೆ. 1993ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಕರ್ನಾಟಕದಲ್ಲಿ, ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಚುನಾವಣೆ ನೆಡದಿರುವುದು ಎಲ್ಲರಿಗೂ ಗೊತ್ತಿದೆ. 5,600 ಪಂಚಾಯಿತಿಗಳಲ್ಲಿ ಹೆಚ್ಚು ಕಡಿಮೆ 86 ಸಾವಿರ ಜನರು ಸದಸ್ಯರನ್ನು ಚುನಾಯಿಸಿದ್ದಾರೆ. ಇದು ಯಾವ ಆಧಾರದ ಮೇಲೆ ಎಂದರೆ ಸಂವಿಧಾನದ 73ನೇ ತಿದ್ದುಪಡಿ ಏಪ್ರಿಲ್ 1993ರಲ್ಲಿ ಏನು ಪಾಸಾಯಿತು, ಅದರ ಪ್ರಕಾರ, ಅನಿವಾರ್ಯವಾಗಿ ನಾವು ಕರ್ನಾಟಕದಲ್ಲಿ ಹೊಸದಾಗಿ ಕಾನೂನನ್ನು ಮೇ 93 ರಲ್ಲಿ ಜಾರಿಗೆ ತಂದು, ಡಿಸೆಂಬರ್ ತಿಂಗಳಲ್ಲಿ 5,600 ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸಿದ್ದೇವೆ. ಇದರಲ್ಲಿ ವಿಶೇಷತೆ ಏನೆಂದರೆ, 73ನೇ ತಿದ್ದುಪಡಿಯಾದ ನಂತರ ಅದರ ಪ್ರಕಾರ ರಾಜ್ಯ ಮಟ್ಟದಲ್ಲಿ ಹೊಸ ಕಾನೂನನ್ನು ತಂದು ಮೂರು ಹಂತದ ವ್ಯವಸ್ಥೆಯನ್ನು ಸಾಧನೆ ಮಾಡಿ ಇಡೀ ರಾಷ್ಟ್ರದಲ್ಲಿ ಕರ್ನಾಟಕ ಮೊಟ್ಟಮೊದಲನೆಯ ಸ್ಥಾನದಲ್ಲಿರುವಂತೆ ನಾವು ಕಾನೂನನ್ನು ಮಾಡಿದೆವು. ಇದರ ಸಂಪೂರ್ಣ ಯಶಸ್ಸು ಕರ್ನಾಟಕ ರಾಜ್ಯಕ್ಕೆ ಬರುತ್ತದೆ.

ನಾವು ಕೇವಲ ಕಾನೂನನ್ನು ಮಾಡುವುದಷ್ಟೇ ಅಲ್ಲದೆ ಅದರ ಪ್ರಕಾರ 5,600 ಪಂಚಾಯಿತಿಗಳಿಗೆ ಚುನಾವಣೆ ಮಾಡಿದ್ದೇವೆ. ಇದಕ್ಕಿಂತಲೂ ಮುಂಚೆ 2,500 ಮಂಡಲ್ ಪಂಚಾಯಿತಿಗಳು ಸರಿಯಾಗಿ ನಡೆಯಬೇಕಾದರೆ, ಸದಸ್ಯರಿಗೆ ಮತ್ತು ಜನಗಳಿಗೆ ನೇರವಾದ, ನಿಕಟವಾದ ಸಂಬಂಧವಿರಬೇಕಾದರೆ 400 ಜನಗಳಿಗೆ ಒಬ್ಬ ಸದಸ್ಯನಿರಬೇಕು. ಅಂದರೆ 200 ವೋಟರ್ಸ್‌ಗೆ ಒಬ್ಬ ಸದಸ್ಯರಿರಬೇಕು, ಈ ಆಧಾರದ ಮೇಲೆ ನಾವು ಮಾಡಿದ್ದುದು ಇದರ ಬಗ್ಗೆ ಬಹಳಷ್ಟು ಯೋಚನೆ ಮಾಡಿಯೇ ನಾವು ಮಾಡಿದ್ದು ಅವಸರದಲ್ಲಿ ಏನೂ ಮಾಡುವುದಕ್ಕೆ ಹೋಗಿಲ್ಲ. ತಮಗೆ ಗೊತ್ತಿರುವಂತೆ ಮಾನ್ಯ ವೀರೇಂದ್ರ ಪಾಟೀಲ್ ರವರು ಮುಖ್ಯಮಂತ್ರಿಗಳಾಗಿದ್ದಾಗ 1990ರಲ್ಲಿ ನನಗೆ ಪ್ರಥಮವಾಗಿ ಪಂಚಾಯತ್ ರಾಜ್ ಖಾತೆ ಕೊಟ್ಟಿದ್ದರು. ಆಗಿನಿಂದಲೇ ಇದರ ಬಗ್ಗೆ ನಾವು ಆಳವಾದ ಚಿಂತನೆ, ಚರ್ಚೆ, ಕರ್ನಾಟಕದಲ್ಲಿ ಮಾಡಿ ಮೇ-93 ರಲ್ಲಿ ಹೊಸ ಕಾನೂನನ್ನು ಮಾಡಿ ಡಿಸೆಂಬರ್ -93ರಲ್ಲಿ ಚುನಾವಣೆಯನ್ನು ನಡೆಸಿದೆವು. ಈ ಸಂವಿಧಾನವನ್ನು ಅಮೆಂಡ್ ಮಾಡುವುದಕ್ಕೆ ಕಾರಣ ಏನೆಂದರೆ, ರಾಜ್ಯ ಸರ್ಕಾರದ ಸಬ್ಜೆಕ್ಟ್ ಇದ್ದರೂ ಕೂಡ ಪಾರ್ಲಿಮೆಂಟ್‌ನಲ್ಲಿ ಕಾನೂನು ಮಾಡುವಂತಹ ಅವಕಾಶ ಬಂದಿದ್ದು ಒಂದು ವಿಶೇಷವಾದಂಥ ಅಂಶವಾಗಿತ್ತು. ಈ ವಿಚಾರ ಏಕೆ ಬಂತು ಎಂದರೆ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಸುಮಾರು ಹತ್ತಾರು ವರ್ಷಗಳಿಂದ ಚುನಾವಣೆಯನ್ನೇ ಮಾಡಿರಲಿಲ್ಲ. ಇದರ ಅಭ್ಯಾಸವೇ ತಪ್ಪಿ ಹೋಗಿತ್ತು. ಈ ಒಂದು ಕಾರಣದಿಂದ, ಕೇಂದ್ರಮಟ್ಟದಲ್ಲಿ ಕನಿಷ್ಠಪಕ್ಷ 5 ವರ್ಷಗಳಿಗೊಮ್ಮೆ ಚುನಾವಣೆಯನ್ನು ಕಡ್ಡಾಯವಾದಂಥ ಒಂದು ವ್ಯವಸ್ಥೆ ಸಂವಿಧಾನದಲ್ಲಿ ನಾವು ಮಾಡದೇ ಹೋದರೆ, ಈ ದೇಶದಲ್ಲಿ ನಾವು ವಿಕೇಂದ್ರಿಕರಣ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ವಾತಂತ್ರ್ಯ ಬಂದು 40-50 ವರ್ಷಗಳಾದರೂ ಈ ದೇಶದಲ್ಲಿ ಸಂವಿಧಾನ ತಿದ್ದುಪಡಿ ಮಾಡಲಿಲ್ಲವೆಂದರೆ ಹೇಗೆ ಎಂದು ಚಿಂತನೆ ಮಾಡಿ ಮಾನ್ಯ ರಾಜೀವಗಾಂಧಿಯವರ ನೇತೃತ್ವದಲ್ಲಿ ಈ ತಿದ್ದುಪಡಿ ಮಾಡತಕ್ಕಂತಥ ಘಟನೆ ನಡೆಯಿತು. It was made compulsory. it is not discretionary. ಇವತ್ತು ಚುನಾವಣೆಯನ್ನು ನಡೆಸದೇ ಹೋದರೆ ಯಾರಾದರೂಬ್ಬರು ಕೋರ್ಟ್‌ಗೆ ಹೋಗಿ ನನ್ನ ಹಕ್ಕು ಇದು ಎಂದರೆ In cannot be restored.ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳಿಗೆ ಹೆಚ್ಚು ಹೇಳುವುದಕ್ಕೆ

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಬಿ.ಬಿ. ಶಿವಪ್ಪನವರು ಅಲಂಕರಿಸಿದರು)

ಇಷ್ಟಪಡುವುದಿಲ್ಲ ಏಕೆಂದರೆ, ಮಾನ್ಯ ಸಚಿವರಿಗೆ ಎಲ್ಲಾ ವಿಷಯ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಪ್ರಕಾರ ಸಂವಿಧಾನವನ್ನು ವಯಲೇಷನ್ ಮಾಡುವಂತಹ ಕೆಲಸ ಸ್ಪಷ್ಟವಾಗಿ ನಡೆದಿದೆ ಎಂದು ನನಗೆ ಅನ್ನಿಸುತ್ತದೆ. If the

election is not held, it is violation of the constitution. ತಾವು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ಪತ್ರಿಕೆಗಳಲ್ಲಿ ನಾನು ನೋಡಿದ್ದೇನೆ. ತಮ್ಮ ಅಭಿಪ್ರಾಯ ಈ ರೀತಿ ಇದ್ದರೆ ಖಂಡಿತವಾಗಿ ನಿಮ್ಮ ಕ್ಯಾಬಿನೆಟ್ ಅಭಿಪ್ರಾಯ ಆ ರೀತಿ ಇಲ್ಲ. ಇಲ್ಲದೇ ಹೋದರೆ ಈ ಘಟನೆಗಳು ನಡೆಯುತ್ತಿರಲಿಲ್ಲ. ಈ ಸದನದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕು. Do you consider it as violation, not holding elections even after five years? Do you consider it as violation of the constitution is the question? ಇದಕ್ಕೆ ಉತ್ತರ 'ಹೌದು'ಎಂದು ಇದ್ದರೆ ಕ್ಯಾಬಿನೆಟ್ ನವರು 'ಇಲ್ಲ' ಎಂದು ಉತ್ತರಿಸಿದ್ದಾರೆ, ಅವರ ದೃಷ್ಟಿಯಲ್ಲಿ ಇದು ಸಂವಿಧಾನವನ್ನು ವಯಲೇಷನ್ ಮಾಡುವಂತಹ ಕೆಲಸವಲ್ಲ ಎಂದು ಹೇಳಬೇಕಾದರೆ ಅಂತಹ ಕ್ಯಾಬಿನೇಟ್‌ನಲ್ಲಿ ತಾವು ಹೇಗೆ ಭಾಗವಹಿಸುತ್ತೀರಿ ಎನ್ನುವ ನನ್ನ ಪ್ರಶ್ನೆಗೆ ತಾವು ಸರಿಯಾದ ಉತ್ತರ ನೀಡುತ್ತೀರಿ ಎಂದು ನಾನು ನಂಬಿರುತ್ತೇನೆ. ತಮ್ಮ ರಾಜೀನಾಮೆಯ ಬಗ್ಗೆ ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ, ಹೆಚ್ಚಿಗೆ ಏನೂ ಹೇಳುವುದಕ್ಕೆ ನಾನು ಬಯಸುವುದಿಲ್ಲ. ಈ ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ತಾವು ಯಾವುದೋ ಒಂದು ನೆಪ ಹುಡುಕುತ್ತಿದ್ದೀರಿ. ಅದು ಸಾಲ್ವ್ ಆಯಿತು. ಏಕೆಂದರೆ, ಯಾರಾದರೊಬ್ಬರು ಈ ಬಗ್ಗೆ ಕೋರ್ಟ್‌ಗೆ ಹೋದರೆ ಏನಾದರೂ ಹೇಳಬೇಕು ಅಲ್ಲವೇ? ದುರ್ದೈವದಿಂದ ನೀವು ಹುಡುಕಿರತಕ್ಕಂಥ ನೆಪವೂ ಕೂಡ ಕಾನೂನಿನಿಂದ ಬಾಹಿರವಾಗಿದೆ. ಏಕೆಂದರೆ, ಮೊದಲು ಇದ್ದಂಥ ಏಳು ಸಾವಿರ ಜನಸಂಖ್ಯೆಯಿಂದ ಹದಿನೈದು ಸಾವಿರ ಜನಸಂಖ್ಯೆಯವರೆಗೆ ಇರತಕ್ಕಂಥ ಸುಮಾರು 2,500 ಮಂಡಲಪಂಚಾಯಿತಿಗಳನ್ನು ನಾವು ಪುನಃ ರಚನೆ ಮಾಡುತ್ತೇವೆಂದು ಹೇಳುತ್ತೀರಿ. ಅಂದರೆ 1993ರಲ್ಲಿ ನಾವು 5,600 ಪಂಚಾಯಿತಿಗಳನ್ನು ಏನು ಮಾಡಿದ್ದವು ಅದನ್ನು ರದ್ದುಪಡಿಸಿ ಪುನಃ 2,500 ಮಂಡಲ ಪಂಚಾಯಿತಿಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ. ಈ ರೀತಿ ಮಾಡಿದರೆ ಇಂಟರ್‌ಮೀಡಿಯೇಟ್ ಟಯರ್ ಇರುವುದಕ್ಕೆ ಸಾಧ್ಯವಿಲ್ಲ. ಇದನ್ನು ರದ್ದು ಮಾಡಬೇಕಾಗುತ್ತದೆ ಎಂದು ನಾನು ಎಷ್ಟೋ ಸಲ ಹೇಳಿದ್ದೇನೆ. ಈ ಅಭಿಪ್ರಾಯ ಮಾತ್ರ ಸಾರ್ವಜನಿಕರಲ್ಲಿ ಇದೆ. ಏಕೆಂದರೆ, ಮಂಡಲ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಎರಡು ಇಂಟರ್ ಮೀಡಿಯೇಟ್ ಟಯರ್ ಏನಿದೆ ಅದು ಕೂಡ ಚುನಾಯಿತ ಸಂಸ್ಥೆಯಾಗಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದು ಪ್ರಾಯೋಗಿಕವಾಗಿ ಸತ್ಯವಾಗಿದೆ. ಈಗ ಮಂಡಲ್ ಪಂಚಾಯಿತಿ ಮಾಡಿ, ತಾಲ್ಲೂಕು ಪಂಚಾಯಿತಿಗಳನ್ನು ಕೈಬಿಡುವುದಕ್ಕೆ ಈ ಸರ್ಕಾರಕ್ಕೆ ಅಧಿಕಾರವಿಲ್ಲ. ನೀವು ಜನಗಳಿಗೆ ಮತ್ತು ದೇಶಕ್ಕೆ ನಾವು ಪುನಃ ಎರಡು ಟಯರ್ ಸಿಸ್ಟಮ್‌ಗೆ ಹೋಗುತ್ತಿದ್ದೇವೆಂದು ಒಂದು ರೀತಿಯಲ್ಲಿ ನೋಟೀಸ್ ಕೊಟ್ಟಿರುತ್ತೀರಿ. ಈ ಎರಡು ಟಯರ್ ಸಿಸ್ಟಮ್‌ಗೆ ಹೋಗುವುದಕ್ಕೆ ತಮಗೆ ಅಧಿಕಾರವಿಲ್ಲ. ಸಂವಿಧಾನಕ್ಕೆ ತಿದ್ದುಪಡಿ ತಾರದೇ ನಾವು ಪುನಃ ಎರಡು ಟಯರ್

ಸಿಸ್ಟಮ್‌ಗೆ ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ತಾವು ಎಷ್ಟೋ ಸಾರಿ ಹೇಳಿದ್ದೀರಿ. ಈ ರೀತಿ ಸಂವಿಧಾನವನ್ನು ಪುನಃ ತಿದ್ದುಪಡಿ ಮಾಡಬೇಕಾದರೆ ಇದಕ್ಕೆ ಏನು ಪ್ರೊಸೀಜರ್ ಇರಬೇಕು, ಎಷ್ಟು ಮೆಜಾರಿಟಿ ಇರಬೇಕು, ಏನು ಭದ್ರತೆ ಇರಬೇಕು ಎಂದು ಎಲ್ಲರಿಗೂ ಗೊತ್ತಿದೆ. ಇದರ ಜೊತೆಗೆ ಇದನ್ನು ಪುನಃ ಅಮೆಂಡ್ ಮೆಂಟ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ವಿಚಾರ ಕೂಡ ಗೊತ್ತಿದೆ. ಈ ರೀತಿ ಇರುವಾಗ ಈಗಿರುವ ವ್ಯವಸ್ಥೆಯನ್ನು ರದ್ದುಪಡಿಸಿ .ನಾವು ಪುನಃ ಎರಡು ಟಯರ್ ಸಿಸ್ಟಮ್‌ಗೆ ಹೋಗುತ್ತೇವೆಂದು ಹೇಳತಕ್ಕಂಥದ್ದು ಮತ್ತೊಂದು Un-constitutional step ತೆಗೆದುಕೊಳ್ಳುತ್ತೇವೆಂದು ಹೇಳಿದ ಹಾಗೆ ಆಗುತ್ತದೆ. ಸನ್ಮಾನ್ಯ ಪ್ರಕಾಶ್‌ರವರಲ್ಲಿ ನಾನು ಮತ್ತೊಂದು ವಿಚಾರವನ್ನು ನೇರವಾಗಿ ಕೇಳಬಯಸುತ್ತೇನೆ. ಕಳೆದ ಐದು ವರ್ಷಗಳಲ್ಲಿ ಎಷ್ಟೋ ಅಮೆಂಡ್‌ಮೆಂಟ್‌ನ್ನು ತರಬೇಕು, ತಿದ್ದುಪಡಿ ಮಾಡಬೇಕು, ಎಂದು ತಾವು ಹೇಳುತ್ತಿದ್ದೀರಿ. ಎಲ್ಲಿಯವರೆಗೆ ಮೂಲಭೂತವಾಗಿ ಪಂಚಾಯತ್ ರಾಜ್ ಪರಿಕಲ್ಪನೆಯ ವ್ಯವಸ್ಥೆ ಏನಿದೆ ಇದಕ್ಕೆ ಧಕ್ಕೆ ತರದಂತೆ ತಾವು ಅಮೆಂಡ್ ಮಾಡುವುದಾದರೆ ಇದಕ್ಕೆ ನಮ್ಮ ಸಹಕಾರ ಇರುತ್ತದೆ. ಹೀಗಿದ್ದರೂ ತಾವು ಯಾವಾಗಲೋ ಮಾಡಬೇಕಾದ ಈ ಕಾರ್ಯವನ್ನು ಈಗ ಏಕೆ ಮಾಡುತ್ತಿದ್ದೀರಿ? ಈ ಐದು ವರ್ಷಗಳಲ್ಲಿ ತಾವು ಏನು ಮಾಡುತ್ತಿದ್ದೀರಿ? ಅಂದರೆ ತಾವು ಏನು ಈಗ ಸುಗ್ರೀವಾಜ್ಞೆಯ ಮೂಲಕ ಮಾಡುವುದಕ್ಕೆ ಹೊರಟಿದ್ದೀರಿ ಅದಕ್ಕೆ ಇಷ್ಟು ಮಹತ್ವ ಇರಲಿಲ್ಲ. ಅಂದರೆ, ಹಿಂದೆ ತಾವು ಏನು ಎರಡು-ಮೂರು ಬಾರಿ ತಿದ್ದುಪಡಿ ತಂದಿದ್ದೀರಿ ಅದಕ್ಕಿರುವ ಮಹತ್ವ ಈಗ ಸುಗ್ರೀವಾಜ್ಞೆಯ ಮೂಲಕ ಮಾಡುವುದಕ್ಕೆ ಹೊರಟಿದ್ದೀರಿ ಇದಕ್ಕೆ ಅಷ್ಟೊಂದು ಮಹತ್ವ ಇಲ್ಲವೆಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಏಕಾಏಕಿ ಈ ರೀತಿ ನಿರ್ಧಾರ ತೆಗೆದುಕೊಳ್ಳುವುದು ಸಾಧುವಲ್ಲ. ಏಕೆಂದರೆ, ಇದಕ್ಕೆ ಯಾವುದೋ ಒಂದು ನೆಪವನ್ನು ಹುಡುಕಿದ್ದೀರಿ. ``Excuse to postpone the elections" ಇದನ್ನು ಮಾಡಿದ್ದೀರಿ, ನನ್ನ ಅಭಿಪ್ರಾಯ ಏನೆಂದರೆ, it is not a good excuse, it is a lame excuse, it is an illegal excuse. It is not a legal excuse at all. ಮತ್ತೊಂದು ವಿಷಯ ಏನೆಂದರೆ ಇದನ್ನು ಸುಗ್ರೀವಾಜ್ಞೆಯ ಮೂಲಕ ಮಾಡುವುದಕ್ಕೆ ಹೊರಟಿರುವುದೊಂದು ವಿಶೇಷ ಅಂಶವಾಗಿದೆ. ಸಾಮಾನ್ಯವಾಗಿ, ಯಾವಾಗ ಟೈಮ್ ಇರುವುದಿಲ್ಲವೋ, ಇದನ್ನು ಮಾಡದೆ ಹೋದರೆ ಅನಾಹುತ ಆಗುತ್ತದೆಯೋ ಅಂಥ ಸಂದರ್ಭದಲ್ಲಿ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಿ ನಂತರ ಅದರ ಬಗ್ಗೆ ಚರ್ಚೆ ಮಾಡತಕ್ಕಂಥ ಪದ್ಧತಿ ಇದೆ. ತಮಗೆ ಐದು ವರ್ಷಗಳ ಕಾಲ ಸಮಯ ಇದ್ದರೂ ಏಕೆ ಮಾಡಲಿಲ್ಲ? ಈ ವಿಷಯವನ್ನು ಸುಗ್ರೀವಾಜ್ಞೆಯ ಮೂಲಕ ತರುವಂತಹ ವಿಷಯ ಅಲ್ಲವೇ ಅಲ್ಲ. ತಾವು ಇದನ್ನು ಸುಗ್ರೀವಾಜ್ಞೆಯ ಮೂಲಕ ಮಾಡುವುದಕ್ಕೆ ಹೊರಟರೆ ಪ್ರಜಾತಂತ್ರದ ಪದ್ಧತಿಗೆ ಧಿಕ್ಕಾರ ಮಾಡಿದ ರೀತಿ ಆಗುತ್ತದೆ. ಇದಲ್ಲದೆ, ಕರ್ನಾಟಕದಲ್ಲಿ ಸಾರ್ವಜನಿಕರು ಈ ವಿಚಾರದ

ಬಗ್ಗೆ ಹೆಚ್ಚು ಮಹತ್ವ ಕೊಡಬಾರದು, ಗಲಾಟೆಯಾಗಬಾರದು ಎನ್ನುವ ಉದ್ದೇಶದಿಂದ ಈಗಿರುವ ಸದಸ್ಯರನ್ನೇ ನಾಮಕರಣ ಮಾಡಿದ್ದೀರಿ. ಅಂದರೆ ಒಟ್ಟಾರೆಯಾಗಿ 80,600 ಜನ ಸದಸ್ಯರನ್ನು ನಾಮಕರಣ ಮಾಡಿದ್ದೀರಿ. ಈ ರೀತಿ ನಾಮಕರಣ ಮಾಡುವುದಕ್ಕೆ ಅಧಿಕಾರ ಬೇಕು, ಹಾಗೆ ಅಧಿಕಾರ ಇಲ್ಲದೇ ಹೋದರೆ ನಾಮಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಸಂವಿಧಾನದಲ್ಲಾಗಲಿ ಅಥವಾ ನಿಮ್ಮ ಕಾನೂನಿನಲ್ಲಿ ಆಗಲಿ ಇದು ಕೇವಲ ಕಾಂಗ್ರೆಸ್ ಮಾಡಿದ್ದಲ್ಲ ಜನತಾದಳದ ಕಾಲದಲ್ಲಿ ಮಾಡಿದ್ದು. ಇದರಲ್ಲಿ ನಾವು ಕೆಲವೊಂದು ಮಾರ್ಪಾಡುಗಳನ್ನು ಮಾಡಿದ್ದೆವು ಮತ್ತು ಇದರಲ್ಲಿ ನಾಮಿನೇಟ್ ಮಾಡುವುದಕ್ಕೆ ಯಾವ ಒಂದು ಅವಕಾಶವೂ ಇಲ್ಲ. ಅಕಸ್ಮಾತ್ ಒಂದೆರಡು ಪಂಚಾಯಿತಿಗಳಲ್ಲಿ ಸದಸ್ಯರ ಮುಂದುವರಿಕೆಗೆ ಏನಾದರೂ ತೊಂದರೆಯುಂಟಾದರೆ ಆಗ ಅಡ್ಮಿನಿಸ್ಟ್ರೇಟರ್ ಅವರನ್ನು ನೇಮಿಸಬೇಕು ಅಥವಾ ಐದು ಜನರುಳ್ಳ ಸಮಿತಿಯನ್ನು ನೇಮಕ ಮಾಡಬೇಕು. ಸಮಿತಿ ಮಾಡಿದರೂ ಕೂಡ ಆರು ತಿಂಗಳಲ್ಲಿ ಮತ್ತೆ ಚುನಾವಣೆ ಮಾಡಬೇಕೆಂದಿದೆ. ಇದು ಸ್ಪೆಷಲ್ ರೀಸನ್ಸ್ ಆಗಿದ್ದು ಎಲ್ಲಿಯೋ ಒಂದೆರಡು ಪಂಚಾಯಿತಿಗಳಲ್ಲಿ ಸದಸ್ಯರುಗಳು ಡಿಸ್ ಕ್ವಾಲಿಫೈ ಆಗಿ ತೊಂದರೆಯಾದರೆ Then you can appiont an Administrator or five-man committee and then you must hold elections in six months. ಇದರಲ್ಲಿರುವುದನ್ನು ಸ್ವಲ್ಪ ಓದುವುದು ಉತ್ತಮವೆಂದೆನಿಸುತ್ತದೆ. ``Appointment of an Administrative committee or administrator on failure to elect members of the Grama Panchayats: If the Deputy Commissioner is satisfied that a Grama Panchayat for a village or group of villages immediately after the establishment of such Grama Panchayat cannot be constituted by reason of any difficulty in holding an election of the members of the Grama Panchayat etc., if at any general election to Grama Panchayat no member is elected or less tha two third of the total number of members are elected; etc.,

The Deputy Commissioner shall by notification either appoint an Administrator. The members of the Administrative Committee shall hold office not exceeding six months.

Further it says, "On the appointment of an Administrative Committee on an Administrator under Sub-section (1), the persons if any chosen as members of the Grama Panchayat before such appointment shall cease to be the members of the Grama Panchayat

and all the powers and duties of the Grama Panchayat shall be excercised etc.," There is another point here. "Provided that if at any time after the appointment of the Administrative Committee or the Administrator under sub-section (1) the Deputy Commissioner is satisfied that there is no difficulty in duly constituting the Grama Panchayat by election of members, the Deputy Commissioner, may notwithstanding that the term of office for which the members of the Administrative Committee or the Administrator had been appointed has not expired, direct by notification that the members of the Administrative Committee or the Administrator, as the case may be, shall cease to hold office with effect from the such date as may be specified.."

That means, if the Deputy commissioner is satisfied that there is no difficulty for holding the elections, ಎಲೆಕ್ಷನ್ ಮಾಡುವಂಥ ಪ್ರಸಂಗ ಬಂದರೆ, ಎಲೆಕ್ಷನ್ ಮಾಡುವುದಕ್ಕೆ ಸಾಧ್ಯವೆಂದೆನಿಸಿದರೆ ನೋಟಿಫಿಕೇಶನ್‌ಅನ್ನು ಡಿ.ಸಿ.ಯವರು ರದ್ದುಗೊಳಿಸಬಹುದು. ಉದ್ದೇಶವೇನೆಂದರೆ, ಎಲೆಕ್ಷನ್‌ಅನ್ನು ನಿಲ್ಲಿಸುವುದಲ್ಲ. ಇದಿಷ್ಟೇ ಅಧಿಕಾರ ಸರ್ಕಾರಕ್ಕಿರುವುದು. ಈ ಒಂದು ಲಿಮಿಟೆಡ್ ಅಧಿಕಾರ ಉಪಯೋಗಿಸಿ ನೀವು 80,600 ಸದಸ್ಯರುಗಳನ್ನು ನಾಮಿನೇಟ್ ಮಾಡುವ ಅಧಿಕಾರ ತಮಗೆ ಎಲ್ಲಿಂದ ಬಂತೆಂಬುದು ನನಗೆ ಗೊತ್ತಿಲ್ಲ. After all, we are in the rule of law and every action has to have a legal sanction. ಲೀಗಲ್ ಸ್ಯಾಂಕ್ಷನ್ ಇಲ್ಲದೆ ನೀವು 80,600 ಜನರಿಗೆ ನಾಮಿನೇಟ್ ಮಾಡಿದರೆ they cease to be memebers. After five years, the body ceases automatically according to law and there is no. provision to extend the term of the Committee. On the other hand, the constitution was designed to make such a thing impossible and there is nothing in the Karnataka Act to enable/ empower the Government to extend. ಅದಕ್ಕೋಸ್ಕರ ಮಾನ್ಯ ಛೇರ್ಮನ್‌ರವರೇ, ನಾನು ಸ್ವಲ್ಪ ಕಠೋರವಾದ ಶಬ್ದ ಉಪಯೋಗಿಸಿ ಇದರಲ್ಲಿ ದುರುದ್ದೇಶದಿಂದ ಕೂಡಿರುವ ಅಂಶಗಳಿದ್ದು, ಇದು ಮಾಲಫೈಡ್ ಇದೆಯೆಂದು ಹೇಳಿದೆ. ನಾನು ಸದನದ ಹೊರಗಡೆ ಹೇಳಿದ್ದನ್ನೇ ಇಲ್ಲಿಯೂ ಕೂಡ ಹೇಳಲು ಇಷ್ಟಪಡುತ್ತೇನೆ. ಉದ್ದೇಶವಿಷ್ಟೆ: ಮಾಲಫೈಡ್ ಎಂದರೆ ನಾಟ್ ಬೋನಫೈಡ್. ಸರಿಯಾದಂಥ ಉದ್ದೇಶ ಎಲ್ಲಿಯೂ

ಇಲ್ಲದಿರುವಂಥಾದ್ದು, ದುರುದ್ದೇಶದಿಂದ ಕೂಡಿರುವಂಥಾದ್ದರಲ್ಲಿ ಯಾವ ಸಂಶಯವೂ ಇಲ್ಲ. ಇನ್ನು ವಯಬಿಲಿಟಿ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ? ಸರ್ಕಾರ ವಿರೋಧ ಪಕ್ಷದ ನಾಯಕರುಗಳನ್ನು ಬರಮಾಡಿಕೊಂಡು ನಾವು ಟು ಟೈಯರ್ ಸಿಸ್ಟಮ್ ಅಥವಾ ಮೊದಲು ಮಂಡಲ ಪಂಚಾಯಿತಿ ಎಂದು ಏನಿತ್ತು, ಆ ತರಹ ರಚನೆ ಮಾಡಿದರೆ ವಯಬಲ್ ಆಗಿರುತ್ತದೆನ್ನುವ ಮಾತನ್ನು ಹೇಳಿದರು. ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ನಡೆದಂಥ ಸಂದರ್ಭದಲ್ಲಿ ನಾವುಗಳೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿದ್ದೆವು. ಅಲ್ಲದೆ, ಎಲ್ಲಾ ಪಕ್ಷಗಳ ನಾಯಕರು ಅದರಲ್ಲಿದ್ದರು. ನಾವು ಅದರ ಬಗ್ಗೆ ಅವರಿಗೆ ಮನದಟ್ಟು ಮಾಡಿದೆವು. ಇದರಿಂದ ವಯಬಿಲಿಟಿ ಜಾಸ್ತಿಯಾಗುವುದಿಲ್ಲ. ಅಂದರೆ, ಎಷ್ಟು ಹಣ ಖರ್ಚಾಗುತ್ತಿತ್ತೋ ಅಷ್ಟೇ ಹಣ ಖರ್ಚಾಗುತ್ತದೆ. ನೀವು ಒಂದು ಪಂಚಾಯಿತಿಯಲ್ಲಿ ಖರ್ಚು ಮಾಡುದರೂ ಅಷ್ಟೇ, ಎರಡು ಪಂಚಾಯಿತಿಗಳಲ್ಲಿ ಖರ್ಚು ಮಾಡಿದರೂ ಅಷ್ಟೇ. ಜನಸಂಖ್ಯೆ ದೃಷ್ಟಿಯಿಂದ ಅಥವಾ ಭೌಗೋಳಿಕ ವಿಸ್ತಾರ ದೃಷ್ಟಿಯಿಂದ ಹಣ ಜಾಸ್ತಿಯಾಗುವುದಿಲ್ಲವೆನ್ನುವ ಮಾತನ್ನು ಅವರಿಗೆ ಒಪ್ಪಿಸಿದೆವು. ಅನಂತರ, ಇದರಿಂದ ಜಾಸ್ತಿಯಾಗುವುದಷ್ಟೇ ಅಲ್ಲ, ನಿಮ್ಮ ವಯಬಿಲಿಟಿಯೂ ಕಡಿಮೆಯಾಗುತ್ತದೆಂದು ಹೇಳಿದೆವು. ಅದು ಹೇಗೆಂದರೆ, 5,600 ಪಂಚಾಯಿತಿಗಳನ್ನು ಮಾಡುವಾಗ ಕಾನೂನಿನಲ್ಲಿ ಹೇಳಿದ್ದರೂ ಅವರಿಗೆ ಸೆಕ್ರೆಟರಿಯವರ ಸಂಬಳ ಕೊಡುವುದಕ್ಕಾಗುವುದಿಲ್ಲ, ಸರ್ಕಾರವೇ ಕೊಡಬೇಕು. ಅಂದರೆ, 5,600 ಗ್ರಾಮಪಂಚಾಯಿತಿಗಳ ಕಾರ್ಯದರ್ಶಿಗಳ ಸಂಬಳವನ್ನು ಇವೊತ್ತು ಸರ್ಕಾರವೇ ಕೊಡುತ್ತಿದೆ. ಅಷ್ಟೇ ಅಲ್ಲ, ಮೂಲಭೂತ ಸೌಕರ್ಯಗಳನ್ನು ನೋಡಿಕೊಳ್ಳುವುದಕ್ಕೆ ಗ್ರೂಪ್ ಆಫ್ ಪಂಚಾಯತ್ಸ್‌ಗೆ ವರ್ಷೇ ವರ್ಷೇ ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ಕೊಡಬೇಕು. ಇದನ್ನು ಕಾನೂನಿನಲ್ಲಿ ಸೇರಿಸಿದ್ದೇವೆ. ಏಕೆಂದರೆ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಕಾನೂನನ್ನು ಬದಲಿಸುವವರೆಗೂ ಒಂದು ಲಕ್ಷ ರೂಪಾಯಿ ಗ್ರಾಮ ಪಂಚಾಯಿತಿಗೆ ಹೋಗಲೇಬೇಕು. That is the reason why included it in the Act. ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಲಕ್ಷ ಎಂದರೆ ಸುಮಾರು 5,600 ಗ್ರಾಮ ಪಂಚಾಯಿತಿಗಳಿಗೆ ಐವತ್ತಾರು ಕೋಟಿ ರೂಪಾಯಿಗಳಾಯಿತು. ಈ ಐವತ್ತಾರು ಕೋಟಿ ರೂಪಾಯಿಗಳು ಕುಡಿಯುವ ನೀರು, ದುರಸ್ತಿ, ನಿರ್ವಹಣೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದಕ್ಕೋಸ್ಕರ ಇರಲೆಂದು every Panchayat, big or small, the salary of the Secretary should be paid by the Government and therefor should get Rs. 1,00,000/- (one lakh of rupees) ಈಗ ನೀವು 5,600ರಿಂದ 2,400ರವರೆಗೆ ಏನು ಇಳಿಸಿದಿರಿ, ಮತ್ತು 56 ಕೋಟಿ ರೂಪಾಯಿಗಳಷ್ಟು ಹಣವನ್ನು ಏನು ಕೊಡುತ್ತಿದ್ದಿರಿ, ಅದು 25 ಕೋಟಿ ಅಥವಾ 27 ಕೋಟಿಯಷ್ಟಾಗುತ್ತದೆ. ಸರ್ಕಾರದ ಬೊಕ್ಕಸದಿಂದ ಗ್ರಾಮಾಂತರ ಪ್ರದೇಶಗಳಿಗೆ

25 ಕೋಟಿ ರೂಪಾಯಿಗಳಷ್ಟು ಹಣ ಏನು ಹೋಗುತ್ತಿತ್ತು, ಅದನ್ನು ನೀವು ಅರ್ಧಕ್ಕೆ ಇಳಿಸಿದಂತಾಯಿತು ಮತ್ತು ಸೆಕ್ರೆಟರಿಯವರ ಸಂಬಳವನ್ನೂ ಕೂಡ ತೆಗೆದುಹಾಕಿದರೆ ಇದರಿಂದ ವಯಬಿಲಿಟಿ ಜಾಸ್ತಿಯಾಗುವುದಿಲ್ಲ, ಕಡಿಮೆಯಾಗುತ್ತದೆ. less amount will go to the rural areas. ವಯಬಿಲಿಟಿ ಎಂದರೆ ನಮ್ಮ ಲೆಕ್ಕದ ಪ್ರಕಾರ ನಾವು ಕೊಡುವ ಒಂದು ಲಕ್ಷ ರೂಪಾಯಿ ಜೊತೆಗೆ ಜೆ.ಆರ್.ವೈ. ಹಣವನ್ನು ಸೇರಿಸಿದರೆ ಸರಾಸರಿ ಪರ್ ಕ್ಯಾಪಿಟಿ ಒಂದು ನೂರು ರೂಪಾಯಿ ಅವರಿಗೆ ಸಿಗುತ್ತಿತ್ತು. ಈಗ ಇವರು ಕೊಡುತ್ತಿದ್ದ ಒಂದು ಲಕ್ಷ ರೂಪಾಯಿಗಳನ್ನು ಕೂಡ ಕೊಡುವುದಿಲ್ಲವೆಂದು ಹೇಳಿದಂತಾಯಿತು. ಅಲ್ಲದೆ, ಮೊದಲು ಒಂದು ಸಲ ನಾವು ಒಂದ ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮಾಡುತ್ತೇವೆಂದು, ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಮಾಡುತ್ತೇನೆ. ಎಂದು ಹೇಳಿ ಯಾವುದೂ ಮಾಡಲಿಲ್ಲ. ಈಗ ಕಾನೂನು ಪ್ರಕಾರ ಒಂದು ಲಕ್ಷಕ್ಕಿಂತ ಕಡಿಮೆ ಮಾಡಲು ಬರುವುದಿಲ್ಲವೆಂದು ಅಷ್ಟಾದರೂ ಹಣ ಹೋಗುತ್ತಿದೆ, ಇಲ್ಲದೆ ಹೋದರೆ ಅದೂ ಹೋಗುತ್ತಿರಲಿಲ್ಲ. ಆದುದರಿಂದ, ಇವೊತ್ತು ಆರ್ಡಿನೆನ್ಸ್ ಮುಖಾಂತರ ಏನು ಮಾಡಲು ಹೊರಟಿದ್ದಾರೆ ಮತ್ತು ಎಲೆಕ್ಷನ್‌ಅನ್ನು ಏನು ಪೋಸ್ಟ್‌ಪೋನ್ ಮಾಡಿದ್ದಾರೆ, ಎಲೆಕ್ಷನ್‌ಅನ್ನು ಪೋಸ್ಟ್‌ಪೋನ್ ಮಾಡುವಂಥ ಹಕ್ಕು ಯಾವ ಸರ್ಕಾರಕ್ಕೂ ಇಲ್ಲವೆಂದು ಹೇಳಬಯಸುತ್ತೇನೆ. ಇವತ್ತು

3.50 ಪಿ.ಎಂ.

ಎಲೆಕ್ಷನ್ ಕಮೀಷನ್ ಹಾಗೂ ಸ್ಟೇಟ್ ಎಲೆಕ್ಷನ್ ಕಮೀಷನ್‌ರವರು ನೋಟಿಫಿಕೇಷನ್ ಮಾಡಿ ಚುನಾವಣೆಯನ್ನು ನಡೆಸಬಹುದಾಗಿತ್ತು. ದುರಾದೃಷ್ಟ ಅವರು ಮಾಡಲಿಕ್ಕೆ ಆಗಿಲ್ಲ. ಅದಕ್ಕೆ ಕಾರಣ, ಸರ್ಕಾರದ ಸಿಬ್ಬಂದಿ ಇಲ್ಲದೆ ಅವರು ಎಲೆಕ್ಷನ್ ಮಾಡುವುದು ಹೇಗೆ? ಸರ್ಕಾರದ ಸಿಬ್ಬಂದಿ ಇವರ ಕಡೆ ಇರುವುದು. Election Commission has also been rendered infructuous. It should not be swayed by the political consideration. Election Commission, like the Central Election Commission, should be an independent body and the decision of the Election Commissioner should be final and it should be beased on the natutal realities. ಯಾವುದೇ ಮೇಜರ್ ಪ್ರಕೃತಿ ವಿಕೋಪಗಳು ಆಗಿದ್ದರೆ, ಆಗ 4 ಅಥವಾ 2 ತಿಂಗಳು ಚುನಾವಣೆಯನ್ನು ಮುಂದಕ್ಕೆ ಹಾಕುವ ತೀರ್ಮಾನ ಯಾರು ಮಾಡಬೇಕು, ಎಲೆಕ್ಷನ್ ಕಮೀಷನ್ ಮಾಡಬೇಕು. ಈ ಪ್ರಸಂಗದಲ್ಲಿ ಯಾವುದೇ ಪ್ರಕೃತಿ ವಿಕೋಪ ಇಲ್ಲ. ಎಲೆಕ್ಷನ್ನ ಮಾಡಲಿಕ್ಕೆ ತೊಂದರೆ ಇದೆ ಎಂದು ಹೇಳಲಿಲ್ಲ. ಎಲೆಕ್ಷನ್ ಮಾಡುವುದಕ್ಕೆ ಅವರು ಪತ್ರ ಬರೆದು ಹೇಳಿದ್ದಾರೆ. ಎಲೆಕ್ಷನ್ ಮಾಡುವುದಕ್ಕೆ ನೋಟಿಫಿಕೇಷನ್ ಇಷ್ಯು ಮಾಡುತ್ತೇವೆಂದು ಹೇಳುತ್ತಿದ್ದಾರೆ ಅದನ್ನು ಇಷ್ಯು ಮಾಡಿದರೋ

ಇಲ್ಲವೋ ಗೊತ್ತಿಲ್ಲ, ಅದನ್ನು ಮಂತ್ರಿಗಳು ಹೇಳಬೇಕು. ನನಗೆ ಅನಿಸುತ್ತದೆ, ನೋಟಿಫಿಕೇಷನ್ ಮಾಡಿರಬೇಕು. ನೋಟಿಫಿಕೇಷನ್ ಮಾಡಿದ ಮೇಲೆ ಅವರಿಗೆ ಎಲೆಕ್ಷನ್ ಮಾಡಲಿಕ್ಕೆ ನೀವು ಸಹಕಾರ ಮಾಡದೇ ಹೋದರೆ, You are obstructing the implementation of the Constitution. ಇದರ ಬಗ್ಗೆ ನಾನು ಒಂದು ಸಲ ಹೇಳಿದ್ದೆ. Whether it is breaking Babri Masjid or breaking the Act, it is a violation of the Constitution. ಇದಕ್ಕೆ ರೆಮಿಡಿ ಏನು ಇಲ್ಲ. ರೆಮಿಡಿ ಇರಲಿ ಎಂದು ಹೇಳಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದ್ದು ಅದನ್ನು ಕೂಡ ನೀವು ಧಿಕ್ಕಾರ ಮಾಡುವುದಾದರೆ What is the remedy? Can we apply article 356 every time? Can we dismises Government every time they violate the Constitution? So, the only knowledge that the Government cannot be dissmissed every time under Article 356. should not be used to purposely deliberately voilate the Constitution. I appeal to the conscience and good sense of the Minister. What pains as is that Karnataka has got a very good name all over the country as a progressive state, as a state supporting deventralisation, what was done in the days of the Janata rule had to be amended to suit the 73rd amendment. So, the progressive nature of decentralisation has been inceased, not decreased. But, in one stroke, this government has demonstrated that they have absolutely no faith in decentralising or giving power to the common man. I would say that great injustice has been done to the weaker sections and the women, because 86,000 women, scheduled castes, scheduled tribes and other backward classes have been elected. Apart from thse 86,000 bulk of them are Scheduled Castes, Scheduled Tribes, OBCs and women. Now, if you are going to reduce them to half, then there will mot be 86,000 members, but they will be reduced to 40,000 members. The idea is to maximise participation . Unless those people are given opportunity to participate in at least local self-government, how can you build local self-governmentat all? Therefore, I am surprised, and rather sad that Karnataka, like many some other states in the country, has suddenly decided for temporary political gains, real or imaginary. I don't

know. I think, the gains are imaginary, and not real. They have thrown all cautions to the wind and brought a very bad name to Karnataka and it is now for the Minister to decide as to whether he can associate himself with such, what I call a murder of democracy. As a friend, I am happy if he is a Minister, because he is from my district and he is my friend. But, I have to say in his own interest that he cannot have it both ways - either to think it is wrong, you must dissociate yourself. But, you cannot have it both ways. No, You cannot say I have said this is wrong, but still I will continue with the wrong doors. Thank you.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಸನ್ಮಾನ್ಯ ಛೇರಮನ್‌ರವರೆ, ಗ್ರಾಮಪಂಚಾಯಿತಿ ಚುನಾವಣೆಯನ್ನು ಯಾವ ಕಾರಣಕ್ಕಾಗಿ ಮುಂದೂಡಿದ್ದಾರೆ ಎನ್ನತಕ್ಕಂಥ ವಿಚಾರದ ಮೇಲೆ ಬಹಳ ಜನ ಹಿರಿಯರು ಚರ್ಚೆ ಮಾಡಿದ್ದಾರೆ. ಈಗಾಗಲೇ ಮಂಡಲ ಪಂಚಾಯಿತಿ ಮಾಡಿ ಬಹಳ ರಿಸೋರ್ಸ್ ಮೊಬಲೈಸ್‌ಮಾಡಿ ವಿಕೇಂದ್ರೀಕರಣದ ಕಲ್ಪನೆಯನ್ನು ಬಹಳ ದೊಡ್ಡದಾಗಿ ಬದಲಾವಣೆ ಮಾಡಬೇಕೆನ್ನುವ ಆಶೆ ಇಟ್ಟುಕೊಂಡು ಪಂಚಾಯತಿಯನ್ನೆ ಮಾಡುತ್ತೇವೆಂದು ಹೇಳಿ ಚುನಾವಣೆಯನ್ನು ಮುಂದೂಡಿದ್ದೇವೆಂದು ಹೇಳುತ್ತಿದ್ದಾರೆ. ನನಗೆ ಅನಿಸುತ್ತದೆ, ನಮಗೆಲ್ಲ ಸಭೆ ಕರೆದು ನಮ್ಮೆಲ್ಲರ ಸಲಹೆಯನ್ನು ಕೇಳಿ, ಒಂದು ಬದಲಾವಣೆಯನ್ನು ಮಾಡುತ್ತೇವೆಂದು ಹೇಳಿದ್ದರು. ಈಗ ಏನಾಗಿದೆ ಎಂದರೆ, ನನ್ನ ಹೆಸರು ಪುಟ್ಟಣ್ಣಯ್ಯ ಕುಬೇರ ಎಂದು ಬದಲಾವಣೆ ಮಾಡಿದರೆ ಇದು ಬದಲಾವಣೆಯಾಗುತ್ತದೆಯೇ? ನಮ್ಮ ವಾಟಾಳ್ ನಾಗರಾಜ್‌ರವರ ಹೆಸರನ್ನು ಲಕ್ಷ್ಮೀಪತಿ ಎಂದು ಮಾಡಿದರೆ ಅದು ಹೇಗೆ ಸಾಧ್ಯ? ಇವರ ಅನುಮಾನ ಏನೆಂದರೆ, ಇವರ ಗಲಾಟೆಯಲ್ಲಿ ಚುನಾವಣೆ ಮಾಡಿದರೆ ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಚುನಾವಣೆ ನಡೆಸುವುದು ಬೇಡವೆಂದು ಆ ತೀರ್ಮಾನಕ್ಕೆ ಬಂದು ಈ ರೀತಿ ಮಾಡಿರಬಹುದು. ಆದ್ದರಿಂದ ಈಗಾಗಲೇ ಪಂಚಾಯಿತಿಯಲ್ಲಿ ವಿಶೇಷವಾದ ಬದಲಾವಣೆಯನ್ನು ಮಾಡುವುದಕ್ಕೆ ಆಲೋಚನೆ ಮಾಡಬೇಕಾಗಿತ್ತು. ಈಗಿರತಕ್ಕ ಪಂಚಾಯಿತಿಯ ಮೂಲಭೂತ ಸಮಸ್ಯೆಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಈಗಿರತಕ್ಕಂಥ ಗ್ರಾಮಪಂಚಾಯಿತಿಗಿಂತ ಇನ್ನು ಚಿಕ್ಕದಾಗಿ ಮಾಡಿಬೇಕು ಎನ್ನುವುದ ನನ್ನ ವೈಯಕ್ತಿಕ ಅಭಿಪ್ರಾಯ. ನಿಜವಾಗಿ ಒಂದು ಪಂಚಾಯಿತಿ ಸರ್ಕಾರದ ರೂಪದಲ್ಲಿ ನಡೆಸತಕ್ಕಂಥ ಸಾಮರ್ಥ್ಯ ಇರತಕ್ಕಂಥ ಆರ್ಥಿಕವಾಗಿ ವಿಕೇಂದ್ರಿಕರಣ ಮಾಡಿದರೆ ಪಂಚಾಯಿತಿ ಬದಲಾವಣೆ ಸಾಧ್ಯ. ಆದ್ದರಿಂದ ಸಂವಿಧಾನಾತ್ಮಕವಾಗಿ ಬಹಳ ಜನ ಹಿರಿಯರು ಪ್ರಶ್ನೆ ಮಾಡಿದರು, ಆದರೆ ನಾನು ಪ್ರಶ್ನೆ ಮಾಡುವುದು ಬಹಳ

ಮುಖ್ಯ. ಹಿಂದೆ ಮಹಮ್ಮದ್ ಬಿನ್ ತೊಘಲಕ್ ಇದ್ದನಂತೆ, ಅವನು ದೇವಗಿರಿಯಿಂದ ದೆಹಲಿಗೆ, ದೆಹಲಿಯಿಂದ ದೇವಗಿರಿಗೆ ಹೋಗುತ್ತಿದ್ದನು. ಒಂದು ಸರ್ಕಾರ ಮಂಡಲಪಂಚಾಯಿತಿ ಮಾಡುವುದು, ಮತ್ತೆ ಅದನ್ನು ಒಂದು ಗ್ರಾಮ ಪಂಚಾಯಿತಿಯಾಗಿ ಮಾಡುವುದು, ಮತ್ತೆ ಹಳ್ಳಿಗಳಲ್ಲಿ ಸಾಕಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದಾರೆ. ಎಷ್ಟೊಂದು ಗ್ರಾಮಪಂಚಾಯಿತಿ ಬಿಲ್ಡಿಂಗ್ ಕಟ್ಟಿದ್ದಾರೆ, ಮತ್ತೆ ಮಂಡಲ ಪಂಚಾಯಿತಿ ಮಾಡಿದರೆ ಆ ಬಿಲ್ಡಿಂಗ್‌ಗಳಿಗೆಲ್ಲಾ ಎಲ್ಲ ಹಣವನ್ನು ವ್ಯಯ ಮಾಡಿದಂತಾಗುತ್ತದೆ. ಗ್ರಾಮ ಪಂಚಾಯಿತಿ ಬೆಳೆಯುತ್ತದೆಂದು ಹೇಳಿ, ಗ್ರಾಮ ಪಂಚಾಯಿತಿ ವಿಚಾರದ ಮೇಲೆ ನಾವು ಎಷ್ಟು ಬಿಲ್ಡಿಂಗ್‌ಗಳನ್ನು ಕಟ್ಟಿರುತ್ತೇವೆ. ಆದ್ದರಿಂದ ಬಹಳ ಮುಖ್ಯವಾದ ಪ್ರಶ್ನೆ, ನೀವು ಚುನಾವಣೆಯನ್ನು ಯಾವ ಉದ್ದೇಶಕ್ಕೋಸ್ಕರ ಮುಂದೂಡಿರುತ್ತೀರಿ? ಯಾವ ಉದ್ದೇಶದ ಆಧಾರದ ಮೇಲೆ ಮಂಡಲ ಪಂಚಾಯಿತಿ ಮಾಡುವುದಕ್ಕೆ ಹೊರಟಿರುತ್ತೀರಿ. ಈ ಮಂಡಲ ಪಂಚಾಯಿತಿ ಮಾಡಿದ ಮೇಲೆ ಈ ತಾಲ್ಲೂಕು ಪಂಚಾಯಿತಿ ರದ್ದು ಮಾಡುವಂತೆ ಇಲ್ಲ. It is the constitutional right. ಆದ್ದರಿಂದ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈಗಿರತಕ್ಕ 3-tier systemನಲ್ಲಿ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸುವುದಕ್ಕೆ ಸಾಮರ್ಥ್ಯವೇ ಇಲ್ಲ. ಉದಾಹರಣೆಗೆ ನಮ್ಮ ಪಂಚಾಯಿತಿಯಲ್ಲಿ ಇವತ್ತು ಕಸವನ್ನು ಗುಡಿಸುವವನಿಗೆ 350 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಎಸ್‌ಸಿ : ಎಸ್‌ಟಿಯವರ ಅಭಿವೃದ್ಧಿಗೋಸ್ಕರ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳತಕ್ಕಂಥವರು ನಾವು. ಕನಿಷ್ಠ ಪಕ್ಷ, ಪಂಚಾಯಿತಿಯಲ್ಲಿ ಕಸ ಗುಡಿಸುವವನಿಗೆ ಅವನ ಶ್ರಮಕ್ಕೆ ತಕ್ಕಂತೆ ವೇತನ ಕೊಡುವ ಸಾಮರ್ಥ್ಯ ಆ ಚೇರಮನ್‌ಗೆ ಇಲ್ಲ. ಉದಾಹರಣೆಗೆ ನಮ್ಮ ಪಂಚಾಯಿತಿ ಕಾರ್ಯದರ್ಶಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪತ್ರವನ್ನು ಬರೆದಿರುತ್ತಾರೆ. ಆದ್ದರಿಂದ ಇದು ಯಾವ ತರಹದ ಪಂಚಾಯಿತಿ? ನಿಮ್ಮದೇ ಪಂಚಾಯಿತಿ ದೊಡ್ಡದಾಗಿರುವಾಗ ಈ ಪಂಚಾಯಿತಿ ಚುನಾವಣೆಯನ್ನು ಮುಂದೂಡಿರುತ್ತೀರಿ. ನಿಮ್ಮ ಪಂಚಾಯಿತಿ ಬಗೆಹರಿಸುವುದಕ್ಕೆ ಆಗಿಲ್ಲವೆಂದು ಕಾಣಿಸುತ್ತದೆ. ಆದ್ದರಿಂದ ಬಹಳ ಗಂಭೀರವಾಗಿ ಉತ್ತರವನ್ನು ಕೊಡಬೇಕು. ಏಕೆಂದರೆ, ಪಂಚಾಯಿತಿಯ ಸ್ಟ್ರೆಂಥನ್ನು ಮಾಮೂಲು ಗ್ರಾಮ ಪಂಚಾಯಿತಿಯನ್ನಾಗಿ ಮಾಡಬೇಕು. ಆ ಗ್ರಾಮ ಪಂಚಾಯಿತಿಗೆ ಹೆಚ್ಚು ಆರ್ಥಿಕ ಭದ್ರತೆ ಒದಗಿಸಬೇಕು. ನಾವು ಈಗ ಕೊಡುತ್ತಿರುವುದು ಒಂದು ಕಾಲು ಲಕ್ಷ ರೂಪಾಯಿಗಳು ಈಗ ಅದು ಒಂದು ಲಕ್ಷ ರೂಪಾಯಿಗೆ ಬಂದಿರುತ್ತದೆ. ಜೆ.ಆರ್.ವೈ.ನಿಂದ 75 ಸಾವಿರ ರೂಪಾಯಿಗಳು ಬರುತ್ತದೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಎಲ್ಲಾ ಸೇರಿ 5 ರಿಂದ 6 ಲಕ್ಷ ರೂಪಾಯಿಗಳು ಬರಬಹುದು. 5 ವರ್ಷಕ್ಕೆ 30 ಲಕ್ಷ ರೂಪಾಯಿಗಳು ಆಯವ್ಯಯದಲ್ಲಿ ನಾವು ಇಡೀ ಗ್ರಾಮ ಪಂಚಾಯಿತಿಗೆ ಶೇಕಡಾ 75 ಭಾಗ ಕೊಡುತ್ತೇವೆಂದು ಹೇಳಿರುತ್ತೀರಿ. ಈ

ತರಹದ ಒಂದು ಪಂಚಾಯಿತಿ ಇಟ್ಟುಕೊಂಡು ಸುಮ್ಮನೆ ಕಾಲ ಕಳೆಯುವುದರ ಬದಲು ಜವಾಬ್ದಾರಿಯುತವಾಗಿ ಸರ್ಕಾರ ಚುನಾವಣೆಯನ್ನು ಅತ್ಯಂತ ತ್ವರಿತವಾಗಿ ನಡೆಸಬೇಕು. ಹಿಂದಿನ ಗ್ರಾಮ ಪಂಚಾಯಿತಿಗಳನ್ನು ಇಡಬೇಕೆಂದು ಹೇಳಿ ಅಧ್ಯಕ್ಷರ ಪರವಾಗಿ ಸರ್ಕಾರಕ್ಕೆ ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಛೇರ್ಮನ್‌ರವರೆ, ಇದರ ಬಗ್ಗೆ ಈಗಾಗಲೇ ಸಾಕಷ್ಟು ವಿಷಯಗಳು ಚರ್ಚೆಯಾಗಿದೆ. ಇದರಲ್ಲಿ ಅಡಕವಾಗಿರುವಂತಹ ಸಂವಿಧಾನಾತ್ಮಕ ಅಂಶಗಳ ಬಗ್ಗೆ ಹಲವಾರು ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಅವುಗಳ ಬಗ್ಗೆ ಮತ್ತೆ ನಾನು ಪ್ರಸ್ತಾಪನೆಯನ್ನು ಮಾಡುವುದಿಲ್ಲ. ಅವೆಲ್ಲವೂ ಸಹ ಸರಿಯಾಗಿದೆ. ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಸರ್ಕಾರದವರು ಎರಡು ತಿಂಗಳುಗಳ ಹಿಂದೆ ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳನ್ನು ಮತ್ತು ವಿಕೇಂದ್ರಿಕರಣದ ತಜ್ಞರುಗಳನ್ನು ಕರೆದು ಒಂದು ಸಭೆಯನ್ನು ಮಾಡಿದರು. ಆ ಸಭೆಯಲ್ಲಿ ಅರ್ಧ ದಿವಸಗಳ ಕಾಲ ಚರ್ಚೆ ನಡೆಯಿತು. ಈಗಿರತಕ್ಕಂತಹ ಪಂಚಾಯಿತಿಗಳ ಸ್ವರೂಪವನ್ನೇ ಬದಲಾವಣೆ ಮಾಡಿ ದೊಡ್ಡ ಪಂಚಾಯಿತಿಗಳನ್ನಾಗಿ ಮಾಡತಕ್ಕಂಥದ್ದು. ಏಳು ಸಾವಿರದಿಂದ ಹತ್ತು ಸಾವಿರ ಸಂಖ್ಯೆ ಇರತಕ್ಕಂತಹ ಪಂಚಾಯಿತಿಗಳನ್ನು ಮಾಡತಕ್ಕಂಥದ್ದರ ಬಗ್ಗೆ ಸೂಚನೆಯನ್ನು ಇಟ್ಟು ಅದರ ಮೇಲೆ ಬಹಳ ಧೀರ್ಘವಾದ ಚರ್ಚೆಯಾಯಿತು. ಆ ಚರ್ಚೆಯಲ್ಲಿ ಮೇಧಾವಿಗಳು, ರಾಜಕಾರಣಿಗಳು ಎಲ್ಲಾ ರಾಜಕೀಯ ಪಕ್ಷಗಳು ಸಲಹೆಗಳನ್ನು ಕೊಟ್ಟರು. ಆ ದಿನ ಮುಖ್ಯವಾಗಿ ಬಂದಿರುವಂತಹ ಪ್ರಶ್ನೆಯೇನೆಂದರೆ ಯಾವ ಕಾರಣಕ್ಕೋಸ್ಕರ ನೀವು ಸಣ್ಣದಾಗಿರತಕ್ಕಂತಹ ಗ್ರಾಮಪಂಚಾಯಿತಿಗಳನ್ನು ದೊಡ್ಡದ್ದು ಮಾಡಬೇಕೆಂದು ಹೇಳುತ್ತಿದ್ದೀರಿ. ಅದಕ್ಕೆ ಯಾವ ರೀತಿಯಾದ ನಿಮ್ಮ ಸಮರ್ಥನೆ ಏನು? ಎಂದು ನಾವೆಲ್ಲಾ ಪ್ರಶ್ನೆಗಳನ್ನು ಕೇಳಿದೆವು. ಅದರ ಬಗ್ಗೆ ಸರ್ಕಾರದಿಂದ ಯಾವುದೇ ರೀತಿಯಾದ ಸಮರ್ಥನೆ ದೊರೆಯಲಿಲ್ಲ. ಒಂದು ಜೆನ್ಯುನ್ ಜಸ್ಟಿಫಿಕೇಶನ್ ಹೆಚ್ಚು ಮಾಡಬೇಕೆಂದು ಹೇಳುವುದಕ್ಕೆ ಅವರಿಗೆ ಕೊಡಲಿಕ್ಕೆ ಸಾಧ್ಯವಾದರೆ ಅದನ್ನು ಏಕಾಏಕಿ ಆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಆ ಸಭೆಯು ಯಾವುದೇ ತೀರ್ಮಾನಕ್ಕೆ ಬರಲಿಲ್ಲ. ಎಲ್ಲಾ ರಾಜಕೀಯ ಪಕ್ಷಗಳನ್ನು ಮತ್ತು ತಜ್ಞರುಗಳನ್ನು ಕರೆದಂತಹ ಸಭೆಯಲ್ಲಿ ಆದಂತಹ ಚರ್ಚೆಗೆ ಇವರು ಅಗೌರವ ಮಾಡಿದ್ದಾರೆ ಎನ್ನುವುದ ನನ್ನ ಅಭಿಪ್ರಾಯವಾಗಿದೆ. ಏಕೆಂದರೆ ಇದರ ಬಗ್ಗೆ ಹಲವಾರು ಅಭಿಪ್ರಾಯಗಳು ಬಂದವು. ಇದರ ಪರವಾಗಿ ಹೆಚ್ಚಿನ ಅಭಿಪ್ರಾಯಗಳು ಬರಲಿಲ್ಲ. ಇದಾದ ನಂತರ ಸರ್ಕಾರದ ವತಿಯಿಂದ ವಕ್ತಾರರು ಹೇಳಿಕೆ ಕೊಟ್ಟಂತದ್ದು ಆ ಪ್ರೋಪೋಸಲ್ ನ್ನು ನಾವು ಡ್ರಾಪ್ ಮಾಡುತ್ತಿದ್ದೇವೆ. ಇಷ್ಟೆಲ್ಲಾ ಆದ ಮೇಲೆ ಏಕಾಏಕಿಯಾಗಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈಗ ಚುನಾವಣೆಯನ್ನು ಮುಂದೂಡಿದ್ದೇವೆ. ಇದಕ್ಕೆ ಕಾರಣವೇನೆಂದರೆ ಸಣ್ಣ ಪಂಚಾಯಿತಿಗಳನ್ನು ದೊಡ್ಡದು ಮಾಡಬೇಕೆಂದು ಹೇಳುತ್ತಿದ್ದಾರೆ. ನಿಜವಾಗಿಯೂ ಕೂಡ ಸಣ್ಣ ಪಂಚಾಯಿತಿಯಗಳನ್ನು ದೊಡ್ಡ ಪಂಚಾಯಿತಿಗಳನ್ನಾಗಿ ಹಿಂದಿನ ಮಂಡಲಪಂಚಾಯಿತಿಗಳನ್ನಾಗಿ ಮಾಡುವುದರಿಂದಲೇ ಯಾವುದಾದರೂ ಪ್ರಯೋಜನ

ಇದೆ ಎನ್ನುವಂಥದ್ದನ್ನು ಸಮರ್ಥವಾಗಿ ಜನತೆಗೆ ಒಪ್ಪಿಸುವುದಾದರೆ ಅದರ ಬಗ್ಗೆ ನಾವು ಚಿಂತನೆಯನ್ನು ಮತ್ತು ಆಲೋಚನೆಯನ್ನು ಮಾಡಬಹುದು. ಇದಕ್ಕೆ ಯಾವುದೇ ರೀತಿಯಾದಂತಹ ಕಾನೂನು ಬದ್ಧವಾದಂತಹ ತರ್ಕವೂ ಇಲ್ಲ, ನ್ಯಾಯಬದ್ಧವಾದಂತಹ ಜಸ್ಟಿಫಿಕೇಷನ್ ಇಲ್ಲ. ಏಕೆ ಚುನಾವಣೆಯನ್ನು ಮುಂದೂಡಿದರು? ಏತಕ್ಕಾಗಿ ಇದನ್ನು ದೊಡ್ಡ ಪಂಚಾಯಿತಿಗಳನ್ನಾಗಿ ಮಾಡಬೇಕು? ಅವರು ಹೇಳುವಂಥಾದ್ದೇನೆಂದರೆ ಸಣ್ಣ ಪಂಚಾಯಿತಿಗಳು ಇದ್ದರೆ ರಿಸೋರ್ಸ್ ಮೊಬಲೈಜೇಷನ್ನಿನ ಪ್ರಶ್ನೆ. ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಹ ಪ್ರಶ್ನೆಯನ್ನು ನೀವು ಹೇಳಿದಾಗ ನೀವು ದೊಡ್ಡ ಪಂಚಾಯಿತಿಗಳನ್ನು ಮಾಡಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಯಾವುದಾದರೊಂದು ವಿಶಿಷ್ಟವಾದಂತಹ ಕಾರ್ಯಕ್ರಮಗಳನ್ನು, ಯೋಜನೆಯನ್ನು ಹಾಕಿಕೊಂಡಿದ್ದೀರಾ? ಅದರಲ್ಲಿ ಏನಾದರೂ ಹಾಕುವುದಕ್ಕೆ ಸಾಧ್ಯತೆ ಇದೆಯಾ? ವಿಕೇಂದ್ರಿಕರಣವನ್ನು ಇವತ್ತು ನಾವು ಒಂದು ರೀತಿಯಾದ ನಗೆಪಾಟಲಿಗೆ ಈಡು ಮಾಡಿದ್ದೇವೆ. ಅದೊಂದು ವಿಪರ್ಯಾಸಕ್ಕೆ ಹೋಗಿಬಿಟ್ಟಿದೆ. ವಿಕೇಂದ್ರೀಕರಣ ಎಂದು ಹೇಳತಕ್ಕಂತಹ ಪ್ರಶ್ನೆಯಲ್ಲಿ ಇವತ್ತು ನಾವು ಜನರ ಕೈಗೆ ಅಧಿಕಾರವನ್ನು ಕೊಡತಕ್ಕಂಥದ್ದು ಎಂದು ಹೇಳುವಂತಹ ಪ್ರಶ್ನೆ. ಆ ಜನರ ಕೈಗೆ ಅಧಿಕಾರ ಕೊಡುವಂತಹ ಪ್ರಶ್ನೆಯನ್ನು ನಾವು ಪರಿಣಾಮಕಾರಿಯನ್ನಾಗಿ ಉಪಯೋಗಿಸಬೇಕಾದರೆ ಇಡೀ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಸಂವಿಧಾನಾತ್ಮಕವಾದಂತಹ ಸ್ವತಂತ್ರವಾಗಿ ಕೆಲಸ ಮಾಡತಕ್ಕಂತಹ ಒಂದು ಸಂಸ್ಥೆಯನ್ನಾಗಿ ಮಾರ್ಪಾಟು ಮಾಡಬೇಕಾಗುತ್ತದೆ. ಸರ್ಕಾರದ ನೇರ ಕೈವಾಡದಿಂದ ಅಥವಾ ನೇರ ಮಧ್ಯ ಪ್ರವೇಶದಿಂದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ನಡೆಸುವುದರಲ್ಲಿ ಯಾವುದೇ ಅರ್ಥವಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮರ್ಪಕವಾಗಿ ನಡೆಸಬೇಕಾದರೆ ಅದನ್ನೇ ನಾವು ಸ್ವಾಯತ್ತ ಸಂಸ್ಥೆಯನ್ನಾಗಿ ರೂಪಿಸಬೇಕಾಗುತ್ತದೆ. ಪಂಚಾಯತ್ ರಾಜ್ ಪದ್ಧತಿಯನ್ನು ಉಳಿಸಬೇಕಾಗುತ್ತದೆ. ಸರ್ಕಾರ ಅದರಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ, ಕೈವಾಡವನ್ನು ಮಾಡದಂತಹ ವ್ಯವಸ್ಥೆಯನ್ನು ನಾವು ರೂಪಿಸಬೇಕಾಗಿದೆ. ಎರಡನೆಯದಾಗಿ ಇವತ್ತು ವಿಕೇಂದ್ರಿಕರಣವನ್ನು ಎಷ್ಟು ನಗೆಪಾಟಲಿಗೆ ಈಡು ಮಾಡಲಾಗಿದೆ ಎಂದರೆ ಇಡೀ ವಿಕೇಂದ್ರಿಕರಣದಲ್ಲಿ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳಲ್ಲಿ ಸುಮಾರು 20 ರಿಂದ 25 ಇಲಾಖೆಗಳು ಅವರ ಕೈಕೆಳಗೆ ಕೆಲಸ ಮಾಡುತ್ತವೆ. ಈ ರೀತಿ ವಿಕೇಂದ್ರಿಕರಣದ ಕಾನೂನನ್ನು ರಚಿಸಿ 51 ಸದಸ್ಯರನ್ನು ಮಂತ್ರಿಗಳನ್ನಾಗಿ ಮಾಡುತ್ತಾರೆ. ಇದರಲ್ಲಿ ಏನಾದರೂ ಅರ್ಥವಿದೆಯೇ? ನಾವು ವಿಕೇಂದ್ರಿಕರಣವನ್ನು ಎಷ್ಟರಮಟ್ಟಿಗೆ ವಿಕೃತಗೊಳಿಸುತ್ತಿದ್ದೇವೆ. ಈ ರೀತಿ ಇರುವಾಗ 51 ಮಂತ್ರಿಗಳಿಗೆ ಇಲ್ಲಿ ಏನು ಕೆಲಸ? ಅದಕ್ಕೆ ಏನಾದರೂ ಜಸ್ಟಿಫಿಕೇಷನ್ ಇದೆಯೇ? ತಾತ್ವಿಕವಾದ ಜಸ್ಟಿಫಿಕೇಷನ್ ಬೇಕಲ್ಲವೇ? ಹಾಗಾದರೆ ನೀವು ಇಲ್ಲಿ 51 ಜನ ಮಂತ್ರಿಗಳನ್ನು ನೇಮಿಸಿ, 25 ಇಲಾಖೆಗಳನ್ನು ಜಡ್. ಪಿ. ಅಡಿಯಲ್ಲಿ ಕೊಟ್ಟು, ನೀವು ಯಾರ ಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕೆ ಹೋಗುತ್ತೀರಿ? ಇದು ಬಹಳ ಮೂಲಭೂತವಾದ ಪ್ರಶ್ನೆ. ಇನ್ನೊಂದು ಬಹಳ ಪ್ರಮುಖವಾದಂತಹ ಪ್ರಶ್ನೆ ಎಂದರೆ, ವಿಕೇಂದ್ರಿಕರಣದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅಲ್ಲಿನ ಕೆಲಸಗಾರರು ಇವರೆಲ್ಲಾ ಒಟ್ಟುಗೂಡಿ ಕೆಲಸ ಮಾಡಬೇಕು. ಆಗಲೇ ಮಾನ್ಯ ಪುಟ್ಟಣ್ಣಯ್ಯನವರು ಕಸ ಗುಡಿಸುವವನಿಗೆ

250-350 ರೂಪಾಯಿಗಳನ್ನು ಕೊಡುತ್ತಾರೆಂದು ಹೇಳಿದರು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹೇಗೆ ನೀವು ಬಲಿಷ್ಠಗೊಳಿಸುತ್ತೀರಿ? ಇದನ್ನು ಹೇಗೆ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುತ್ತೀರಿ? ಬಹಳ ಮುಖ್ಯವಾಗಿ ಆರ್ಥಿಕ ಶಕ್ತಿ ಬೇಕು. ಅದು ಇಲ್ಲದೆ ಹಳ್ಳಿಗಾಡಿನ ಅಭಿವೃದ್ಧಿ ಸಾಧ್ಯವಿಲ್ಲ. ಆ ದೃಷ್ಟಿಯಲ್ಲಿ ಸರ್ಕಾರ ಇದರ ಬಗ್ಗೆ ಹೇಳಬೇಕು. ಇವರೇ ಈ ಹಿಂದೆ 1 ಲಕ್ಷದಿಂದ 1 ಲಕ್ಷದ 25 ಸಾವಿರ ರೂಪಾಯಿ ಮಾಡಿದರು. ಮತ್ತೆ ಅದನ್ನು 1 ಲಕ್ಷ ರೂಪಾಯಿಗಳಿಗೆ ಇಳಿಸಿದರು. ಸ್ವತಂತ್ರವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಈ ಪಂಚಾಯಿತಿಗಳು ವಿಫಲವಾಗಿವೆ. ಬೆರಳೆಣಿಕೆಯನ್ನು ಪಂಚಾಯಿತಿಗಳನ್ನು ಹೊರತುಪಡಿಸಿ, ಸಂಪನ್ಮೂಲಗಳನ್ನು ಸ್ವತಃ ಕ್ರೋಢೀಕರಿಸಿಕೊಳ್ಳುವ ಕೆಲಸವನ್ನು ಮತ್ತು ಜವಾಬ್ದಾರಿಯನ್ನು ಪಂಚಾಯಿತಿಗಳು ಇಂದು ನಿರ್ವಹಿಸುತ್ತಿಲ್ಲ; 25 ವರ್ಷಗಳ ಹಿಂದೆ ಮನೆಗಳಿಗೆ ಹಾಕಿದ ಕಂದಾಯದಲ್ಲಿ ಇಂದು ಕೂಡ ಅಷ್ಟೇ ದರವನ್ನು ಉಳಿಸಿಕೊಂಡಿದ್ದಾರೆ. ಅದನ್ನು ಪರಿಷ್ಕರಿಸಿಲ್ಲ ವಸೂಲಿ ಮಾಡಲೂ ಹೋಗಿಲ್ಲ. ಏಕೆಂದರೆ ಪಂಚಾಯಿತಿಗಳಲ್ಲಿ ರಾಜಕಾರಣ ಇರುತ್ತದೆ. ನಾನು ಅಧ್ಯಕ್ಷನಾಗಿದ್ದು ನನ್ನ ಅವಧಿಯಲ್ಲಿ ಮನೆ ಕಂದಾಯವನ್ನು ಜಾಸ್ತಿ ಮಾಡಿದರೆ ನಾನು ಮುಂದಿನ ಚುನಾವಣೆಯಲ್ಲಿ ನನಗೆ ಓಟು ಹಾಕುವುದಿಲ್ಲ ಎಂಬ ಭಾವನೆ ಇರುತ್ತದೆ.

ಶ್ರೀ ಕೆ.ಎಸ್. ಪುಟ್ಟಣಯ್ಯ :— ನನ್ನ ಸ್ನೇಹಿತರು ಹೇಳಿದಹಾಗೆ, ನಗರ ಪ್ರದೇಶದಲ್ಲಿ ಡ್ರೈನೇಜ್ ಮತ್ತು ರಸ್ತೆ, ಲೈಟಿನ ಸೌಲಭ್ಯವನ್ನು ಒದಗಿಸಿದ ನಂತರ ಮನೆಗೆ ಇಷ್ಟು ಕಂದಾಯವನ್ನು ಕೊಡಬೇಕೆಂದು ಹೇಳುತ್ತೇವೆ. ಎಲ್ಲಾ ಡ್ರೈನೇಜ್‌ಗಳು ಬ್ಲಾಕ್ ಆಗುತ್ತವೆ, ಕುಡಿಯುವುದಕ್ಕೆ ನೀರಿಲ್ಲ; ವಿದ್ಯುಚ್ಛಕ್ತಿ ವ್ಯವಸ್ಥೆ ಇಲ್ಲದಿರುವಾಗ ತೆರಿಗೆ ಕೊಡು ಎಂದರೆ ಹೇಗೆ ಸಾಧ್ಯ? ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸಿ, ತೆರಿಗೆಯನ್ನು ನೀಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಪುಟ್ಟಣ್ಣಯ್ಯನವರು ಹೇಳಿರುವ ಒಂದು ಅಂಶ ಸತ್ಯವಾಗಿದೆ. ನೀವು ಮೂಲಭೂತ ಸೌಕರ್ಯಗಳನ್ನು ಕೊಡದೆ ಅವರಿಂದ ಕಂದಾಯವನ್ನು ವಸೂಲಿ ಮಾಡಿ ಎಂದು ಹೇಳುವುದು ಸರಿಯಲ್ಲ; ಅವರು ತೆರಿಗೆಯನ್ನು ಕೊಡುವುದಿಲ್ಲ ನಿಜ. ಮೂಲಭೂತ ಸೌಕರ್ಯಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಬೇಕಾದರೆ ಆರ್ಥಿಕವಾಗಿ ಪಂಚಾಯಿತಿಗಳು ಬಹಳ ಶಕ್ತಿಯುತವಾಗಿ ಬೆಳೆಯಬೇಕಾಗುತ್ತದೆ. ಒಂದು ಚರಂಡಿ ಕೆಲಸವನ್ನು ಮಾಡಿಸುವುದಕ್ಕೆ ಪಂಚಾಯಿತಿಯಲ್ಲಿ ಹಣವಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಡ್ರೈನೇಜ್ ಬ್ಲಾಕ್ ಆಗುತ್ತದೆ ಎಂದು ಹೇಳಿದರು ಅದು ನಿಜ. ಅಲ್ಲಿ ಕಸ ಗುಡಿಸುವವರು ಇಲ್ಲದೆ ಅದು ಬ್ಲಾಕ್ ಆಗುತ್ತದೆ. ಕಸ ಗುಡಿಸುವವರಿಗೆ ನೀವು 150-200 ರೂಪಾಯಿಗಳ ಕೂಲಿಯನ್ನ ಕೊಟ್ಟರೆ, ಅವನು ಚರಂಡಿಯನ್ನು ಕ್ಲೀನ್ ಮಾಡಿಕೊಂಡು ಜೀವನ ಮಾಡುವುದಕ್ಕಾಗುವುದಿಲ್ಲ. ಇವೆಲ್ಲಾ ಪ್ರಶ್ನೆಗಳು ಇದೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಅವರು ಮನೆಯ ಮುಂದೆ ಇರುವ ಚರಂಡಿಯನ್ನು ಸರಿಯಾಗಿ ಇಟ್ಟುಕೊಳ್ಳುವುದಿಲ್ಲ ಎಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಹೌದು, ಆ ರೀತಿಯಾದಂತಹ ಒಂದು ಸಿವಿಕ್ ಸೆನ್ಸನ್ನು ನಾವು ಈ ದೇಶದಲ್ಲಿ ಇದುವರೆಗೂ ಬೆಳಸಲಿಲ್ಲ. ಮಾನ್ಯ ಸಚಿವರಾದ ಶ್ರೀ ಸಿ. ಬೈರೇಗೌಡರು ಹೇಳಿರುವ ಮಾತು ಸತ್ಯವಾಗಿದೆ. ದಿನಬೆಳಗಾದರೆ ಜನರು ನಮ್ಮ ಮನೆಗೆ ಬಂದು ನಮ್ಮ ಚರಂಡಿಯಲ್ಲಿ ನೀರು ಬ್ಲಾಕ್ ಆಗಿದೆಯೆಂಬ ದೂರನ್ನು ಕೊಡಲು ಬರುತ್ತಾರೆ. ನಮ್ಮ ಎಂ.ಎಲ್.ಎ.ಗಳ ಪರಿಸ್ಥಿತಿ ಅಲ್ಲಿಗೆ ಬಂದಿದೆ. ಏಕೆ ಹೀಗೆ ಆಗಿದೆ ಎಂದರೆ ಇದು ನಮ್ಮ ವ್ಯವಸ್ಥೆ ಏನಾಗಿದೆ ಎಂದರೆ ಕಸವನ್ನು ಬೀದಿಯಲ್ಲಿ ಗುಡಿಸದಿದ್ದರೂ ಎಂಎಲ್‌ಏಗೆ ಕಂಪ್ಲೇಂಟ್‌ನ್ನು ಹೇಳುವಂತಹ ಸ್ಥಿತಿಯನ್ನು ಈ ಓಟಿನ ರಾಜಕಾರಣಕ್ಕಾಗಿ ನಾವು ನಿರ್ಮಾಣ ಮಾಡಿದ್ದೇವೆ. ಆದರೆ ಇಲ್ಲಿ ಮುಖ್ಯವಾಗಿರತಕ್ಕಂತಹ ಪ್ರಶ್ನೆ ಇವತ್ತು ಸಣ್ಣದಾಗಿರತಕ್ಕಂತಹ ಗ್ರಾಮಪಂಚಾಯಿತಿಗಳನ್ನು ಮಂಡಲಪಂಚಾಯಿತಿಗಳನ್ನಾಗಿ ಮಾಡುವುದಕ್ಕೆ ಯಾವುದಾದರೂ ಒಂದು ಜಸ್ಟಿಫಿಕೇಷನ್ ಇದೆಯಾ? ಅದಕ್ಕೆ ಸಮರ್ಥವಾದ ಜಸ್ಟಿಫಿಕೇಷನ್ ಬೇಕು, ಅದನ್ನು ಅವರು ಕೊಟ್ಟೇ ಇಲ್ಲ. ಎರಡನೆಯದಾಗಿ ವಿಕೇಂದ್ರೀಕರಣದಿಂದ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ಅಥವಾ ಹೆಚ್ಚು ಸಮರ್ಥವಾಗಿ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆಯೇ? ಹೆಚ್ಚು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಮತ್ತು ಮಂಡಲಪಂಚಾಯಿತಿಗಳನ್ನು ಹೆಚ್ಚು ಆರ್ಥಿಕವಾಗಿ ಶಕ್ತಿಯುತವಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ? ಎಂಬ ಪ್ರಶ್ನೆಗೆ ಯಾವುದೇ ಆಧಾರವಿಲ್ಲ. ಈ ಒಂದು ಗ್ರಾಮ ಪಂಚಾಯಿತಿ ಏನಿದೆ, ಅದಕ್ಕೆ ಎರಡು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಒಂದು ಮಂಡಲ ಪಂಚಾಯಿತಿಯನ್ನಾಗಿ ಮಾಡಿದರೆ ಒಂದು ಮಂಡಲಪಂಚಾಯಿತಿಗೆ 1 ಲಕ್ಷ ಕೊಡುತ್ತಿರುವ ಹಣ 2 ಲಕ್ಷವಾಗುತ್ತದೆ. ಎರಡು ಗ್ರಾಮಪಂಚಾಯಿತಿಗಳು ಸೇರಿ 2 ಲಕ್ಷ ರೂಪಾಯಿಗಳಾಗುತ್ತದೆ. ಆದಕ್ಕಿಂತ ಹೆಚ್ಚಿನ ಹಣ ಕೊಡುತ್ತಿಲ್ಲ. ಸ್ವಯಂ ಅಧಿಕಾರವನ್ನು ನಿರ್ಧಾರ ಮಾಡತಕ್ಕ ಅಧಿಕಾರಿಗಳನ್ನು ಆರ್ಥಿಕವಾಗಿ ಸ್ವಶಕ್ತಿ ಇಲ್ಲದಿರತಕ್ಕ ಪರಿಸ್ಥಿತಿಯಲ್ಲಿ ಇದಕ್ಕೆ ಯಾವುದೇ ಅರ್ಥವಿರುವುದಿಲ್ಲ. ಹಾಗಾಗಿ ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಪ್ರಾಕೃತಿಕ ಸಂಪತ್ತು ಏನಿದೆ ಅದನ್ನು ಪಂಚಾಯಿತಿಗಳ ಹಿಡಿತಕ್ಕೆ ಕೊಡತಕ್ಕ ವ್ಯವಸ್ಥೆ ಇವತ್ತು ನಮ್ಮಲ್ಲಿ ಬರಲಿಲ್ಲ. ಹಾಗಾಗಿ ಸಂಪನ್ಮೂಲ ಕ್ರೋಢೀಕರಣದಲ್ಲಿ ಎರಡು ರೀತಿಯಾದ ವಿಫಲತೆ ಇದೆ. ಪಂಚಾಯಿತಿ ಕಡೆಯಿಂದ ವಿಫಲತೆಯಿದೆ. ಸರ್ಕಾರದ ಕಡೆಯಿಂದ ವಿಫಲತೆ ಇದೆ. ಅದನ್ನು ಬಿಟ್ಟು ಯಾವ ಉದ್ದೇಶಕ್ಕೆಂದು ಹೇಳುವುದರಲ್ಲಿ ಕಾರಣವಿಲ್ಲ ಮುಂದೂಡಿರುವುದರಲ್ಲಿ ಸಂವಿಧಾನಾತ್ಮಕವಾಗಿ ಆಬ್ಲಿಗೇಷನ್ ಇದೆ. ಅದು ಹೇಗೆ ಸುಗ್ರೀವಾಜ್ಞೆ ತರುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಚುನಾವಣೆ ಮುಂದೂಡಿರುವುದಕ್ಕೆ ನಿಜವಾದ ಕಾರಣ ಏನೆಂದರೆ, ಅವರ ಆಂತರಿಕ ಕಿತ್ತಾಟ ಬೇರೇನೂ ಇದರಲ್ಲಿ ಇಲ್ಲ. ಈ ಸಂದರ್ಭದಲ್ಲಿ ಚುನಾವಣೆಗೆ ಹೋದರೆ ಕಷ್ಟವಾಗುತ್ತದೆ. ನಾವು ಗೆಲ್ಲುವುದಕ್ಕಾಗುವುದಿಲ್ಲ ಕಷ್ಟವಾಗುತ್ತದೆಂಬುದು ಚೆನ್ನಾಗಿ ಗೊತ್ತಿದೆ. ಹಾಗಾಗಿ

ಗ್ರಾಮಪಂಚಾಯಿತಿಗಳ ಚುನಾವಣೆ ಮುಂದೂಡಬೇಕು. ಅದನ್ನು ಮುಂದೂಡಬೇಕಾದರೆ ಏನಾದರೂ ಒಂದು ಕಾರಣ ಬೇಕು, ಏನು ಕಾರಣ ಬೇಕು ಸಣ್ಣ ಪಂಚಾಯಿತಿಗಳನ್ನು ದೊಡ್ಡದು ಮಾಡುತ್ತೇವೆಂದು ಹೇಳುವುದಕ್ಕೆ ಒಂದು ನೆಪ ಬೇಕಾಗಿತ್ತು. ಅಷ್ಟಕ್ಕೆ ಮಾತ್ರ ಮುಂದೂಡಿದ್ದಾರೆ ಹೊರತು ಇದರ ಹಿಂದೆ ತಾತ್ವಿಕವಾದ ಸಮರ್ಥನೆ ಜಸ್ಟಿಫಿಕೇಷನ್ ಇಲ್ಲ. ಇದನ್ನು ವಾಪಸ್ಸು ಪಡೆಯಬೇಕೆನ್ನುವುದು ನನ್ನ ಅಭಿಪ್ರಾಯ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಮುಂದೂಡಲಾಗಿದೆಯೆಂದು ಹೇಳಿದಾಗ ಆ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರು, ಅವರ ನಿರ್ಧಾರವನ್ನು ಓದಿ ನನಗೆ ಬಹಳ ಸಂತೋಷವಾಯಿತು. ಬಹಳ ಕಟುವಾಗಿ ಸಚಿವಸಂಪುಟ ಸಭೆಯಲ್ಲಿ ಮಾತನಾಡಿ, ಯಾವ ಕಾರಣಕ್ಕೂ ಗ್ರಾಮಪಂಚಾಯಿತಿ ಚುನಾವಣೆಯನ್ನು ಮುಂದೂಡುವುದಕ್ಕೆ ಆಗುವುದಿಲ್ಲ. ಮುಂದೂಡುವುದಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿ ಸಚಿವಸಂಪುಟ ಸಭೆಯಿಂದ ಹೊರಗೆ ಬಂದರು. ಅವರು ಬಂದಾಗ ಅವರೇ ಹೇಳಿರತಕ್ಕ ಪದಗಳನ್ನು ನಾನು ಇಲ್ಲಿ ತಮ್ಮ ಮುಂದೆ ಉಲ್ಲೇಖ ಮಾಡುತ್ತೇನೆ. ಅವರು ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ಇಂತಹ ಪರಿಸ್ಥಿತಿ ಬರಬಾರದು. ಇದರಿಂದ ಪ್ರಜಾತಂತ್ರ ವ್ಯವಸ್ಥೆಗೆ ಇದು ಅಪಾಯಕಾರಿ ಬೆಳವಣಿಗೆಯೆಂದು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿ ಅವರು ಹೇಳಿರತಕ್ಕದ್ದು ಈ ರೀತಿ ಇದೆ. ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡುವ ತೀರ್ಮಾನಕ್ಕೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿ ಗ್ರಾಮಪಂಚಾಯಿತಿ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರಿಗೆ ಒಂದು ಪತ್ರ ಬರೆದು ಫೆಬ್ರುವರಿ ಕೊನೆಯ ವಾರದಲ್ಲಿ ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಹಂತದಲ್ಲಿ ಚುನಾವಣೆಯನ್ನು ಮುಂದೂಡುವ ತೀರ್ಮಾನ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಆದ್ದರಿಂದ ನಾನು ಮಂತ್ರಿಯಾಗಿ ಮುಂದುವರಿಯಲು ಕಷ್ಟವಾಗುತ್ತದೆಂದು ಪತ್ರದಲ್ಲಿ ತಿಳಿಸಿದ್ದಾರೆ. ರಾಜೀನಾಮೆ ಕೊಡಲಾರದ ಮಟ್ಟಕ್ಕೆ ಹೋಗಬಾರದು ಎಂದು ಅವರನ್ನು ಸಮಾಧಾನಪಡಿಸುವುದಕ್ಕೆ ಹೋಗುತ್ತಾರೆ. ಅವರ ಪಕ್ಷದ ಮುಖಂಡರು ಆ ಕೆಲಸ ಮಾಡುತ್ತಾರೆ. ತಾತ್ವಿಕವಾಗಿ ಪ್ರಾಮಾಣಿಕವಾಗಿ ಅವರ ಮನಸ್ಸಿನಲ್ಲಿ ಚುನಾವಣೆ ಮುಂದೂಡಿರುವುದು ಬಹಳ ಅತ್ಯಂತ ನೋವಿನ ಪ್ರಸಂಗ ಅವರಿಗೆ ಅರ್ಥವಾಗಿದೆ. ಒಂದು ಹಂತದಲ್ಲಿ ಖಾಸಗಿ ಕಾರಿನಲ್ಲಿ ಪ್ರವಾಸ ಮಾಡುವುದಕ್ಕೆ ಹೊರಟರು. ಪ್ರವಾಸ ಮಾಡಿದರು ಸರ್ಕಾರಿ ಕಾರು ಬಿಟ್ಟರು. ಪತ್ರಿಕಾಕರ್ತರು ಅವರನ್ನು ಭೇಟಿ ಮಾಡಿದಾಗ, ನಾನು ರಾಜೀನಾಮೆಯನ್ನು ಕೊಟ್ಟಿದ್ದು ನಿಜ. ಆದರೆ ಕೊಟ್ಟಿದ್ದ ರಾಜೀನಾಮೆಯನ್ನು ಏಕೆ ಹಿಂದಕ್ಕೆ ಪಡೆದೆ ಎಂದು ಹೇಳಿ ಮಾತನಾಡುತ್ತಾರೆ. ಅಂದರೆ ಇದರ ಅರ್ಥವೇನು? ಒಟ್ಟಾರೆ ಅಭಿಪ್ರಾಯ ಈ ಚುನಾವಣೆಯನ್ನು ಮುಂದೂಡುವುದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಇಷ್ಟವಿಲ್ಲ. ಇದು ಸ್ಪಷ್ಟವಾಯಿತು. ಈಗ ಅವರು ತಮ್ಮ ಅಭಿಪ್ರಾಯದ ವಿರುದ್ಧ ನಿರ್ಧಾರ ತೆಗೆದುಕೊಂಡು ಚುನಾವಣೆ ಮುಂದೂಡುವುದಕ್ಕೆ ಸುಗ್ರೀವಾಜ್ಞೆಯನ್ನು ತರತಕ್ಕ ಹಿಂದಿನ ಬಾಗಿಲ ರಾಜಕೀಯಕ್ಕೆ

ಹೊರಟಿರುವುದನ್ನು ನೋಡಿದರೆ, ಅವರ ಆದರ್ಶಕ್ಕೆ ಮತ್ತು ಅವರ ಚಿಂತನೆಗೆ ಅಪಾಯ ಒದಗಿದೆ ಇದು ನನಗೆ ನಾಚಿಕೆ ಎನಿಸುತ್ತದೆ. ಒಬ್ಬ ಮುತ್ಸದ್ಧಿ ರಾಜಕಾರಣಿ ಅತ್ಯಂತ ಮೇಧಾವಿ ರಾಜಕಾರಣಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಪಾರ ಅನುಭವವನ್ನು ಪಡೆದಿರತಕ್ಕ ಪ್ರಕಾಶ್ ಅವರ ಬಗ್ಗೆ ನನಗೆ ಗೌರವಿದೆ. ಸದನದಲ್ಲಿ ಇಂತಹ ಅನೇಕ ವಿಚಾರಗಳು ಬಂದಾಗ ಸತ್ಯಕ್ಕೋಸ್ಕರ ಹೋರಾಟ ಮಾಡಿ ರಾಜೀನಾಮೆಯನ್ನು ಕೊಟ್ಟಿರತಕ್ಕ ನಿದರ್ಶನಗಳಿವೆ. ಶ್ರೀಮಾನ್ ಎಂ.ವೈ. ಘೋರ್ಪಡೆಯವರು ಇವತ್ತು ಅವರನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರದಲ್ಲಿ ಪಂಚಾಯಿತಿ ಚುನಾವಣೆಯನ್ನು ಮುಂದೂಡಿದಾಗ ರಾಜೀನಾಮೆಯನ್ನು ಕೊಟ್ಟರು. ಅವರ ಮೇಲೆ ಎಷ್ಟೇ ಒತ್ತಾಯ ಮಾಡಿದರೂ ಶಾಸಕರು, ಪಕ್ಷದವರು ಒತ್ತಾಯ ಮಾಡಿದರೂ ನಾನು ಒಂದು ಕ್ಷಣ ಇರುವುದಿಲ್ಲವೆಂದು ಹೇಳಿ ಸಚಿವಸಂಪುಟ ಸಭೆಯಿಂದ ಹೊರಗೆ ಬಂದವರು ಮತ್ತೆ ಬರಲಿಲ್ಲ. ನಾನು ಕಣ್ಣಾರೆ ನೋಡಿದೆ. ಅವೊಂದು ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ನನಗನಿಸಿತು ಮತ್ತೊಬ್ಬರು ಆದರ್ಶ ನಿರ್ಧಾರಗಳಿಗೆ ಪ್ರಕಾಶ್ ರವರು ಕೈಹಾಕಿದ್ದಾರೆಂದು ಅದು ನಮಗೆಲ್ಲ ಚೆನ್ನಾಗಿತ್ತು. ರಾಜ್ಯದ ಜನತೆ ಕೂಡ ಒಪ್ಪುತ್ತಿದ್ದರು, ಸಂತೋಷಪಡುತ್ತಿದ್ದರು. ನನಗೆ ಅವರು ಮಂತ್ರಿಮಂಡಲದಿಂದ ಹೋಗಬೇಕೆನ್ನತಕ್ಕ ಯಾವುದೇ ಭಾವನೆಯಿಲ್ಲ, ಅದು ನನಗೆ ಪ್ರಾಮಾಣಿಕವಾಗಿ ಇಲ್ಲ. ನಿಮ್ಮಂತಹ ತಿಳುವಳಿಕೆ, ಸಂಭಾವಿತರಾಗಿರತಕ್ಕವರು ಕ್ಯಾಬಿನೆಟ್ ನಲ್ಲಿರಬೇಕು. ಆದರೆ ಇಂತಹ ಸಂದರ್ಭದಲ್ಲಿ ತಾವು ಹೊರಗಡೆ ಹೋಗಿದ್ದರೆ ಅದು ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯುತ್ತಿತ್ತು. ಎರಡನೆಯದಾಗಿ ಚುನಾವಣೆ ನಡೆಸುವುದಕ್ಕೆ ನಾವೊಂದು ಆಯೋಗವನ್ನು ರಚನೆ ಮಾಡಿದ್ದೇವೆ. ಚುನಾವಣಾ ಆಯೋಗಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಯಾರೂ ಹಸ್ತಕ್ಷೇಪ ಮಾಡುವುದಿಲ್ಲ. ಕೇಂದ್ರ ಚುನಾವಣಾ ಆಯೋಗ ಯಾವರೀತಿ ಇದೆ, ಅದೇರೀತಿ ರಾಜ್ಯದಲ್ಲಿಯೂ ಒಂದು ಚುನಾವಣಾ ಆಯೋಗ ಇದೆ. ಅಷ್ಟೆ ಪ್ರಾಮುಖ್ಯ ಮತ್ತು ಪ್ರಬುದ್ಧ ಚುನಾವಣಾ ಆಯೋಗ ಅದನ್ನು ಹಸ್ತಕ್ಷೇಪ ಮಾಡುವುದಿಲ್ಲ. ಒಂದು ಕಡೆ ಅವರ ನಿರ್ಣಯವನ್ನು ಕಗ್ಗತ್ತಲಿನಲ್ಲಿಟ್ಟು ಚುನಾವಣಾ ಆಯೋಗದವರು ನಾವು ಚುನಾವಣೆ ನಡೆಸುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ್ದಾರೆ. ಫೆಬ್ರುವರಿಯಲ್ಲಿ ಚುನಾವಣೆ ನಡೆಸುತ್ತೇವೆಂದು ಹೇಳಿದ್ದಾರೆ. ಒಂದು ಕಡೆ ತಮ್ಮ ಪತ್ರಿಕಾ ಹೇಳಿಕೆಯನ್ನು ನಾನು ಓದಿದ್ದೇನೆ, ನವೆಂಬರ್ ಒಳಗೆ ಚುನಾವಣೆ ನಡೆಸುತ್ತೇವೆಂದು ತಾವು ಹೇಳಿದ್ದೀರಿ. ಇಷ್ಟೆಲ್ಲಾ ಮಾಡಿರುವಾಗ ಇವತ್ತು ತರಾತುರಿಯಲ್ಲಿ ಚುನಾವಣೆಯನ್ನು ಮುಂದೂಡುವುದಕ್ಕೆ ಕಾರಣ ಒಂದೇ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ರೀತಿಯಲ್ಲಿ ತತ್ವ ಇಲ್ಲ ನೀತಿಯಲ್ಲ ಜಾಸ್ತಿ ಸಂಖ್ಯೆಯಿರತಕ್ಕದ್ದನ್ನು ಕಡಿಮೆ ಸಂಖ್ಯೆ ಮಾಡಿ ಹೊಸ ಆದರ್ಶದ ಪ್ರಶ್ನೆಯಲ್ಲ. ಪ್ರಾಮಾಣಿಕವಾಗಿ ಹೇಳುವುದಾದರೆ ನಿಮ್ಮ ಪಕ್ಷದಲ್ಲಿ ತೀವ್ರವಾದ ಗೊಂದಲವಿದೆ, ಸುಮಾರು ಮೂರು ತಿಂಗಳಿಂದ ನಿಮ್ಮ ಸರ್ಕಾರ ಇದೆಯೇ? ನಾನು ನಿಮ್ಮನ್ನು ನೇರವಾಗಿ ಪ್ರಶ್ನೆ ಕೇಳುತ್ತೇನೆ. ದಿನ ಬೆಳಿಗ್ಗೆಯಾದರೆ ಕಾದಾಟ, ದಿನ ಬೆಳಿಗ್ಗೆಯಾದರೆ ಸಹಿ ಸಂಗ್ರಹಣೆ, ಸಭೆ ಸಮಾರಂಭಗಳು, ದಿನ ಬೆಳಿಗ್ಗೆ ಮುಖ್ಯಮಂತ್ರಿಗಳನ್ನು ತೆಗೆಯಬೇಕು

ಈ ತರಹ ಗುಂಪುಗಳು ನಿಮ್ಮಲ್ಲಿ ಮೂರು ತಿಂಗಳಿಂದ ರಾಜೀನಾಮೆಗೆ ಒತ್ತಾಯ ಮಂತ್ರಿಗಳ ರಾಜೀನಾಮೆ, ಶಾಸಕರ ಗುಂಪುಗಳು ಸಹಿ ಸಂಗ್ರಹಣೆ ಒಂದೇ ಸಮನೆ ಮೂರು ತಿಂಗಳಿಂದ ನಡೆದಿದೆ. ಗ್ರಾಮಪಂಚಾಯಿತಿ ಚುನಾವಣೆಯ ಬಗ್ಗೆ ಯಾರು ತಲೆಕೆಡಿಸಿಕೊಂಡಿದ್ದಾರೆ? ನೀವು ತಲೆಕೆಡಿಸಿಕೊಂಡಿದ್ದೀರಿ. ನಾನು ನಿಮ್ಮನ್ನು ಒಂದು ಹಂತದಲ್ಲಿ ಮೆಚ್ಚಿ ಶಹಭಾಷ್‌ಗಿರಿ ಕೊಟ್ಟಿದ್ದೆ. ತಾವು ಆಳವಾಗಿ ಅಭ್ಯಾಸ ಮಾಡಿದ್ದೀರಿ. ಆದರೆ ನಿಮ್ಮಲ್ಲಿ ಯಾರಾದರೂ ಒಬ್ಬರು ಪಂಚಾಯಿತಿ ಚುನಾವಣೆಯ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ನನಗೆ ಮಂತ್ರಿ ಕೊಡಲಿಲ್ಲ. ಮಂತ್ರಿ ಕೊಡದೆ ಬೇರೆ ರೀತಿ ಕೊಟ್ಟರೆ ಅದೊಂದು ರೀತಿ. ಈ ತರಹ ಮೂರು ತಿಂಗಳಿನಿಂದ ಅವರ ಮನೆಯಲ್ಲಿ ಸಭೆ ಇವರ ಮನೆಯಲ್ಲಿ ಸಭೆ ದೆಹಲಿಯಲ್ಲೊಂದು ಸಭೆ, ನಿಮ್ಮದನ್ನೆಲ್ಲ ನೋಡಿದರೆ ಪ್ರಾಮಾಣಿಕವಾಗಿ ಹೇಳಿ ಹೃದಯ ಬಿಚ್ಚಿ ಹೇಳಿ, ಮೂರು ತಿಂಗಳಿಂದ ಈ ಸರ್ಕಾರ ಇದೆಯೆ? ಇಲ್ಲ, ಖಂಡಿತಾ ಇಲ್ಲ. ಇಂತಹದರಲ್ಲಿ ನನಗನಿಸುತ್ತದೆ ಚುನಾವಣೆ ಮುಂದೂಡುವುದಕ್ಕೆ ಸುಗ್ರೀವಾಜ್ಞೆ ನಿಜವಾಗಿಯೂ ಒಳ್ಳೆಯ ಸಂಪ್ರದಾಯವಲ್ಲ, ಜಯಪ್ರಕಾಶ್ ನಾರಾಯಣ್ ರವರು ಮಹಾತ್ಮಗಾಂಧೀಜಿಯವರು ಗ್ರಾಮ ಸ್ವರಾಜ್ಯ ಗ್ರಾಮಪಂಚಾಯಿತಿ ಬಗ್ಗೆ ಒಂದು ದೊಡ್ಡ ಕಲ್ಪನೆ ಏನಿತ್ತು, ನಂತರ ಎಸ್.ಕೆ. ಡೇರವರು ನಜೀರ್‌ಸಾಬ್‌ರವರು ಉತ್ತಮ ತೀರ್ಮಾನಕ್ಕೆ ಬಂದಿದ್ದರು. ನಂತರ ಘೋರ್ಪಡೆಯವರು ಆ ಸಾಲಿಗೆ ಸೇರತಕ್ಕವರು. ಇವತ್ತು ಏನಾಯಿತು, ತಾಲ್ಲೂಕು ಬೋರ್ಡ್ ಜಿಲ್ಲಾಪಂಚಾಯಿತಿ ಹೆಸರು ಬದಲಾವಣೆಯಾಗಿ ಒಂದೊಂದು ಹೆಸರು ಬಂತು. ನಿಮ್ಮ ಕಾಲದಲ್ಲಿ ಮೀಸಲಾತಿಯನ್ನು ತಂದಿರಿ ನಿಜವಾಗಿಯೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾವ ವರ್ಗಕ್ಕೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳು ದೊರಕುತ್ತಿರಲಿಲ್ಲವೋ ಆ ವರ್ಗಗಳಿಗೆ ದೊರಕತಕ್ಕ ವ್ಯವಸ್ಥೆ ನಮ್ಮ ಚುನಾವಣೆಯ ವ್ಯವಸ್ಥೆಯಲ್ಲಿ ಬಂತು. ಅದು ಮೆಚ್ಚತಕ್ಕದ್ದು ಹೆಮ್ಮೆಪಡತಕ್ಕದ್ದು. ಎಷ್ಟು ಸಾರಿ ಈ ವ್ಯವಸ್ಥೆಯನ್ನು ಗ್ರಾಮಪಂಚಾಯಿತಿಗಳನ್ನು ಬದಲಾವಣೆ ಮಾಡುತ್ತೀರಿ? ಹೆಚ್ಚೆ ಹೆಚ್ಚೆಗೂ ಬದಲಾವಣೆ ಮಾಡಿದರೆ ಆಧರ ಅಸ್ತಿತ್ವ ಹೋಗುತ್ತದೆ. ಇವತ್ತು ಇದಕ್ಕೆ ಬಾಲಗ್ರಹ ಹಿಡಿದಿದೆ. ನನಗನಿಸುತ್ತದೆ ನೀವು ಬದಲಾವಣೆ ಮಾಡುತ್ತೀರಿ, ಮುಂದಿನ ಸರ್ಕಾರದವರು ಅವರು ಏನೋ ಮಾಡುತ್ತಾರೆ. ಈ ರೀತಿ ಬದಲಾವಣೆ ಮಾಡುತ್ತಾ ಹೋದರೆ ಗ್ರಾಮಪಂಚಾಯಿತಿ ವ್ಯವಸ್ಥೆಗೆ ಗ್ರಾಮಪಂಚಾಯಿತಿಯ ಚಿಂತನೆಗೆ ಗ್ರಾಮಪಂಚಾಯಿತಿಯ ವಿಕೇಂದ್ರಿಕರಣಕ್ಕೆ ಅಪಾಯಕಾರಿ ಬೆಳವಣಿಗೆ ಬರುತ್ತದೆ. ರಾಜೀನಾಮೆ ಕೊಡಿ ನಾನು ಒತ್ತಾಯ ಮಾಡುವುದಿಲ್ಲ. ಚುನಾವಣೆಯನ್ನು ಮುಂದೂಡಿರತಕ್ಕದ್ದು ಅತ್ಯಂತ ಅಪಾಯಕಾರಿ ಬೆಳವಣಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದನ್ನು ಯಾರೂ ಒಪ್ಪುವುದಿಲ್ಲ. ಇದನ್ನು ಒಪ್ಪತಕ್ಕದ್ದು ಅಲ್ಲ. ಮೂಲಭೂತವಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈವೊಂದು ತಾಯಿಬೇರನ್ನು ಕಿತ್ತುಹಾಕತಕ್ಕ ವ್ಯವಸ್ಥೆಯಾಗಿದೆ. ಇದರ ಜೊತೆಗೆ ಅವರನ್ನೇ

4-20 ಪಿ.ಎಂ.

ನೀವು ನಾಮಕರಣ ಎಂದು ಮಾಡುತ್ತೀರಿ. ಏಕೆ ಮಾಡುತ್ತೀರಿ? ಅದು ಚುನಾವಣೆಯಾಗಿ ಅವರು ಗೆಲ್ಲಬೇಕೇ ಹೊರತು ಅವರಿಗೆ ಐದು ವರ್ಷಗಳ ಅವಧಿ ಕೊಟ್ಟಿದ್ದೆವು. ಐದು

ವರ್ಷ ಮುಗಿದ ಮೇಲೆ ಮತ್ತೆ ಮತದಾರರು ಅವರನ್ನು ಆಯ್ಕೆ ಮಾಡಬೇಕೇ ಹೊರತು ನೀವೇ ನೇರವಾಗಿ ಇನ್ನೊಂದು ವರ್ಷ ಇರಿಯೆಂದು ನಾಮಕರಣ ಮಾಡಿಬಿಟ್ಟರೆ ಇದು ನಿಜವಾಗಿಯೂ ಒಳ್ಳೆಯ ಸಂಪ್ರದಾಯ ಅಲ್ಲ. ಅದು ಯಾರಿಗೋ ಸ್ವಲ್ಪ ಸಂತೋಷವಾಗಬಹುದು. ಅವರು ನಮ್ಮ ಕಡೆಯವರೂ ಇದ್ದಾರೆ. ಇನ್ನೊಂದು ಕಡೆಯವರೂ ಇದ್ದಾರೆ. ಅವರೇ ಇದ್ದುಬಿಟ್ಟರೆ ಅವರಿಗೆ ಸಂತೋಷ ಇರಬಹುದು; ಆದರೆ ಚುನಾವಣೆಯಲ್ಲಿ ಮತ್ತೆ ಗೆದ್ದರೆ ಅವರ ವರ್ಚಸ್ಸು ಕೆಲಸ ಮಾಡಿರತಕ್ಕಂಥಾದ್ದು ಮತ್ತೆ ಮತದಾರರು ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು ಅದೆಲ್ಲ ಹೊರಗಡೆ ಬರುತ್ತದೆ. ಆದ್ದರಿಂದ ಈ ನಾಮಕರಣ ಪದ್ಧತಿ ಏನಿದೆ, ಇದು ಯಾವುದೇ ಸಂಸ್ಥೆಯಾಗಲೀ ಪ್ರಜಾತಂತ್ರ ವ್ಯವಸ್ಥೆಗೆ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ಇದರ ಜೊತೆಗೆ ಇದನ್ನು ಎವಡು ದಿನ ಮಾಡಬೇಕೆಂದು ಹೊರಟಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮೊದಲು ಗ್ರಾಮ ಪ್ರಧಾನರು ಎಂದು ಇದ್ದರು ಮತ್ತು ಶಾಸಕರು ಇದಕ್ಕೆ ಅಧ್ಯಕ್ಷತೆ ವಹಿಸುತ್ತಿದ್ದರು. ಅದನ್ನು ಬದಲಾವಣೆ ಮಾಡಿದ್ದೀರಿ. ಅದನ್ನೇ ತರುವುದಾದರೆ ತನ್ನಿ. ಅದು ನಿಮಗೆ ಸೇರಿರತಕ್ಕಂಥ ವಿಚಾರ. ಇದನ್ನು ನಾನು ತೀರಾ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಬದಲಾವಣೆ ಮಾಡುವುದಾದರೆ ಈ ಮೂರು ವ್ಯವಸ್ಥೆ ಬದಲು ಎರಡು ವ್ಯವಸ್ಥೆಗೆ ನನ್ನ ಸ್ವಾಗತ ಇದೆ. ಈ ಮೂರು ವ್ಯವಸ್ಥೆ ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಈ ಎರಡನ್ನು ಹೊಂದಿದ ವ್ಯವಸ್ಥೆ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ನಡೆಯಬೇಕಾದದ್ದು ಬಹಳ ಮುಖ್ಯ. ಇದರ ಜೊತೆಗೆ ಇವತ್ತು ಗ್ರಾಮಪಂಚಾಯಿತಿ ತಾಲ್ಲೂಕು ಪಂಚಾಯತಿ ಈ ವ್ಯವಸ್ಥೆ ಬಂದನಂತರ ನಾನು ಮೊದಲಿನಿಂದಲೂ ನಿರಂತರವಾಗಿ ಪಕ್ಷಭೇದ ಮರೆತು 224 ಕ್ಷೇತ್ರಗಳ ಶಾಸಕರುಗಳ ಪರವಾಗಿ ನಾನು ಇಲ್ಲಿ ಮಾತನಾಡಿದ್ದೇನೆ. ಶಾಸಕರುಗಳಿಗೆ ಈ ಕ್ಷಣದಲ್ಲಿ ಕೂಡ ಅವರಿಗೆ ಒಂದು ಸಣ್ಣ ಕೆಲಸ ಮಾಡುವುದಕ್ಕೂ ಅಧಿಕಾರ ಇಲ್ಲ. ನಿರಂತರವಾಗಿ ತಮಗೆ ಒಂದೇ ಸಮವಾಗಿ ನಾನು ಒತ್ತಾಯ ಮಾಡಿದ್ದೇನೆ. ನಾಳೆ ನಾವು ರಸ್ತೆಗೆ ಹೋದರೆ, ಆ ಮತದಾರರು ಕೇಳಿದರೆ ಒಂದು ಸಾರ್ವಜನಿಕ ಕೆಲಸ ಮಾಡುವುದಕ್ಕೂ ನಮಗೆ ಇವತ್ತು ಪ್ರಾಮಾಣಿಕವಾದಂಥ ಅಧಿಕಾರ ಇಲ್ಲ. ಈ ದೃಷ್ಟಿಯಿಂದ ನಾನು ಹೇಳಿದೆ. ನನಗೇನು ಅವರಿಂದ ಅಧಿಕಾರ ಕಿತ್ತುಕೊಳ್ಳಬೇಕು ಎಂದು ಅಲ್ಲ. ಈಗ ಲೋಕಸಭಾ ಸದಸ್ಯರಿಗೆ ಒಂದು ಕೋಟಿ ರೂಪಾಯಿಗಳು ಇದ್ದುದನ್ನು ಎರಡು ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ. ಅವರು ತಮ್ಮ ಸ್ವಂತ ವಿವೇಚನೆಯಿಂದ ಅನುದಾನವನ್ನು ಯಾರಿಗೆ ಬೇಕಾದರೂ ಕೊಡಬಹುದು ನನಗನ್ನಿಸುತ್ತದೆ ಒಂದು ವರ್ಷಕ್ಕೆ ಒಬ್ಬ ಶಾಸಕರಿಗೆ ವಿವೇಚನಾ ಅನುದಾನವಾಗಿ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನಾದರೂ ನೀವು ಮಾಡಿ. ಒಂದು ಕೋಟಿ ರೂಪಾಯಿಸಾಧ್ಯವಾಗದಿದ್ದರೆ 75 ಲಕ್ಷ ರೂಪಾಯಿಯಾದರೂ ಮಾಡಿ. ಎಲ್ಲ ಶಾಸಕರುಗಳು ಸೇರಿದರೆ ನಿಮಗೆ ಮುನ್ನೂರು ಕೋಟಿ ರೂಪಾಯಿ ಬರಬಹುದು. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒಳಗಡೆಯೂ ಹೇಳಿದ್ದೇನೆ, ಹೊರಗಡೆಯೂ ಹೇಳಿದ್ದೇನೆ ನಿಮ್ಮ ಕಾಲದಲ್ಲಿ ಇದು ನಿರ್ಧಾರ ಆಗಲಿ. ಶಾಸಕರು ಒಂದು ಸಮಾರಂಭಕ್ಕೆ ಹೋದರೆ, ಒಂದು ರಸ್ತೆಗೆ ಹೋದರೆ, ಒಂದು ರಸ್ತೆಗೆ ಹೋದರೆ ಹಳ್ಳಿಗಳಲ್ಲಿ ಜನ

ನಮ್ಮನ್ನು ಕೇಳುತ್ತಾರೆ. ನಲ್ಲಿ ಹಾಕಿಸಿಕೊಡಿ ಎಂದು ಕೇಳುತ್ತಾರೆ, ರಸ್ತೆ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಪ್ರತಿಯೊಂದಕ್ಕೂ ಅವರು ಯಾವುದನ್ನು ಕೇಳಬೇಕಾದರೂ ಶಾಸಕರನ್ನೇ ಹಿಡಿಯುತ್ತಾರೆ. ಎಲ್ಲಿ ಏನೇ ಅನ್ಯಾಯವಾದರೂ ತಾಲ್ಲೂಕು ಪಂಚಾಯತಿಯವರನ್ನು ಕೇಳುವುದಿಲ್ಲ. ಅವರು ಅಲ್ಲಿಯ ಸದಸ್ಯರು ಏನು ಹೇಳುತ್ತಾರೆ ಎಂದರೆ ನಮ್ಮದೇನೂ ಇಲ್ಲ, ಶಾಸಕರನ್ನು ನೋಡಿ ಅನ್ನುತ್ತಾರೆ. ತಾಲ್ಲೂಕು ಪಂಚಾಯತಿಯವರು ಮತ್ತು ಜಿಲ್ಲಾಪಂಚಾಯತ್ ನವರು ನಮ್ಮದೇನೂ ಇಲ್ಲ 'ಶಾಸಕರನ್ನು ನೋಡಿ' ಎಂದು ಹೇಳುತ್ತಾರೆ. ಪ್ರತಿಯೊಂದಕ್ಕೂ ಅವರು ಶಾಸಕರನ್ನು ನೋಡಿ ಎಂದು ಹೇಳುವುದು ಎದ್ದುಕಾಣುತ್ತ ಇರತಕ್ಕಂಥಾದ್ದು. ಆದ್ದರಿಂದ ಶಾಸಕರ ಶಕ್ತಿಯನ್ನು ನೀವು ಕಡಿಮೆ ಮಾಡಿದ್ದೀರಿ, ಇದರಿಂದ ಅತ್ಯಂತ ನೋವಂತೂ ನಮಗೆ ಆಗಿದೆ. ಈ ವ್ಯವಸ್ಥೆ ಇರಲಿ. ಆದರೆ ಶಾಸಕರಿಗೆ ಅವರ ಕ್ಷೇತ್ರದಲ್ಲಿ ವಿಶಾಲವಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆಗೆ ತಾವು ಅನುವು ಮಾಡಿಕೊಡಬೇಕೆಂದು ಹೇಳಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬೇರೆ ರಾಜ್ಯಗಳಲ್ಲಿ ಕೇಳಿ. ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಆಂಧ್ರದಲ್ಲಿ ಮಾಡಿದ್ದಾರೆ. ಬೇರೆ ಬೇರೆ ಕಡೆ ವಿವರಗಳನ್ನು ತರಿಸಿನೋಡಿ. ಅಲ್ಲಿರತಕ್ಕಂಥ ಶಾಸಕರುಗಳಿಗೆ ಅವರ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಈ ವ್ಯವಸ್ಥೆ ಮಾಡುವುದಕ್ಕೆ ಅನೇಕ ವಿಧವಾದಂಥ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ನಿಮ್ಮ ಸರ್ಕಾರ ಜನತಾದಳ ಸರ್ಕಾರ ಇದ್ದಾಗ ಈ ತರಹ ವರ್ಷಕ್ಕೆ ಕನಿಷ್ಟ 75 ಲಕ್ಷ ರೂಪಾಯಿಗಳ ಅನುದಾನವನ್ನು ಪ್ರತಿಶಾಸಕರಿಗೆ ಖರ್ಚು ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಎಂದು ನೀವು ಹೇಳಿ. ಅವಾಗ ನಾಳೆ ನೀವೇ ಬರಲಿ, ಬಾರದೇ ಇರಲಿ ನಿಮ್ಮ ಹೆಸರು ಉಳಿಯುತ್ತದೆ. ಯಾರೇ ಶಾಸಕರು ಬಂದರೂ ಸಹ ಇಂತಹವರ ಕಾಲದಲ್ಲಿ ಶಾಸಕರಿಗೆ ಅನುದಾನವಾಗಿ ಪ್ರತಿವರ್ಷ 75 ಲಕ್ಷ ರೂಪಾಯಿಗಳನ್ನು ಕೊಟ್ಟರು ಎಂದು ಹೇಳುತ್ತಾರೆ. ಈಗ ಬಜೆಟ್ ಬರುತ್ತಿದೆ. ಈ ಬಜೆಟ್‌ನಲ್ಲಿ ನೀವು ಕೊಡಿ. ಬಜೆಟ್ ಮಂಡನೆ ಮಾಡುವಾಗ ಅವತ್ತು ಹೇಳಿ. ಇಡೀ 224 ಶಾಸಕರುಗಳು ನಿಮ್ಮ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಾರೆ. ಇದು ಕೊನೆಯ ಅಧಿವೇಶನ. ಅಂದರೆ ಮುಂದೆ ಬರತಕ್ಕಂಥ ಚುನಾವಣೆಯಾದ ಮೇಲೆ ಹೊಸದಾಗಿ ಅಧಿವೇಶನ ಸೇರುತ್ತದೆ. ಆದರೆ ಇದು ಈ ವರ್ಷದ ಕೊನೆಯ ಆಯವ್ಯಯ ಅಧಿವೇಶನ. ನಿಮ್ಮ ಸರ್ಕಾರಕ್ಕೆ ಇದು ಕೊನೆಯ ಆಯವ್ಯಯ. ಮುಂದೆ ನೀವೇ ಬರಬಹುದು, ಬೇರೆ ಯಾರೇ ಬರಬಹುದು, ಆ ಪ್ರಶ್ನೆ ಬೇರೆ. ಆದರೆ ಇದರಲ್ಲಿ ಒಂದು ಆದರ್ಶವಾಗಿ ಶಾಸಕರಿಗೆ ಇಷ್ಟು ಅನುದಾನವನ್ನು ತಾವು ಇಡಬೇಕೆಂದು ಹೇಳಿ ಈ ಚುನಾವಣೆ ಮುಂದೂಡತಕ್ಕದ್ದು ನಮಗಂತೂ ಬಹಳ ನೋವಾಗಿದೆ. ಇದು ಮುಂದೂಡಬಾರದಾಗಿತ್ತು. ನಿಮ್ಮ ಮನಸ್ಸಿನಲ್ಲೂ ಈ ಮಾತು ಇದೆ. ಆದರೆ, ರಾಜಕೀಯ ಒತ್ತಡಕ್ಕೆ ತಾವು ಬಲಿಪಶುವಾಗಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡ ಕಾಗೇರಿ (ಅಂಕೋಲ) :— ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯಿತಿ ಚುನಾವಣೆಯನ್ನು ಮುಂದೂಡಿರುವುದನ್ನು ತೀವ್ರವಾಗಿ ವಿರೋಧಿಸುತ್ತ ತಕ್ಷಣ ಚುನಾವಣೆ ನಡೆಸಬೇಕೆಂಬ ಆಗ್ರಹವನ್ನು ಈಗಾಗಲೇ ಮಾತನಾಡಿರುವವರು

ಮಾಡಿದಂತೆ ನಾನೂ ಕೂಡ ಈ ಸಂದರ್ಭದಲ್ಲಿ ಮಾಡುತ್ತ ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಎರಡು ಕಾರಣಗಳು ಇದೆ. ಒಂದು, ಇದುವರೆಗೆ ಮಾತನಾಡಿದಂಥ ನಮ್ಮ ಎಲ್ಲಾ ಪ್ರಮುಖರು ವಿಷಯವನ್ನು ವಿವರವಾಗಿ ಪ್ರಸ್ತಾಪಿಸಿದ್ದಾರೆ. ಇನ್ನೊಂದು ಬಹಳ ಪ್ರಮುಖವಾದಂಥ ಕಾರಣ ಏನೆಂದರೆ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಬರುತ್ತಾ ಇರುವುದರಿಂದ ಬಹಳ ಒಳ್ಳೆಯದಾಯಿತು. ಏಕೆಂದರೆ ಮಾನ್ಯ ಎಂ.ಪಿ. ಪ್ರಕಾಶ್ ಅವರು ನಮ್ಮ ಜೊತೆಯಲ್ಲಿದ್ದು ಅವರು ಮಾತನಾಡುವಾಗ ನಮ್ಮೊಡನೆ ಧ್ವನಿಗೂಡಿಸಿಬಿಡುತ್ತಾರೋ ಎನ್ನುವ ಅನುಮಾನ ನನಗೆ ಇದೆ. ಏಕೆಂದರೆ ಮಾನ್ಯ ಎಂ.ಪಿ. ಪ್ರಕಾಶ್ ಅವರು ನಮ್ಮ ಜೊತೆಯಲ್ಲಿದ್ದು ಅವರು ಮಾತನಾಡುವಾಗ ನಮ್ಮೊಡನೆ ಧ್ವನಿಗೂಡಿಬಿಡುತ್ತಾರೋ ಎನ್ನುವ ಅನುಮಾನ ನನಗೆ ಇದೆ. ಏಕೆಂದರೆ ಮಾನಸಿಕವಾಗಿ ಅವರು ನಮ್ಮ ಜೊತೆಯಲ್ಲೇ ಇದ್ದಾರೆ. ಅವರನ್ನು ನೋಡಿದಾಗ ಅಷ್ಟೇ ಅಲ್ಲ, ಅವರ ಎಲ್ಲ ಹೇಳಿಕೆಗಳನ್ನು ನೋಡಿದಾಗ ನಮಗೆ ಅನ್ನಿಸುತ್ತಾ ಇರುವುದು, ಗ್ರಾಮಪಂಚಾಯತಿ ಚುನಾವಣೆಯನ್ನು ಮುಂದೂಡಿರುವುದು ಅವರಿಗೆ ಎಳ್ಳಷ್ಟೂ ಒಪ್ಪಿಗೆಯಾಗಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ ಅವರಿಗೆ ಮಾನಸಿಕವಾಗಿ ಹಿಂಸೆ ಸಾಕಷ್ಟು ಆಗಿದೆ. ಈಗ ಬೆಳಿಗ್ಗೆಯಿಂದ ನಮ್ಮೆಲ್ಲ ಹಿರಿಯರ ಮಾತುಗಳನ್ನು ಕೇಳಿದಮೇಲಂತೂ ಅವರು ಕುಳಿತಲ್ಲೇ ಹಿಂಸೆಪಡುತ್ತಾ ಇರುವುದನ್ನು ನೋಡಿ ನಮಗೇ ಒಂಥರಾ ಆಗುತ್ತಾ ಇದೆ. ಹಾಗಾಗಿ ಈ ಸಂದರ್ಭದಲ್ಲಿ ಮುಖ್ಯಮುಂತ್ರಿಗಳು ಬಂದಿರುವುದು ಬಹಳ ಒಳ್ಳೆಯದಾಯಿತು ಎಂದುಕೊಂಡಿದ್ದೇನೆ. ಏಕೆಂದರೆ ಅವರು ನಮ್ಮ ಜತೆಯಲ್ಲೇ ಇದ್ದರು. ಚುನಾವಣೆ ಮುಂದೂಡಿರುವುದರ ವಿರೋಧವಾಗಿ ಇದ್ದಾರೆ. ಆದರೆ ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಚುನಾವಣೆಯನ್ನು ಮುಂದೂಡಿರುವುದರಿಂದ ನಮಗೆ ಈಗ ಅನ್ನಿಸಿರುವುದು, ಇದರಿಂದ ಇಡೀ ದೇಶದಲ್ಲಿ ಕರ್ನಾಟಕ ತಲೆತಗ್ಗಿಸುವಂತೆ ಆಯಿತು ಎನ್ನುವುದು ಒಂದು ಭಾಗವಾದರೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕರ್ನಾಟಕ ಬಹಳ ಮುಂಚೂಣಿಯಲ್ಲಿತ್ತು. ಇನ್ನೊಂದು ಬಹಳ ದೊಡ್ಡ ಆಘಾತ ಈ ದೇಶಕ್ಕೆ ಆಗಿರುವುದು ಎಂದರೆ ಹೀಗೆ ಮುಂಚೂಣಿಯಲ್ಲಿದ್ದಂಥ ಕರ್ನಾಟಕವೇ ಈ ಚುನಾವಣೆಯನ್ನು ಮುಂದೂಡಿತು ಎಂದು ಆದರೆ ಇದರ ಬಗ್ಗೆ ನಾವು ಇನ್ನಷ್ಟು ಹಿಂದೇಟು ಹಾಕುವಂಥ ಸ್ಥಿತಿಯನ್ನು ದೇಶದ ಉಳಿದ ರಾಜ್ಯಗಳಿಗೂ ನಿರ್ಮಾಣಮಾಡಿಕೊಟ್ಟ ಹಾಗೆ ಉಳಿದ ರಾಜ್ಯಗಳು ಈ ಚುನಾವಣೆ ಮಾಡಬೇಕು, ಕರ್ನಾಟಕವನ್ನು ಅನುಸರಿಸಬೇಕು ಎಂದು ನಾವು ಅಂದುಕೊಂಡಿದ್ದೇವು. ಆದರೆ ನಿಮ್ಮ ಸರ್ಕಾರ ಮಾಡಿದ ತಪ್ಪಿನಿಂದಾಗಿ ತನ್ನ ಗೊಂದಲದ ಸ್ವಾರ್ಥ ರಾಜಕಾರಣದ ಒಂದು ಉದ್ದೇಶಕ್ಕೋಸ್ಕರವಾಗಿ ಇಡೀ ದೇಶದಲ್ಲಿ ಈ ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ಪುನರ್ ವಿಮರ್ಶೆ ಮಾಡುವಂಥ ಅಥವಾ ಅದನ್ನು ಯಾರು ಅನುಸರಿಸಬೇಕು ಎಂದು ತುದಿಗಾಲಿನಲ್ಲಿದ್ದರೋ ಅವರು ಮತ್ತೊಮ್ಮೆ ಯೋಚನೆ ಮಾಡುವಂಥ ಒಂದು ಮಾನಸಿಕ ಹಿನ್ನಡೆಯನ್ನು ಮಾಡಿರುವುದು ನಿಮ್ಮ ಸರ್ಕಾರ ಎಂದು ನಾನು ಭಾವಿಸಿಕೊಂಡಿದ್ದೇನೆ. ಮತ್ತೆ ಈ ಸರ್ಕಾರಕ್ಕೆ ವಿಕೇಂದ್ರಿಕರಣ ವ್ಯವಸ್ಥೆ ಬಗ್ಗೆ ಪ್ರಾರಂಭದಿಂದಲೂ ನಂಬಿಕೆ ಇಲ್ಲವೆಂದು ನಾನು ಭಾವಿಸಿಕೊಳ್ಳುತ್ತೇನೆ. ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಚುನಾವಣೆ ಮಾಡುವಾಗ ತಮಗೆ ಗೊತ್ತಿದೆ ಇಡೀ

ರಾಜ್ಯದಲ್ಲಿ ಯಾವರೀತಿ ಹೋರಾಡಿದ್ದೇವೆ ಎಂದು. ಇವತ್ತಿಗೂ ನಮಗೆ ಆ ನೆನಪು ಇದೆ. ರಾಜ್ಯದಲ್ಲಿ ಒಂದು ಜನಾಭಿಪ್ರಾಯ ರೂಪಿತವಾದ ನಂತರದಲ್ಲಿ ಅದರಲ್ಲೂ ವಿಶೇಷವಾಗಿ ಸನ್ಮಾನ್ಯ ಯಡಿಯೂರಪ್ಪನವರು ಶಿವಮೊಗ್ಗದಿಂದ ಬೆಂಗಳೂರಿನ ತನಕ ಇತಿಹಾಸದಲ್ಲಿ ದಾಖಲೆಯಾಗುವಂಥ ಪಾದಯಾತ್ರೆಯನ್ನು ಮಾಡಿ ತಾಲ್ಲೂಕು ಪಂಚಾಯತ್ ಜಿಲ್ಲಾ ಪಂಚಾಯತ್ ಚುನಾವಣೆ ಆಗುವ ಹಾಗೆ ಹೋರಾಟ ಮಾಡಿ ಜನಾಭಿಪ್ರಾಯ ರೂಪಿತವಾದ ನಂತರ ಚುನಾವಣೆಯನ್ನು ಮಾಡಿದರು. ತತ್‌ಕ್ಷಣ ಚುನಾವಣೆ ಮಾಡುವಂಥ ಆಸಕ್ತಿ ಈ ಸರ್ಕಾರಕ್ಕೆ ಇರಲಿಲ್ಲ. ಇದು ಒಂದನೆಯದು. ಎರಡನೆಯದಾಗಿ ತಮಗೆ ಗೊತ್ತಿದೆ, ಗ್ರಾಮಪಂಚಾಯತಿಯಿಂದ ಆರಿಸಿಬಂದಂಥ ಸದಸ್ಯರಿಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗುವಂಥ ವಿಧಾನಪರಿಷತ್ ಸದಸ್ಯರನ್ನು ಆಯ್ಕೆ ಮಾಡುವಂಥ, ಮತದಾನದ ಅಧಿಕಾರವನ್ನು ಕೊಟ್ಟಿರಲಿಲ್ಲ. ಸನ್ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿ ಇದ್ದಂಥ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಗ್ರಾಮಪಂಚಾಯತಿ ಸದಸ್ಯರಿಗೆ ಮತದಾನದ ಹಕ್ಕು ಇಲ್ಲವೆಂದು ಹೇಳಿದರು. ಆಗ ನಾವು ಇಲ್ಲಿ ಮತ್ತು ಲೋಕಸಭೆಯಲ್ಲಿ ನಾವು ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡಿಸುವ ರೀತಿಯಲ್ಲಿ ನಾವು ಹೋರಾಟ ಮಾಡಿ ಅದನ್ನು ಕೊಡಿಸಬೇಕಾಯಿತು. ಅಂದರೆ, ವಿಕೇಂದ್ರೀಕರಣ ವ್ಯವಸ್ಥೆಗೆ ಮತ್ತು ಆ ವ್ಯವಸ್ಥೆಯಿಂದ ಆಯ್ಕೆಯಾದಂಥವರಿಗೆ ಯೋಗ್ಯವಾದಂಥ ಸ್ಥಾನಮಾನ, ಗೌರವ ಕೊಡತಕ್ಕಂಥಾದ್ದು ಇಚ್ಛೆ ಈ ಸರ್ಕಾರಕ್ಕೆ ಇರಲಿಲ್ಲವೆಂದು ಗೊತ್ತಾಗುತ್ತದೆ. ಇಷ್ಟೇ ಅಲ್ಲ, ನಾನು ಭಾವಿಸಿಕೊಂಡಿದ್ದ ಆದೇನೆಂದರೆ ನಮ್ಮ 73-74ನೇ ಸಂವಿಧಾನ ತಿದ್ದುಪಡಿಯಾದಂಥ ಸಂದರ್ಭದಲ್ಲಿ ಆ ಸಂವಿಧಾನದ ಭಾಗ ಒಂದು ಕಡೆ. ಇನ್ನೊಂದು ಕಡೆಯಲ್ಲಿ ಸ್ಟೇಟ್ ಎಲೆಕ್ಷನ್ ಕಮೀಷನ್‌ಗೆ ಗೌರವ ಇಲ್ಲ. ಇನ್ನೊಂದು ಕಡೆ ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡ್‌ಗೆ ಅಧಿಕಾರವನ್ನು ಕೊಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೆ. ಅದಕ್ಕೂ ಅಧಿಕಾರ ಇಲ್ಲ. ಸ್ಟೇಟ್ ಫೈನಾನ್ಸ್ ಕಮೀಷನ್‌ಗೂ ಆ ರೀತಿಯಾದಂಥ ಚಾಲನೆ ಇಲ್ಲ. ಅಂದರೆ ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡಿದ ನಂತರವೂ ಸಹ 73-74ನೇ ಸಂವಿಧಾನ ತಿದ್ದುಪಡಿಯಾದ ನಂತರವೂ ಸಹ ಚುನಾವಣಾ ಕಮೀಷನ್‌ಗೆ ಆಗಲಿ, ಸ್ಟೇಟ್ ಫೈನಾನ್ಸ್ ಕಮೀಷನ್‌ಗೆ ಆಗಲಿ, ಅಥವಾ ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡ್‌ಗೆ ಆಗಲಿ, ಯಾವುದೇ ರೀತಿಯ ಮಾನ್ಯತೆಯನ್ನು ಅಧಿಕಾರವನ್ನು ಕೊಡದೆ ಮತ್ತೆ ಈ ವ್ಯವಸ್ಥೆಯನ್ನು ಅಗೌರವಯುತವಾಗಿ ಮಾಡುವಂಥಾದ್ದು ನಾವು ಸರ್ಕಾರದಲ್ಲಿ ಕಂಡಿದ್ದೇವೆ. ನಾನು ಭಾವಿಸಿಕೊಂಡಿದ್ದೆ ಏನೆಂದರೆ ಗ್ರಾಮಪಂಚಾಯತಿ ನೌಕರರು ಹೋರಾಟ ಮಾಡುತ್ತಿದ್ದಾರೆ. ಅವರ ಸೇವೆಯನ್ನು ಖಾಯಂ ಮಾಡಬೇಕು ಇತ್ಯಾದಿ ಬೇಡಿಕೆಗಳನ್ನು ಇಟ್ಟುಕೊಂಡು ಅವರು ಹೋರಾಟ ಮಾಡುತ್ತಿದ್ದಾರೆ. ಅವರ ಸಮಸ್ಯೆಯನ್ನು ದೂರ ಮಾಡುವುದಕ್ಕೆ ಇವರು ಮುಂದಾಗುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೆ. ಆದರೆ ಅದನ್ನು ಮಾಡುತ್ತಿಲ್ಲ. ಅಲ್ಲಿಯ ಅಧಿಕಾರವರ್ಗಕ್ಕೆ ಅಥವಾ ಜನಪ್ರತಿನಿಧಿಗಳಿಗೆ ವಿಶೇಷವಾದಂಥ ತರಬೇತಿಯನ್ನು ಕೊಟ್ಟು ಆ ವಿಕೇಂದ್ರೀಕರಣ ವ್ಯವಸ್ಥೆಯನ್ನು ಇನ್ನಷ್ಟು ಹೆಚ್ಚು ಶಕ್ತಿಶಾಲಿಯಾಗಿ ಮಾಡುವುದಕ್ಕೆ ಬೇಕಾದಂಥ ಮಾರ್ಗದರ್ಶನ ಕೊಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೆ. ಆದರೆ ಅದನ್ನು ಮಾಡಲಿಲ್ಲ. ಹೀಗೆ ಒಟ್ಟಾರೆ ನಾವು ಯೋಚನೆ ಮಾಡಿದರೆ ಕಳೆದ

ನಾಲ್ಕು-ನಾಲ್ಕೂವರೆ ವರ್ಷಗಳಲ್ಲಿ ಜನತಾದಳ ಸರ್ಕಾರ ಈ ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ಅದರಲ್ಲೂ ವಿಶೇಷವಾಗಿ ಗ್ರಾಮಪಂಚಾಯಿತಿ ಕುರಿತಂತೆ ನಿರ್ಲಕ್ಷ್ಯ ಧೋರಣೆಯನ್ನು ತಾಳಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಈಗ ಈ ಚುನಾವಣೆಯನ್ನು ಮುಂದೂಡಿದ ನಂತರ, ಇದು ಇನ್ನಷ್ಟು ಸ್ಪಷ್ಟವಾಗಿ ಗೋಚರವಾಗುತ್ತಿದೆ. ನಾನು ಯೋಚನೆಯನ್ನು ಮಾಡುತ್ತಾ ಇದ್ದೆ. ನಾನು ಮಹಾತ್ಮಗಾಂಧೀಜಿಯವರ ಗ್ರಾಮರಾಜ್ಯದ ಕುರಿತಂತೆ ಹೇಳುವುದಕ್ಕೆ ಬಯಸುವುದಿಲ್ಲ. ನಮ್ಮ ಎಂ.ಪಿ. ಪ್ರಕಾಶ್‌ರವರಿಗೆ ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ದಿವಂಗತ ನಜೀರ್ ಸಾಬ್‌ರವರೇ ತಮ್ಮ ಸರ್ಕಾರದಲ್ಲಿ ಹಿಂದೆ, ಈ ವಿಕೇಂದ್ರೀಕರಣ ವ್ಯವಸ್ಥೆಯನ್ನು ಗೌರವಿಸಿ, ಅದಕ್ಕೆ ಮಾನ್ಯತೆ ಕೊಟ್ಟು ಈ ವ್ಯವಸ್ಥೆಯನ್ನು ರೂಪಿಸಿದರು. ಎಂಬುದು ಗೊತ್ತಿದೆ. ಈಗ ಒಮ್ಮೆ ನಜೀರ್ ಸಾಬ್‌ರವರೇ ಎಂ.ಪಿ. ಪ್ರಕಾಶ್‌ರವರ ಎದುರಿಗೆ ಬಂದರೆ ಏನು ಮಾಡಬಹುದು ಎಂದು. ಅವರು ಹಿರಿಯರು, ನಮ್ಮ ಗುರುಗಳು, ಈ ವ್ಯವಸ್ಥೆಯನ್ನು ಸ್ಥಾಪಿಸಿದವರು ಎಂದು ಎಲ್ಲಾ ಮಾತನಾಡುವ ಎಂ.ಪಿ. ಪ್ರಕಾಶ್‌ರಂಥವರ ಸ್ಥಿತಿ ಏನಾಗಬಹುದು? ಅವರು ಅದೇ ಸ್ಥಿತಿ ಅನುಭವಿಸುತ್ತಿದ್ದಾರೆ. ಅವರು ಎದುರಿಗಿದ್ದಾರೆ ಎಂದು ಭಾವಿಸಿಕೊಂಡಿದ್ದಾರೆಂದು ಅನಿಸುತ್ತದೆ. ಏಕೆಂದರೆ, ಪ್ರತಿ ಹಂತದಲ್ಲಿ ಅವರನ್ನು ಹಾಡಿ, ಹೊಗಳಿ ಅವರು ನಮ್ಮ ಗುರುಗಳು ಎಂದು ಹೇಳಿಕೊಂಡಿರುವಂಥವರು. ಈ ವ್ಯವಸ್ಥೆಯ ಶಿಲ್ಪಿ ಎಂದು ಕರೆದು ಹಾಡಿ ಹೊಗಳಿದಂಥವರು. ಇವತ್ತು ಅವರೇ ಸ್ವತಃ ಇದನ್ನು ಮುಂದೂಡುತ್ತಾರೆಂದರೆ, ಅವರ ಸ್ಥಿತಿ ಏನೆಂದು ನಿಶ್ಚಿತವಾಗಿ ನಮಗೆ ಅರ್ಥವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು, ಎಂ.ಪಿ. ಪ್ರಕಾಶ್‌ರವರ ಬಗ್ಗೆ ಯೋಚನೆ ಮಾಡಬೇಕು. ಅವರ ಸ್ಥಿತಿಯನ್ನು ನೀವು, ಅಂದರೆ ಸರ್ಕಾರ ಹೇಗೆ ನಿರ್ಮಾಣ ಮಾಡಿತು ಎಂದು. ಅವರಿಗೆ ನೀವು ಯಾವರೀತಿಯ ಹಿಂಸೆಯನ್ನು ಕೊಟ್ಟಿದ್ದೀರಿ ಎಂದು. ಅದನ್ನು ಅವರು ಅನುಭವಿಸುತ್ತಾ ಇದ್ದಾರೆ. ನಿಮಗೂ ಅದರ ಭಾಗ ತಟ್ಟಿದೆ ಎಂದು ಭಾವಿಸಿಕೊಂಡಿದ್ದೇನೆ. ಹೀಗೆ ಒಟ್ಟಾರೆಯಾಗಿ ಈ ವಿಕೇಂದ್ರೀಕರಣ ವ್ಯವಸ್ಥೆಯನ್ನು ಹುಟ್ಟುಹಾಕಿದವರೇ ನಾವು ಎಂದು ಒಂದುಕಡೆ ಹೇಳುತ್ತಾರೆ. 1986ರಲ್ಲಿ, 1987ರಲ್ಲಿ ಮತ್ತು 1994ರಲ್ಲಿ ಈ ರೀತಿ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ, ಈಗೇನು ಮಾಡುತ್ತಾರೆ? ಮತ್ತೆ ಅದಕ್ಕೆ ಅಗೌರವ. ಯಾರು ಈ ವಿಕೇಂದ್ರೀಕರಣ ವ್ಯವಸ್ಥೆಯ ಶಿಲ್ಪಿಗಳು ಇದ್ದರೋ ಅವರ ಆತ್ಮಕ್ಕೆ ಘಾಸಿಯಾಗುವಂತಹ ಯೋಚನೆಗಳು, ನಿರ್ಧಾರಗಳು ಬರುತ್ತಿವೆ. ಹೀಗೆ ಪ್ರತಿ ಹಂತದಲ್ಲಿ ಈ ರೀತಿಯ ನಿರ್ಧಾರಗಳು, ಈ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅಪನಂಬಿಕೆಯನ್ನು ಹೊಂದಿರುವಂಥ ಸರ್ಕಾರದ ಧೋರಣೆಯನ್ನು ಈ ಸಂದರ್ಭದಲ್ಲಿ ಖಂಡಿಸದೇ ಬೇರೆ ದಾರಿಯೇ ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನೊಂದು ಮಾತು. ಹೇಗೆ ಈ ಜನತಾ ದಳದ ಸರ್ಕಾರ ಅಥವಾ ರಾಜ್ಯಸರ್ಕಾರ ದ್ವಿಮುಖವಾದಂಥ ದ್ವಂದ್ವವಾದಂಥ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಾ ಇದೆ ಎಂಬುದಕ್ಕೆ ಬಹಳ ಸ್ಪಷ್ಟವಾದ ಉದಾಹರಣೆ ಇದೆ. ಬಿಹಾರ ಸರ್ಕಾರವನ್ನು, ಕೇಂದ್ರ ಸರ್ಕಾರ ವಜಾ ಮಾಡಿತು. ಏಕೆ ವಜಾ ಮಾಡಿತು ಎಂಬುದು ನಮಗೆಲ್ಲಾ ಗೊತ್ತೇ ಇದೆ. ಅಲ್ಲಿ ಸಂವಿಧಾನದ ಎಲ್ಲಾ ಅಂಶಗಳೂ ಕುಸಿದು ಬಿದ್ದು, ಅಲ್ಲಿ ಒಂದು ಬಂಗಲೆ ಆಡಳಿತ ಸ್ಥಾಪಿತವಾಗಿತ್ತು. 8 ವರ್ಷದಲ್ಲಿ ಸುಮಾರು

57 ಸಾವಿರ ಜನ ಕೊಲೆಯಾದರು. ಸುಮಾರು 4,800 ಕೇಸುಗಳು ಕಂಟೆಸ್ಟ್ ಆಫ್ ಕೋರ್ಟ್‌ಆಗಿ, ಇನ್ನೂ ನಡೆಯುತ್ತಾ ಇವೆ. ಇದಕ್ಕಿಂತ ಇನ್ನೊಂದು ಆಘಾತಕಾರಿ ಸಂಗತಿ ಎಂದರೆ, ಸುಮಾರು 300 ಜನ ಐ.ಎ.ಎಸ್. ಅಧಿಕಾರಿಗಳು ಕಳೆದು ಹೋಗಿದ್ದಾರೆ, ಸಿಗುತ್ತಾ ಇಲ್ಲ. ನಾನು ಬಿಹಾರದ ಬಗ್ಗೆ ಹೆಚ್ಚು ಹೇಳುವುದಿಲ್ಲ, ಹೇಳುವುದಕ್ಕೆ ಹೊರಟರೆ ಇನ್ನೂ ಸಾಕಷ್ಟು ಸಂಗತಿಗಳು ಇವೆ. ಇಂತಹ ಒಂದು ಸ್ಥಿತಿಯಲ್ಲಿ ನಾವು ಸಂವಿಧಾನಬದ್ಧವಾಗಿ, ಸಂವಿಧಾನದ ಎಲ್ಲಾ ಅಂಶಗಳೂ ಕುಸಿದು ಬಿದ್ದುಹೋಗುವ ಸಂದರ್ಭದಲ್ಲಿ ಅಲ್ಲಿ ರಾಷ್ಟ್ರಪತಿ ಆಡಳಿತವನ್ನು ಹಾಕಿದರೆ, ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು, ಪ್ರತಿಯೊಬ್ಬರೂ ಕೇಂದ್ರಸರ್ಕಾರದ ನಿಲುವನ್ನು ಖಂಡಿಸಿದರು. ಆದರೆ, ಇಲ್ಲಿ ಸಂವಿಧಾನಬದ್ಧವಾಗಿ ಈ ಚುನಾವಣೆಗಳನ್ನು ನಡೆಸಬೇಕಾಗಿತ್ತು. ಏಕೆ ಈ ಚುನಾವಣೆಗಳನ್ನು ಮುಂದೂಡಿದರು? ಇವರಿಗೆ ಯಾವ ನೈತಿಕತೆ ಇದೆ, ಯಾವ ಮೌಲ್ಯ ಇದೆ? ಇವರಿಗೆ ಯಾವ ಆದರ್ಶ ಇದೆ. ಏಕೆ ಈ ದ್ವಂದ್ವ ನೀತಿ, ಜನತಾ ದಳ ಸರ್ಕಾರದಲ್ಲಿ? ಅಲ್ಲಿ ಒಂದು ಕಡೆ ಸಂವಿಧಾನ ಕುಸಿದು ಬಿದ್ದಾಗ, ರಾಷ್ಟ್ರಪತಿ ಆಳ್ವಿಕೆ ಹಾಕಿದರೆ ಅದನ್ನು ವಿರೋಧಿಸುತ್ತಾರೆ, ಇಲ್ಲಿ ಸಂವಿಧಾನಬದ್ಧವಾಗಿ ನಾವು ಮಾಡಬೇಕೆಂಬ ಸಂಗತಿಗಳು ಇದ್ದರೂ ಅದನ್ನು ಮಾಡುತ್ತಾ ಇಲ್ಲ. ಈ ರೀತಿ ಇಬ್ಬಗೆಯ, ದ್ವಂದ್ವದ ನೀತಿಯನ್ನು ಅನುಸರಿಸುವಂಥ ಸಂದರ್ಭದಲ್ಲಿ ನಾನು ಈ ಜನತಾ ದಳ ಸರ್ಕಾರ ತಕ್ಷಣದಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನೊಂದು ಭಯ ರಾಜ್ಯದ ನಾಲ್ಕುಮುಕ್ಕಾಲು ಕೋಟಿ ಜನತೆಯಲ್ಲಿ, ವಿಶೇಷವಾಗಿ ಜನಪ್ರತಿನಿಧಿಗಳ ಸ್ಥಾನವನ್ನು ಬಯಸುವುದಕ್ಕೆ ಮುಂದಾಗಿರುವಂಥ ಯುವಕರನ್ನು ಕಾಡುತ್ತಾ ಇರುವಂದೆಂದರೆ, ಮುಂದಿನ ದಿನಗಳಲ್ಲಿ ತಾಲ್ಲೂಕು ಪಂಚಾಯ್ತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಈ ಸರ್ಕಾರ ರದ್ದು ಮಾಡುತ್ತೆ, ಅದಕ್ಕೆ ಬೇಕಾಗಿರುವಂಥ ಎಲ್ಲಾ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತಿದೆ ಎಂಬ ಭಾವನೆ ಬಂದಿದೆ. ತಾಲ್ಲೂಕು ಪಂಚಾಯ್ತಿತಿಗಳನ್ನು ರದ್ದುಮಾಡಬೇಕೆಂದು ಕೇಂದ್ರಕ್ಕೆ ಬರೆದಿರುವಂಥ ಪತ್ರ ಇತ್ಯಾದಿ ಎಲ್ಲಾ ಉಲ್ಲೇಖವಾಗಿದೆ. ಆದರೆ, ಈಗ ಮಂಡಲ ಪಂಚಾಯ್ತಿಗಳನ್ನು ಮಾಡುವುದರಿಂದ ಕ್ಷೇತ್ರಗಳು ದೊಡ್ಡದಾಗುತ್ತದೆ.

ಶ್ರೀ ಕೆ. ವೆಂಕಟೇಶ್ :— ತಾಲ್ಲೂಕು ಪಂಚಾಯ್ತಿಗಳನ್ನು ರದ್ದುಮಾಡಬೇಕೆಂದು ಹೇಳಿದವರು ಮಾನ್ಯ ಬಾಬಾಗೌಡ ಪಾಟೀಲರು.

ಶ್ರೀ ವಿಶ್ವೇಶ್ವರ ಹೆಗಡೆ :— ಇಲ್ಲ, ತಾವು ತಪ್ಪು ತಿಳಿದುಕೊಂಡಿದ್ದೀರಿ. ನೀವು ಸಾಕಷ್ಟು ಗೊಂದಲದಲ್ಲಿಯೇ ಇದ್ದೀರಿ. ಬಾಬಾಗೌಡರು ಆ ರೀತಿ ಹೇಳಿಲ್ಲ. ನೀವು ಗೊಂದಲದಿಂದ ಹೊರಗೆ ಬಂದರೆ, ಯಾರು ಯಾರು ಏನೇನು ಹೇಳಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೆಮಿನಾರ್ ಮಾಡುವುದಿದ್ದರೂ, ಏನೇ ಮಾಡುವುದಿದ್ದರೂ ಕೂಡ ಸಂವಿಧಾನಬದ್ಧವಾಗಿರುವಂಥಾದ್ದನ್ನು ಕೇಂದ್ರದ ಸಚಿವರಾಗಿ, ಅದನ್ನು ಹೇಳುತ್ತಾರೆಂದು ನಾನು ನಂಬಿಕೊಳ್ಳುವುದಿಲ್ಲ. ಮತ್ತು ಅವರು ಹಾಗೆ ಹೇಳಿಲ್ಲವೆಂದು ವಿಶ್ವಾಸ ನನಗಿದೆ. ನಾವು ಅವರ ಜೊತೆಯಲ್ಲಿ ಮಾತುಕತೆ ಮಾಡಿರುವವರು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ತಾವು ರಾಜಕೀಯವಾಗಿ ಹೇಳುತ್ತಾ ಇದ್ದೀರಿ. ಪ್ರತಿರೋಧವಾಗಿ ಏನು ಹೇಳಬೇಕೋ ಅದನ್ನು ಹೇಳುತ್ತಾ ಇದ್ದೀರಿ. ನಿಜವಾಗಿಯೂ ತಾವೊಬ್ಬ ಶಾಸಕರಾಗಿ, ನಿಮಗೆ ಏನು ಅನಿಸುತ್ತದೆ, ನಿಮ್ಮ ಅನುಭವ ಏನು ನಿಜ ಅಧಿಕಾರ ವಿಕೇಂದ್ರೀಕರಣ ಮಾಡಿದ್ದಾರೆ. ನಡೆಯುವುದೇ ಎಡವುದು, ನಡೆಯದಿರುವವರು ಯಾರೂ ಎಡವುದಿಲ್ಲ. ನಾವು ನಡೆದಿದ್ದೇವೆ, ಹೆಜ್ಜೆ ಇಟ್ಟಿದ್ದೇವೆ. ನಾವು ಏನಾಗಿದ್ದೇವೆಂಬುದನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಎಂಬುದನ್ನು ಪ್ರಾಮಾಣಿಕವಾಗಿ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಶ್ರೀಮತಿ ಲಲಿತಾ ನಾಯಕ್‌ರವರು ವಿಷಯ ಪ್ರಸ್ತಾಪ ಮಾಡಿ, ನಾವು ನಡೆಯುತ್ತಾ ಇದ್ದೇವೆಂದು ಹೇಳಿದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರು ಬಿದ್ದುಹೋಗಿದ್ದಾರೆ, ಅವರಿಗೆ ಗೊತ್ತೇ ಇಲ್ಲ. ಅವರು, ನಾವಿನ್ನೂ ನಡೆಯುತ್ತಾ ಇದ್ದೇವೆಂದು ಅಂದುಕೊಂಡಿದ್ದಾರೆ. ಆದರೆ, ನೀವು ನಡೆಯುತ್ತಾ ಇಲ್ಲ. ಈ ವಿಷಯದಲ್ಲಿ ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಕೊನೆಯದಾಗಿ ನಾನು ಕನ್ ಕ್ಲೂಡ್ ಮಾಡುವುದು ಇಷ್ಟೆ. ಮಂಡಲ್ ಪಂಚಾಯ್ತಿಯ ಕ್ಷೇತ್ರಗಳು ದೊಡ್ಡದಾಗುವುದರಿಂದ, ತಾಲ್ಲೂಕು ಪಂಚಾಯ್ತಿಯ ಕ್ಷೇತ್ರ ಮತ್ತು ಮಂಡಲ್ ಪಂಚಾಯ್ತಿಯ ಕ್ಷೇತ್ರಕ್ಕೆ ಬಹಳ ಸಾಮ್ಯ ಬರುವುದರಿಂದಾಗಿ, ಇದೊಂದು ಗೊಂದಲ ನಿರ್ಮಾಣವಾಗುತ್ತದೆ ಎಂಬ ಬಲವಾದಂಥ ನಂಬಿಕೆ ಇದೆ. ಇದರಿಂದಾಗಿ ಯಾರು ಯುವಕರು ಸಾರ್ವಜನಿಕ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಮುಂದೆ ಬರಬೇಕು, ತಮ್ಮ ವ್ಯಕ್ತಿತ್ವವನ್ನು ಆ ರೀತಿ ರೂಪಿಸಿಕೊಳ್ಳಬೇಕೆಂಬ ಭರವಸೆಯನ್ನು ಕಲ್ಪಿಸಿಕೊಂಡಿದ್ದರು, ಅದಕ್ಕೂ ಸಹ ನೀವು ತಣ್ಣೀರು ಎರಚಿದಂತೆ ಆಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ, ತಕ್ಷಣದಲ್ಲಿಯೇ ತಾವು ಚುನಾವಣೆಯನ್ನು ನಡೆಸಬೇಕು. ಮತ್ತು ಈ ಎಲ್ಲಾ ವ್ಯವಸ್ಥೆಗಳಿಗೆ, ಮತ್ತು ಈ ಎಲ್ಲಾ ಆದರ್ಶ ಮೌಲ್ಯಗಳನ್ನು ಸ್ಥಾಪಿಸುವುದಕ್ಕೆ ತಾವು ಮುಂದಾಗಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೇ, ಈ ಪಂಚಾಯತ್ ರಾಜ್ ಚುನಾವಣೆಯನ್ನು ಮುಂದೆ ಹಾಕಿರತಕ್ಕಂಥ ಸರ್ಕಾರದ ನಿಲುವನ್ನು ವಿರೋಧಿಸಿ ಏನೊಂದು ಸೂಚನೆಯನ್ನು ನಮ್ಮ ನಾಯಕರು ತಂದಿದ್ದಾರೆ, ಅದಕ್ಕೆ ನನ್ನ ಸಹಮತಿಯನ್ನು ವ್ಯಕ್ತಮಾಡುತ್ತಾ ನನ್ನ ಮಾತನ್ನು ಪ್ರಾರಂಭ ಮಾಡುತ್ತಿದ್ದೇನೆ. 1994ರಲ್ಲಿ ಈ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಜಪವನ್ನೇ ಹೇಳುತ್ತಾ, ನಾವು ಈ ಹಿಂದೆ ಸರ್ಕಾರ ನಡೆಸುತ್ತಾ ಇದ್ದಂಥ ಸಂದರ್ಭದಲ್ಲಿ ದಿವಂಗತ ನಜೀರ್ ಸಾಬ್‌ರವರ ಕಾಲದಲ್ಲಿ, ಈ ರಾಜ್ಯದ ಮೂಲೆ ಮೂಲೆಯ ಗ್ರಾಮಾಂತರ ಪ್ರದೇಶದ ಜನಕ್ಕೆ ಎಂತಹ ಆಡಳಿತವನ್ನು ಕೊಟ್ಟಿದ್ದೆವು ಎಂಬ ಬಹಳ ದೊಡ್ಡ ಘೋಷಣೆಯನ್ನು ಮುಂದೆ ಮಾಡಿಕೊಂಡು, ಆ ಗ್ರಾಮೀಣ ಪ್ರದೇಶದ ಜನರಿಂದ ಮತವನ್ನು ತೆಗೆದುಕೊಂಡು ಸರ್ಕಾರವನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಾಯಿತು. ಎನ್ನುವುದನ್ನು ಈ ಸರ್ಕಾರ ಮರೆಯಬಾರದು. ಸರ್ಕಾರ ಯಾವುದೇ ಬರಲಿ, ಪಂಚಾಯ್ತಿಗಳಲ್ಲಿ ಎಷ್ಟೇ

ಅಭಿವೃದ್ಧಿಯಾಗಿರಲಿ, ಅಥವಾ ಪಂಚಾಯ್ತಿ ವ್ಯವಸ್ಥೆ ಏನೇ ಆಗಿರಲಿ ನನಗನಿಸಿದ್ದು ಏನೆಂದರೆ, ಈ ಸರ್ಕಾರಗಳು ಬಂದಾಗ ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಪಂಚಾಯತ್ ರಾಜ್ ಖಾತೆಗೆ ಬಂದಿರತಕ್ಕ ಮಂತ್ರಿಗಳು, ಅಂದರೆ ಅವರು ನಜೀರ್‌ಸಾಬ್ ಆಗಿರಬಹುದು, ಮಾನ್ಯ ಘೋರ್ಪಡೆಯವರಾಗಿರಬಹುದು. ಈ ಸಾರಿ ಜನತಾ ದಳದ ಸರ್ಕಾರ ಆರಂಭವಾದಾಗ, ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಈ ಖಾತೆಯ ಮಂತ್ರಿ ಮಾಡಿದಾಗ ನಾವೆಲ್ಲರೂ ಕೂಡ ಸಂತೋಷಪಟ್ಟೆವು. ಕಾರಣ ಏನೆಂದರೆ, ಅವರು ಯಾವುದೇ ರಾಜಕೀಯ ಪಕ್ಷದಿಂದ ಬಂದಿದ್ದರೂ ಕೂಡ, ಈ ಖಾತೆಯನ್ನು ನಿಭಾಯಿಸತಕ್ಕಂಥ ಬದ್ಧತೆ, ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಬಗ್ಗೆ ಇರತಕ್ಕಂಥ ಕಾಳಜಿ, ಇಂತಹವರಿಗೆ ಆ ಖಾತೆಯನ್ನು ವಹಿಸಿಕೊಟ್ಟಿದ್ದು, ಆ ಒಂದು ಇಲಾಖೆಗೆ ಶೋಭೆಯನ್ನು ತಂದಿತ್ತು. ಹಾಗಾಗಿ ಇವತ್ತು ಎಂ.ಪಿ. ಪ್ರಕಾಶ್‌ರವರ ಮೇಲೆ ನಮಗೆ ಅನುಮಾನಗಳು ಪ್ರಾರಂಭವಾಗಿವೆ. ಅವರು ಮಂತ್ರಿಮಂಡಲದ ಕ್ಯಾಬಿನೆಟ್ ಸಭೆಯಲ್ಲಿ ಏನು ಮಾತನಾಡಿದರು, ಆಮೇಲೆ ಯಾವ ರೀತಿಯ ನಡವಳಿಕೆ ನಡೆದುಕೊಂಡರು. ಇಂತಹ ಸಜ್ಜನರೂ ಕೂಡ ನಮ್ಮ ರಾಜಕೀಯ ಸುಳಿಯಲ್ಲಿ ಯಾವರೀತಿ ತೇಲುತ್ತಾ ಇರುತ್ತಾರೆ ಎನ್ನುವುದಕ್ಕೆ ಒಂದು ದೊಡ್ಡ ನಿದರ್ಶನ. ಅವರು ಕ್ಯಾಬಿನೆಟ್ ಸಭೆಯಿಂದ ಹೊರಗೆ ಬಂದು, ಪ್ರತಿಭಟನೆ ಮಾಡಿದಂಥ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅವರ ಬಗ್ಗೆ ಹೆಮ್ಮೆಯನ್ನು ಪಟ್ಟಿದ್ದೆವು. ಏನಾದರಾಗಲೀ ಮಾನ್ಯ ಘೋರ್ಪಡೆಯವರು, ಪ್ರಕಾಶ್‌ರಂಥವರು ಇವತ್ತು ಈ ನಿಟ್ಟಿನಲ್ಲಿ ಆಲೋಚನೆ ಮಾಡತಕ್ಕಂಥಾದ್ದು, ನಮ್ಮ ರಾಜಕೀಯ ಮೌಲ್ಯವನ್ನು ಹೆಚ್ಚಿಸತಕ್ಕ ಕೆಲಸ ಆಗಿದೆ ಎನ್ನುವಂಥದ್ದು. ಆದರೆ, ಇತ್ತೀಚೆಗೆ ಈ ಸುಗ್ರೀವಾಜ್ಞೆಯನ್ನು ಅವರೂ ಸೇರಿ ತಂದಾಗ ನಮ್ಮೆಲ್ಲರಿಗೂ ಕೂಡ ಅತ್ಯಂತ ವ್ಯಸನವಾಯಿತು. ಅವರು ಏನು ಮಾಡುತ್ತೇವೆಂದು ಹೇಳತಕ್ಕಂಥ ಒಂದೊಂದು ಉದಾಹರಣೆಗಳನ್ನು ಈಗಾಗಲೇ ಹೇಳಿದರು. ಈ ಪಂಚಾಯತ್ ರಾಜ್ ವ್ಯವಸ್ಥೆ ಪದೇ ಪದೇ ಬದಲಾವಣೆಯಾಗತಕ್ಕಂಥಾದ್ದು ನಾನು ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆವತ್ತು ಅಬ್ದುಲ್ ನಜೀರ್ ಸಾಬ್‌ರವರು ಮಂತ್ರಿಗಳಾಗಿದ್ದರು. ನಮ್ಮೆಲ್ಲರಿಗೂ ಸಂತೋಷ ಇತ್ತು. ನಾವೆಲ್ಲರೂ ಆ ಅಧಿಕಾರ ವಿಕೇಂದ್ರೀಕರಣದಲ್ಲಿ ಕೆಲಸ ಮಾಡಿ, ಇವತ್ತು ಶಾಸಕರಾಗಿ ಬಂದಿದ್ದೇವೆ. ತಾವು ಒಂದು ಯೋಚನೆ ಮಾಡಿ, ಬಹುಶಃ ಸರ್ವೆ ಮಾಡಿದರೆ, ತಮಗೆ ಗೊತ್ತಾಗುತ್ತದೆ. ಮಂಡಲ್ ಪಂಚಾಯ್ತಿ ಎನ್ನುವ ಬೋರ್ಡನ್ನು ಕಿತ್ತುಹಾಕಿಸಿ, ಗ್ರಾಮ ಪಂಚಾಯ್ತಿ ಎಂದು ಬರೆಸುವುದಕ್ಕೆ ಎಷ್ಟು ಹಣ ಖರ್ಚಾಯಿತು? ಪ್ರಧಾನ ಮತ್ತು ಉಪ ಪ್ರಧಾನ ಎಂಬ ಬೋರ್ಡನ್ನು ಕಿತ್ತುಹಾಕಿ, ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎಂದು ಬರೆಸುವುದಕ್ಕೆ ಇಡೀ ರಾಜ್ಯದಲ್ಲಿ ಎಷ್ಟು ಖರ್ಚಾಯಿತು? ಇದು ಸಣ್ಣ ಕೆಲಸ ಇರಬಹುದು, ಆದರೆ ಹಣ ಎಷ್ಟು ಖರ್ಚಾಯಿತು? ಇವತ್ತು ಜನತಾ ದಳ ಸರ್ಕಾರ ಬಂದಾಗಿನಿಂದ ನಿಮ್ಮ ಇತ್ತೀಚಿನ ಕೆಲಸಗಳನ್ನು ನೋಡಿದಾಗ, ಈ ಪಂಚಾಯ್ತಿಗಳ ಬಗ್ಗೆ ಒಂದು ರೀತಿಯ ವಕ್ರ ದೃಷ್ಟಿಯೇ ಬಿದ್ದಿದೆ ಎಂದು ನನಗನಿಸುತ್ತದೆ.ಇದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ ಅಲ್ಲಿ ಪಂಚಾಯ್ತಿ ಕಾರ್ಯದರ್ಶಿಗಳನ್ನು ನೇಮಕ ಮಾಡಬೇಕು. ಹಿಂದೆ ಮಂಡಲ್ ಪಂಚಾಯ್ತಿಯ ವ್ಯವಸ್ಥೆಯಲ್ಲಿ ಕಾರ್ಯದರ್ಶಿಗಳನ್ನು ಸ್ವಲ್ಪ ಒಳ್ಳೆಯವರನ್ನು ಹಾಕಿದ್ದರು. ಆದರೆ ಇತ್ತೀಚೆಗೆ ನೀವು

ಪಂಚಾಯಿತಿ ಕಾರ್ಯದರ್ಶಿಗಳನ್ನು ಯಾರನ್ನು ಮಾಡಿದ್ದಾರೆ. ಅನೇಕ ಸಾರಿ ನಾನು ಅವರ ಹತ್ತಿರ ಮಾತನಾಡಿದ್ದೇನೆ. ನಮ್ಮ ತೀರ್ಥಹಳ್ಳಿಯಲ್ಲಿ ಎಂತಹವರನ್ನು ಹಾಕಿದ್ದೀರಿ ಅಂದರೆ ಆತನಿಗೆ ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ. ಆತನ ಭಾಷೆ ಉರ್ದು ಆ ಕಡೆಯವರನ್ನು ತಂದು ನಮ್ಮಲ್ಲಿ ಹಾಕಿದ್ದಾರೆ. ಎರಡು ಮೂರು ಸಾರಿ ಬದಲಾವಣೆ ಮಾಡಿಯೆಂದು ಹೇಳಿದೆ. ಬದಲಾವಣೆ ಮಾಡಿ ಯಾರನ್ನು ಹಾಕುವುದು? ಎಲ್ಲರಿಗೂ ಪ್ರಮೋಷನ್ ಕೊಟ್ಟಿದ್ದಾರೆ. ಪಂಚಾಯಿತಿ ವ್ಯವಸ್ಥೆಯಲ್ಲಿ ಅವರಿಗೇನು? ಅವರಿಗೆ ಯಾವ ಸ್ಥಾನಗಳು, ಈ ರೀತಿಯ ಪ್ರಯೋಗಕ್ಕೆ ಬಲಿಪಶು ಆಗಿರತಕ್ಕವರು ಗ್ರಾಮೀಣ ಜನ. ನನಗೊಂದು ಉದಾಹರಣೆಗೆ ನೆನಪು ಬರುತ್ತದೆ. ನಮ್ಮ ವೈದ್ಯಕೀಯ ಸಂಶೋಧನೆಯ ವಿಭಾಗದಲ್ಲಿ ಏನಾದರೂ ಹೊಸ ಮದ್ದನ್ನು ತಯಾರು ಮಾಡಿದರೆ ಅದನ್ನು ಮೊದಲು ಪ್ರಯೋಗ ಮಾಡತಕ್ಕದ್ದು ಇಲಿಗಳ ಮೇಲೆ. ಅದು ಬದುಕುತ್ತದೋ ಸಾಯುತ್ತದೋ ಎಂದು ನೋಡುವುದಕ್ಕೆ ಮೊದಲು ಇಲಿಗಳ ಮೇಲೆ ಪ್ರಯೋಗ ಮಾಡುತ್ತಾರೆ. ಅದು ಬದುಕಿದರೆ ಆಮೇಲೆ ಮನುಷ್ಯನ ಮೇಲೆ ಪ್ರಯೋಗ ಮಾಡುತ್ತಾರೆ. ಹಾಗೆ ಈ ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಮತ್ತು ಮಾನ್ಯ ಎಸ್.ಎಸ್. ಪಾಟೀಲರ ಸಹಕಾರರಂಗದಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಮೊದಲು ಗ್ರಾಮೀಣ ಜನರು. ಇಲಿಗೆ ಸಮಾನವಾಗಿ ಗ್ರಾಮೀಣ ಜನ ಸಿಗುವುದಾದರೆ ಇದಕ್ಕೆ ಅರ್ಥವಿಲ್ಲ. ಇದನ್ನು ಏಕೆ ಮಾಡಬೇಕು? ಇವತ್ತು ಪಂಚಾಯಿತಿ ಎಷ್ಟು ದೊಡ್ಡದಾಗುತ್ತದೆ ಅದು ಎಷ್ಟು ವಿಸ್ತಾರ ಇರಬೇಕು ಎಷ್ಟು ಜನರಿಗೆ ಒಬ್ಬ ಸದಸ್ಯರು ಆಯ್ಕೆಯಾಗಬೇಕು ಅದಕ್ಕೆ ಮಹತ್ವ ಕೊಡಬೇಕಾಗುತ್ತದೆ. ನೀವು ಪಂಚಾಯಿತಿಗೆ ಹಣ ಮತ್ತು ಅಧಿಕಾರ ಕೊಟ್ಟು ಅದಕ್ಕೆ ಮಹತ್ವ ಕೊಡಬೇಕಾಗುತ್ತದೆ ನೀವು ಪಂಚಾಯಿತಿಗೆ ಹಣ ಮತ್ತು ಅಧಿಕಾರ ಕೊಟ್ಟು ಅದಕ್ಕೆ ಜೀವಕಳೆ ತುಂಬುವಂತಹ ವ್ಯವಸ್ಥೆಯಾಗಬೇಕು. ಅದು ಆಗಲಿಲ್ಲ, ಇವತ್ತು ಬದಲಾವಣೆ ಮಾಡಿದ್ದಾರೆ. ನೀವು ಅಧಿಕಾರಕ್ಕೆ ಬಂದ ನಂತರ ನಾವು ಇಲ್ಲಿ ಹೋರಾಟ ಮಾಡಿದ್ದೇವೆ, ಅಸೆಂಬ್ಲಿಯೊಳಗೆ ಮಾಡಿದ್ದೇವೆ. ಎಲ್ಲ ಪಂಚಾಯಿತಿ ಸದಸ್ಯರು ವಿಧಾನಪರಿಷತ್ತಿನ ಸದಸ್ಯರನ್ನು ಆಯ್ಕೆ ಮಾಡುವಾಗ ಅವರ ಓಟಿನ ಹಕ್ಕನ್ನು ಮೊಟಕು ಮಾಡಿದ್ದೀರಿ. ಆದರ ಬಗ್ಗೆ ಬಹಳ ದೊಡ್ಡ ಹೋರಾಟವಾಯಿತು. ಆ ಸಂದರ್ಭದಲ್ಲಿ ಅದನ್ನು ಆಗ ವಾಪಸ್ಸು ತೆಗೆದುಕೊಂಡಿದ್ದೀರಿ. ಅತ್ಯಂತ ಬೇಸರವಾಗುತ್ತದೆ. ಪಂಚಾಯಿತಿಗಳು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಒಂದೊಂದು ಲಕ್ಷ ರೂಪಾಯಿ ಒಂದೊಂದು ಪಂಚಾಯಿತಿಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದು ಇವತ್ತಿಗೂ ಕೂಡ ಹಣ ಹೋಗಲಿಲ್ಲ. ಇವರು ಕೊಟ್ಟಿರತಕ್ಕ ಹಣ ಬುಕ್‌ನಲ್ಲಿ ಕರೆಂಟ್ ಬಿಲ್‌ಗೆ ಅಡ್ಜೆಸ್ಟ್ ಆಯಿತು. ಅವರು ನಾಲ್ಕು ಬಸ್ ಸ್ಟಾಪ್‌ಗಳನ್ನು ಕಟ್ಟಿಸಿರಬಹುದು. ಅವರ ಕೈಯಲ್ಲಿ ಚರಂಡಿ ಮೋರಿ ಕೆಲಸ ಮಾಡಲಿಕ್ಕೆ ಆಗಲಿಲ್ಲ. ನಾಲ್ಕು ಬಸ್ ಸ್ಟಾಪ್ ಮಳೆಯಲ್ಲಿ ತೊಯ್ಯದಹಾಗೆ, ಬಿಸಿಲಿನಲ್ಲಿ ಒಣಗದಹಾಗೆ ಕಟ್ಟಿಸಿದ್ದಾರೆ. ಅವರು ಏನೂ ಹೇಳಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಇನ್ನು ಕೂಡ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬದಲಾವಣೆ ಮಾಡುತ್ತೇವೆಂದರೆ ಏನು ಬದಲಾವಣೆ ಮಾಡುತ್ತೀರಿ? ಸುಮಾರು 64 ಸಾವಿರಕ್ಕಿಂತ ಹೆಚ್ಚು ಜನ ಪಂಚಾಯಿತಿ ಸದಸ್ಯರನ್ನು

ಮುಂದುವರಿಸಬೇಕೆಂದು ಹೇಳುತ್ತಿದ್ದೀರಿ. ಮುಂದೆ ಬರುವಂತಹ ಚುನಾವಣೆಯಲ್ಲಿ ಅವರನ್ನು ದುರುಪಯೋಗ ಮಾಡಿಕೊಳ್ಳುವ ಒಂದು ಸನ್ನಾಹ ನಿಮ್ಮ ಕಡೆಯಿಂದ ಆಗುತ್ತಿದೆ. ಅವರು ನಿಮ್ಮ ಕಡೆ ಇದ್ದು ಚುನಾವಣೆಯಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾರೆಂದು ನೀವು ತಿಳಿದುಕೊಳ್ಳಬೇಡಿ. ವಿಧಾನಪರಿಷತ್ತಿನ ಸದಸ್ಯರನ್ನು ಆಯ್ಕೆ ಮಾಡಲಿಕ್ಕೆ ಇರತಕ್ಕ ಅಧಿಕಾರವನ್ನು ಮೊಟಕು ಮಾಡಿದ ದಿನವೇ ಕೆಲವರು ಭಾರತೀಯ ಜನತಾ ಪಕ್ಷದವರಾಗಿದ್ದಾರೆ, ಕೆಲವರು ಕಾಂಗ್ರೆಸ್ ಪಕ್ಷದವರಾಗಿದ್ದಾರೆ. ಅವರು ಯಾವ್ಯಾವ ಪಕ್ಷಕ್ಕೊ ಹೋಗಿದ್ದಾರೆ. ಬಹಳಜನ ನಿಮ್ಮ ಪಕ್ಷದಲ್ಲಿ ಉಳಿದಿಲ್ಲ. ಅವರನ್ನು ಮುಂದುವರಿಸುತ್ತೇವೆಂದು ಹೇಳುತ್ತಿದ್ದೀರಿ. ಮುಂದಿನ ಚುನಾವಣೆಯಲ್ಲಿ ಏನಾಗುತ್ತದೆಂದು ಅವರಿಗೆ ಈಗಾಗಲೇ ಗೊತ್ತಾಗಿದೆ. ಸಂವಿಧಾನಕ್ಕೆ ಅಪಚಾರ ಮಾಡುವ ಕಾರ್ಯಕ್ರಮ ಮತ್ತು ಜನತೆಯ ಅಭಿಪ್ರಾಯವನ್ನು ಹಾಳುಮಾಡಿ ಈವೊಂದು ಪಂಚಾಯಿತಿ ಚುನಾವಣೆಯನ್ನು ಮುಂದೂಡಿದ್ದೀರಿ. ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ಎಂ.ಪಿ. ಪ್ರಕಾಶ್ ರವರು ಅತ್ಯಂತ ಸಜ್ಜನ ವ್ಯಕ್ತಿ ಅವರ ಕಾಲದಲ್ಲಿ ಈ ಕೆಲಸವನ್ನು ಮಾಡುತ್ತಿದ್ದೀರಿ, ಇದು ಅತ್ಯಂತ ದುರಂತ. ನಿಮ್ಮ ಕುಸ್ತಿ ಒಳಜಗಳವನ್ನು ಮುಚ್ಚಿಕೊಳ್ಳುವುದಕ್ಕೆ ಈವೊಂದು ಚುನಾವಣೆಯನ್ನು ಮುಂದೂಡಿರತಕ್ಕದ್ದು ರಾಜ್ಯದ ಜನತೆಗೆ ಬಗೆದ ದ್ರೋಹ. ಇದನ್ನು ನಾವು ಖಂಡಿಸುತ್ತೇವೆ. ಇದನ್ನು ವಾಪಸ್ಸು ಪಡೆಯಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) :— ಮಾನ್ಯ ಅಧ್ಯಕ್ಷರೆ, ಗ್ರಾಮಪಂಚಾಯಿತಿ ಚುನಾವಣೆ ಮುಂದೂಡಿಕೆಗೆ ಅದನ್ನು ಮುಂದೂಡಲಿಕ್ಕೆ ಬಹಳ ಪ್ರಬಲವಾಗಿ ಇವರು ಅದನ್ನು ಮಾರ್ಪಡಿಸಿ, ಪ್ರಸ್ತುತ ಕೆಲಸ ಮಾಡತಕ್ಕ ಗ್ರಾಮಪಂಚಾಯಿತಿಗಳು ಪೊಟೆನ್ಸಿಯಾಲಿಟಿ ಇಲ್ಲ, ಹೆಚ್ಚಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಿಲ್ಲ ಅದಕ್ಕೆ ಅದನ್ನು ಬದಲಾವಣೆ ಮಾಡಿ ಹಿಂದೆ ಇದ್ದಹಾಗೆ ಮಂಡಲ್ ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಆ ಉದ್ದೇಶವನ್ನು ಹೊಂದಿ ಹಾಲಿ ಇರತಕ್ಕ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡಿದ್ದೇವೆಂದು ಕಾರಣವನ್ನು ಹೇಳತಕ್ಕದ್ದರ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇದು ಸಂಪೂರ್ಣವಾಗಿ ರಾಜಕೀಯ ದುರುದ್ದೇಶದಿಂದ ಕೂಡಿರತಕ್ಕದ್ದು. ಇದರಲ್ಲಿ ಯಾವುದೇ ತಿರುಳು ಇಲ್ಲ, ನ್ಯಾಯವಿಲ್ಲ ಎನ್ನತಕ್ಕ ವಿಚಾರವನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ತಮ್ಮ ಮುಖೇನ ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಪಂಚಾಯತ್ ರಾಜ್ ಕಾಯಿದೆಗೆ ದಿವಂಗತ ರಾಜೀವಗಾಂಧಿಯವರು ತಿದ್ದುಪಡಿ ತಂದಾಗ ಆ ಸಂದರ್ಭದಲ್ಲಿ ಇಡೀ ರಾಷ್ಟ್ರವ್ಯಾಪಿ ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ಎಲ್ಲಾ ರಾಜ್ಯಗಳ ಪರಿಣತರನ್ನು ಆಹ್ವಾನಿಸಿ ಅವರೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈವೊಂದು ಸಮಗ್ರವಾದ ಬದಲಾವಣೆಯನ್ನು ತಂದರು. ಮೂರು ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದರು. ಅದನ್ನು ತರುವುದರ ಜೊತೆಯಲ್ಲಿಯೇ ದೊಡ್ಡ ಮಹತ್ತರವಾದ ಸಾಧನೆಯನ್ನು ಮಾಡಿದರು.

ಪ್ರಪ್ರಥಮವಾಗಿ ಸ್ಥಳೀಯ ಸಂಸ್ಥೆಗಳಿಗೆ ವಿಶೇಷವಾಗಿ ರಿಸರ್ವೇಷನ್ ಪಾಲಿಸಿಯನ್ನು ಗ್ರಾಮೀಣ ಪ್ರದೇಶಗಳಿಗೆ ಹೊಸದಾಗಿ ತಂದರು. ಮೀಸಲಾತಿಯನ್ನು ತರತಕ್ಕ ಸಂದರ್ಭದಲ್ಲಿ ಶೇಕಡ 23 ರಷ್ಟು ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳಿಗೆ ಶೇಕಡ 33ರಷ್ಟು ಹಿಂದುಳಿದ ವರ್ಗ ಹಾಗೂ ಇತರೆ ವರ್ಗಗಳವರಿಗೆ ಸಮಾನವಾಗಿ ಒಂದು ಅವಕಾಶವನ್ನು ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ಅಳವಡಿಸಿ ಹೊಸದಾಗಿ ರಾಷ್ಟ್ರವ್ಯಾಪಿಯಾಗಿ ಒಂದು ಹೊಸ ಮೀಸಲಾತಿಯನ್ನು ತಂದರು. ಆ ಸಂದರ್ಭದಲ್ಲಿ ಹಿಂದೆ ಇದ್ದ ಸರ್ಕಾರಗಳು ಆ ವ್ಯವಸ್ಥೆಯನ್ನು ಅನುಸರಿಸಿ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮಾಡಿದರು. ಚುನಾವಣೆ ಮಾಡಿದ ಸಂದರ್ಭದಲ್ಲಿ ಶೇಕಡ 33ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಟ್ಟರು. ನಿರೀಕ್ಷೆಗೆ ತಕ್ಕಹಾಗೆ ಗ್ರಾಮಪಂಚಾಯತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲವೆನ್ನುವ ನೋವು ನಮಗೂ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಕಾಲ ಕಡಿಮೆಯಿದ್ದುದರಿಂದ ತಿಳುವಳಿಕೆ ಕಡಿಮೆಯಾಗಿದೆ. ಸ್ವಲ್ಪ ಜಾಗೃತವಾಗಿರಲಿಲ್ಲ. ಇವತ್ತು ಅವಿದ್ಯಾವಂತ ಮಹಿಳೆಯರು ಬಹಳ ಜಾಗೃತರಾಗಿ ಪಂಚಾಯಿತಿ ಕಾಯಿದೆಯ ಎಲ್ಲ ವಿಚಾರಗಳನ್ನು ಮನಗಂಡು ಒಳ್ಳೆಯ ಸದೃಢ ಪಂಚಾಯತ್ ರಾಜ್ ವ್ಯವಸ್ಥೆಯನ್ನು ನಿಭಾಯಿಸತಕ್ಕ ಶಕ್ತಿ ಹೊಂದಿದ್ದಾರೆ. ಯಾರು ಅವಿದ್ಯಾವಂತ ವರ್ಗದವರು ಇದ್ದಾರೆ, ವಿದ್ಯಾವಂತರಲ್ಲ. ಇದರಲ್ಲಿ ಯಾವ್ಯಾವ ಕಾರ್ಯಕ್ರಮಗಳು ಬರುತ್ತವೆ ಯಾವ್ಯಾವ ಉದ್ದೇಶಕ್ಕೆ ಉಪಯೋಗ ಮಾಡಬೇಕು ಜೆಆರ್‌ವೈ ಅಂದರೇನು, ಶೇಕಡ 65 ಪರ್ಸೆಂಟ್ ಅನುದಾನ ಸರ್ಕಾರದಿಂದ ನೇರವಾಗಿ ಯಾವರೀತಿ ಬರುತ್ತದೆ ಯಾವ್ಯಾವ ಬಾಬುಗಳಿಗೆ ಖರ್ಚುಮಾಡಬೇಕು, ಆಧ್ಯತೆಯನ್ನು ಏಕೆ ಕೊಡಬೇಕು ಎನ್ನುವ ಎಲ್ಲ ವಿಚಾರಗಳನ್ನು ತಿಳಿದುಕೊಂಡು ಅಲರ್ಟ್ ಆಗಿದ್ದಾರೆ. ಅವರಲ್ಲಿ ಅವೇರ್ ನೆಸ್ ಬಂದಿದೆ ಅದನ್ನು ನಾವು ಕಾಣುತ್ತಿದ್ದೇವೆ. ಈಗಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮುಂದುವರಿಸಿದರೆ ಖಂಡಿತ ಮತ್ತಷ್ಟು ಪರಿಣಾಮಕಾರಿಯಾಗಿ ಆಗತಕ್ಕ ವ್ಯವಸ್ಥೆ ಬರುತ್ತದೆ. ಏಕೆಂದರೆ ಎಲ್ಲರೂ ಜಾಗೃತರಾಗಿದ್ದಾರೆ. ಈ ವ್ಯವಸ್ಥೆಯ ಬಗ್ಗೆ ಎಲ್ಲ ಹಂತದಲ್ಲೂ ಅರಿವು ಮೂಡಿದೆ. 5,600 ಎಲ್ಲ ಗ್ರಾಮಪಂಚಾಯಿತಿ ಕೇಂದ್ರಗಳನ್ನು ನಿರ್ಧಾರ ಮಾಡಿದ್ದಾರೆ. ಗ್ರಾಮಪಂಚಾಯಿತಿ ಕೇಂದ್ರಗಳನ್ನು ಗುರುತಿಸತಕ್ಕ ಸಂದರ್ಭದಲ್ಲಿ ಸೈದ್ಧಾಂತಿಕ ಮತ್ತು ವೈಜ್ಞಾನಿಕವಾದ ಹೋರಾಟ ಮಾಡಿದ್ದಾರೆ. 5,600 ಪಂಚಾಯಿತಿಗಳನ್ನು ಕೇವಲ 2500 ಪಂಚಾಯಿತಿ ಕೇಂದ್ರಗಳನ್ನಾಗಿ ಮಾಡುವುದಕ್ಕೆ ಹೋದರೆ ದೊಡ್ಡ ಹೋರಾಟವಾಗುತ್ತದೆ. ನಮ್ಮ ಊರು ಪಂಚಾಯಿತಿ ಕೇಂದ್ರ ಮಾಡಿ, ಇನ್ನೊಂದು ಕಡೆ ನಮ್ಮ ಊರು ಪಂಚಾಯಿತಿ ಕೇಂದ್ರ ಮಾಡಿಯೆಂದು ಗಲಾಟೆಯಾಗುತ್ತದೆ. ಆ ಸಂದರ್ಭದಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುತ್ತದೆ. ಹಿಂದಿನ ಸರ್ಕಾರದಲ್ಲಿ ಇದನ್ನು ನಾವು ಕಂಡಿದ್ದೇವೆ. ಇಂತಹ ಸಾಹಸಕ್ಕೆ ಕೈಹಾಕದೆ ಶಿಸ್ತುಪಾಲನೆಗೆ ಧಕ್ಕೆ ಬರದಹಾಗೆ ಈಗಿರುವ ವ್ಯವಸ್ಥೆಯನ್ನು ಮುಂದುವರಿಸಿ. 5,600 ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರತಕ್ಕ ಹಳ್ಳಿಗಳ

ಜನರಿಗೆ ರಿಸೋರ್ಸ್ ಮೊಬಲೈಸೇಷನ್ ಮಾಡಬೇಕಾಗಿದೆ. ರಿಸೋರ್ಸ್ ಮೊಬಲೈಸೇಷನ್ ಬಗ್ಗೆ ತರಬೇತಿಯನ್ನು ಕೊಟ್ಟು ಯಾವ್ಯಾವ ರೀತಿಯಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಅದರ ಬಗ್ಗೆ ಸ್ಥಳೀಯ ಪಂಚಾಯಿತಿ ಸದಸ್ಯರಿಗೆ ತರಬೇತಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗಿದೆ. ಪ್ರಸ್ತುತ ಈಗಿರತಕ್ಕ ವ್ಯವಸ್ಥೆ ಏನಿದೆ ಅದು ನಿಜವಾಗಲೂ ಬಲಿಷ್ಠವಾಗಿ ಮಾಡಿದರೆ, ಒಳ್ಳೆಯ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲ ಇದೆ. ಹಾಗೆ ಮಾಡಿದರೆ ಒಳ್ಳೆಯ ಗ್ರಾಮಪಂಚಾಯಿತಿಗಳಾಗುತ್ತವೆ. ಈಗ ನೀವು ಹೇಳುವಹಾಗೆ ನೀವು ಮುಂದುವರಿದು ಮಂಡಲ ಪಂಚಾಯತಿ ವ್ಯವಸ್ಥೆಯನ್ನು ಜಾರಿಗೆ ತರುವುದಾದರೆ ಬಹಳ ದೊಡ್ಡ ದುರಂತಕ್ಕೆ ನಾಂದಿ ಮಾಡಿದಂತಾಗುತ್ತದೆ. ಈಗ ರಾಜ್ಯದಲ್ಲಿ 86 ಸಾವಿರ ಪಂಚಾಯತಿ ಸದಸ್ಯರಿದ್ದಾರೆ. ಅದರಲ್ಲಿ 23 ಪರ್ಸೆಂಟ್ ಪರಿಶಿಷ್ಟಜಾತಿ ಮತ್ತು ವರ್ಗದವರಿದ್ದಾರೆ. 33 ಪರ್ಸೆಂಟ್ ಹಿಂದುಳಿದ ವರ್ಗದವರಿದ್ದಾರೆ. 33 ಪರ್ಸೆಂಟ್ ಮಹಿಳೆಯರಿಗೆ ನಾವು ಸ್ಥಾನವನ್ನು ಕೊಟ್ಟಿದ್ದೇವೆ. ಇವತ್ತು ನೀವು ಮಂಡಲಪಂಚಾಯತಿ ವ್ಯವಸ್ಥೆ ತಂದರೆ 86 ಸಾವಿರ ಸ್ಥಾನದಲ್ಲಿ ಕಡಿಮೆಯಾಗುತ್ತದೆ. ಸುಮಾರು 45 ಸಾವಿರ ಕಡಿಮೆ ಮಾಡಿದಂತಾಗುತ್ತದೆ. ಈಗ ಪಂಚಾಯತಿ ವ್ಯವಸ್ಥೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಕ್ಕೆ ಸದಾವಕಾಶವನ್ನು ನಾವು ಕಿತ್ತುಹಾಕಿದ ಹಾಗೆ ಆಗುತ್ತದೆ. ಅವರಿಗೆ ಮೋಸ ಮಾಡಿದಂತಾಗುತ್ತದೆ. 86 ಸಾವಿರ ಜನರಿಗೆ ಏನು ಅವಕಾಶವಿದೆ ಆದರಿಂದ ಅವರನ್ನು ವಂಚಿತರನ್ನಾಗಿ ಮಾಡಿದಂತಾಗುತ್ತದೆ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ. ಇವತ್ತು ಯಾವುದೋ ಕಾರಣಕ್ಕೆ ಪಂಚಾಯತಿ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೀರಿ, ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇವೊತ್ತು ಪ್ರಸ್ತುತ ಇರತಕ್ಕಂಥ ಗ್ರಾಮಪಂಚಾಯತ್‌ಗಳನ್ನು ಮತ್ತಷ್ಟು ಬಲಿಷ್ಟವಾಗಿ ಮಾಡುವ ದಿಸೆಯಲ್ಲಿ ಯೋಚನೆ ಮಾಡಬೇಕು. ನೀವು ಚುನಾವಣೆಯನ್ನು ಯಾವ ಕಾರಣಕ್ಕಾಗಿ ಮುಂದಕ್ಕೆ ಹಾಕಿದ್ದೀರಿ ಎಂಬ ಬಗ್ಗೆ ನಾನು ವ್ಯಾಖ್ಯಾನ ಮಾಡಬಯಸುವುದಿಲ್ಲ. ಆದರೆ ಇರತಕ್ಕಂಥ ಪಂಚಾಯತ್ ವ್ಯವಸ್ಥೆಯನ್ನು ಮಾತ್ರ ವಿಕೃತಗೊಳಿಸಲು ಹೋಗಬೇಡಿ. ನೀವು ಮಂಡಲ ಪಂಚಾಯತ್ ವ್ಯವಸ್ಥೆಗೆ ಕೈ ಹಾಕುವುದರಿಂದ ಮತ್ತೊಂದು ದುರಂತವನ್ನು ಈ ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ತರುತ್ತೀರಿ ಎಂಬ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಈಗ ಇರತಕ್ಕಂಥ ಪಂಚಾಯತ್ ವ್ಯವಸ್ಥೆಯಲ್ಲಿ 86 ಸಾವಿರ ಜನರು ಭಾಗಿಗಳಾಗಿದ್ದಾರೆ. ಅವರಿಗೆ ಯಾವುದೇ ರೀತಿಯಲ್ಲಿ ಅವಕಾಶ ವಂಚಿತರಾಗದಂತೆ ನೋಡಿಕೊಳ್ಳಬೇಕು. ಹಾಗೆಯೇ ಅಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ಮಾಡಿಕೊಳ್ಳುವ ಬಗ್ಗೆ ಅವರನ್ನು ಆಕ್ಟಿವೇಟ್ ಮಾಡುವ ಬಗ್ಗೆ ಗಮನಹರಿಸಬೇಕು. ಆ ಬಗ್ಗೆ ಚಿಂತನೆ ಮಾಡಬೇಕು. ಏಕೆಂದರೆ ರಿಸೋರ್ಸಸ್ ಮೊಬಲೇಸೇಶನ್ ಆಗಲೇಬೇಕಾಗಿದೆ. ಇವೊತ್ತು ನಾವು ಮಿನಿವಾಟರ್ ಸಪ್ಲೈ ಸ್ಕೀಮ್‌ನ್ನು ಅನಿವಾರ್ಯವಾಗಿ ಪ್ರತಿಯೊಂದು ಕಡೆಗಳಲ್ಲಿಯೂ ಮಾಡಲೇಬೇಕಾಗಿದೆ. ವಿಶೇಷತಃ

ಕೋಲಾರ ಜಿಲ್ಲೆಯಲ್ಲಿ ಅಂತರ್ಜಲದ ಮಟ್ಟವು 400-500 ಅಡಿಗಳ ಆಳದ ವರೆಗೆ ಹೋಗಿದೆ. ಹಾಗಾಗಿ ಜನರಿಗೆ ಕುಡಿಯುವ ನೀರಿನ ತೊಂದರೆ ಉದ್ಭವಿಸಿದೆ. ನಾವು ಅವರಿಗೆ ಎನ್‌ಆರ್‌ಡಬ್ಲ್ಯೂಎಸ್‌ನಲ್ಲಿಯೋ, ಮಿನಿವಾಟರ್ ಸಪ್ಲೈ ಸ್ಕೀಂನಲ್ಲಿಯೋ ಅವರಿಗೆ ನೀರು ಒದಗಿಸಿಕೊಡಬೇಕಾಗಿದೆ. ಅದನ್ನು ಮಾಡಿ ಅಲ್ಲಿ ಸೂಕ್ತ ಮೇಲ್ವಿಚಾರಣ ವ್ಯವಸ್ಥೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದಕ್ಕಾಗಿ ಅಲ್ಲಿರತಕ್ಕಂಥ ಪಂಚಾಯತ್ ವ್ಯವಸ್ಥೆಯು ಕಾಂಪ್ಯಾಕ್ಟ್ ಆಗಿ ಇರಬೇಕಾಗುತ್ತದೆ. ನೀವು ಈಗ ಮತ್ತೆ ಸೆಂಟ್ರಲೈಸ್ ಮಾಡಿದರೆ ನಾವು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಅಲ್ಲಿ ಕೆಲಸಕಾರ್ಯಗಳು ನಡೆಯಲು ಅವಕಾಶವೇ ಇಲ್ಲ. ದಯಮಾಡಿ ಗ್ರಾಮಪಂಚಾಯತ್ ವ್ಯವಸ್ಥೆಯನ್ನು ಸೂಕ್ತರೀತಿಯಲ್ಲಿಡಬೇಕಾಗುತ್ತದೆಯಾದ ಕಾರಣ ಸರಕಾರದವರು ಗಮನಹರಿಸಬೇಕಾಗುತ್ತದೆ. ನೀವು ರಾಜಕೀಯ ಉದ್ದೇಶದಿಂದಲೋ, ಚುನಾವಣೆಯನ್ನು ಮುಂದೂಡಲು ಹೋಗಿ ಯಾವುದೋ ಯೋಚನೆಗಳನ್ನು ಮಾಡಿ ದಯವಿಟ್ಟು ಮತ್ತೆ ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ತರಲೇಬೇಡಿ. ನಾವು ಪಂಚಾಯತ್ ಕೇಂದ್ರಗಳನ್ನು, ಮಂಡಲ ಕೇಂದ್ರಗಳನ್ನು ನಿಗದಿ ಮಾಡುವಾಗ ದೊಡ್ಡ ಹೋರಾಟವನ್ನು ಜನರು ಮಾಡುತ್ತಾರೆ. ಲಾ ಅಂಡ್ ಆರ್ಡರ್ ಸಮಸ್ಯೆಯೂ ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಸುಮಾರು 5,600 ಪಂಚಾಯತಿಗಳೇನು ಇವೆ, ಅವುಗಳನ್ನು ಮುಂದುವರೆಸಿ ಹಾಗೂ ಬಲಿಷ್ಟ ಮಾಡುವ ಬಗ್ಗೆ ಪ್ರೋತ್ಸಾಹ ಕ್ರಮಗಳನ್ನು ತೆಗೆದುಕೊಳ್ಳಿ. ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಹೊಸ ಕಾನೂನು ಕಾಯಿದೆಗಳನ್ನು ತೆಗೆದುಕೊಂಡು ಬನ್ನಿ. ಅವುಗಳನ್ನು ಅಭಿವೃದ್ಧಿಪಡಿಸಲು ಮುಂದಾಗಬೇಕು. ಯಾವುದೇ ಕಾರಣಕ್ಕೂ ಈ ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ಪುನಃ ತರಬಾರದು ಎಂಬ ಮಾತನ್ನು ಹೇಳುತ್ತಾ ಒತ್ತಾಯ ತಂದು ಇವೊತ್ತು ಚುನಾವಣೆಗಳನ್ನು ಈಗಾಗಲೇ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಜನವರಿ, ಫೆಬ್ರವರಿ ತಿಂಗಳಲ್ಲಿ ಮಾಡಿದ್ದರೆ ಯಾರಿಗೂ ತೊಂದರೆಯಾಗುತ್ತಿರಲಿಲ್ಲ. ಪ್ರಸ್ತುತ ಇರತಕ್ಕಂಥ ಪಂಚಾಯತ್ ವ್ಯವಸ್ಥೆಯಲ್ಲಿ ಯಾವ ಇರ್ ರೆಗ್ಯುಲಾರಿಟೀಸ್ ಇದೇ, ಅವುಗಳನ್ನು ಹೇಗೆ ರೆಕ್ಟಿಫೈ ಮಾಡಬೇಕೆನ್ನುವ ಬಗ್ಗೆ ಚಿಂತನೆಯನ್ನು ಮಾಡಿ ಇದೇ ಪಂಚಾಯತ್ ವ್ಯವಸ್ಥೆಯನ್ನು ಬಲಿಷ್ಟವಾಗಿ ಮಾಡಬೇಕು. ಅದೇ ವ್ಯವಸ್ಥೆಯನ್ನು ಮುಂದುವರಿಸಬೇಕೆಂದು ಒತ್ತಾಯಿಸುತ್ತೇನೆ. ಅದೇ ರೀತಿಯಲ್ಲಿ ಈ ವಿಚಾರದ ಕುರಿತು ಪ್ರಸ್ತಾಪಕ್ಕೆ ತಂದ ನಿಲುವಳಿ ಸೂಚನೆಯನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಸನ್ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) :— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಬಹಳ ಚಾಣಾಕ್ಷತನದಿಂದ ಈ ಕೆಲಸವನ್ನು

ಮಾಡಿದ್ದಾರೆ. ಆರ್ಡಿನೆನ್ಸ್ ತಂದು ಚುನಾವಣೆಯನ್ನು ಮುಂದೂಡಿದ್ದಾರೆ ಎಂದು ನಾವೆಲ್ಲರೂ ಅಂದುಕೊಂಡಿದ್ದೆವು. ನಾನು ಆರ್ಡಿನೆನ್ಸನ್ನು ಓದಿದ್ದೇನೆ. ಅದರಲ್ಲಿ ಚುನಾವಣೆಯನ್ನು ಮುಂದೂಡಿಲ್ಲ. ಆರ್ಡಿನೆನ್ಸ್‌ನಲ್ಲಿ ಎಲ್ಲಿಯೂ ಕೂಡ ಚುನಾವಣೆಯನ್ನು ಮುಂದೂಡಿದ್ದೇವೆ ಎಂದು ಹೇಳಲೇ ಇಲ್ಲ. ಯಾವ ಕಾನೂನಿನಲ್ಲಿ ಹೇಳಲಿಲ್ಲ ಮತ್ತು ಒಂದು ನೋಟಿಫಿಕೇಶನ್‌ನ್ನು ಕೂಡ ಇವೊತ್ತಿನವರೆಗೂ ಹೊರಡಿಸಿಲ್ಲ. ಈ ಆರ್ಡಿನೆನ್ಸ್‌ನಲ್ಲಿ ಏನು ಹೇಳಿದ್ದಾರೆ ಅಂದರೆ, ಬಹಳ ಇಂಜೀನಿಯಸ್ ಮೆಥಡ್, ಗವರ್ನರ್‌ರವರ ಹತ್ತಿರ ಹೋಗಿ ಕೆಲವು ಸೆಕ್ಷನ್ಸ್‌ಗಳನ್ನು ಅಮೆಂಡ್‌ಮೆಂಟ್ ಮಾಡುತ್ತೇವೆ ಎಂದು ಹೇಳಿ, ಅವರ ಹತ್ತಿರ ಸಹಿ ಹಾಕಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಎಲ್ಲಿಯೂ ಕೂಡ ಚುನಾವಣೆ ಪ್ರಾರಂಭ ಮಾಡಲಿಲ್ಲ. ಸರಕಾರಕ್ಕೆ ಯಾವಾಗ ಬೇಕಾದರೂ ತಿದ್ದುಪಡಿ ತರಲು, ಹಕ್ಕು ಇದೆ. ಈ ಆರ್ಡಿನೆನ್ಸ್ ವ್ಯಾಲಿಡ್ ಹೌದೋ ಅಲ್ಲವೋ ಎಂಬ ವಿಚಾರವು ಕೋರ್ಟ್‌ನ ಮುಂದೆ ಇದೆ. ಕೋರ್ಟ್ ಏನಾದರೂ ಇದು ಇನ್‌ವ್ಯಾಲಿಡ್ ಎಂದು ಹೇಳಿದರೆ ನಮಗೆ ಬರುವುದೇ ಇಲ್ಲ. ಈ ಆರ್ಡಿನೆನ್ಸ್‌ಗೆ ಇರತಕ್ಕಂಥ ಹಕ್ಕು ಕೇವಲ ಆರು ತಿಂಗಳುಗಳ ಕಾಲ ಮಾತ್ರ. ಇದು ನಮ್ಮ ಮುಂದೆ ಬರುತ್ತದೆಯೋ ಇಲ್ಲವೋ ಎಂಬುದು ಕೂಡ ನಮಗೆ ಗೊತ್ತಿಲ್ಲ. ಬಾರದೇ ಇದ್ದರೆ it will have its automatic death. ಅದು ಬಾರದೇ ಇದ್ದರೆ, ಇದು ಇಲ್ಲದಿದ್ದರೆ ಯಾವ ಪ್ರಕ್ರಿಯೆ ನಡೆಸಬೇಕೋ ಅದನ್ನು ನಡೆಸಬೇಕಾಗುತ್ತದೆ. ಒಂದು ವೇಳೆ at once it has to come into force. ಎಂದು ಹೇಳಿದ್ದೀರಿ. ingenious method ಸೆಕ್ಷನ್‌ಗಳನ್ನು ಅಮೆಂಡ್‌ಮೆಂಟ್ ಮಾಡಿ ಕ್ಯಾಬಿನೆಟ್ ಮುಂದೆ ತಂದಿದ್ದಾರೆ. ಇದಕ್ಕೆ ಗವರ್ನರ್‌ರವರು ಅಂಕಿತ ಹಾಕಿದ್ದಾರೆ ಎಂದು ಹೇಳಿದ್ದಾರೆ ಎಂದು ಈ ನಾಂದಿಯನ್ನು ಹಾಕಿಕೊಂಡು ಮುಂದುವರಿಸಿದ್ದಾರೆ. ಇದರಲ್ಲಿಯೂ ಕೂಡ ಅವರು ಚುನಾವಣೆಯನ್ನು ಮುಂದೂಡುತ್ತೇನೆ ಎಂದು ಎಲ್ಲಿಯೂ ಹೇಳಲಿಲ್ಲ. ಇವೊತ್ತಿನ ವರೆಗೂ ಚುನಾವಣೆಯನ್ನು ಮುಂದೂಡಿದ್ದೇವೆ ಎಂದು ನೋಟಿಫಿಕೇಶನ್ ಹೊರಡಿಸಿಲ್ಲ. ಆದ್ದರಿಂದ ನಾವು ಚುನಾವಣೆ ಮುಂದೂಡಿದ್ದಾರೆ, ಅನ್ಯಾಯ ಮಾಡಿದ್ದಾರೆ ಮುಂತಾಗಿ ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ಇವೊತ್ತು ಕೋರ್ಟ್‌ನಲ್ಲಿ ಆರ್ಡಿನೆನ್ಸ್‌ಗೆ ಸ್ಟೇ ಕೊಟ್ಟಿಲ್ಲ ಎಂಬುದಂತೂ ಸತ್ಯ. ಸ್ಟೇ ಕೊಡದೇ ಇರುವುದರ ಪರಿಣಾಮ ಏನಾಗುತ್ತದೆ ಅಂದರೆ ಈ ಸೆಕ್ಷನ್ಸ್‌ಗೆ ಏನು ಅಮೆಂಡ್‌ಮೆಂಟ್ ಕೊಟ್ಟಿದ್ದಾರೆ, ಇದು ಸ್ಟೇ ಕೊಡದೇ ಇರುವುದರಿಂದ ಅಸ್ತಿತ್ವದಲ್ಲಿದೆ. ಇದು ಅಸ್ತಿತ್ವದಲ್ಲಿ ಇರುವಂಥಾ ಸಂದರ್ಭದಲ್ಲಿ ಎಲೆಕ್ಷನ್ ಕಮೀಶನ್‌ನರು ಏನು ಪ್ರಕ್ರಿಯೆ ಪ್ರಾರಂಭಮಾಡಿ ಚುನಾವಣೆಯನ್ನು ಫೆಬ್ರುವರಿಯಲ್ಲಿ ಮಾಡಬೇಕೆಂದು ಹೊರಟಿದ್ದರು ಅದಕ್ಕೆ ಅಡ್ಡಗಾಲು ಹಾಕುವುದಕ್ಕಾಗಿ ಆರ್ಡಿನೆನ್ಸ್‌ನ್ನು ಅವರ ಮುಂದಿಟ್ಟಿದ್ದಾರೆ. ಈ ಚುನಾವಣೆಯನ್ನು ಮಾಡುವುದಾದರೆ ಈ ಪ್ರಕಾರವಾಗಿ ಮಾಡಬೇಕು. ಡಿ-ಲಿಮಿಟೇಶನ್ಸ್ ಈ ರೀತಿಯಾಗಿ ಹಾಕಬೇಕು ಎಂದು ಹೇಳಿ, ಹಿಂಬಾಗಿಲಿನಿಂದ ಅವರ ಕೈಕಾಲು ಕತ್ತರಿಸಿ ಹಾಕಿದ್ದಾರೆ.

ಇದು ಈ ಆರ್ಡಿನೆನ್ಸ್‌ನಲ್ಲಿ ತಂದಿರತಕ್ಕಂಥ ವಿಚಾರವಾಗಿದೆ. ಮತ್ತೊಂದು ಕಡೆಯಲ್ಲಿ ಈಗಿರತಕ್ಕಂಥ ಸದಸ್ಯರನ್ನು ಮುಂದುವರಿಸುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಮಾಡಲು ಕ್ಯಾಬಿನೆಟ್‌ಗೆ ಪವರ್ ಇಲ್ಲ, ಸರಕಾರಕ್ಕೆ ಈ ಅಧಿಕಾರವಿಲ್ಲ, ಕಾನೂನಿನಲ್ಲಿ ಮತ್ತು ರಾಜ್ಯಾಂಗದಲ್ಲಿ ಇಂಥ ಅಧಿಕಾರ ಇಲ್ಲ. At the cost of repetition ಸನ್ಮಾನ್ಯ ಘೋರ್ಪಡೆಯವರು, ಖರ್ಗೆಯವರು ಎಲ್ಲರೂ ಕೂಡ ಹೇಳಿದ್ದಾರೆ, ಆದರೂ ಕೂಡ ತಮ್ಮ ಗಮನಕ್ಕೆ ತರುವುದೇನೆಂದರೆ 243ಇ-Duration of panchayat Etc: Every panchayat unless sooner dissolved under any law for the time being in force shall continue for five years from the date appointed for its first meeting and no longer" ಐದು ವರ್ಷಗಳ ನಂತರ ಒಂದು ದಿವಸವೂ ಕೂಡ ಇವರುಗಳನ್ನು ಮುಂದುವರಿಸತಕ್ಕಂಥ ಹಕ್ಕು ರಾಜ್ಯಾಂಗದಲ್ಲಿ ಇವರಿಗೆ ಕೊಟ್ಟಿಲ್ಲ. ಹೀಗೆ ಇವರಿಗೆ ಹಕ್ಕು ಕೊಡದಿದ್ದ ಮೇಲೆ ಇಂಡೈರೆಕ್ಟ್‌ಆಗಿ ಕೊಡುವ ಹಕ್ಕು ಯಾವುದೇ ಕಾನೂನಿನಲ್ಲಿ ಅಧಿಕಾರ ಇಲ್ಲ. ಇನ್ನೊಂದು ಸೆಕ್ಷನ್ ಏನೆಂದರೆ ನಮ್ಮಲ್ಲಿ ಆಕ್ಟ್ ತೆಗೆದುಕೊಂಡು ಬಂದರು. ಸೆಕ್ಷನ್-41 Term of office: "Members of the Grama Panchayat, save as otherwise provided in the Act, shall hold office for a term of office for five years ಈ ಸೆಕ್ಷನ್ 41ಕ್ಕೂ ಕೂಡ ಈ ಆರ್ಡಿನೆನ್ಸ್‌ನಲ್ಲಿ ಅಮೆಂಡ್‌ಮೆಂಟ್ ತಂದಿಲ್ಲ. ಅಂದಮೇಲೆ ಸೆಕ್ಷನ್-41 ಹಾಗೆಯೇ ಇದೆ. ಆರ್ಟಿಕಲ್- 241 ಹಾಗೆಯೇ ಇದೆ. ಇವರಿಗೆ ಅಧಿಕಾರ ಇಲ್ಲ. ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ, ಆಗ ಇದ್ದಂಥ ಕಾಂಗ್ರೆಸ್ ಸರಕಾರ ಒಂದು ಸಾರಿ ಈ ರೀತಿಯಾಗಿ ಅಧಿಕಾರವನ್ನು ಉಪಯೋಗಿಸಿಕೊಳ್ಳಲು ಹೊರಟಿದ್ದರು. the then Taluk Development Board Act ಪ್ರಕಾರವಾಗಿ, ಆಡ್ಮಿನಿಸ್ಟೇಟರ್ ಒಂದು ಕಡೆ ಅಪಾಯಿಂಟ್ ಆದಾಗ, ಕಮಿಟಿ ಇಲ್ಲದೇ ಇದ್ದಾಗ, ಅವಾಗ ಲೋಕಲ್ ಅಥಾರಿಟಿಗಳ ಎಲೆಕ್ಷನ್ ಬಂದಾಗ ಆಗಿದ್ದಂಥ ಸರಕಾರದವರು ಏನು ಮಾಡಿದರು? ಎಲೆಕ್ಷನ್ ಓಟರ್ಸ್‌ನ್ನು ತರುವುದಕ್ಕೋಸ್ಕರ ಆ ಅಡ್ಮಿನಿಸ್ಟೇಟರ್‌ನ್ನು ತೆಗೆದುಹಾಕಿ, ನೋಟಿಫೀಕೇಶನ್ ಹೊರಡಿಸಿ, 16 ಜನ ಮೆಂಬರ್ಸ್ ಏನಿದ್ದರು, ಅವರನ್ನು ಬೀದರ್ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಮೆಂಬರ್ಸ್ ಎಂದು ಮಾಡಿದರು. ಆಗಲೂ ಕೂಡ ಅಧಿಕಾರ ದುರುಪಯೋಗವಾಗಿತ್ತು ಎಂಬುದನ್ನು ಹೇಳಲು ಇದನ್ನು ಹೇಳುತ್ತಿದ್ದೇನೆ. ಅವರಿಗೂ ಅಧಿಕಾರವಿರಲಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಎಕ್ಸ್‌ಟೆಂಡ್ ಮಾಡಲು ಮತ್ತು ಅವರನ್ನು ಮೆಂಬರ್ಸ್ ಮಾಡಲು ಅಧಿಕಾರವಿರಲಿಲ್ಲ. ಈ ವಿಷಯವು ಮಾಣಿಕ್ ರಾವ್ ಪಾಟೀಲ್ ಮತ್ತು ನರೇಂದ್ರ ಕೇಣಿಯವರ ಕೇಸ್‌ನಲ್ಲಿ ಹೈಕೋರ್ಟ್‌ಗೆ ಹೋಗಿ they ceased to be members, they cannot be included. ಅಡ್ಮಿನಿಸ್ಟೇಟ್ ಆದಮೇಲೆ ಮತ್ತೆ ಅವರನ್ನು ವಾಪಸ್ ತರುವುದಕ್ಕೆ ಅಧಿಕಾರವಿಲ್ಲ ಎಂದು ಹೈಕೋರ್ಟ್ ತೀರ್ಮಾನಕೊಟ್ಟಿತ್ತು. ಆ

ತೀರ್ಮಾನವು ಸುಪ್ರೀಂಕೋರ್ಟ್‌ಗೆ ಹೋಯಿತು. Supreme Court has confirmed. As on today ಅವರಿಗೆ ಇನ್‌ಕ್ಲೂಡ್ ಮಾಡಲು ಬರುವುದಿಲ್ಲವೆಂದು ಹೇಳುವ ನಮ್ಮ ಕೋರ್ಟ್‌ನ ತೀರ್ಮಾನವಿದೆ. ಸುಪ್ರೀಂಕೋರ್ಟ್‌ನ ಅಂಕಿತ ಬಿದ್ದುದರಿಂದ ಸುಪ್ರೀಂಕೋರ್ಟ್‌ನ ತೀರ್ಮಾನವಿದೆ. ಆದಕಾರಣ ಈ 86 ಸಾವಿರ ಜನರನ್ನು ಇವರು ಎಕ್ಸ್‌ಟೆಂಡ್ ಮಾಡಿ ನೀವೇ ಇರಬಹುದು ಎಂದು ಹೇಳಿ ಇವರು ಅಂಕಿತ ಹಾಕಿದ್ದಾರಲ್ಲ? that amounts to usurpation of power, cabinet usurpation of power in extending the powers, in the eye of the Constitution. In other words anybody can question under the writ of quo warranto. ಯಾವುದೇ ಮಂಡಲ ಪಂಚಾಯತ್‌ಗೆ ಇವರು ಅಧಿಕಾರ ಕೊಟ್ಟ ಮಾತ್ರಕ್ಕೆ ಅವರು ಅಧಿಕಾರದಲ್ಲಿ ಇರುವುದಕ್ಕೆ ಬರುವುದಿಲ್ಲ. ಇವರು ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳಿದ ಮಾತ್ರಕ್ಕೆ, ಇವರಿಗೇ ಅಧಿಕಾರವಿಲ್ಲದೇ ಇರುವುದರಿಂದ ಕಾನ್ಸ್ಟಿಟ್ಯೂಶನಲ್ಲಿ ಅಧಿಕಾರ ಕೊಡದೇ ಇರುವುದರಿಂದ ಮತ್ತು ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ, ಸೆಕ್ಷನ್-41 ಪ್ರಕಾರ they ceased to be members under Art 243E ಸೀಸ್ ಆದ ಮೆಂಬರ್‌ಗಳಿಗೆ ಅಧಿಕಾರ ಕೊಡುವುದಕ್ಕೆ ಇವರಿಗೆ ಯಾರೂ ಅಧಿಕಾರವನ್ನು ಕೊಟ್ಟಿಲ್ಲ. ಹೀಗೆ ಅಧಿಕಾರ ಕೊಡದೇ ಇರತಕ್ಕಂಥ ಸಂದರ್ಭದಲ್ಲಿ 86 ಸಾವಿರ ಜನ ಮೆಂಬರ್ಸ್‌ಗೆ ಅಧಿಕಾರದಲ್ಲಿ ಇರುವುದಕ್ಕೆ ಬರುವುದಿಲ್ಲ. ಇವರಿಗೆ ಹೀಗೆ ಕೊಡಲು ಅಧಿಕಾರವನ್ನು ಉಪಯೋಗಿಸಿಕೊಂಡಿದ್ದಾರೆ, this is constitutional violation-constitutional breakdown also in some cantact ಕಾನ್ಸ್‌ಟಿಟ್ಯೂಷನ್ ಬ್ರೇಕ್‌ಡೌನ್ ಆದರೆ ಏನಾಗುತ್ತದೆ ಎಂದು ನಾನು ಹೇಳಬೇಕಾಗಿಲ್ಲ. ಅದು ಮುಂದಿನ ಕರ್ಮ. ಈಗಾಗಲೇ ಮಾನ್ಯ ಮುನಿಯಪ್ಪನವರು ಹೇಳಿದ್ದಾರೆ. ಎಲ್ಲರೂ ಹೇಳಿದ್ದಾರೆ. 86 ಸಾವಿರ ಜನರನ್ನು ಏನಾದರೂ ತಾವು ಅಧಿಕಾರದಲ್ಲಿ ಉಪಯೋಗಿಸಿಕೊಂಡು ಅವರಿಗೆ ಸಂಬಳ ಸಾರಿಗೆ ಕೊಡುತ್ತಾ ಹೋಯಿತು ಎಂದರೆ ಹಣದ ದುರುಪಯೋಗ, ಅಧಿಕಾರದ ದುರುಪಯೋಗ, ಕಾನ್ಸ್‌ಟಿಟ್ಯೂಷನಲ್ ಬ್ರೇಕ್‌ಡೌನ್ ರಾಜ್ಯಾಂಗದ ವಿರುದ್ಧವಾಗಿ ತಾವು ಮಾಡುತ್ತಿರುವ ಸಂದರ್ಭದಲ್ಲಿ ನೀವು ಅಧಿಕಾರದಲ್ಲಿ ಮುಂದುವರಿಯಬೇಕೆ ಅಥವಾ ಬೇಡವೇ ಎನ್ನುವ ಪ್ರಶ್ನೆ ಕೂಡ ಉದ್ಭವವಾಗುತ್ತದೆ. ಕೋರ್ಟಿನಲ್ಲಿ ತೀರ್ಮಾನಕ್ಕೆ ಇರುವ ಸಂದರ್ಭದಲ್ಲಿ, ಜಡ್ಜ್‌ಮೆಂಟ್ ರಿಸರ್ವ್ ಆಗಿರುವ ಸಂದರ್ಭದಲ್ಲಿ ಇದಕ್ಕಿಂತ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನೀವು ಮಾಡಿರುವುದು ನೀವೇ ತಂದಿರುವ ಕಾನೂನಿನ ವಿರುದ್ಧ, ನೀವು ತಂದಿರುವ ಆರ್ಡಿನೆನ್ಸ್‌ಗೆ ವಿರುದ್ಧ ಆರ್ಡಿನೆನ್ಸ್‌ನಲ್ಲಿ ಪೋಸ್ಟ್‌ಪೋನ್ ಮಾಡುವುದಕ್ಕೆ ನೀವು ಅವಕಾಶ ಮಾಡದೇ ಇರುವ ಸಂದರ್ಭದಲ್ಲಿ ನೀವು ತಕ್ಷಣ ಚುನಾವಣೆ ಮಾಡುವ ಕೆಲಸವನ್ನು ಮಾಡಬೇಕು. ಸನ್ಮಾನ್ಯ ಘೋರ್ಪಡೆಯವರು ಹೇಳಿದರು ಎಲೆಕ್ಷನ್ ಕಮೀಷನ್ ಬಗ್ಗೆ, ಎಲೆಕ್ಷನ್ ಕಮೀಷನ್ ಕೂಡ 73 ನೇ ಅಮೆಂಡ್‌ಮೆಂಟ್‌ನಲ್ಲಿ

ಸ್ಟೇಟ್ ಎಲೆಕ್ಷನ್ ಕಮೀಷನ್ ಎಂದು ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನೀವು ತಪ್ಪು ಮಾಡಿದಾಗ ಎಲೆಕ್ಷನ್ ಕಮೀಷನ್ ತಮಗೆ ಎಚ್ಚರಿಗೆ ವಹಿಸಿ ಹೇಳಬೇಕಾಗಿತ್ತು. ಚುನಾವಣೆ ಪ್ರಕ್ರಿಯೆಯನ್ನು ನಡೆಸಿಕೊಂಡು ಹೋಗುತ್ತೇನೆ ಎಂದು ಅವರು ಹೇಳಬೇಕಾಗಿತ್ತು. ಅವರು ಮಾಡದೇ ಇರುವುದರಿಂದ ಸ್ಟೇಟ್ ಕಮೀಷನ್ ಎಲೆಕ್ಷನ್‌ಗೆ ನಾನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಈ ಕಾನೂನಿನಲ್ಲಿ ಅಮೆಂಡ್‌ಮೆಂಟ್ಸ್ ಕಾನೂನಿಗೆ ವಿರುದ್ಧವಾಗಿರುವುದರಿಂದ, ರಾಜ್ಯಾಂಗಕ್ಕೆ ವಿರುದ್ಧವಾಗಿರುವುದರಿಂದ ರಾಜ್ಯಾಂಗದತ್ತ ಅಧಿಕಾರದಲ್ಲಿ ಕ್ಯಾಬಿನೆಟ್‌ಗೆ ಶುರುಮಾಡಿ ಯಾವತ್ತು ಶುರುಮಾಡಿದ್ದೀರೋ ಆ ಪ್ರಕಾರ ಚುನಾವಣೆಯನ್ನು ತಾವು ನಡೆಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಈ ಆರ್ಡಿನೆನ್ಸ್ ವ್ಯಾಲಿಡಿಟಿ ಅಥವಾ ಅನ್ ವ್ಯಾಲಿಡಿಟಿ ಜಡ್ಜ್‌ಮೆಂಟ್ ಆದನಂತರ ವ್ಯಾಲಿಡಿಟಿ ಬಗ್ಗೆ ಆರ್ಡಿನೆನ್ಸ್ ನಮ್ಮ ಮುಂದೆ ಬಂದಾಗ ಅದು ಕಾನೂನುಬದ್ಧವೇ ಇಲ್ಲವೇ ಎನ್ನುವುದನ್ನು ಚರ್ವಿತಚರ್ವಣ ನಾವು ಆಗ ತೀರ್ಮಾನ ಮಾಡೋಣ. ಈಗ ತಕ್ಷಣದಲ್ಲಿತಾವೇನು ಇಂಜೀನಿಯರ್ಸ್ ಮೆಥೆಡ್‌ನ್ನು ಉಪಯೋಗಿಸಿಕೊಂಡು ಹಿಂದುಗಡೆ ಬಾಗಿಲಿನಿಂದ ಚುನಾವಣೆಯನ್ನು ಮುಂದೂಡುವ ಹಂತಕ್ಕೆ ಹೋಗಿ ಈಗ ಬಾಯಲ್ಲಿ ಹೇಳಿಲ್ಲ ಎಂದು ಹೇಳಿ ಹೋಗಿದ್ದೀರಲ್ಲ, ಅದು ನಿಮ್ಮ ಗೋರಿಯನ್ನು ನೀವೇ ತೋಡಿಕೊಂಡಿದ್ದೀರಿ, ನಿಮ್ಮ ಹಳ್ಳಕ್ಕೆ ನೀವೇ ಬೀಳುವವರಿದ್ದೀರಿ ಎನ್ನುವ ಎಚ್ಚರಿಕೆಯ ಮಾತನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ತಕ್ಷಣ ಎಚ್ಚೆತ್ತುಕೊಂಡು ನೀವು ಇದನ್ನು ಸರಿಪಡಿಸದಿದ್ದರೆ ಇಡೀ ರಾಜ್ಯದಲ್ಲಿ ಒಂದು ಹೋರಾಟ ಇದಕ್ಕೆ ಶುರುವಾಗುತ್ತದೆ ಎಂದು ಅದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ ಎಂದು ಈ ಸಂದರ್ಭದಲ್ಲಿ ಹೇಳಿ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮ್ಮನ್ನು ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಮಾನ್ಯ ಮಂತ್ರಿಗಳು ರಿಪ್ಲೈ ಮಾಡಿ.

ಶ್ರೀ ಹೆಚ್.ಡಿ. ಬಸವರಾಜ್ :— ಮಾನ್ಯ ಅಧ್ಯಕ್ಷರೇ, ನಾನು ಕೂಡ ಅದರಲ್ಲಿ ಸಹಿ ಮಾಡಿದ್ದೆ.

ಅಧ್ಯಕ್ಷರು :— ಸಾಕಪ್ಪ, ಎಲ್ಲರೂ ಹೇಳಿದ್ದೀರಲ್ಲ.

ಶ್ರೀ ಹೆಚ್.ಡಿ. ಬಸವರಾಜ್ :— ಸಹಿ ಮಾಡಿದ್ದೆ ಅಧ್ಯಕ್ಷರೇ.

ಅಧ್ಯಕ್ಷರು :— ಸಹಿ ಮಾಡಿದ ಮಾತ್ರಕ್ಕೆ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಡಿ. ಬಸವರಾಜ್ :— ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೀರಿ. ತಮ್ಮಲ್ಲಿ ನಾನು ವಿನಂತಿ ಕೂಡ ಮಾಡಿಕೊಂಡಿದ್ದೇನೆ. ನನ್ನೊಬ್ಬನನ್ನು ಹೊರತುಪಡಿಸಿ ಮಾಡಿತು ಎಂದರೆ ಹೇಗೆ? ನಮ್ಮ ಭಾವನೆಗಳನ್ನು ಹೇಳಬೇಕು ಎನ್ನುವುದಕ್ಕೋಸ್ಕರ ಬೆಳಿಗ್ಗೆಯಿಂದ ಕಾಯ್ದುಕೊಂಡಿದ್ದೇವೆ.

ಅಧ್ಯಕ್ಷರು :— ಮಾನ್ಯ ಯಡಿಯೂರಪ್ಪನವರು, ನೀವೇ ತೀರ್ಮಾನ ಮಾಡಿ. ನಿನ್ನೆಯೆಲ್ಲಾ ಹೌಸಿಂಗ್ ಬಗ್ಗೆ ಆಗಿದೆ. ಇವತ್ತೆಲ್ಲಾ ಇದು ಆಗಿದೆ. ರಾಜ್ಯಪಾಲರ ಭಾಷಣದ ಮೇಲೆ ನಾವು ಮೋಷನ್ ಮೂವ್ ಮಾಡಿದ್ದನ್ನು ಅಲ್ಲಿಗೆ ಬಿಟ್ಟಿದ್ದೇವೆ. ಬೆಳಿಗ್ಗೆ ನಿಮ್ಮದೇ 11 ಜನರ ಮೆಂಬರ್ಸ್ ಶೂನ್ಯ ವೇಳೆ ವಿಚಾರ ಈಗ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಬಂದಿರುವ ಕಾಲಿಂಗ್ ಅಟೆನ್ಷನ್ ಉಳಿದವೆಲ್ಲಾ ಲ್ಯಾಪ್ಸ್ ಆಗುತ್ತದೆ. ಎಷ್ಟೊತ್ತಾದರೂ ತೊಂದರೆ ಇಲ್ಲ, ಕುಳಿತುಕೊಳ್ಳೋಣ ಎಂದರೆ ನಾನು ತಯಾರು ಇದ್ದೇನೆ. ಎಂಟಾಗಲಿ, ಹತ್ತಾಗಲಿ ಕುಳಿತುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅವರು ಕೊನೆಯವರು. ಏಳೆಂಟು ನಿಮಿಷದಲ್ಲಿ ಮುಗಿಸುತ್ತಾರೆ.

ಅಧ್ಯಕ್ಷರು :— ಆಗಬಹುದು. ನನ್ನದೇನೂ ಆಕ್ಷೇಪಣೆ ಇಲ್ಲ.

+ಶ್ರೀ ಹೆಚ್.ಡಿ. ಬಸವರಾಜ್ (ವಿರಾಜ್ ಪೇಟೆ) :— ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಮನಸ್ಸಿಗೆ ನೋವಾಗದೆ ಒಂದೆರಡು ನಿಮಿಷದಲ್ಲಿ ನನ್ನ ವಿಷಯಗಳನ್ನು ಹೇಳುತ್ತೇನೆ.

ಅಧ್ಯಕ್ಷರು :— ಮನಸ್ಸೇ ಇಲ್ಲ. ನೋವಾಗುವುದಕ್ಕೆ ಅದನ್ನು ತೆಗೆದು ಇಟ್ಟುಬಿಟ್ಟಿದ್ದೇನೆ ನಾನು. ಅದನ್ನು ಏಕೆ ಇಟ್ಟುಕೊಂಡು ಇಲ್ಲಿಗೆ ಬರಲಿ.

ಶ್ರೀ ಹೆಚ್.ಡಿ. ಬಸವರಾಜು :— ತಾವು ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ಅಭಿನಂದಿಸುತ್ತಾ ಇವತ್ತು ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡುವಂಥ ಒಂದು ವ್ಯವಸ್ಥೆಯನ್ನು ಮಾಡಿರುವ ಈ ಸರ್ಕಾರದ ನಿರ್ಧಾರದ ಹಿಂದೆ ನಮಗೆ ಸಂದೇಹ ಬರುವಂಥ ವ್ಯವಸ್ಥೆಯನ್ನು ಕಾಣುವಂಥದ್ದನ್ನು ನಾವು ನೋಡುತ್ತಿದ್ದೇವೆ. ಬಹುಶಃ ಈ ಒಂದು ಗ್ರಾಮ ಪಂಚಾಯಿತಿ ಚುನಾವಣೆಯನ್ನು ತಿದ್ದುಪಡಿ ಮೂಲಕ ನಾವು ಮುಂದೂಡುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಮುಂಚೆ ತಮಗೆ ಸಾಕಷ್ಟು ಕಾಲಾವಕಾಶ ಇತ್ತು. ಆ ಕಾಲಾವಕಾಶದಲ್ಲಿ ತಮ್ಮ ಮನಸ್ಸಿನಲ್ಲಿ ಈ ನಾಲ್ಕು ವರ್ಷಗಳ ಅನುಭವದಲ್ಲಿ ಯಾವ ಯಾವ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಸರಿಯಾದ ಮಾರ್ಗದಲ್ಲಿ ಅವು ನಡೆಯುತ್ತಿಲ್ಲ, ಅವುಗಳನ್ನು ಸರಿಯಾದ ಮಾರ್ಗದಲ್ಲಿ ಯಾವ ರೀತಿರೂಪಿಸಬೇಕು ಎನ್ನುವುದನ್ನು ಯೋಜನೆ ಮಾಡಿ ಸಿದ್ಧಪಡಿಸಿಕೊಂಡಿದ್ದರೆ ನಿಗದಿತ ವೇಳೆಯಲ್ಲೇ ತಾವು ಚುನಾವಣೆಯನ್ನು ಮಾಡಿ ಚುನಾಯಿತ ಪ್ರತಿನಿಧಿಗಳ ಕೈಗೆ ಆ ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ಕೊಡುವುದನ್ನು ಮಾಡಬಹುದಾಗಿತ್ತು. ಸರ್ಕಾರ ಏಕೆ ಆ ದೃಷ್ಟಿಯಲ್ಲಿ ಆ ವ್ಯವಸ್ಥೆಯನ್ನು ಮಾಡಲಿಕ್ಕೆ ವಿಫಲವಾಯಿತೋ

ನನಗೆ ಗೊತ್ತಾಗಲಿಲ್ಲ. ಆದರೆ ಒಂದು ವಿಚಾರ ನನಗೆ ಅರ್ಥವಾಗುತ್ತಿಲ್ಲ. ಇವತ್ತು 5,500 ಗ್ರಾಮ ಪಂಚಾಯಿತಿಗಳಿವೆ. ಈ 5,500 ಗ್ರಾಮ ಪಂಚಾಯಿತಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದರ ಮೂಲಕ ಅಲ್ಲಿರುವ ಜನಪ್ರತಿನಿಧಿ ಸದಸ್ಯರನ್ನು ಕಡಿಮೆ ಮಾಡುವುದರ ಮೂಲಕ ನಾವು ಒಂದು ಹೊಸ ವ್ಯವಸ್ಥೆಯನ್ನು ತಂದು ಅಲ್ಲಿ ಅಭಿವೃದ್ಧಿ ಪೂರಕವಾದ ಕೆಲಸಗಳನ್ನು ಮಾಡಬೇಕು ಎನ್ನುವ ಯೋಜನೆ ಬಗ್ಗೆ ತಾವು ಯಾವ ದೃಷ್ಟಿಯನ್ನು ಇಟ್ಟುಕೊಂಡಿದ್ದೀರೋ ಗೊತ್ತಾಗುತ್ತಿಲ್ಲ. ಬಹುಶಃ ಈ ನಾಲ್ಕು ವರ್ಷಗಳಲ್ಲಿ ಗ್ರಾಮಪಂಚಾಯಿತಿ ಸಣ್ಣ ವ್ಯವಸ್ಥೆಯಲ್ಲಿ ಅವರು ವಿಫಲರಾಗಿದ್ದಾರೆ ಎಂದು ತಮ್ಮ ಮನಸ್ಸಿಗೆ ಬಂದಮೇಲೆ ಅದನ್ನು ದೊಡ್ಡದು ಮಾಡಿದರೆ ಆ ವ್ಯವಸ್ಥೆಯಲ್ಲಿ ಅವರು ವಿಫಲತೆ ಮುಚ್ಚಿಹೋಗಿ ಅಭಿವೃದ್ಧಿಗಳು ಹೇಗೆ ಆಗುತ್ತವೆ ಎನ್ನುವುದಕ್ಕೆ ಸರ್ಕಾರದಿಂದ ಯಾವುದೇ ಒಂದು ಸಮರ್ಥನೆ ಬಂದಿಲ್ಲ. ಒಂದು ಹಂತದಲ್ಲಿ ಸರ್ಕಾರದ ವತಿಯಿಂದ ಹೇಳುತ್ತಿದ್ದಾರೆ, ಇವತ್ತು ಕ್ರೋಢೀಕರಣ ಮಾಡಿ ಹಣವನ್ನು ಒಗ್ಗೂಡಿಸಿಕೊಂಡು ಅವರು ವ್ಯವಸ್ಥೆಯನ್ನು ನಡೆಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ, ಆ ಒಂದು ಕಾರಣಕ್ಕೋಸ್ಕರ ಇದನ್ನು ದೊಡ್ಡದು ಮಾಡುತ್ತಿದ್ದೇವೆ. ಈ ಗ್ರಾಮಪಂಚಾಯಿತಿಯನ್ನು ದೊಡ್ಡದು ಮಾಡುವುದರಿಂದ ಮಂಡಲ ಪಂಚಾಯಿತಿ ಮಾಡುವುದರಿಂದ ಈ ವ್ಯವಸ್ಥೆಯಲ್ಲಿ ಹಣ ಹೇಗೆ ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆ ಹೊಸ ವ್ಯವಸ್ಥೆಗೆ ಹಣ ಎಲ್ಲಿಂದ ಬರುತ್ತದೆ ಅದರ ಬಗ್ಗೆ ಕೂಡ ಸರ್ಕಾರ ಸರಿಯಾದ ಸಮರ್ಥನೆಯನ್ನು ಕೊಟ್ಟಿಲ್ಲ ಎಂದು ನಾನು ಭಾವಿಸುತ್ತಿದ್ದೇನೆ. ಕಾರ್ಯಕ್ಷೇತ್ರದ ವ್ಯಾಪ್ತಿ 10 ಕಿಲೋಮೀಟರ್ ಇದ್ದುದನ್ನು 18 ಕಿಲೋಮೀಟರ್‌ಗೆ ತಾವು ವಿಸ್ತರಿಸಿದ್ದೀರಿ. 10 ಕಿಲೋಮೀಟರ್‌ನಿಂದ 18 ಕಿಲೋಮೀಟರ್‌ಗೆ ವಿಸ್ತರಿಸುವುದರ ಜೊತೆಗೆ ಸುಮಾರು 400 ಜನರು ಮತದಾರರಿಗೆ ಒಬ್ಬ ಸದಸ್ಯರು ಇದ್ದುದನ್ನು ಒಂದು ಸಾವಿರಕ್ಕೂ ಅಧಿಕ ಮತದಾರರಿಗೆ ಒಬ್ಬ ಸದಸ್ಯರನ್ನಾಗಿ ಮಾಡಿದ್ದೀರಿ. 10 ಇದ್ದುದನ್ನು 18, 400 ಇದ್ದುದನ್ನು 1 ಸಾವಿರ ಈ ರೀತಿ ಮಾಡುವುದರಿಂದ ಆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ ಇದೆಯೇ, ತಾವು ಯೋಚನೆ ಮಾಡಿದ್ದೀರಿ, ಅದರ ಬಗ್ಗೆ ನಾನು ನನ್ನದೇ ಆದ ಸಂದೇಹವನ್ನು ಈ ಒಂದು ಸದನದ ಮೂಲಕ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾರಣ, ತಾವು ಈ 4 ವರ್ಷಗಳಲ್ಲಿ ನೋಡಿದ್ದೀರಿ. ಈ ನಾಲ್ಕು ವರ್ಷಗಳಲ್ಲಿ ಅವರು ಎಷ್ಟರಮಟ್ಟಿಗೆ ಅವರು ಪ್ರಗತಿಯನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ಆ ಸಂದರ್ಭದಲ್ಲಿ ತಾವು ಸಹಕಾರಿಯಾಗಿ ಯಾವ ಯಾವ ಕ್ರಮವನ್ನು ಈ ಸರ್ಕಾರದ ವ್ಯವಸ್ಥೆಯಿಂದ ರೂಪುಗೊಟ್ಟು ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂದು ಅದನ್ನು ಅವಲೋಕನೆ ಮಾಡಿದಾಗ ಬಹುಶಃ ಯಾವುದೇ ಸುಧಾರಣೆ ಮಾಡುವುದೇ ಆಗಲಿ ಅಥವಾ ಅವಲೋಕನೆ ಮಾಡಿದಾಗ ಬಹುಶಃ ಯಾವುದೇ ಸುಧಾರಣೆ ಮಾಡುವುದೇ ಆಗಲಿ ಅಥವಾ ವ್ಯವಸ್ಥೆ ಇಲ್ಲದ ಗ್ರಾಮ ಪಂಚಾಯಿತಿಯಲ್ಲಿ ಹಣವನ್ನು

ಒದಗಿಸುವ ಪ್ರಯತ್ನವನ್ನು ಮಾಡಿದ್ದಾಗಲೀ, ನಾನು ನೋಡಿದ್ದಿಲ್ಲ. ಆದರೂ ಈ ಒಂದು ಸಂದರ್ಭದಲ್ಲಿ ನನ್ನ ಮನಸ್ಸಿಗೆ ಏನು ಅನಿಸುತ್ತದೆ ಎಂದರೆ ತಾವು ಗ್ರಾಮ ಪಂಚಾಯಿತಿಯನ್ನು ದೊಡ್ಡದು ಮಾಡುವುದರಿಂದ ಯಾವುದೇ ಒಂದು ಕಾರಣಕ್ಕೂ ತಮ್ಮ ಕಲ್ಪನೆಯಲ್ಲಿ ಇರುವರೀತ್ಯಾ ಹೊಸ ವ್ಯವಸ್ಥೆ ಬರುತ್ತದೆ ಎನ್ನುವುದು ತಪ್ಪಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ಇವತ್ತು ಹಳೆಯ ವ್ಯವಸ್ಥೆ ಏನು ಇದೆಯೋ ಆ ವ್ಯವಸ್ಥೆಯಲ್ಲಿ ಏನಾದರೂ ಮಾರ್ಪಾಡು ಮಾಡಬೇಕು ಎಂದು ಅನಿಸಿದರೆ ಅವರಿಗೆ ಹಣದ ಅವಶ್ಯಕತೆ ಏನಾದರೂ ಜಾಸ್ತಿ ಮಾಡುವುದಿದ್ದರೆ ತಾವು ಮಾಡುವ ಪ್ರಯತ್ನವನ್ನು ಮಾಡಿ. ಅದನ್ನೇ ದೊಡ್ಡದು ಮಾಡುವುದರ ಮೂಲಕ ನಾವು ಅಲ್ಲಿ ಸುಧಾರಣೆ ತರುತ್ತೇವೆ ಎಂದರೆ ಬಹುಶಃ ತುಂಬಾ ಕಷ್ಟವಾಗುತ್ತದೆ ಆ ಸುಧಾರಣೆಯ ಕಲ್ಪನೆಯನ್ನು ತಾವು ನೋಡಲಿಕ್ಕೆ ಇರುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೆ ಮುಂಬರುವ ದಿನಗಳಲ್ಲಿ ಪ್ರಗತಿ ಸಾಧ್ಯವಾಗುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಈ ಒಂದು ಸಂದರ್ಭದಲ್ಲಿ ಈ ಒಂದು ಭಾವನೆ ಮೂಲಕ ತಮ್ಮನ್ನು ಒತ್ತಾಯಮಾಡುತ್ತಿದ್ದೇನೆ, ಯಾವುದೇ ಕಾರಣಕ್ಕೂ ತಾವು ಚುನಾವಣೆಯನ್ನು ಮುಂದೂಡುವ ಪ್ರಯತ್ನವನ್ನು ಮಾಡಬೇಡಿ. ಇವತ್ತು ನಾಮಕರಣ ಸದಸ್ಯರನ್ನು ತಾವು ಮಾಡುತ್ತಿದ್ದೀರಿ, ಈಗ ಇರುವ ಹಾಲಿ ಸದಸ್ಯರಿಗೆ, ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಅವರ ಅವಧಿಯನ್ನು ವಿಸ್ತರಿಸುವುದನ್ನು ಮಾಡುತ್ತಿದ್ದೀರಿ. ಅವರ ಅಧಿಕಾರಾವಧಿ ಏನು, ಮತ್ತೆ ಅವರ ಕ್ಷೇತ್ರ ಏನು, ಮತ್ತೆ ಅವರ ಅಧಿಕಾರ ವ್ಯಾಪ್ತಿ ಏನು, ಅವರಿಗೆ ಹಣ ಹೇಗೆ ಒದಗಿಸಿಕೊಡುತ್ತೀರಿ, ಇವತ್ತು ಕೇಂದ್ರಸರ್ಕಾರದಿಂದ ಬರುತ್ತಿರುವ ಹಣದಲ್ಲಿ ಬಹುಶಃ ನೀವು ಚುನಾವಣೆಯನ್ನು ಮಾಡಲಿಲ್ಲ ಎಂದರೆ ಕೇವಲ ಪ್ರತಿಶತ 80 ಭಾಗ ಹಣವನ್ನು ಮಾತ್ರ ಅವರು ಕೊಡುತ್ತೇವೆ ಎಂದು ಹೇಳುತ್ತಿದ್ದಾರಲ್ಲ ಇನ್ನು ಉಳಿಕೆ 20 ಭಾಗದ ಹಣವನ್ನು ನಾವು ಯಾವ ರೂಪದಲ್ಲಿ ಒದಗಿಸಬೇಕು ಎಂದು ಯೋಚನೆ ಮಾಡಿದ್ದೀರಿ? ಅದರ ಬಗ್ಗೆ ಕೂಡ ಸಮರ್ಥವಾದ ಸಮರ್ಥನೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ ತಾವು ಯಾವುದೇ ಒಂದು ಉದ್ದೇಶವನ್ನು ಇಟ್ಟುಕೊಂಡು ಇವತ್ತು ಗ್ರಾಮಪಂಚಾಯಿತಿಯನ್ನು ದೊಡ್ಡದು ಮಾಡುವುದಕ್ಕೆ ಹೊರಟಿದ್ದೀರೋ ಆ ದೊಡ್ಡದಾಗುವ ಗ್ರಾಮಪಂಚಾಯಿತಿಗೆ ಯಾವ ರೀತಿ ಹಣವನ್ನು ಒದಗಿಸಬೇಕು ಎನ್ನುವ ಆಲೋಚನೆ ಇದೆಯೋ ತಾವು ಉತ್ತರ ಹೇಳುವ ಸಂದರ್ಭದಲ್ಲಿ ಅದನ್ನು ಸ್ಪಷ್ಟೀಕರಣ ಮಾಡಬೇಕೆಂದು ಕೇಳಿಕೊಂಡು ಕೊನೆಯದಾಗಿ ನನ್ನ ಒಂದು ಸಲಹೆ ಏನೆಂದರೆ ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮತ್ತೆ ಮುಂದೂಡುವ ಪ್ರಯತ್ನವನ್ನು ಮಾಡಬೇಡಿ. ಆದಷ್ಟು ಶೀಘ್ರದಲ್ಲಿ ಚುನಾವಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ, ಧನ್ಯವಾದಗಳು.

+ ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಎಲ್ಲಾ ಹಿರಿಯ ಸದಸ್ಯರು ಕೆಲವು ತಪ್ಪು ಅಭಿಪ್ರಾಯಗಳ ಮೂಲಕ ಮತ್ತು ತಮ್ಮದೇ ಆದಂಥ ಅಭಿಪ್ರಾಯಗಳ ಮೂಲಕ ಇಲ್ಲದ ಉದ್ದೇಶವನ್ನು ಕೂಡ ಸರ್ಕಾರದ ಮೇಲೆ ಆರೋಪಿಸಿದ್ದಾರೆ. ಮೇಲು ನೋಟಕ್ಕೆ ಆ ರೀತಿ ಅವರು ಭಾವಿಸುವುದಕ್ಕೆ ಸಾಧ್ಯತೆಯೂ ಕೂಡ ಇದೆ. ಒಮ್ಮೊಮ್ಮೆ ಭಾಷೆಯಿಂದ ವಿಚಾರಗಳನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಎಷ್ಟೇ ನೇರವಾಗಿ ಮಾತನಾಡಿದರೂ ಕೂಡ ಮುದ್ರಿತ ಭಾಷೆಯಾಗಲಿ, ಅಥವಾ ಮೌಖಿಕ ಭಾಷೆಗಳೇ ಆಗಲಿ ಉದ್ದೇಶವನ್ನು ಸ್ಪಷ್ಟಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಮನುಷ್ಯನ ಅವನ ಕ್ರಮಗಳ ಮೂಲಕವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತದೆ. ಈ ಸರ್ಕಾರ ಅದರಲ್ಲಿಯೂ ಕೂಡ ಜನತಾದಳದ ಸರ್ಕಾರ ಅಧಿಕಾರದ ವಿಕೇಂದ್ರೀಕರಣವನ್ನು ಪ್ರಥಮಬಾರಿಗೆ ತಂದಂಥ ಯಶಸ್ಸು ನಮ್ಮದು ಇದೆ ಎನ್ನುವುದು ಬರೇ ಒಂದು ಹೆಗ್ಗಳಿಕೆಯ ಮಾತಲ್ಲ. ಅದು ನಾವು ಸಾಧಿಸಿ ತೋರಿಸಿದಂತಹ ಒಂದು ಉಪಕ್ರಮವೂ ಕೂಡ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ದಿವಂಗತ ಅಬ್ದುಲ್ ನಜೀರ್ ಸಾಬ್ ಅವರು ತೆಗೆದುಕೊಂಡು ಬಂದಂತಹ ಒಂದು ದೊಡ್ಡ ಅಧಿಕಾರ ವಿಕೇಂದ್ರೀಕರಣದ ಕ್ರಾಂತಿಕಾರಕ ಕ್ರಮದ ಮೂಲಕವಾಗಿ ನಾವು ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧವಾಗಿರುವಂತಹ ಒಂದು ಪಕ್ಷ. ಆ ಕಾರಣಕ್ಕಾಗಿಯೇ ನಮ್ಮ ಮಾನ್ಯ ಮುಖ್ಯಮಂತ್ರಿಗಳೇ ಆಗಲಿ ಅಥವಾ ನಮ್ಮ ಪಕ್ಷವೇ ಆಗಲಿ ಅಥವಾ ನಮ್ಮ ಸರ್ಕಾರವೇ ಆಗಲಿ ಚುನಾವಣೆಗಳನ್ನು ಎದುರಿಸಲಿಕ್ಕೆ ಹೇಡಿಗಳಾಗಿ ಇದನ್ನು ಮುಂದಕ್ಕೆ ಹಾಕಿದ್ದೇವೆ ಎನ್ನುವಂತಹ ಮಾತು ಏನು ಇದೆ, ಅದು ಬಹಳ ತಪ್ಪು ಅಭಿಪ್ರಾಯದಿಂದ ಕೂಡಿರುವಂತಹದ್ದು. ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ಈಗ ನಾನು ಅಭಿನಂದಿಸುತ್ತೇನೆ. ನಾನು ಹೇಳಬೇಕಾದಂತಹ ಮಾತನ್ನೇ ಅವರು ಹೇಳಿದರು. ನಮ್ಮ ಅಧ್ಯಾದ್ಯಾಪನದಲ್ಲಿ ಈ ವಿಚಾರವನ್ನು ನಾವು ಎಲ್ಲಿಯೂ ಕೂಡ ಹೇಳಿಲ್ಲ. ಅಧ್ಯಾದ್ಯಾಪನವನ್ನು ಅವರು ಪ್ರಸ್ತಾಪ ಮಾಡಿದರು. ಇಲ್ಲಿ ಬಂದಿರತಕ್ಕದ್ದು ಕೂಡ, ಇಲ್ಲಿ ಹೀಗೆ ಈ ವಿಚಾರಗಳಿಗೆ ಚಾಲನೆ ಸಿಕ್ಕಿರತಕ್ಕಂಥಹದ್ದು ಎನ್ನುವಂತಹದ್ದರ ಬಗ್ಗೆ ಕೂಡ ನಮಗೆ ಏನು ನಾಲ್ಕು ವರ್ಷಗಳ ಕಾಲ ದೊಡ್ಡ ಗ್ರಾಮ ಪಂಚಾಯತಿಗಳನ್ನು ಮಾಡಬಾರದು ಎನ್ನುವಂತಹ ಜ್ಞಾನೋದಯ ನಿಮಗೆ ಆಗಲಿಲ್ಲವೇ? ಎನ್ನುವಂತಹ ಮನುಷ್ಯ ಮಾತುಗಳು ಬರಬಹುದು. ಆದರೆ ಆಗ ಇದ್ದಂತಹ ನಮ್ಮ ಒಟ್ಟು ಆತಂಕ 1993 ರ ಡಿಸೆಂಬರ್‌ನಲ್ಲಿ ನಡೆದಿರತಕ್ಕಂಥ ಈ ಚುನಾವಣೆಯ ಅವಧಿ ಐದು ವರ್ಷದವರೆಗೆ ಇದ್ದಾಗ ನಾವು ಒಂದು ಹೊಸ ಪ್ರಯೋಗವನ್ನು ಮಾಡಿ ಮತ್ತೆ ದೊಡ್ಡ ಪಂಚಾಯತಿಗಳನ್ನು ಮಾಡಬೇಕು ಎನ್ನುವಂತಹದ್ದು ಏನಾದರೂ ಮಾಡಿದರೆ ಈಗಾಗಲೇ ಚುನಾಯಿತರಾಗಿ ತಮ್ಮ ಅವಧಿಗಾಗಿ ಆಯ್ಕೆ

ಆಗಿರುವಂತಹ ಗ್ರಾಮ ಪಂಚಾಯತಿಯ ಸದಸ್ಯರಿಗೆ ಮತ್ತೆ ಬದಲಾವಣೆ ತರುವುದರ ಮೂಲಕವಾಗಿ ಇದೊಂದು ತಪ್ಪು ಹೆಚ್ಚೆ ಆಗಬಹುದು. ಅವರ ಅವಧಿ ಮುಗಿಯುವಂತಹ ಸಂದರ್ಭಗಳಲ್ಲಿ ನಮ್ಮ ಪ್ರಣಾಳಿಕೆ ಮತ್ತು ನಮ್ಮ ಸಿದ್ಧಾಂತಕ್ಕೆ ಅನುಗುಣವಾದಂತಹ ರೀತಿಯಲ್ಲಿ ನಾವು ದೊಡ್ಡ ಗ್ರಾಮಪಂಚಾಯಿತಿಗಳನ್ನು ಮಾಡಬೇಕು ಎನ್ನುವಂತಹ ಉದ್ದೇಶಕ್ಕಾಗಿಯೇ ಸೆಪ್ಟೆಂಬರ್ 21ನೇ ತಾರೀಖಿನ ದಿವಸ ಈ ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸದನದ ನಾಯಕರುಗಳನ್ನು ಆಯಾಯ ಪಕ್ಷದ ಮುಖಂಡರುಗಳನ್ನು ಕರೆದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಘೋರ್ಪಡೆಯವರು ಮಾನ್ಯ ಈಶ್ವರಪ್ಪನವರು, ಶ್ರೀರಾಮರೆಡ್ಡಿಯವರು ಸಹ ಪ್ರಸ್ತಾಪ ಮಾಡಿದರು. ಆ ಸಂದರ್ಭದಲ್ಲಿ ನಾವು ಕೇವಲ ಇಲ್ಲಿರುವ ಶಾಸಕ ಹಿರಿಯ ನಾಯಕರಲ್ಲವೇ ಪರಿಣಿತರನ್ನು ಮತ್ತು ಜಿಲ್ಲಾ ಪಂಚಾಯತಿಯಲ್ಲಿ ವ್ಯಾಪಕವಾಗಿ ಅನುಭವ ಪಡೆದಿರತಕ್ಕಂಥಹ ಕೆಲವು ಹಿರಿಯರನ್ನು ಮತ್ತು ಈ ವಿಚಾರಗಳಲ್ಲಿ ಆಸಕ್ತಿ ತೋರಿ ಅನೇಕ ಸಂದರ್ಭಗಳಲ್ಲಿ ಪ್ರತಿಕ್ರಿಯೆ ವ್ಯಕ್ತ ಮಾಡುತ್ತಿದ್ದಂತಹ ಕೆಲವು ಬುದ್ಧಿ ಜೀವಿಗಳನ್ನು ಕೂಡ ಇದಕ್ಕೆ ಆಹ್ವಾನಿಸಿದ್ದೇವೆ. ಅಲ್ಲಿ ನೇರವಾಗಿ ಕಾಂಗ್ರೆಸ್ ಮತ್ತು ಬಿಜೆಪಿ, ಎರಡೂ ಪಕ್ಷದ ಮುಖಂಡರುಗಳು ನೀವು ಈ ರೀತಿಯಾಗಿ ದೊಡ್ಡ ಗ್ರಾಮ ಪಂಚಾಯತಿಗಳನ್ನು ಮಾಡುವುದರ ಮೂಲಕವಾಗಿ ಯಾವುದೇ ಒಂದು ದೊಡ್ಡ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಇರುವಂತಹ ಪಂಚಾಯತಿಯ ವ್ಯಾಪ್ತಿ ಹಾಗೆಯೇ ಇರತಕ್ಕದ್ದು ಒಳ್ಳೆಯದು. ಪದೇ ಪದೇ ಪ್ರಯೋಗಕ್ಕೆ ಇದನ್ನು ಒಳಪಡಿಸಬಾರದು ಎನ್ನುವಂತಹ ಮಾತನ್ನು ಆಡಿದರು. ಆದರೆ ಅಲ್ಲಿ ಭಾಗವಹಿಸಿದಂತಹ ಅನೇಕ ಪಂಡಿತರು, ಬುದ್ಧಿ ಜೀವಿಗಳು ಹಿಂದೆ ಇದ್ದಂತಹ ಜಿಲ್ಲಾ ಪರಿಷತ್ತಿನಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಅನುಭವಿಗಳಾದಂತಹವರು, ನಮ್ಮ 73ನೇ ತಿದ್ದುಪಡಿಗೆ ಮತ್ತು ರಾಜೀವ್ ಗಾಂಧಿ ಅವರು ತರಲು ಉದ್ದೇಶಿಸಿದಂತಹ 64ನೆಯ ತಿದ್ದುಪಡಿ ಸಂದರ್ಭಗಳಲ್ಲಿ ಆ ಕಾನೂನಿಗೆ ನೆರವನ್ನು ನೀಡಿರತಕ್ಕಂಥಹ ಅನೇಕ ಹಿರಿಯರೂ ಅದರಲ್ಲಿ ಭಾಗವಹಿಸಿದ್ದರು. ಮಾನ್ಯ ನಾರಾಯಣಸ್ವಾಮಿ ಅವರ ಹೆಸರನ್ನೂ ಸಹ ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸಬಹುದು. ಅವರೆಲ್ಲರೂ ಕೂಡ ಹಿಂದೆ ಇದ್ದಂತಹ ಮಂಡಲ ಪಂಚಾಯಿತಿಗಳು ಹೆಚ್ಚು ಅರ್ಥಪೂರ್ಣವಾಗಿದ್ದವು. ಅವು ಆಡಳಿತಾತ್ಮಕವಾಗಿ ಸುಲಲಿತವಾಗಿ ಕೆಲಸ ಮಾಡಲಿಕ್ಕೆ ಸಾಧ್ಯತೆ ಆಗುತ್ತದೆ. ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತದೆ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ಇದು ಇನ್ನೂ ಚರ್ಚೆ ಮಾಡಬೇಕಾಗಿರುವಂತಹ ವಿಷಯ ಇದೆ. ನಂತರ ಇದರ ಬಗ್ಗೆ ಸರಿಯಾಗಿ ನಾವು ಪರ್ಯಾಲೋಚನೆ ಮಾಡುತ್ತೇವೆಂದು ಹೇಳಿ ಸಭೆ ಆಗಮುಕ್ತಾಯವಾಯಿತು. ಅದಾದ ನಂತರ ನಾವು ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಸಂದರ್ಭಗಳಲ್ಲಿ ಚುನಾವಣೆಗಳನ್ನು ಎದುರಿಸಲು

ನೀವು ಹಿಂಜರಿಯದಿದ್ದೀರಿ ಎನ್ನುವ ಮಾತನ್ನು ನಮ್ಮ ಸರ್ಕಾರದ ಈ ನಾಲ್ಕು ವರ್ಷದ ಅವಧಿಯಲ್ಲಿ 13 ಚುನಾವಣೆಗಳನ್ನು ಎದುರಿಸಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಕಾಲಕಾಲಕ್ಕೆ ಚುನಾವಣೆಗಳು ನಡೆಯಬೇಕಾದ್ದು ಅಗತ್ಯ, ಅನಿವಾರ್ಯ, ಅದು ಬದ್ಧತೆಯೂ ಕೂಡ. ಆದರೆ ಇದರಲ್ಲಿ ಭಾರತೀಯ ಜನತಾ ಪಕ್ಷದವರಿಗೆ ಸರ್ಕಾರವನ್ನು ನಿರ್ವಹಿಸುವಂತಹ ಅವಕಾಶ ಅವರಿಗೆ ಇಲ್ಲದೇ ಇರುವುದರಿಂದ, ಅವರು ಏನಾದರೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ಸರಿಯಾದಂತಹ ಮನ್ನಣೆ ಕೂಡ ಇರಬಹುದು. ಅವರ ಉದ್ದೇಶವನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಅಧಿಕಾರದಲ್ಲಿದ್ದಂಥ ಮಾನ್ಯ ಖರ್ಗೆ ಅವರ ಪಕ್ಷ ಎಲ್ಲ ಚುನಾವಣೆಗಳನ್ನೂ ಕೂಡ ನಡೆಸದೆ, ಆ ಎಲ್ಲ ಚುನಾವಣೆಗಳ ಸಂಚಿತ ಭಾರವನ್ನು ನಮ್ಮ ಸರ್ಕಾರದ ಮೇಲೆ ಬಿಟ್ಟು ಹೋಗಿರುವಂತಹದ್ದು ಕೂಡ ಅಷ್ಟೇ ಇತಿಹಾಸ ಮತ್ತು ಅದನ್ನು ಜ್ಞಾಪಕ ಮಾಡಿಕೊಂಡಿರುವಂತಹದ್ದೇ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ 13 ಚುನಾವಣೆಗಳನ್ನು ಮಾಡಿದ್ದೇವೆ. ತಾಲ್ಲೂಕು ಪಂಚಾಯತಿ ಚುನಾವಣೆ, ಜಿಲ್ಲಾ ಪಂಚಾಯತಿಯ ಚುನಾವಣೆ, ನಗರಸಭೆಯ ಚುನಾವಣೆ, ಪಟ್ಟಣ ಪಂಚಾಯತಿಯ ಚುನಾವಣೆ, ಸೇವಾ ಸಂಘಗಳ ಚುನಾವಣೆ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಚುನಾವಣೆ, ಎಪಿಎಂಸಿಯ ಚುನಾವಣೆ. ಹೀಗೆ ಚುನಾವಣೆಯ ಸರಮಾಲಿಕೆಗಳನ್ನೇ ನಾವು ಎದುರಿಸಿಕೊಂಡು ಬಂದು ಅದರಲ್ಲಿ ಯಶಸ್ವಿ ಆದಾಗ ಈ ಒಂದು ಗ್ರಾಮ ಪಂಚಾಯತಿಯ ಚುನಾವಣೆ, ಅದು ಕೂಡ ಪಕ್ಷಾತೀತವಾಗಿ ನಡೆಯಬೇಕಾದಂತಹದ್ದು. ಇದರ ಬಗ್ಗೆ ನಾವು ಹೆದರಬೇಕಾದ್ದು ಏನೂ ಇಲ್ಲ. ಒಂದು ವೇಳೆ ನಾವು ಇವತ್ತು ಹೆದರಿದ್ದೇವೆ ಎಂದು ಹೇಳಿ ಒಂದು ವಾದಕ್ಕಾಗಿ ನಾವು ಒಪ್ಪಿಕೊಂಡರೂ ಕೂಡ ನಾಳೆ ನವೆಂಬರ್ ತಿಂಗಳಲ್ಲಿ ಜನತೆಯ ಹತ್ತಿರ ಹೋಗಬೇಕಲ್ಲ. ಚುನಾವಣೆಗಳನ್ನು ಯಾರು ಎದುರಿಸಲು ಸಮರ್ಥರಾಗಿರುತ್ತಾರೆ, ಅವರು ಪ್ರಜಾಪ್ರಭುತ್ವದಲ್ಲಿ ಒಂದು ರಾಜಕೀಯ ಪಕ್ಷವನ್ನು ಕಟ್ಟಿಕೊಳ್ಳಬೇಕಾದಂತಹ ಅಗತ್ಯ ಇಲ್ಲ. ಆದ್ದರಿಂದ ಇಲ್ಲಿ ಇರತಕ್ಕ ಉದ್ದೇಶ ಬಹಳ ಸ್ಪಷ್ಟವಾಗಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಪ್ರಸ್ತಾಪ ಮಾಡಿದಂತೆ ನಮ್ಮ ಅಧ್ಯಾದ್ಯಾಪನದಲ್ಲಿ ನಾವು ನಮ್ಮ ಕರ್ನಾಟಕ ಪಂಚಾಯತ್ ರಾಜ್ ಕಾನೂನಿನ 5ನೇ ವಿಧಿಗೆ ಹಾಗೂ 4ನೇ ವಿಧಿಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಯಾವುದೇ ಒಂದು ಕಾನೂನನ್ನು ನಾವು ತಂದಾಗ ಕಾನೂನಿನ ಪರಿಣಾಮಗಳು ಹೀಗೆಯೇ ಆಗುತ್ತದೆಂದು ಪ್ರತಿಯೊಂದನ್ನೂ ಊಹಿಸಿ ಅದರ ಪ್ರಕಾರ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಾಯಶಃ ಮಾನ್ಯ ಘೋರ್ಪಡೆಯವರಂತಹ ಹಿರಿಯರು ಇದಕ್ಕೆ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಈ 5ನೇ ಸೆಕ್ಷನ್ ನ ಕೆಳಗಡೆ ನಾವು ಈ ರೊಟೇಷನ್ ಸಿಸ್ಟಂ, ಅದು ಮತ್ತೆ ಮತ್ತೆ ಪ್ರತಿ ಸಾರಿ ಪರಿವರ್ತನೆ ಆಗಿ ಬರಬೇಕಾದಂತಹದ್ದು, ಪರಾವರ್ತನೆಗೊಳ್ಳಬೇಕಾದಂತಹ ಸಂದರ್ಭ ಬಂದಾಗ ಇಲ್ಲಿ ಈ ಚುನಾವಣೆಗಳ ಸಿದ್ಧತೆ ಆಗುತ್ತದೆ ಎಂದಾಗ ಅನೇಕ ಶಾಸಕರು,

ಅನೇಕ ಹಿರಿಯರು ಸರ್ಕಾರದ ಮೇಲೆ ಒತ್ತಡವನ್ನು ತಂದರು. ಮತ್ತು ಪತ್ರಿಕೆಯಲ್ಲಿ ಕೆಲವು ಹೇಳಿಕೆಗಳನ್ನು ಕೊಟ್ಟರು. ಕೆಲವು ವಿಪರ್ಯಾಸಗಳನ್ನೂ ಕೂಡ ಪ್ರಸ್ತಾಪಿಸಿದರು. ಆ ವಿಪರ್ಯಾಸದ ಪ್ರಸ್ತಾಪ ಹೇಗಿತ್ತು ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇರತಕ್ಕ ಕೆಲವು ಪ್ರದೇಶಗಳು ಇರುತ್ತವೆ. ಬೇರೆ ವರ್ಗದ ಜನ ಇರತಕ್ಕಂಥ ಕೆಲವು ಪ್ರದೇಶಗಳು ಇರುತ್ತವೆ. ಆ ನಮ್ಮ 5ನೇ ವಿಧಿಯ ಪ್ರಕಾರ ಚುನಾವಣೆಗೆ ಒಂದು ವೇಳೆ ಮೀಸಲಾತಿಯನ್ನು ಕೊಟ್ಟಾಗ, ಆ ಮೀಸಲಾತಿ ಐದು ವರ್ಷದ ನಂತರ ಮತ್ತೆ ಬದಲಾವಣೆ ಆಗಬೇಕು ಪರಾವರ್ತನೆಗೊಳ್ಳಬೇಕು ಎನ್ನುವಂತಹ ಮಾತು ಇದೆ. ಬೈ ರೊಟೇಷನ್ ಎನ್ನತಕ್ಕದ್ದು ಇದೆ. ಆ ಸಂದರ್ಭ ಇದ್ದಾಗ, ಅದನ್ನು ಬದಲಾವಣೆ ಮಾಡಬೇಕು ಎನ್ನುವಂತಹ ಶಲ್ ಆಗಲೇಬೇಕು ಎನ್ನುವಂತಹದ್ದು ನಮ್ಮ ಕರ್ನಾಟಕ ಪಂಚಾಯತ್ ರಾಜ್ಯ ಆಕ್ಟ್‌ನ 93 ನಿಯಮ. ಪ್ರಾಯಶಃ ಈ ರೀತಿಯ ಒಂದು ವಿಪರ್ಯಾಸದ ಸೃಷ್ಟಿ ಆಗುತ್ತದೆ ಎಂದು ಹೇಳಿ ಮಾನ್ಯ ಘೋರ್ಪಡೆಯವರೂ ಸಹ ಆ ದಿವಸ ಭಾವಿಸಲಿಕ್ಕೆ ಸಾಧ್ಯ ಇಲ್ಲ. ಅದೂ ಒಂದೊಂದು ಸಹ ಭಾವಿಸಲಿಕ್ಕೆ ಆಗುವುದಿಲ್ಲ. ತಾವು ತಪ್ಪಾಗಿ ಯೋಚನೆ ಮಾಡಿದ್ದೀರಿ ಎಂದಲ್ಲ. ತಮ್ಮನ್ನು ನಾನು ಒಂದು ದೃಷ್ಟಿಯಿಂದ ಆ ಕಾನೂನನ್ನು ತಂದಂತಹ ಸಂದರ್ಭದಲ್ಲಿ ಇದರ ಪರಿಣಾಮ ಹೀಗೆ ಆಗುತ್ತದೆ ಎಂದು ಯಾರೂ ಊಹಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದೆ. ಈಗ ತಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಹೆಚ್ಚು ಇರುವಂತಹ ಕಡೆಗೆ ತಮ್ಮ ಕಾಲದಲ್ಲಿ ಒಂದು ಮೀಸಲಾತಿಯನ್ನು ಕೊಟ್ಟರಿ. ಎರಡು ಸ್ಥಾನವೋ, ಮೂರು ಸ್ಥಾನವೋ ಆಯಾಯ ಜನಸಂಖ್ಯೆಗೆ ಅನುಗುಣವಾಗಿ ಕೊಟ್ಟಿರಿ. ಈಗ ಅದನ್ನು ನಾವು ಬದಲಿಸಬೇಕು. ಪರಾವರ್ತನೆಗೊಳಿಸಬೇಕು. ಪರಾವರ್ತನೆಗೊಳಿಸಿದಾಗ ಆ ಜನಾಂಗವೇ ವಾಸಿಸದೇ ಇರುವಂತಹ ಕೆಲವು ಪ್ರದೇಶಗಳಿಗೆ ಅವು ಹೋಗುತ್ತವೆ. ಬದಲಿಸಿ ಬೇಕಾಗಿರತಕ್ಕದ್ದು ಅನಿವಾರ್ಯ, ಅಗತ್ಯ ಕಾನೂನಿನ ಪ್ರಕಾರ. ಅದನ್ನು ನಾವು ಬದಲಾಯಿಸಿದಾಗ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹೆಚ್ಚು ವಾಸವಾಗಿರುವಂತಹ ಪ್ರದೇಶದಿಂದ ಆ ಮೀಸಲಾತಿ ಸ್ಥಾನಗಳು ಬೇರೆ ಸಾಮಾನ್ಯ ಜನ ವಾಸವಾಗುವ ಪ್ರದೇಶದಲ್ಲಿ ಹೋಗುತ್ತವೆ. ಸಾಮಾನ್ಯ ವರ್ಗದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಮೀಸಲಾದಂತಹ ಸ್ಥಾನಗಳು ಆ ಜನಾಂಗ ವಾಸವಾಗದೇ ಇರುವಂತಹ ಕೆಲವು ಪ್ರದೇಶಗಳಿಗೆ ಹೋಗುತ್ತವೆ. ಆದ್ದರಿಂದ ಕೆಲವು ವಿಪರ್ಯಾಸಗಳು ಸೃಷ್ಟಿ ಆದವು. ಇದು ಸರಿಯಾದಂತಹ ಕ್ರಮ ಅಲ್ಲ ಎನ್ನುವಂತಹ ಒತ್ತಡವನ್ನು ಅನೇಕ ಶಾಸಕರು ತಂದರು. ಅದೇ ರೀತಿಯಲ್ಲಿ ಎಲ್ಲ ಪತ್ರಿಕೆಗಳಲ್ಲಿ ಟೀಕೆ ಟಿಪ್ಪಣಿಗಳು ಬಂತು. ಇದು ವಾಸ್ತವಾಂಶವೂ ಕೂಡ. ಅದಕ್ಕೆ ಅನೇಕ ಉದಾಹರಣೆಯನ್ನು ನಾವು ಕೊಡಬಹುದು. ಅದನ್ನು ನಾನು ದೀರ್ಘವಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಆ ಸಂದರ್ಭದಲ್ಲಿ ನಾವು ಐದನೇ ಕಾನೂನನ್ನು ತಿದ್ದುಪಡಿ ಮಾಡಿ ಅದನ್ನು

ಪರಾವರ್ತನೆಗೊಳಿಸಬೇಕು ಎಂದಾಗ ಇನ್ನೂ ಸಮಯ ಹಿಡಿಯುತ್ತದೆ ಎಂದಾಗ ನಮ್ಮ ಮೂಲಭೂತವಾಗಿರತಕ್ಕಂಥ ಉದ್ದೇಶದ ಪ್ರಕಾರ ಕರ್ನಾಟಕ ಪಂಚಾಯತ್ ರಾಜ್ ಕಾನೂನು 93ರ ಪ್ರಕಾರ ನಾವು ಈಗ ಹಾಲಿ ಇರತಕ್ಕಂಥ ಗ್ರಾಮ ಪಂಚಾಯತಿಯ ಅವಧಿಯ ಮುಗಿಯುವಂತಹ ಸಂದರ್ಭಗಳಲ್ಲಿ ಅದು ಒಂದು ದೊಡ್ಡ ಪಂಚಾಯತಿ ಮಾಡುವುದರಿಂದ, ಈಗಾಗಲೇ ನಾನು ಉದಾಹರಿಸಿದಂತಹ ಕಾರಣಗಳಿಗಾಗಿ, ಆ ಒಂದು ಕಾನೂನನ್ನು ತರಬೇಕು ಮತ್ತು 4ನೇ ವಿಧಿಯನ್ನು ಬದಲಿಸಬೇಕು ಎಂಬ ನಿರ್ಧಾರಕ್ಕೆ ಬಂದೆವು. ಆ ನಿರ್ಧಾರ ತೆಗೆದುಕೊಂಡಿರತಕ್ಕ ಬಗ್ಗೆ ಈಗಾಗಲೇ ಹೈಕೋರ್ಟಿನಲ್ಲಿ ಆ ವಿಚಾರ ಚರ್ಚೆಗೆ ಒಳಗಾಗಿದೆ. ಇದೇ ವಿಚಾರವನ್ನು ಈಗ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ :— ನೀವು ಹೇಳುತ್ತಿರುವುದು ಏನೆಂದರೆ ರೊಟೇಷನ್ ಸಿಸ್ಟಂ ನಾವೇನು ಆಕ್ಸೆಪ್ಟ್ ಮಾಡಿ ಆ ಪ್ರಕಾರ ಡೀಲಿಮಿಟೇಶನ್ ಮಾಡಿದೆವು. ಈ ರೊಟೇಷನ್ ಸಿಸ್ಟಂ ಬೇಡ ಎಂದು ಒಂದು ತೀರ್ಮಾನಕ್ಕೆ ಬಂದೆವು ಎಂದು ಇಟ್ಟುಕೊಳ್ಳಿ. ಬಂದಿದ್ದು ನಿಜ. ಮತ್ತೆ ಸೈಜ್ ಆಫ್ ದಿ ಪಂಚಾಯತ್, ಐದು ಸಾವಿರದಿಂದ ಏಳು ಸಾವಿರ ನಾವೇನು ಮಾಡಿದೆವು. ನೀವು ಈಗ 15 ಸಾವಿರದಿಂದ 20 ಸಾವಿರ ಮಾಡಲಿಕ್ಕೆ ಹೊರಟಿದ್ದೀರಿ. ಅದರ ಬಗ್ಗೆ ಭಿನ್ನಾಭಿಪ್ರಾಯ ಇದೆ. ನಮ್ಮ ಅಭಿಪ್ರಾಯ ಬೇರೆ, ನಿಮ್ಮ ಅಭಿಪ್ರಾಯ ಬೇರೆ. ಇದನ್ನೆಲ್ಲಾ ಆಗಲೇ ಇಷ್ಟು ಅಮೆಂಡ್‌ಮೆಂಟ್ಸ್ ತಂದರಲ್ಲ, ಆಗಲೇ ತರಬಹುದಿತ್ತಲ್ಲ? ಅಂದರೆ, ಐದು ವರ್ಷಗಳಲ್ಲಿ ಒಂದು ಅಂದರೆ,

5.20 ಪಿ.ಎಂ.

ಐದು ವರ್ಷಗಳಲ್ಲಿ ಒಂದು ಬಾರಿಯಾದರೂ ಕಡ್ಡಾಯವಾಗಿ ಚುನಾವಣೆ ನಡೆಯಲೇಬೇಕೆಂದು ಸಂವಿಧಾನದಲ್ಲಿ ಏನು ತಿಳಿಸಿದೆ, ಅದಕ್ಕೆ ಧಕ್ಕೆ ಬಾರದಂತೆ ಈ ತಿದ್ದುಪಡಿಗಳನ್ನು ಮಾಡಬಹುದಾಗಿತ್ತಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಘೋರ್ಪಡೆಯವರು ಮಾಡಿದಂಥ ಪ್ರಶ್ನೆ ಬಹಳ ಸೂಕ್ತವಾಗಿದೆ. ಏನೆಂದರೆ, ನೀವೇಕೆ ಕೊನೇ ಹಂತದಲ್ಲಿ ತಿದ್ದುಪಡಿಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದಿರಿ? ಎಂಬುದು. ಪ್ರಾಯಶಃ ಇದಕ್ಕೆ ಬೇರೆ ಬೇರೆ ಕಾರಣಗಳನ್ನು ಕೂಡ ತಾವು ಊಹಿಸಿಕೊಳ್ಳಬಹುದು ಅಥವಾ ಆಪಾದಿಸಲೂ ಬಹುದು. ಅಷ್ಟರಮಟ್ಟಿಗೆ ನ್ಯಾಯಯುತವಾಗಿ ತಾವು ಆ ರೀತಿಯಾಗಿ ಯೋಚಿಸಬಹುದು. There is justification for such an inference also. I do agree for that ಆದರೆ, ಇಲ್ಲಿ ಪ್ರಶ್ನೆ ಬರುವುದೇನೆಂದರೆ, ನಾವು ಅವರ ಅವಧಿಯ ನಡುವೆಯೇ ಈ ರೀತಿಯ ಬದಲಾವಣೆಗಳನ್ನು ತಂದರೆ ಗ್ರಾಮ ಪಂಚಾಯಿತಿಯ ಐದು ವರ್ಷಗಳ ಅವಧಿಗೆ ಆಯ್ಕೆಯಾಗಿರುವವರ ಅಧಿಕಾರವನ್ನು ಮೊಟಕುಗೊಳಿಸಿದ

ಅಪಾದನೆಗೆ ಗುರಿಯಾಗುತ್ತೇವೆ. ಆದುದರಿಂದ, ಅವರ ಐದು ವರ್ಷಗಳ ಅವಧಿ ಮುಗಿದ ನಂತರ ಬದಲಾವಣೆಯನ್ನು ನಾವು ಸಾಂಸ್ಥಿಕವಾಗಿ ತರಬೇಕೆನ್ನುವಂಥ ಕಾರಣಕ್ಕಾಗಿ ಈ ವ್ಯವಸ್ಥೆ ತಂದೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಅಮೆಂಡ್‌ಮೆಂಟ್ ತಂದ ನಂತರ this will come into effect on the appointed date ಎಂದು ತಾವು ಕೊಡುತ್ತೀರಿ. ಆ ದಿನಾಂಕಕ್ಕೆ ಸಹಜವಾಗಿಯೇ ಚುನಾವಣೆಯಾದ ನಂತರ ಎನ್ನುವುದನ್ನು ನೀವು ನಮೂದಿಸುತ್ತೀರೆಂದಾಗ ಮೊಟಕುಗೊಳಿಸುವ ಪ್ರಶ್ನೆಯೇ ಬರುತ್ತಿರಲಿಲ್ಲ. ಯಾವುದೋ ಒಂದು ರೀತಿಯಿಂದ ಎಲೆಕ್ಷನ್ ಅನ್ನು ಪೋಸ್ಟ್‌ಪೋನ್ ಮಾಡಬೇಕಾಗಿತ್ತು, ಮಾಡಿದಿರಿ. ಇದಕ್ಕೆ ಮುಖ್ಯಮಂತ್ರಿಗಳು ನಿನ್ನೆಯೇ ಸ್ಪಷ್ಟವಾಗಿ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ :— ತಾವು ಹೇಳುವಂಥ ಮಾತು ಸತ್ಯವಿದೆ. ಈಗ ನಾವು ನಮ್ಮ ಪ್ರದೇಶದಲ್ಲಿ ಒಂದು ಕ್ಷೇತ್ರವನ್ನು ಬದಲಾವಣೆ ಮಾಡುವಂಥ ಸಂದರ್ಭದಲ್ಲಿ ಎಸ್‌ಸಿ : ಎಸ್‌ಟಿ ಮತ್ತು ಇತರ ಜನಾಂಗದವರು ಯಾರೇ ಇರಲಿ, ಅಂತಹ ಕಡೆ ಕ್ಷೇತ್ರ ಕೊಡಬೇಕಾಗಿರುವಂಥ ಸಂದರ್ಭದಲ್ಲಿ ತಾವು ಆ ಕಾರಣ ಹೇಳುತ್ತಿರುವುದು ಸರಿಯಿದೆ. ಆದರೆ, ಈ ಪೂರ್ವಾಲೋಚನೆಯನ್ನು ಮುಂಚೆಯೇ ಮಾಡಿ ಅದಕ್ಕೆ ಬೇಕಾದಂಥ ತಿದ್ದುಪಡಿಯನ್ನು, ಬದಲಾವಣೆಯನ್ನು ತಂದು ತಾವು ಚುನಾವಣೆ ನಡೆಸಬಹುದಾಗಿತ್ತಲ್ಲವೇ? ಎನ್ನುವುದೇ ನಮ್ಮ ಒತ್ತಾಯವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿರುವಂತೆ ಅವರು ಯಾವ ರೀತಿಯಾಗಿ ನಡವಳಿಕೆಗಳನ್ನು ಭಾವಿಸಬಹುದೆನ್ನುವುದಕ್ಕೆ ತಾವು ಸಮರ್ಥರಿದ್ದೀರಿ ಮತ್ತು ನ್ಯಾಯೋಚಿತವಾಗಿಯೂ ತಾವು ಯೋಚಿಸಿದ್ದೀರಿ. ಇತಿಹಾಸದಲ್ಲಿ ಅನೇಕ ತರಹದ ವ್ಯವಸ್ಥೆಗಳು ಕೂಡ ಆಗುತ್ತಿರುತ್ತವೆ. ಹೆರಾಲ್ಡ್ ವಿಲ್ಸನ್‌ರವರು ಹಿಂದೆ ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಎಡ್ವರ್ಡ್ ಹಿತ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ಒಮ್ಮೆ ಬಿ.ಬಿ.ಸಿ.ಯವರು ಅವರಿಬ್ಬರ ಮಾತುಗಳನ್ನು ಲೇವಡಿ ಮಾಡುವ ಉದ್ದೇಶದಿಂದ ಟೆಲಿವಿಶನ್‌ನಲ್ಲಿ ಹೆರಾಲ್ಡ್ ವಿಲ್ಸನ್‌ರವರ ಮುಖದ ಹಾವ, ಭಾವ ತೋರಿಸುತ್ತಾ ಎಡ್ವರ್ಡ್ ಹಿತ್‌ರವರ ಭಾಷಣ ಪ್ರಸಾರ ಮಾಡಿ, ಮತ್ತು ಎಡ್ವರ್ಡ್ ಹಿತ್‌ರವರ ಮುಖದ ಹಾವ, ಭಾವ ತೋರಿಸುತ್ತಾ ಹೆರಾಲ್ಡ್ ವಿಲ್ಸನ್‌ರವರ ಭಾಷಣ ಹಾಕಿದರು. ಆದುದರಿಂದ, ನಾವು ಅನೇಕ ಸಂದರ್ಭಗಳಲ್ಲಿ ಯಾವ್ಯಾವ ಸ್ಥಳದಲ್ಲಿ ಕುಳಿತು ಏನೇನು ಮಾತನಾಡಿರುತ್ತೇವೆ ಎನ್ನುವುದರ ವಿರುದ್ಧವಾಗಿ ಇನ್ನೊಂದು ಸಾಲಿಗೆ ಹೋದಾಗ ಮಾತನಾಡುತ್ತಿರುತ್ತೇವೆ. ಘೋರ್ಪಡೆಯಂತಹ ಎಲ್ಲಿಯೋ ಒಬ್ಬರು ಅದಕ್ಕೆ ಅಪವಾದವಾಗಿರಬಹುದು. ಅವರು ರಾಜೀನಾಮೆ ಕೊಟ್ಟಿದ್ದಾರೆ. ಅವರು

ರಾಜೀನಾಮೆ ಏನು ಕೊಟ್ಟಿದ್ದರೋ, ಅವರ ಜಿಲ್ಲೆಯವನಾದ ನಾನು ಸಹ ಅದನ್ನೇ ಅನುಸರಿಸಬಹುದಾಗಿತ್ತು. ಆದರೆ, ನಿಮಗಿದ್ದಂಥ ಆತ್ಮಸ್ಥೈರ್ಯ ನನಗೆ ಬಾರದೆ ಹೋಯಿತು. ಒಮ್ಮೊಮ್ಮೆ ನಮ್ಮ ಒತ್ತಡಗಳ ಮೇಲೆಯೂ ಕೂಡ ನಾವು ಸಾಗುತ್ತೇವೆ. ನಾನು ದ್ರೋಣಾಚಾರ್ಯ, ಕೃಪಾಚಾರ್ಯರ ವಿಚಾರ ಹೇಳಿ ಆ ಮಟ್ಟಕ್ಕೆ ನಾನು ಹೋಗಿದ್ದೇನೆಂದು ಹೇಳುವುದಿಲ್ಲ. ನಾವು ಎದುರರಾಗುವುದಕ್ಕೆ ಸಾಧ್ಯವಾಗದಂಥ ಕೆಲವು ಒತ್ತಡಗಳು ಇರುತ್ತದೆಂದು ಹೇಳುವುದಿಲ್ಲ. ನಾವು ರಾಜ್ಯಭಾರ ಮಾಡುವಂಥ ಕ್ರಮಗಳಲ್ಲಿ ವ್ಯಕ್ತಿಗತವಾಗಿರುವ ಅಭಿಪ್ರಾಯ ಒಂದು ಸಂಸ್ಥೆಯ ಅಭಿಪ್ರಾಯಕ್ಕೆ ಎಷ್ಟರಮಟ್ಟಿಗೆ ಪೂರಕವಾಗಿರುತ್ತದೆ ಎನ್ನುವುದನ್ನೂ ಕೂಡ ತಾತ್ವಿಕವಾಗಿ ಚಿಂತನೆ ಮಾಡಬೇಕಾಗುತ್ತದೆ. ಇಲ್ಲಿ ನಾನು ರಾಜೀನಾಮೆ ನಾಟಕ ಆಡಿದೆ ಎನ್ನುವುದನ್ನೂ ತಾವು ಭಾವಿಸಬಹುದು, ಅದು ತಪ್ಪೆಂದು ನಾನು ಅನ್ನುವುದಿಲ್ಲ. ಏಕೆಂದರೆ, ಮನುಷ್ಯನ ಮನಸ್ಸುಗಳು ಅನೇಕ ಸಂದರ್ಭದಲ್ಲಿ ಬಹಳ ಸಂಕೀರ್ಣವಾಗಿರುತ್ತವೆ. ಎಲ್ಲಿಯೋ ಒಂದು ಕಡೆ ನಾನು ಇನ್ನೂ ಅಧಿಕಾರದಲ್ಲಿ ಉಳಿಯಬೇಕೆನ್ನುವ ಆಸೆ ಕೂಡ ಆ ನಿರ್ಧಾರಕ್ಕೆ ಕಾರಣವಾಗಿರಬಹುದು. ನಾನು ಅದನ್ನು ಜಸ್ಟಿಫೈ ಮಾಡಿ ಹೇಳುತ್ತಿದ್ದೇನೆಂದು ಹೇಳುವುದಿಲ್ಲ. ಆದರೆ, ನಮ್ಮ ಮುಂದೆ ಎರಡು ಆಯ್ಕೆಗಳಿದ್ದವು. ಒಂದನೆಯದಾಗಿ, ಮಾನ್ಯ ಘೋರ್ಪಡೆಯವರ ಮನಸ್ಸನ್ನು ಸಚಿವ ಸಂಪುಟ ಸಭೆ ಒಪ್ಪಿದಾಗ, ಚುನಾವಣೆಗಳನ್ನು ಮುಂದಕ್ಕೆ ಹಾಕಿದುದಕ್ಕಾಗಿ ಅವರು ರಾಜೀನಾಮೆ ಕೊಟ್ಟರು. ಅದಾದ ನಂತರ ಪ್ರಾಯಶಃ ಅವರು ತೆಗೆದುಕೊಂಡಂಥ ನಿಲುವುಗಳೇನಿದೆ, ಅದು ಇವೊತ್ತಿಗೂ ಕೂಡ ದಾಖಲಿಸಲ್ಪಡುವಂಥ ನಿಲುವು ಕೂಡ ಆಗಿದೆ. ಆದರೆ, ಅಂತಹ ಅವಕಾಶ ನನಗೆ ಇಲ್ಲದೆ ಹೋಗಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಅದಕ್ಕೆ ಕಾರಣಗಳೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಆ ದಿವಸ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಬರಗಾಲ ಮತ್ತು ಅತಿ ಮಳೆ ಎನ್ನುವ ಕಾರಣಕ್ಕಾಗಿ ಚುನಾವಣೆಗಳನ್ನು ಮುಂದೂಡುವಿಕೆಗೆ ಅವರಿಗೆ ಏನು ಸಕಾರಣಗಳಿದ್ದವು, ಅಂತಹ ಸಕಾರಣಗಳು ಕೂಡ ನನಗೆ ಬಂದಿವೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಆದುದರಿಂದ, ನಾವು ನಿಮ್ಮನ್ನು ಆಯ್ಕೆ ಮಾಡಿಕೊಂಡೆವೇ ವಿನಾ ಘೋರ್ಪಡೆಯವರನ್ನು ನಾವು ಆಯ್ಕೆಮಾಡಿಕೊಳ್ಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:— ಆವೊತ್ತಿನ ಬರಗಾಲವೇ ಬೇರೆ, ಇವೊತ್ತಿನ ರಾಜಕೀಯ ಬರಗಾಲವೇ ಬೇರೆ.

ಶ್ರೀ ಅರಗ ಜ್ಞಾನೇಂದ್ರ:— ಬರಗಾಲ ಅಲ್ಲ, ಬಿರುಗಾಳಿ!

ಶ್ರೀ ಎಂ.ಪಿ. ಪ್ರಕಾಶ್:— ಮಾನ್ಯ ಅಧ್ಯಕ್ಷರೆ, ನನ್ನ ಆತ್ಮಸಾಕ್ಷಿ ಬಗ್ಗೆ ಕೆಲವು ವಿಚಾರಗಳನ್ನು ನೇರವಾಗಿ ಕೇಳಿದರು. ನಾನು ಅನೇಕ ಸದಸ್ಯರ ಆತ್ಮಸಾಕ್ಷಿ ಪ್ರಶ್ನೆಯನ್ನು ಕೇಳುತ್ತೇನೆ. ಯಾವುದು ಆದರ್ಶವಲ್ಲವೋ ಅದನ್ನು ನಾನು ಆದರ್ಶವಾಗಿ ನಡೆದುಕೊಂಡಿದ್ದೇನೆಂದು ನಾನು ಚರ್ಚೆ ಮಾಡುವುದು ಕೂಡ ವೃಥಾ ಸಮರ್ಥನೀಯ ಅಲ್ಲ. ನಾನು ಇದನ್ನು ವ್ಯಾಪಕಗೊಳಿಸುವ ಪ್ರಯತ್ನ ಏಕೆ ಮಾಡುತ್ತಿದ್ದೇನೆಂದರೆ ಪ್ರಜಾಪ್ರಭುತ್ವದ ರಕ್ಷಣೆ ಜನತಂತ್ರ ವ್ಯವಸ್ಥೆಯಲ್ಲಿ ಪಕ್ಷ ಮತ್ತು ವ್ಯಕ್ತಿ, ಇವುಗಳ ನಡುವೆ ಇರುವ ಬಗ್ಗೆ ಮೊದಲಿನಿಂದಲೂ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುವುದು ಗೊತ್ತಿದೆ. ಆದರೆ, ಅಲ್ಲಿ ಆತ್ಮಸಾಕ್ಷಿಗೆ ಮತ ಕೊಡುವುದಕ್ಕೆ ಏನಾದರೂ ಅವಕಾಶವಿದೆಯೇ? ಮತ್ತು ಆ ರೀತಿ ಏನಾದರೂ ಆಗಿದ್ದರೆ ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿ ಎಷ್ಟರಮಟ್ಟಿಗೆ ನಿಯಮಗಳನ್ನು ತರಬೇಕಾಗುತ್ತದೆ. ಪಕ್ಷ ತಾನು ತೆಗೆದುಕೊಂಡಿರುವ ನಿಲುವು ಮತ್ತು ಬಹುಮತಕ್ಕೆ ಆತ ಎಷ್ಟು ಬದ್ಧನಾಗಿರಬೇಕು? ಈ ವಿಚಾರಗಳನ್ನು ನಾನು ಮತ್ತೆ ಪುನರ್ ಉಚ್ಚರಿಸಬೇಕಾದ ಅಗತ್ಯವಿಲ್ಲ. ಆದರೆ, ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದಿಷ್ಟೆ, ನಾವು ಕೆಲವು ಸಂದರ್ಭಗಳಲ್ಲಿ ಬಹುಮತದ ನಿರ್ಣಯಕ್ಕೆ ಬದ್ಧರಾಗಬೇಕಾಗುತ್ತದೆನ್ನುವಂತಾದ್ದು ಏನಿದೆ, ನಮ್ಮ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಧಾರಕ್ಕೆ ಸಂಪೂರ್ಣವಾಗಿ ಒಪ್ಪಿ ಈ ವಿಚಾರದಲ್ಲಿ ಚರ್ಚೆ ಮಾಡಿರುವುದರಲ್ಲಿ ನಮ್ಮ ಸರ್ಕಾರ ದುರುದ್ದೇಶದ ಮೂಲಕ ಚುನಾವಣೆಯನ್ನು ಮುಂದಕ್ಕೆ ಹಾಕುವ ಪ್ರಯತ್ನವನ್ನು ಮಾಡಿಲ್ಲ. ಇನ್ನು ಎರಡನೆಯದಾಗಿ, ಪ್ರಶ್ನೆ ಬರುವುದೇನೆಂದರೆ, ಮೂಲಭೂತವಾಗಿ ಈ ಲೆಜಿಸ್ಲೇಟಿವ್ ಕಾಂಪಿಟೆನ್ಸ್‌ಏನಿದೆ, ಶಾಸಕಾಂಗ ಸಭೆಗೆ ಯಾವುದೇ ಶಾಸನವನ್ನು ಬದಲಾಯಿಸುವಂಥ ಅಧಿಕಾರವಿದೆ. ಆ ಅಧಿಕಾರಕ್ಕೊಳಪಟ್ಟೇ ನಾವು ಈ ದಿವಸ ಅಧ್ಯಾದ್ಯಾಪನವನ್ನು ಹೊರಡಿಸಿದ್ದೇವೆ. ಹೊರಡಿಸಿ ನಾಲ್ಕು ಮತ್ತು ಐದನೇ ವಿಧಿಗಳಿಗೆ ನಾವು ತಿದ್ದುಪಡಿ ತಂದಿದ್ದೇವೆ. ತಿದ್ದುಪಡಿ ತರತಕ್ಕಂಥ ಅಧಿಕಾರ ಅಂತರ್ಗತವಾಗಿ ಈ ಸದನಕ್ಕಿದೆ, ಸರ್ಕಾರಕ್ಕಿದೆ. ಆದುದರಿಂದ, ಈಗಾಗಲೇ ಅಧ್ಯಾದ್ಯಾಪನವನ್ನು ಹೊರಡಿಸಿರುವುದು ಆದಷ್ಟು ಬೇಗನೆ ಚುನಾವಣೆ ನಡೆಸಬೇಕೆನ್ನುವ ಕಾರಣಕ್ಕಾಗಿಯೇ. ಚುನಾವಣೆಗಳನ್ನು ನಡೆಸುವುದಕ್ಕೆ ನಾವು ಈಗಲೂ ಸಿದ್ಧರಾಗಿದ್ದೇವೆ. ಚುನಾವಣೆಗಳ ಜವಾಬ್ದಾರಿಯನ್ನು ಈಗಾಗಲೇ ತಾವು ಹೇಳಿದಂತೆ ಚುನಾವಣಾ ಆಯುಕ್ತರಿಗೆ ನಾವು ವಹಿಸಿದ್ದೇವೆ. ಆದರೆ, ಮಾತು ಈ ತರಹದಲ್ಲಿ ಬರಬಹುದು ಆದಿವಸ ತಾವು ಹೇಳಿದ್ದಿರಿ, ಚುನಾವಣೆಗಳನ್ನು ನಡೆಸುವಂಥ ಸಂದರ್ಭದಲ್ಲಿ ಆಡಳಿತ ಪಕ್ಷ ತನ್ನ ಅಧಿಕಾರವನ್ನು ದುರುಪಯೋಗಪಡಿಸಬಹುದೆಂದು ಅಥವಾ ಕೆಲವು ನಿಯಮಾವಳಿಗಳನ್ನು ನಡೆಸಿಕೊಂಡು ಹೋಗುವಾಗ ಕೆಲವು ತಪ್ಪುಗಳನ್ನು ಮಾಡಬಹುದೆಂದು ಮಾತುಗಳನ್ನು ಹೇಳಿದಾಗ ನಿಷ್ಪಕ್ಷಪಾತವಾಗಿ ಚುನಾವಣೆಗಳನ್ನು ನಡೆಸುವುದಕ್ಕಾಗಿಯೇ ಚುನಾವಣಾ ಆಯುಕ್ತರಿಗೆ ನಾವು ಈ ಅಧಿಕಾರ ಕೊಟ್ಟಿದ್ದೇವೆ. ಆ ಅಧಿಕಾರ ಕೊಟ್ಟಿರತಕ್ಕಂಥ

ಸಂದರ್ಭದಲ್ಲಿ ಚುನಾವಣೆಗಳನ್ನು ಮಾಡಲೇಬೇಕಾಗಿರುವ ಹಂತದಲ್ಲಿ ಪುನರ್ ವಿಂಗಡಣೆಯಾಗತಕ್ಕಂಥ ಸಂದರ್ಭದಲ್ಲಿ ಚುನಾವಣೆಗಳನ್ನು ಮಾಡಲೇಬೇಕಾಗಿರುವ ಹಂತದಲ್ಲಿ ಪುನರ್ ವಿಂಗಡಣೆಯಾಗತಕ್ಕಂಥ ಸಂದರ್ಭ ಬಂದಾಗ ನಾವು ಅಧ್ಯಾದ್ಯಾಪನದ ಮೂಲಕ ಈ ಕಾನೂನನ್ನು ತಂದಿದ್ದೇವೆಯೇ ವಿನಾ ಅವಸರದಲ್ಲಿ ಅಥವಾ ಇನ್ಯಾವುದೋ ಕಾರಣಗಳಿಗಾಗಿ ಸದನ ಸೇರಿರುವಾಗ ಚುನಾವಣೆ ನಡೆಸಲು ತಿದ್ದುಪಡಿ ಮೂಲಕ ತರಬೇಕೆನ್ನುವ ಮಾತೇನಿದೆ, ಅದು ಸಾಧುವಾಗಿರುವಂತಾದ್ದಲ್ಲ. ಅಧಿವೇಶನ ಸೇರಿದ ನಂತರವೂ ಮುಂಬರುವ ದಿನಗಳಲ್ಲಿ ಈ ಬಗ್ಗೆ ತಿದ್ದುಪಡಿ ತರುತ್ತೇವೆ, ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೂಡ ನಾವು ಪಡೆಯುತ್ತಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ ಅತ್ಯಂತ ವಿನಯಪೂರ್ವಕವಾಗಿ ಮನಸ್ಸಿನಲ್ಲಿರುವುದನ್ನು ಹೇಳಿದ್ದಾರೆ. ಅದನ್ನವರು ಹೇಳದಿದ್ದರೂ ನಡೆಯುತ್ತದೆ. ಆತ್ಮಸಾಕ್ಷಿ ಎನ್ನುವುದು ಬಹಳ ದೊಡ್ಡ ಮಾತು. ನಾನು ನನ್ನ ರೂಮಿನಲ್ಲಿ ಕುಳಿತುಕೊಂಡು ಎಲ್ಲರ ಮಾತುಗಳನ್ನು ಕೇಳಿದೆ. ಈಗ ಯಾರಿಗೂ ಚುನಾವಣೆ ಬೇಕಿಲ್ಲ. ಅವರಿಗೇನಾದರೂ ಆತ್ಮಸಾಕ್ಷಿ ಇದ್ದರೆ ಅದರ ಬಗ್ಗೆ ಸದನದಲ್ಲಿ ಹೇಳಲಿ.

ಶ್ರೀಮಲ್ಲಿಕಾರ್ಜುನ ಖರ್ಗೆ :— ಚುನಾವಣೆ ಬೇಕಿಲ್ಲವೆಂದು ನಾವು ಇನ್‌ಸಿಸ್ಟ್ ಮಾಡುತ್ತಿದ್ದೇವೆಯೇ? ನೀವು ಎ.ಪಿ.ಎಂ.ಸಿ. ಚುನಾವಣೆ ನಡೆಸಿದಾಗ ನಾವು ಎದುರಿಸಲಿಲ್ಲವೇ? ನೀವು ಧೂಳಿಪಟ ಆಗಲಿಲ್ಲವೇ? ನಿಮಗೆ ಧೈರ್ಯವಿದ್ದರೆ ಅಸೆಂಬ್ಲಿಯನ್ನು ಡಿಸಾಲ್ವ್‌ಮಾಡಿ, ನಾಳೆಯೇ ಚುನಾವಣೆಗೆ ಹೋಗೋಣ. ಮಾನ್ಯ ಶಿವರಾಮೇಗೌಡರಿಂದ ತಾವು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೇ ನಾನು ಸಹ ಈ ಸದನದ ಸದಸ್ಯ. ಯಾರು ಬೇಕಾದರೂ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸಬಹುದು ಎಂದು ಕಾನೂನಿನಲ್ಲಿಯೇ ಇದೆ.

ಶ್ರೀ ಜೆ.ಎಚ್. ಪಟೇಲ್ :— ಮಾನ್ಯ ಅಧ್ಯಕ್ಷರೇ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ತಾವು ಒಬ್ಬೊಬ್ಬರನ್ನಾಗಿ ಕರೆದು ಕೇಳಿ ಅವರು ಏನು ಹೇಳುತ್ತಾರೆ ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮವರೇ? ನಾವು ಜನರಲ್ ಎಲೆಕ್ಷನ್‌ಗೆ ರೆಡಿಯಾಗಿದ್ದೇವೆಂದರೆ ತಾವು ಒಬ್ಬೊಬ್ಬರನ್ನಾಗಿಯೇ ಕರೆದು ಕೇಳಿ ಅಂದರೆ? ಬೇಕಾದರೆ ನಾನು ನನ್ನ ಪಕ್ಷದ ಪರವಾಗಿ ಬರೆದು ಕೊಡುತ್ತೇನೆ. ನಾವು 46 ಜನ ಏನು ಇದ್ದೇವೆ, ನಮಗೆ ಚುನಾವಣೆ ಬೇಕು ಎಂದು ಬರೆದುಕೊಡುತ್ತೇವೆ.

ಅಧ್ಯಕ್ಷರು :— ಮಾನ್ಯ ವಿರೋಧಪಕ್ಷದ ನಾಯಕರೇ ಅವರು ಹೇಳಿದ್ದು ಅದೇ. ಜನರಲ್ ಎಲೆಕ್ಷನ್ ತಯಾರಿಯಲ್ಲಿ ತಾವು ಇರುವುದರಿಂದ ಅದರ ಮಧ್ಯೆ ಈ ಎಲೆಕ್ಷನ್ ಬೇಡ ಎನ್ನುವುದು ಬಹಳ ಜನರ ಅಭಿಪ್ರಾಯ ಇದೆ ಎಂದು ಅವರು ಹೇಳುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ ಮಾನ್ಯ ಘೋರ್ಪಡೆಯವರು ಹೇಳಿದ್ದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಅವರು ಏನು ಹೇಳಿದರು ನಿಮಗೆ 5 ವರ್ಷ ಅವಕಾಶ ಇತ್ತು. ಈಗ ಇದ್ದ ಪಂಚಾಯತಿ ಆಕ್ಟ್ ಏನು ಅಸ್ತಿತ್ವದಲ್ಲಿ ಇರಲಿಲ್ಲವೇ? 5 ವರ್ಷದಿಂದ ಒಂದು ಕಾನೂನು ನಿಮ್ಮಲ್ಲಿ ಇದೆ ಆ ಕಾನೂನಿನಲ್ಲಿ 5 ವರ್ಷ ಆದ ಮೇಲೆ ಕಡ್ಡಾಯವಾಗಿ ಚುನಾವಣೆ ಆಗಬೇಕೆಂದು ಇದೆ. ಈ ರೀತಿ ಇದ್ದರೂ ಸಹ ಆ ಸಂದರ್ಭದಲ್ಲಿ ಯಾವುದೇ ತಿದ್ದುಪಡಿಯನ್ನು ತಾವು ತರಲಿಲ್ಲ. ಸೆಕ್ಷನ್ 4ಕ್ಕೆ ಆಗಲಿ ಅಥವಾ ಸೆಕ್ಷನ್ 5ಕ್ಕೆ ಆಗಲಿ ತಿದ್ದುಪಡಿ ತರುವ ಯೋಚನೆ ಆಗ ಬರಲಿಲ್ಲ, ಯಾವಾಗ ಬಂತು, 21ನೇ ಸೆಪ್ಟೆಂಬರ್‌ನಲ್ಲಿ ತಾವು ಒಂದು ಮೀಟಿಂಗ್ ಕರೆದಿರಿ. ಆಮೇಲೆ ಒಂದು ಮೀಟಿಂಗ್ ಕರೆಯುತ್ತೇವೆಂದು ಹೇಳಿದಿರಿ. ಆಮೇಲೆ ಮೀಟಿಂಗ್ ಕರೆಯಲಿಲ್ಲ. ಕೊನೆಗೆ ಏನು ಮಾಡಿದಿರಿ ಅಂದರೆ ಸೆಕ್ಷನ್ 4 ಮತ್ತು 5ಕ್ಕೆ ಅಮೆಂಡ್‌ಮೆಂಟ್ ತಂದು ಮಾಡಿದಿರಿ. ಇದರ ಅರ್ಥ ಏನೆಂದರೆ ನಿಮ್ಮ ತಯಾರಿ ಏನು ಇದೆ ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ಇದೆಯೇ ಹೊರತಾಗಿ ಚುನಾವಣೆ ಮಾಡಬೇಕೆನ್ನುವುದು ಇಲ್ಲ. ಪಾಪ ಅವರಿಗೆ ಆತ್ಮಸಾಕ್ಷಿ ಎಂದು ಹೇಳಿ ಬಲ ತುಂಬಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಅವರು ಪಾಪ ಈಗಾಗಲೇ ನರ್ವಸ್ ಆಗಿದ್ದಾರೆ. ಏನೋ ಸ್ವಲ್ಪ ನಿಮಗೆ ನೋಡಿಕೊಂಡು ಹೇಳುತ್ತಿದ್ದಾರೆ. ಸುಮ್ಮನೇ ಏಕೆ ನೀವು ಅವರಿಗೆ ಅಡ್ಡ ಬರುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ ಗ್ರಾಮ ಪಂಚಾಯತಿ ಚುನಾವಣೆ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಶಿವಮೊಗ್ಗ ಜಿಲ್ಲೆಯಿಂದ ಬೆಂಗಳೂರಿನ ವರೆಗೆ ನಾವು ಸುಮಾರು 21 ದಿವಸ ಈ ಚುನಾವಣೆ ಮಾಡಬೇಕೆಂದು ಪಾದ ಯಾತ್ರೆಯನ್ನು ಮಾಡಿದೆವು. ಚುನಾವಣೆ ಫಲಿತಾಂಶ ಬಂದಾಗ ನಮ್ಮ ಸಿಂಬಲ್ ಇಲ್ಲದೇ ಇದ್ದರೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮವರು ಏನೂ ಗೆಲ್ಲಲಿಲ್ಲ. ಈಗ ನಾವೇನು ಹೇಳುವುದಕ್ಕೆ ಹೊರಟಿದ್ದೇವೆ ಅಂದರೆ ಇವತ್ತು ವಿಧಾನಸಭಾ ಚುನಾವಣೆ ಬರುತ್ತದೆ ಮತ್ತೊಂದು ಚುನಾವಣೆ ಬರುತ್ತದೆ ಜನ ಯಾರನ್ನು ಬೇಕೋ ಅವರನ್ನು ಆಯ್ಕೆ ಮಾಡಿ ಕಳುಹಿಸುತ್ತಾರೆ. ಆದರೆ ನಿಮ್ಮ ಕಾಲದಲ್ಲಿ ನಿಗಧಿಯ ಅವಧಿಯಲ್ಲಿ ಅಂದರೆ ಜನವರಿ ತಿಂಗಳಲ್ಲಿ ಗ್ರಾಮ ಪಂಚಾಯತಿ ಚುನಾವಣೆ ಆಗಬೇಕಾಗಿತ್ತು, ತಾವು ಹೇಳಿದಂತೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಸೇರಿದಂತೆ ತಿದ್ದುಪಡಿ ಅಗತ್ಯ ಇತ್ತು ಅಂದರೆ ಮುಂಚಿತವಾಗಿಯೇ ಅದನ್ನು

ಮಾಡಬಹುದಾಗಿತ್ತು. ಆದರ ಬಗ್ಗೆ ತಾವು ಏಕೆ ಮುಂದಾಲೋಚನೆ ಮಾಡಲಿಲ್ಲ ಎನ್ನುವುದೇ ನಮ್ಮ ಆರೋಪ.

ಶ್ರೀ ಜೆ.ಎಚ್. ಪಟೇಲ್ :— ಮಾನ್ಯ ಅಧ್ಯಕ್ಷರೇ ಮಾನ್ಯ ಅರಗ ಜ್ಞಾನೇಂದ್ರ ಅವರು ಭಾಷಣ ಮಾಡಿದ್ದನ್ನು ನಾನು ನನ್ನ ಕೊಠಡಿಯಲ್ಲಿ ಕುಳಿತು ಕೇಳಿದೆ. ನಾನು ಸಹ ಜಿಲ್ಲಾ ಪರಿಷತ್ತು ಮೆಂಬರ್ ಆಗಿದ್ದೆ ಬಹಳ ಚೆನ್ನಾಗಿ ಕೆಲಸ ಆಗುತ್ತಿತ್ತು ಆ ಕೆಲಸ ಮಾಡಿದ್ದರಿಂದ ನಾನು ಎಂ.ಎಲ್.ಎ. ಆಗಿ ಚುನಾಯಿಸಿ ಬಂದೆ ಈಗ ಇರುವ ಪಂಚಾಯತಿ ಏತಕ್ಕೂ ಬರುವಂತೆ ಇಲ್ಲ. ಹಾಗೆ ಹೀಗೆ ಎಂದು ಈ ನಿರ್ಣಯವನ್ನು ಸಮರ್ಥನೆ ಮಾಡಿಕೊಳ್ಳುತ್ತಾ ಪ್ರಕಾಶ್ ಅವರಿಗೆ ಸಪೋರ್ಟ್ ಮಾಡಿದರು.

ಶ್ರೀ ಅರಗ ಜ್ಞಾನೇಂದ್ರ :— ಸರಿಯಾಗಿ ಮಾಡಲಿಲ್ಲ ಎಂದು ನಾನು ಹೇಳಿದೆ. ಅವರ ಕಾಲದಲ್ಲಿ ಸರಿ ಮಾಡಲಿಲ್ಲ ಎಂದು ನಾನು ಹೇಳಿದ್ದು.

ಶ್ರೀ ಜೆ.ಎಚ್. ಪಟೇಲ್ :— ಆಗ ನಡೆದಂತಹ ಕೆಲಸಗಳು ಈಗ ನಡೆಯುತ್ತಿವೆಯೇ? ದಯವಿಟ್ಟು ಬೀ ಫ್ರಾಂಕ್. ಈ ಫ್ರೂಟ್‌ಫುಲ್.

ಶ್ರೀ ಅರಗ ಜ್ಞಾನೇಂದ್ರ :— ಈ ವ್ಯವಸ್ಥೆಯಲ್ಲಿ ಸರಿಯಾಗಿ ನಡೆಯುವಂತೆ ಮಾಡಲು ಏನು ತೊಂದರೆ ಇತ್ತು. ಏನೂ ತೊಂದರೆ ಇಲ್ಲ. ಆದರೆ ಮಾಡಲಿಲ್ಲ.

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ ಗ್ರಾಮಪಂಚಾಯತಿ ಬಂದ ಮೊದಲ ಎರಡು ವರ್ಷ ಏನೂ ಕೆಲಸ ನಡೆಯಲಿಲ್ಲ. ಮಾನ್ಯ ರಾಜೀವ್ ಗಾಂಧಿಯವರು ಜವಹರ್ ರೋಜ್‌ಗಾರ್ ಯೋಜನೆ ಮುಖಾಂತರ ನೇರವಾಗಿ ಪಂಚಾಯಿತಿಗಳಿಗೆ ದುಡ್ಡು ಕೊಟ್ಟ ಮೇಲೆ ಕೆಲಸ ಚಾಲು ಆಯಿತು ತಾವು ಬೇಕಾದವರನ್ನು ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ ಮಂಡಲ್ ಪಂಚಾಯತಿಗಳು ಇದ್ದಂತಹ ಕಾಲದಲ್ಲಿ ರಿಸೋರ್ಸ್‌ಸ್ ಇತ್ತಲ್ಲ ಈಗ ಇರುವಂತಹ ಪಂಚಾಯಿತಿ ವ್ಯವಸ್ಥೆಗೆ ರಿಸೋರ್ಸ್‌ಸ್ ಮೊಬಲೈಜೇಶನ್ ಕೊಡುವುದರಲ್ಲಿ ಏನು ಬದಲಾವಣೆ ಆಗದೆ? ಏನೂ ಬದಲಾವಣೆ ಆಗಿಲ್ಲವಲ್ಲ.

ಶ್ರೀ ಜೆ.ಎಚ್. ಪಟೇಲ್ :— ತಾವು ಜಿಲ್ಲಾ ಪಂಚಾಯತಿ ಮೆಂಬರ್ ಆಗಿದ್ದಿರಿ. ತಾಲ್ಲೂಕು ಪಂಚಾಯತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಆಗ ಆ ಸಂಸ್ಥೆಗಳು ಕೆಲಸ ಮಾಡುತ್ತಿದ್ದ ರೀತಿ ಇನ್ನೂ ನಿಮಗೆ ಚೆನ್ನಾಗಿ ಗೊತ್ತಿದೆ. ಈಗ ಯಾವ ಸ್ಥಿತಿಗೆ ಬಂದಿವೆ ಎನ್ನುವುದೂ ಗೊತ್ತಿದೆ, ತಾವು ಏನೋ ಒಂದು ನಿರ್ಣಯ ತಂದಿದ್ದೇವೆ ಎಂದು ಮಾತನಾಡುವುದು ಬೇಡ. ಅದಕ್ಕೆ ನಾನು ಆಗಲೇ ಹೇಳಿದೆ ಬೀ ಫ್ರಾಂಕ್ ಅಂಡ್ ಬೀ ಫ್ರೂಟ್‌ಫುಲ್.

ಒಬ್ಬ ಸದಸ್ಯರು :— ಜಿಲ್ಲಾ ಪಂಚಾಯಿತಿ ಕಣ್ಣು ಕಿವಿ ಮೂಗು ಕಿತ್ತವರು ಅವರು. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಂಬಿಕೆ ಇಲ್ಲದೆ ಅಂಗ ಹೀನ ಮಾಡಿದವರೇ ಅವರು. ಇದರ ಬಗ್ಗೆ ಅವರು ಮಾತನಾಡುವಂತಹ ನೈತಿಕತೆ ಅವರಿಗೆ ಇಲ್ಲವೇ ಇಲ್ಲ. ನಾನು ಸಹ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈ ವ್ಯವಸ್ಥೆಗೆ ಹೆಚ್ಚು ಅಧಿಕಾರ ಕೊಟ್ಟವರು ನಮ್ಮ ಸರ್ಕಾರದವರೇ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೇ ಈಗ ಪ್ರಶ್ನೆ ಬಂದಿರುವುದು ಈ ರೀತಿ ತಿದ್ದುಪಡಿ ಮಾಡಬೇಕು, ವ್ಯತ್ಯಾಸ ಆಗಬೇಕು ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು. ಆದರೆ 1994 ರಿಂದ ಇವರೇ ಅಧಿಕಾರದಲ್ಲಿ ಇದ್ದಾರಲ್ಲ ಅವರು ಆಗ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇತ್ತಲ್ಲ. ಆಗ ಈ ದಿಕ್ಕಿನಲ್ಲಿ ಏಕೆ ಪ್ರಯತ್ನ ಮಾಡಲಿಲ್ಲ. ನಿಮ್ಮದೇ ಸರ್ಕಾರ ಇತ್ತು ಮಾನ್ಯ ಮುಖ್ಯಮಂತ್ರಿಗಳೇ. ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರ ಹೇಳಿದ್ದು ಇದನ್ನು ತಿದ್ದುಪಡಿ ಮಾಡಬೇಕೆನ್ನುವ ಅಪೇಕ್ಷೆ ಇದ್ದಿದ್ದು, ತಮಗೆ ಈ ದಿಕ್ಕಿನಲ್ಲಿ ಅನುಕೂಲ ಮಾಡಬೇಕೆನ್ನುವ ಪ್ರಾಮಾಣಿಕ ಅಭಿಪ್ರಾಯ ಇದ್ದಿದ್ದರೆ, ಮಾಡಬಹುದಿತ್ತು. ಈಗ ಚುನಾವಣೆ ಮುಂದೂಡುವುದರಿಂದ ತಾವು ಸಾಧನೆಯನ್ನು ಮಾಡಿದಂತೆ ಆಯಿತಾ?

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಪಂಚಾಯಿತಿಗೆ ಅವರು 5 ವರ್ಷಗಳಿಗೆ ಆಯ್ಕೆಯಾಗಿರತಕ್ಕಂಥ ಸಂದರ್ಭಗಳಲ್ಲಿ ನಾವು ಮತ್ತೊಮ್ಮೆ ಈ ರೀತಿಯಾದಂತಹ ತಿದ್ದುಪಡಿ ಮಾಡಿ ಅವರ ಅಧಿಕಾರಾವಧಿಯನ್ನು ಮೊಟಕುಗೊಳಿಸುವಂತಾದ್ದು ಸರಿಯಾದುದು ಅಲ್ಲ . ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದಂತೆ ಇಂತಹ ತಾರೀಖಿನಿಂದ ಇದು ಜಾರಿಗೆ ಬರುತ್ತದೆ ಎಂದು ಹೇಳಿ ಅವರ ಅಧಿಕಾರಾವಧಿಯನ್ನು ಮೊಟಕುಗೊಳಿಸದೇ ಇರುವುದಕ್ಕೆ ಸಾಧ್ಯತೆ ಇತ್ತು. ಎರಡು ವರ್ಷ ಮೂರು ವರ್ಷ ಮುಂಚಿತವಾಗಿಯೇ ಅದನ್ನು ಮಾಡತಕ್ಕಂಥಾದ್ದು ಸರಿಯಾದುದು ಅಲ್ಲ. ಯಾವುದೇ ಒಂದು ಕಾನೂನನ್ನು ಮಾಡಲು ಸಾಧ್ಯತೆ ಇದೆ ಎಂದ ತಕ್ಷಣ It is not practical also. ``This enactment will come into force after 2002" ಎಂದು ಹೇಳಿ ಇವತ್ತು ನಾವು ಒಂದು ನಿರ್ಣಯವನ್ನು ಮಾಡುತ್ತೇವೆಂದು ಹೇಳದರೆ it looks very ridiculous also. ಯಾವುದೇ ಒಂದು ಕಾನೂನನ್ನು ಮಾಡುವಾಗ ಅದರ ಸಮಯ ಮತ್ತು ಸಂದರ್ಭಕ್ಕೆ ಸರಿಯಾಗಿ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಮಂತ್ರಿಗಳಲ್ಲಿ ವಿನಂತಿ, You find out from your records from your own office that there are several

acts which we have passed in this Assembly, but no rules were framed in this connection so far. You can see number of acts without Rules.

ಶ್ರೀ ಎಂ.ಪಿ. ಪ್ರಕಾಶ್:— ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಮಾಡಿದೆವು. ಅದು ತೀರಾ ದೂರದಲ್ಲಿ ಇರಲಿಲ್ಲ. ನಾವು 4 ವರ್ಷದಲ್ಲಿ ಇದನ್ನೆಲ್ಲಾ ಯೋಚನೆ ಮಾಡಲಿಲ್ಲ ಎಂದು ಅಲ್ಲ ಯೋಚನೆ ಮಾಡಿದೆವು. ಆದರೆ ನಾವು ಆ ಸಂದರ್ಭದಲ್ಲಿ ಮಾಡದೇ ತಡವಾಗಿ ಮಾಡಿದ್ದಕ್ಕೆ ತಾವು ಏನು ದುರುದ್ದೇಶವನ್ನು ಕೊಡುತ್ತಿದ್ದೀರಿ ಆ ದುರುದ್ದೇಶ ನಮ್ಮಲ್ಲಿ ಖಂಡಿತವಾಗಿ ಇಲ್ಲ. ಎರಡನೆಯದಾಗಿ ನಿಮ್ಮಲ್ಲಿ ಕೆಲವು ಅಭಿಪ್ರಾಯಗಳು ಇದೆ. ನಾವು ಈ ಚುನಾವಣೆಗಳನ್ನು ಮಾಡತಕ್ಕಂಥಾದ್ದರಲ್ಲಿ ನೀವು ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೆ ಏನು ಅಧಿಕಾರ ಇದೆ ಎಂದು ಹೇಳಬಹುದು, ಆದರೆ ಇಲ್ಲಿ ನಾವು ಆಡಳಿತಾಧಿಕಾರಿಯ ಅವಧಿಯನ್ನು ಮುಂದವರಿಸುವುದಿಲ್ಲ. ಆ ಮುಂದುವರಿಸದೇ ಇರತಕ್ಕಂಥಾದ್ದರಲ್ಲಿ ಏನು ಇದೆ ನಮ್ಮ ಕಾನೂನು ಬದ್ಧವಾಗಿ ಸೆಕ್ಷನ್ 117ರಲ್ಲಿ ಈ ತರಹದ ಅಧಿಕಾರ ನಮಗೆ ಇದೆ. ಇಲ್ಲಿ ಆ ಸೆಕ್ಷನ್ ಏನು ಹೇಳುತ್ತದೆ ಅಂದರೆ`` there shall be constituted for the amalgamated Panchayat area a Grama panchayat herein after in this Section referred to as an Interim Grama Panchayat consisting of members nominated by the Deputy Commissioner and such members shall as far may be as practicable be persons who are members of the existing Grama panchayat" ಎಂದು ಹೇಳಿ ಸೆಕ್ಷನ್ 117ರಲ್ಲಿ (ಬಿ) ಕೆಳಗೆ ಹೇಳುತ್ತದೆ. ಇದು ಥರ್ಡ್ ಎಡಿಷನ್. Karnataka Local Authorities (Prohibition of Defection) Act 1987. Along with this Karnataka Panchayat Raj Act 1993, third edition with the latest amendment,. Perhaps you may be reasing the older edition of its. After the amendment ಅಮಾಲ್ಗಮೇಶನ್ ಆಗಿರತಕ್ಕಂಥ ಸಂದರ್ಭಗಳು ಯಾವಾಗ ಬರುತ್ತವೆ ಆ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿ ನೇಮಕಾತಿಯನ್ನು ಮಾಡಬಹುದು ಎಂದು ಹೇಳಿ.

(Interruption)

ಶ್ರೀಮತಿ ಪ್ರಮೀಳಾ ನೇಸರ್ಗಿ:— ಅಮಾಲ್ಗಮೇಶನ್ ಎಲ್ಲಿ ಆಗಿದೆ? Section 117 is not application, because there is no amalgamation.

(Interruption)

ಶ್ರೀ ಎಂ.ಪಿ. ಪ್ರಕಾಶ್:— ಆಗುತ್ತದೆ ಏಕೆಂದರೆ ಈಗ 2-3 ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಒಂದು ದೊಡ್ಡ ಗ್ರಾಮ ಪಂಚಾಯಿತಿಯನ್ನು ಮಾಡುತ್ತೇವೆ. It is going to be like that. 5,600 ಗ್ರಾಮ ಪಂಚಾಯಿತಿಗಳು ಇರತಕ್ಕಂಥಾದ್ದು ಅದು 2600 ಗ್ರಾಮ ಪಂಚಾಯಿತಿಗಳಿಗೆ ಇಳಿಯುತ್ತದೆ. ಇದನ್ನು ಮಾಡುವಾಗ 2-3 ಗ್ರಾಮ ಪಂಚಾಯಿತಿಗಳನ್ನು ಒಂದು ಕಡೆಗೆ ಕ್ರೋಢೀಕರಿಸುತ್ತವೆ. ಕ್ರೋಢೀಕರಿಸುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗೆ ನೇಮಕಾತಿ ಮಾಡತಕ್ಕಂಥಾದ್ದು ಇದೆ. ಆತನ ಮುಂದೆ ಮೂರು ಪರ್ಯಾಯಗಳು ಇದ್ದವು. ಒಂದು ಆಡಳಿತ ಸಮಿತಿಯನ್ನು ನೇಮಿಸಬಹುದು ಅಥವಾ ಒಂದು ಆಡಳಿತಾಧಿಕಾರಿಯನ್ನು ನೇಮಿಸಬಹುದು. ಅಥವಾ ಈಗಾಗಲೇ ಚುನಾಯಿತರಾದವರನ್ನು ಮುಂದುವರಿಸಬಹುದು. ನಾವು ಇವರ ಅವಧಿಯನ್ನು ಮುಂದುವರಿಸಿಲ್ಲ. ಅವರ ಅವಧಿ ಅಲ್ಲಿಗೆ ಮುಕ್ತಾಯವಾಗಿದೆ. 5 ವರ್ಷದ ಅವಧಿಯನ್ನು ಮುಂದುವರಿಸತಕ್ಕಂಥ ಅಧಿಕಾರ ಸಂವಿಧಾನಸದತ್ತವಾಗಿ ಆಗಲಿ ಕಾನೂನು ಬದ್ಧವಾಗಿ ಆಗಲಿ ನಮಗೆ ಇಲ್ಲ. ಅದನ್ನು ನಾವು ಮಾಡಿಲ್ಲ. ಆದರೆ ನಮ್ಮಲ್ಲಿ ಇರತಕ್ಕಂಥದ್ದು ಒಂದು ಶೂನ್ಯ ಸೃಷ್ಟಿಯಾಗುತ್ತದೆ. ಆ ಗ್ರಾಮ ಪಂಚಾಯಿತಿಗಳ ಆಡಳಿತಗಳು ಇಲ್ಲದಿದ್ದಾಗ ಒಂದು ಶೂನ್ಯ ಸೃಷ್ಟಿಯಾದಾಗ ನಾವು ಆಡಳಿತಾಧಿಕಾರಿಯನ್ನು ನೇಮಿಸಿದ್ದೇವೆ. ಆಡಳಿತಾಧಿಕಾರಿ ಒಬ್ಬ ಅಧಿಕಾರಿಯಾಗಿರುತ್ತಾನೆ. ಒಂದು ತಾಲ್ಲೂಕಿನಲ್ಲಿ ಕನಿಷ್ಠ 20-30 ಗ್ರಾಮ ಪಂಚಾಯಿತಿಗಳು ಇರುತ್ತದೆ. ಒಬ್ಬ ಹಿರಿಯ ಅಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ 5-10ಕ್ಕಿಂತ ಹೆಚ್ಚು ಇರುವುದಿಲ್ಲ. ಆ ಸಂದರ್ಭದಲ್ಲಿ ಅವರವರಿಗೆ ತಮ್ಮ ದಿನನಿತ್ಯದ ಮತ್ತು ಕಾನೂನು ಬದ್ಧವಾದಂತಹ ಅಧಿಕಾರದ ಜೊತೆಗೆ ಮೂರು ಮೂರು ಗ್ರಾಮ ಪಂಚಾಯಿತಿಗಳನ್ನು ನಿರ್ವಹಿಸುವಂತಹ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕಂಥದ್ದು ಸರಿಯಾದುದಲ್ಲ. ಎರಡನೆಯದಾಗಿ, ನೀವು ಭಾವಿಸಿದಂತೆ ನಮಗೆ ಬೇರೆ ಉದ್ದೇಶ ಇರುವುದಾಗಿದ್ದರೆ, ನೀವು ಈಗ ಏನು ಹೇಳಿಕೊಳ್ಳುತ್ತಿದ್ದೀರಿ? ಗ್ರಾಮ ಪಂಚಾಯಿತಿಗಳು ನಮ್ಮ ಕಾಲದಲ್ಲಿ ಆದವು, ನಮ್ಮಲ್ಲೇ ಇರುವವರು ಅದರಲ್ಲಿ ಸದಸ್ಯರಾಗಿದ್ದಾರೆ ಎಂದು. ಅವರಿಗೆ ಅವಧಿಯನ್ನು ಮುಂದುವರೆಸಲಿಕ್ಕೆ ಸಾಧ್ಯವಿಲ್ಲದೇ ಹೋಗಿದ್ದರೂ ಕೂಡ ನಾವು ಅಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಮತ್ತೆ ಮರು ನೇಮಕಾತಿ ಮಾಡುವುದರ ಮೂಲಕವಾಗಿ ಒಂದು ತರಹದ ಜನತಂತ್ರದ ವ್ಯವಸ್ಥೆಗೆ ನಾವು ಮನ್ನಣೆ ಕೊಟ್ಟಿದ್ದೇವೆ. ಜನರಿಂದ ಆಯ್ಕೆಯಾಗಿರತಕ್ಕಂತಹ ಒಬ್ಬ ವ್ಯಕ್ತಿ, ಆತ ಯಾರೇ ಸದಸ್ಯನಾಗಿರಬಹುದು, ಅವನನ್ನೇ ಮರು ನೇಮಕಾತಿ ಮಾಡುತ್ತಿದ್ದೇವೆ. ಆಗಲೇ ಮಾತನಾಡುತ್ತಾ ಬಿ.ಜೆ.ಪಿ.ಯ ಶಾಸಕ ಮಿತ್ರರಾದ ಶ್ರೀ ಅರಗ ಜ್ಞಾನೇಂದ್ರರವರು, ನೀವು ನೇಮಕಾತಿ ಮಾಡುವುದರಿಂದ ಅವರು ನಿಮ್ಮ ಪಕ್ಷದಲ್ಲಿ ಯಾರೂ ಇಲ್ಲ, ನಿಮ್ಮ ಪಕ್ಷ ಈಗಾಗಲೇ ಸೋಲುವ ದಾರಿಯಲ್ಲಿದೆ, ಆದ್ದರಿಂದ ಅವರೆಲ್ಲಾ ಬೇರೆ ಕಡೆಗೆ ಹೋಗುತ್ತಾರೆ ಎನ್ನುವ ಮಾತುಗಳನ್ನು ಹೇಳಿರುತ್ತಾರೆ. ಆದ್ದರಿಂದ, ನಾವು ಯಾವ ಪಕ್ಷದವರೇ ಆಗಿರಲಿ, ಜನಗಳಿಂದ ಆಯ್ಕೆಯಾಗಿರತಕ್ಕ ಮನುಷ್ಯನಿಗೆ ಒಂದು

ಮಟ್ಟಿನ ಘನತೆ ಮತ್ತು ಲೆಜಿಟಿಮೆಸಿ ಇರುತ್ತದೆ, ಕಾನೂನು ಬದ್ಧವಾಗಿ ಆತ ಆಯ್ಕೆಯಾಗಿರತಕ್ಕವನಾಗಿರುತ್ತಾನೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಇಂಟ್ರಿಮ್ ಪಂಚಾಯತ್‌ಗೆ ಮಾತ್ರ ಅನ್ವಯಿಸುತ್ತದೆ. Conversion of Municipality, Sanitary Board, or Notified Area Committee into a Grama Panchayat. ``The Government shall take steps to hold elections for new Grama Panchayat within the period not exceeding five years from the date in which the Interim Grama Panchayat has been constituted under Section 115. Section 115 pertains to Interim Grama Panchayat. The Interim Grama Panchayat has been constituted under Section 115. Section 115 of the Act says " notwithstanding anything contained in this Act, the Government may after the previous publication by notification, direct that the local area constituting any municipality shall from such a sate as may be specified therein be a Panchayat area..." it is limited to this situation only of the interim Panchayat. It has nothing to do with the Grama Panchayat.

ಶ್ರೀ ಎಂ.ಪಿ. ಪ್ರಕಾಶ್ :— ಇಲ್ಲಿ ಪ್ರಾಯಶಃ ತಮಗೆ ತಪ್ಪು ಅಭಿಪ್ರಾಯ ಬಂದಿರಬಹುದು. ಇಲ್ಲಿ ನಾನು ಹೇಳತಕ್ಕಂಥದ್ದು 117ನೇ ಸೆಕ್ಷನ್‌ನಲ್ಲಿ ಇರತಕ್ಕಂಥ ಈ ಅಮಾಲ್‌ಗಮೇಷನ್ ಜೊತೆಗೆ, ಇಲ್ಲಿ 8ನೇ ಸೆಕ್ಷನ್‌ನಲ್ಲಿ ನಮಗೆ ಒಂದು ಮಾದರಿ ಇತ್ತು, ಈ ಮಾದರಿಯಲ್ಲಿ ನಾನು ಸೆಕ್ಷನ್ 321ನ್ನು ಹೇಳಿದೆ. ಅದನ್ನು ನಾವು ನಮ್ಮ ಆರ್ಡರ್‌ನಲ್ಲಿ ಕೂಡ ಹೇಳಿದ್ದೇವೆ. Appointment of the Administrative Committee to the Grama Panchayat- Proceedings of the Government of Karnataka ಎಂದು ಹೇಳಿ ನಾವೇನು ಆಜ್ಞೆಯನ್ನು ಹೊರಡಿಸಿದ್ದೇವೆ, ಅದು Removal of difficulty clauses ಎಂದು ಹೇಳಿ ಮಾನ್ಯ ಘೋರ್ಪಡೆಯವರೇ ಇದನ್ನು ಯೋಜನೆ ಮಾಡಿ ಇದರಲ್ಲಿ ತಂದಿದ್ದಾರೆ. ಪ್ರತಿ ಕಾನೂನಿನಲ್ಲೂ ಕೂಡ ಇದು ಇರುತ್ತದೆ.

ಶ್ರೀ ಎಂ.ವೈ. ಘೋರ್ಪಡೆ :— 1983ರ ಹಳೆಯ ಕಾಯ್ದೆ ಏನಿತ್ತೋ ಅದರಲ್ಲಿದ್ದಂತಹ ಕ್ಲಾಜ್‌ಅನ್ನೇ ನಾವು ಉಳಿಸಿಕೊಂಡಿರುತ್ತೇವೆ. It is only for interim panchayats.

ಶ್ರೀ ಎಂ.ಪಿ. ಪ್ರಕಾಶ್:— ಮಾನ್ಯ ಅಧ್ಯಕ್ಷರೇ, ಎಲ್ಲವನ್ನೂ ಎಲ್ಲಾ ಸಂದರ್ಭಗಳನ್ನೂ ಮನುಷ್ಯ ಊಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಊಹಿಸದೇ ಇರತಕ್ಕಂಥ ಸಂದರ್ಭಗಳು ಬಂದಾಗ ಕಾನೂನಿನ ಮೂಲಕವಾಗಿ ಒಂದು ಸಮಸ್ಯೆ ಅಥವಾ ಶೂನ್ಯ ಸೃಷ್ಟಿಯಾಗಬಾರದು ಎಂಬ ಕಾರಣಕ್ಕಾಗಿಯೇ Removal of difficulty clauses ಎಂದು ಇರುತ್ತದೆ. 321 ಸೆಕ್ಷನ್‌ನಲ್ಲಿ ಈ ರೀತಿಯಾಗಿರತಕ್ಕಂಥದ್ದು ಏನಾದರೂ ಇದ್ದಾಗ ಇದನ್ನು ನೇಮಕಾತಿ ಮಾಡಬಹುದು ಎನ್ನತಕ್ಕಂಥ ಕಾರಣ ಇದ್ದುದರಿಂದ, 321ನೇ ಸೆಕ್ಷನ್ ಅನ್ನು ಓದಿ ಬಿಡುತ್ತೇನೆ. "If any difficulty arises in giving effect to the provision of this Act, the Government may by order, published in the official Gazette as the occassion may require to do anything, which appears to be necessary to remove the difficulty". Under that section, we proceeded to pass this order.

(Interruptions)

SMT. PRAMILA NESARGI: That cannot be done.

SRI. M.P. PRAKASH: What is wrong with this?.

SMT. PRAMILA S. NESARGI: What about Section 151?

(Interruptions)

SRI. M.P. PRAKASH: You are a leading Practioner. Every legislation contains such eventualities also;

SMT. PRAMILA S. NESARGI : You can do anything with this? It is impossible.

SRI M.Y. GHORPADE: This is only an enabling provision in case there are any difficulties. This cannot be used to change the very structure of the Act, just as the Constitution. Changing the structure of the Constuitution is a very serious matter. This cannot be used to change the very structure of the Panchayat Raj Act.

ಶ್ರೀ ಎಂ.ಪಿ. ಪ್ರಕಾಶ್ :— ನಾನು ಮಾನ್ಯ ಅಧ್ಯಕ್ಷರಿಗೆ ಪ್ರಥಮವಾಗಿ ಈ ವಿಚಾರದಲ್ಲಿ ಅರಿಕೆ ಮಾಡಿಕೊಂಡಿದ್ದುದು ಇಷ್ಟೆ. ಇದೆಲ್ಲಾ ಸಬ್-ಜುಡೀಸ್ ಆಗುತ್ತಿದೆ. ನಾವು ಇಲ್ಲಿ ನಮ್ಮ ನಮ್ಮ ಭಾವನೆಗೆ ನಮ್ಮ ಅನುಕೂಲಕ್ಕೆ ತಕ್ಕ ರೀತಿಯಲ್ಲಿ ವಾದ ಮಾಡುತ್ತೇವೆ. ನಾವು ನಮ್ಮ ನಮ್ಮ ವಾದವೇ ಸರಿ ಎಂದು ಭಾವಿಸಿಕೊಳ್ಳುತ್ತೇವೆ. ನಮ್ಮ ವಾದ ಸರಿಯೋ ತಪ್ಪೋ ಎಂದು ನಿರ್ಧಾರ ಮಾಡಲಿಕ್ಕಾಗಿಯೇ ನ್ಯಾಯಾಲಯ ಇದೆ. ನ್ಯಾಯಾಲಯದ ಮುಂದೆ ಫೆಬ್ರವರಿ 24 ಮತ್ತು ಮಾರ್ಚ್1 ಮತ್ತು 2ನೇ ತಾರೀಖಿನಂದು ಈಗಾಗಲೇ ವಾದ ವಿವಾದಗಳು ಮುಕ್ತಾಯಗೊಂಡಿವೆ. ಈಗಾಗಲೇ ನ್ಯಾಯಾಲಯವು ತನ್ನ ತೀರ್ಪನ್ನು ಕಾಯ್ದಿರಿಸಿದೆ. ಆ ನ್ಯಾಯಾಲಯದ ತೀರ್ಪು ಬರಲಿ. ನಾವು ಮಾಡಿದಂತಹ ತೀರ್ಮಾನ ತಪ್ಪು ಎಂದು ತೀರ್ಪಿನಲ್ಲಿ ಬಂದರೆ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಅವರು ಮಾಡಿದಂತಹ ವಾದ ಮತ್ತು ನಾವು ಮಾಡಿದಂತಹ ವಾದದ ಬಗ್ಗೆ ನ್ಯಾಯಾಲಯ ತೀರ್ಪು ಕೊಡುವಂತಹ ಸಂದರ್ಭಗಳಲ್ಲಿ ಇಲ್ಲದಿದ್ದರೆ ಈ 321ನೇ ಸೆಕ್ಷನ್‌ಅನ್ನು ಇಡಬೇಕಾದಂತಹ ಅಗತ್ಯ ಏನು ಇರುತ್ತಿತ್ತು? ಅದಕ್ಕನುಗುಣವಾಗಿ ತಾವು ಆರ್ಡರ್‌ಅನ್ನು ನೋಡಿ.

ಶ್ರೀ ಎಂ.ವೈ. ಘೋರ್ಪಡೆ :— ಆಗಲೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಬಹಳ ಗಂಭೀರವಾದಂತಹ, ಸತ್ಯವಾದಂತಹ ಮಾತನ್ನು ಹೇಳಿದರು. ಯಾರಿಗೂ ಚುನಾವಣೆಗಳು ಬೇಡವಾದ್ದರಿಂದಲೇ ಆ ರೀತಿ ಆಗುತ್ತಿದೆ ಎಂದು ಆಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದರಿಂದೇನಾಗುತ್ತಿದೆ ಎಂದರೆ, ಚುನಾವಣೆ ಮಾಡುವ ಉದ್ದೇಶ ನಮಗೆ ಇಲ್ಲ, ಆ ಕಾರಣ ಇವೆಲ್ಲಾ ಘಟನೆಗಳು ನಡೆಯುತ್ತಿದೆ ಎಂದು ಒಪ್ಪಿಕೊಂಡಂತಾಗುತ್ತದೆ. ಇದು ಸತ್ಯವಾದ ಮಾತಾದರೂ ಕೂಡ ಸ್ವಲ್ಪ ಗಂಭೀರವಾದಂತದ್ದು.

ಶ್ರೀ ಜೆ.ಹೆಚ್. ಪಟೇಲ್ :— ನಾನು ಅಂತಹ ಗಂಭೀರವಾದಂತಹ ಮಾತನ್ನು ಏಕೆ ಹೇಳಿದೆ ಎಂದರೆ, ಲೋಕಸಭೆಯ ಟೆನ್ಯೂರ್‌ಅನ್ನು ಐದರಿಂದ ಆರು ವರ್ಷಕ್ಕೆ ಮಾಡದಂತಹವರು ನೀವು.

ಶ್ರೀ ಎಂ.ಪಿ. ಪ್ರಕಾಶ್ :— ಆ ವಿಚಾರವನ್ನು ನಾವು ಬೆಳಿಗ್ಗೆಯೇ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಈ ಕಾಯ್ದೆಗೆ ಅಮೆಂಡ್‌ಮೆಂಟ್ ಮಾಡಿಕೊಂಡು ಆರು ವರ್ಷ ಮಾಡಿಕೊಳ್ಳಿ ಈ ಪಂಚಾಯತ್ ಕಾಯ್ದೆಯಲ್ಲಿ ಚುನಾಯಿತ ಪಂಚಾಯತ್‌ಗಳ ಅವಧಿ ಐದು ವರ್ಷ ಎಂದಿರುವುದನ್ನು ನಿಮಗೆ ಬೇಕಾದರೆ ಏಳು ವರ್ಷ ಎಂದು ಮಾಡಿಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ :— ಅದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವೇನು ಈಗ ಉದಾಹರಣೆಯನ್ನು ಕೊಡುತ್ತಿದ್ದೀರಿ, ಅದರಂತೆ ಸಂವಿಧಾನದಲ್ಲಿ ಆ ರೀತಿ ಪ್ರಾವಿಜನ್ ಇದ್ದರೆ ನೀವು ಮಾಡಿಕೊಳ್ಳಿ. ಆಗ ಇಡೀ ಹೌಸ್‌ನಲ್ಲಿ ನಿಮ್ಮ ಒಬ್ಬಿಬ್ಬರಾದರೂ ಸದಸ್ಯರು ಇದ್ದರಲ್ಲ, ಅವರು ರಾಜೀನಾಮೆ ಏನಾದರೂ ಕೊಟ್ರಾ? ಇಲ್ಲೂ ನಿಮ್ಮ ಎಂ.ಎಲ್.ಎ.ಗಳಿದ್ದರಲ್ಲ, ಅವರಾದರೂ ಪ್ರೊಟೆಸ್ಟ್ ಮಾಡಿ ರಾಜೀನಾಮೆ ಕೊಟ್ರಾ? ನಾವೂ ಕೂಡ ಆಗ ಎಂ.ಎಲ್.ಎ.ಆಗಿ ಇದ್ದೆವು. ಆಗ ನಿಮ್ಮವರು ಯಾರೂ ಕೂಡ ರಾಜೀನಾಮೆ ಕೊಡಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಹಿಂದೆ ಲೋಕಸಭೆಯಲ್ಲಿದ್ದಂತಹ ಮಾನ್ಯ ಕೃಷ್ಣಅಯ್ಯರ್ ಅವರು ಹಾಗೂ ಇತರರು ಆಗ ರಾಜೀನಾಮೆ ಕೊಟ್ಟು ಹೊರ ಬಂದಿರತಕ್ಕಂಥದ್ದು ತಮಗೆ ಗೊತ್ತಿದೆ. ಇವತ್ತಿನ ದಿವಸ ಜನತಾ ದಳದ ಸದಸ್ಯರಾದಂತಹವರಾದ ಮಾನ್ಯ ಗುರಡ್ಡಿಯವರು, ಮಾನ್ಯ ಕೃಷ್ಣಯ್ಯರ್ ರವರು, ನಮ್ಮ ಕರ್ನಾಟಕದಿಂದ ಇದ್ದಂತಹ ಲೋಕಸಭಾ ಸದಸ್ಯರು ರಾಜೀನಾಮೆ ಕೊಟ್ಟು ಹೊರಗೆ ಬಂದರು. ಆ ಕಾಲಕ್ಕೆ ಅಷ್ಟೇ ಅಲ್ಲ, ಮೊನ್ನೆಯೂ ಕೂಡ ಆ ರೀತಿ ಮಾಡಿದರು. ಇಲ್ಲಿ ಪ್ರಶ್ನೆ ಬರತಕ್ಕಂಥದ್ದು ಇಷ್ಟೆ, ನಾನು ಹೆರಾಲ್ಡ್ ವಿಲ್ಸನ್ ಮತ್ತು ಎಡ್ವರ್ಡ್ ಹೀತ್‌ನ ವಿಚಾರವನ್ನು ಏಕೆ ಹೇಳಿದೆ ಎಂದರೆ, ಪ್ರಾಯಶಃ ಸ್ವಲ್ಪ ಮಟ್ಟಿಗೆ ಬಿಜೆಪಿಯವರಿಗೆ ಅವಕಾಶ ಇರಬಹುದು, ಈ ರಾಜ್ಯದಲ್ಲಿ ರಾಜ್ಯಭಾರವನ್ನು ಅವರು ಮಾಡಿಲ್ಲ, ಆದರೆ ನೀವು ಮತ್ತು ನಾವು ಆಯಾ ಸಂದರ್ಭಕ್ಕನುಗುಣವಾಗಿ ಇದನ್ನು ಉಪಯೋಗಿಸಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆಗಲೇ ಮಾತನಾಡುತ್ತಾ ಗಂಭೀರವಾಗಿ ಬಹಳ ಜನಕ್ಕೆ ಚುನಾವಣೆ ಮುಂದಕ್ಕೆ ಹೋಗಬೇಕು ಎಂಬುದೇ ಇರಬಹುದೇನೋ ಎಂದರು. ಸರ್ಕಾರ ಇದನ್ನು ತಂದಾಗ ಉದ್ದೇಶ ಅದು ಇರಲಿಲ್ಲ. ನಾವು ಚುನಾವಣೆಗಳನ್ನು ನಿಜವಾಗಿ, ಅರ್ಥಪೂರ್ಣವಾದಂತಹ ಅಧಿಕಾರ ವಿಕೇಂದ್ರಿಕರಣ ಮಾಡಿ ಮಂಡಲ ಪಂಚಾಯತ್‌ಅನ್ನು ಮಾಡಬೇಕು ಎನ್ನುವ ಕಾರಣಕ್ಕಾಗಿಯೇನಾವು 321ರ ಅಡಿಯಲ್ಲಿ ಹೊರಡಿಸಿದ ಆದೇಶದ ಕೊನೆಯ ಪ್ಯಾರಾಗ್ರಾಫ್ ಅನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

``Whereas due to the expiry of the tenure of the office of the Grama Panchayats and due to the delay in fresh constitution as aforesaid, a difficulty has arised therein that there will be no duly constituted Grama Panchayat to discharge the functions of the Grama Panchayats under Karnataka Panchayat Raj Act 1993 till the constitution of the New Grama Panchayat under the amended provisions of the Karnataka Panchayat Raj Act and it is necessary to remove the said difficulty by making appropriate arrangements for the performance of the Grama Panchayats under the said Act."

5.50 ಪಿ.ಎಂ.

ಇಲ್ಲಿ ನಾವು ರಿಮೂವಲ್ ಒಂದು ಕೊಚಿಂಟಾಗಿ ಇದನ್ನು ಉಪಯೋಗಿಸಿದ್ದೇವೆ ವಿನಃ ಆಫ್ ದಿ ಡಿಫಿಕಲ್ಟಿ ಕ್ಲಾಸನ್ನು ಒಂದು ಅಸ್ತ್ರವಾಗಿ ಬಳಸತಕ್ಕಂಥದ್ದು ಅಲ್ಲ.

SRI KAGODU THIMMAPPA: What is the difficulty which you have removed by virtue of. this?

ಶ್ರೀ ಎಂ.ಪಿ. ಪ್ರಕಾಶ್:— ಅಮೆಂಡ್‌ಮೆಂಟ್ ಸೆಕ್ಷನ್ 4 ಮತ್ತು 5 ಆರ್ಡಿನೆನ್ಸ್ ಜಾರಿಗೆ ಬಂದಾಗ ಅದು ದೊಡ್ಡ ಪಂಚಾಯಿತಿಗಳನ್ನು ಮಾಡಬೇಕಾಗುತ್ತದೆ. ದೊಡ್ಡ ಪಂಚಾಯಿತಿಗಳನ್ನು ಮಾಡುವಾಗ ಅದರ ಭೌಗೋಳಿಕ ಕ್ಷೇತ್ರವಾರು ಪುನರ್ ವಿಂಗಡಣೆಯಾಗಬೇಕಾಗುತ್ತದೆ. ಆ ಪುನರ್ವಿಂಗಡಣೆ ಮಾಡುವಾಗ ಸಾರ್ವಜನಿಕರ ಆಕ್ಷೇಪಣೆಗಳನ್ನು 30 ದಿವಸಗಳೊಳಗಾಗಿ ಕರೆಯಬೇಕಾಗುತ್ತದೆ. ಅದರಲ್ಲಿ ಜಿಲ್ಲಾಧಿಕಾರಿ ಮಾಡಿರತಕ್ಕಂತಹ ಆಜ್ಞೆಯ ವಿರುದ್ಧ ಪುನರ್ ಮೇಲ್ಮನವಿ ಮಾಡಿಕೊಳ್ಳತಕ್ಕಂತಹ ಅಧಿಕಾರ ಕಾನೂನಿನಲ್ಲಿದೆ. ಇವುಗಳಿಗೆ ಕನಿಷ್ಠ ಮೂರು ತಿಂಗಳಿನಿಂದ ಆರು ತಿಂಗಳವರೆಗೆ ಕಾಲಾವಕಾಶ ಹಿಡಿಯುತ್ತದೆ. ಈ ಮೂರಾರು ತಿಂಗಳು ಹಿಡಿಯತಕ್ಕಂತಹ ಸಂದರ್ಭದಲ್ಲಿ ನಾವು ಅದನ್ನು ಸಂಪೂರ್ಣವಾಗಿ ಶೂನ್ಯವಾಗಿ ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಶೂನ್ಯವಾಗಿ ಬಿಡಬಾರದು ಅನ್ನುವ ಕಾರಣಕ್ಕಾಗಿ ಇಂತಹ ಒಂದು ಸಂಭವನೀಯ ಪ್ರಸಂಗ ಇರುತ್ತದೆ ಅನ್ನುವ ಕಾರಣಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಆಕ್ಟಿನ 321ನೇ ವಿಧಿ ಇಲ್ಲಿ ನಿರ್ಮಾಣವಾಗಿದೆ. ನಾವು ಅದನ್ನು ಮುಚ್ಚಿಟ್ಟುಕೊಂಡು ಏನು ಈ ವಿಚಾರವನ್ನು ಹೇಳಲಿಲ್ಲ. ಆಜ್ಞೆಯಲ್ಲಿ ಹೇಳಿದ್ದೇವೆ.

'Whereas due to the expiry of the tenure of the office of the Grama Panchayats and due to the delay in fresh constitution as aforesaid, a difficulty has arised therein that there will be no duly constituted Grama Panchayat to discharge the functions of the Grama Panchayats under Karnataka Panchayat Raj Act 1993 till the constitution of the New Grama Panchayat under the amended provisions of the Karnataka Panchayat Raj Act and it is necessary to remove the said difficulty by making appropriate arrangements for the performance of the Grama Panchayats under the said Act."

SRI M.Y. GHORPADE: What the Hon'ble Minister is saying is not correct. Election Commission itself has informed this Government that all necessary things have been done and there is no difficulty coming in the way of holding the elections. Therefore, that is a consitutionsal body. They should know they are really consitutionally responsible when they say and they have given it in writing that there is no difficulty. So also the Deputy Commissioners. For you to say that you are using something to remove the difficulty, a non-existing difficulty, is very unfortunate. The difficulty you are trying to create by trying the delimitation, that is the difficulty you are creating. If you don't create that difficulty, there would be no difficulty in holding the elections and the truth is that they don't to hold elections for the next six months and you know whatever happens in this House, no election will take place for the next six months, you would have achieved the purpose of not holding the Grama Panchayat elections in the next six months. By that time the term of this Government ends. So your object is fulfilled, whatever be the reason for it.

SRI M.P. PRAKASH: Sir you have every right to infer for the action that Government takes. The point is this. The Election Commission was ready to hold the elctions, not under the new dispensation,. In the sense when this amendment has come into existence. Earlier, before the amendment when small grama panchayats were there, they are prepared to hold the elections. After the amendment to this enactment, now the things have changed. That means you have got to constitute a new constintuency.

SRI M.Y. GHORPADE: You have not brought the order.

SRI M.P. PRAKASH: That is precisely the matter for which we are adjudicating. ನಾವು ಹೇಳುವುದು, ಚುನಾವಣಾ ಆಯೋಗವನ್ನು ನೀವು ಮುಜುಗರದಲ್ಲಿ ಸಿಗಿಸತಕ್ಕಂತಹ ಮಾತನಾಡುತ್ತೀರಿ. It is very unfortunate ಎಂದು

ತಾವು ಏನು ಹೇಳಿದಿರಿ It is very unfortunate that you have misread us.ನಾವು ಆ ತರಹದ ಮಾತುಗಳನ್ನು ಹೇಳಲಿಲ್ಲ. ಚುನಾವಣಾ ಆಯುಕ್ತರು ಚುನಾವಣೆಗಳನ್ನು ಹಿಂದೆ ಇದ್ದಂತಹ ಚಿಕ್ಕ ಗ್ರಾಮಪಂಚಾಯಿತಿಗಳು ಇದ್ದಾಗ ಮಾಡುವುದಕ್ಕೆ ತಯಾರಿದ್ದರು. ಆದರೆ,..

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಪದೇ ಪದೇ ಇದನ್ನು ಉಪಯೋಗ ಮಾಡುತ್ತಿದ್ದೀರಿ. ಸೆಕ್ಷನ್ 321 ರಿಮೂವಲ್ ಆಫ್ ಡಿಫಿಕಲ್ಟಿ.

> ``If any difficulty arises in giving effect to the provisions of this Act, the Government may by order publish in an official gazette as the occasion may require, to anything which appears to be necessary to remove the difficulties."

ಕಾನೂನಿನಲ್ಲಿ ಏನಾದರೂ ತೊಡಕಿದ್ದರೆ ಇಂಟ್ರ್‌ಪ್ರಿಟೇಷನ್‌ನಲ್ಲಿ ವ್ಯತ್ಯಾಸಗಳಾದರೆ ಆಗ ಇದನ್ನು ಉಪಯೋಗ ಮಾಡಬಹುದು. ಈ ಸೆಕ್ಷನ್ ಪ್ರಕಾರ ತಾವು ಕ್ಲ್ಯಾರಿಫಿಕೇಷನ್ ಕೊಡಬಹುದು. ಅಥವಾ ಅಫಿಷಿಯಲ್ ಗೆಜೆಟ್‌ನಲ್ಲಿ ಅದಕ್ಕೆ ಒಂದು ರೂಪ ಕೊಡಬಹುದು. ಆದರೆ, ಸಂವಿಧಾನದಲ್ಲೇ ಅದು ಇದ್ದಾಗ ಅದನ್ನು ನೀವು ನೇರವಾಗಿ ಸಂವಿಧಾನಕ್ಕೆ ತಿರುಚು ಮುರುಚು ಮಾಡತಕ್ಕಂತಹ ಹಕ್ಕು 321 ರಲ್ಲಿ ಇಲ್ಲ. ಅಥವಾ ಪೂರ್ತಿ ಕಾಯಿದೆಯನ್ನೇ ಹಿಂದೆ ಮುಂದೆ ಮಾಡಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲ. ನಿಮಗೆ ಇರತಕ್ಕಂಥದ್ದು ಲಿಮಿಟೆಡ್ ಅಧಿಕಾರ. ಕೇವಲ ಇಂಟ್ರಿಪ್ರಿಟೇಷನ್. ಸರ್ಟನ್ ಡಿಫಿಕಲ್ಟೀಸ್ ಇದ್ದರೆ ಅದನ್ನು ತೆಗೆಯತಕ್ಕಂಥದ್ದು. ಆದರೆ ಇಲ್ಲಿ ಡಿಫಿಕಲ್ಟಿ ನೀವೆ ಕ್ರಿಯೇಟ್ ಮಾಡುತ್ತಿದ್ದೀರಿ. ಹೀಗೆ ನೀವು ಎರಡು ಮೂರು ಪಂಚಾಯಿತಿಗಳನ್ನು ಸೇರಿಸಿ ಒಂದು ದೊಡ್ಡ ಪಂಚಾಯಿತಿ ಮಾಡಬೇಕು ಅನ್ನತಕ್ಕಂಥದ್ದು ಇದು ನೀವು ಸೃಷ್ಟಿ ಮಾಡಿದಂತಹ ಸಮಸ್ಯೆ. ಕಾನೂನಿನಲ್ಲಿ ಅದು ಇಲ್ಲ. ಕಾನೂನಿನಿಂದ ಸೃಷ್ಟಿ ಆದಂಥದ್ದು ಅಲ್ಲ. ತಾವೇ ಸೃಷ್ಟಿ ಮಾಡಿದಂತಹ ಸಮಸ್ಯೆಗೆ ತಾವೇ ಅದನ್ನು 321 ಕ್ಕೆ ಪರಿಹಾರ ಕಂಡು ಹಿಡಿಯುವುದಕ್ಕೆ ಏನು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಕಾನೂನು ವಿರುದ್ಧ ಮತ್ತು ಸಂವಿಧಾನ ವಿರುದ್ಧವೂ ಹೌದು ಎನ್ನತಕ್ಕಂತಹ ಮಾತನ್ನು ತಾವು ಒಪ್ಪಬೇಕಾಗುತ್ತದೆ.

SMT. PRAMILA NESARGI: Removal of difficulties - 321, removal of the difficulties in the Act. It does not mean removal of difficulties in the ordinance. Remove the ordinance. the difficulties will automatically go.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೆ, ಬಹಳ ಸರಳವಾದ ಸಲಹೆ ಕೊಟ್ಟಿದ್ದಕ್ಕಾಗಿ ನಿಮಗೆ ಬಹಳ ಧನ್ಯವಾದಗಳು. ಇಲ್ಲಿ ಪ್ರಶ್ನೆ ಉದ್ಭವವಾಗುವುದು ನಮಗೆ ಈ ಸದನಕ್ಕೆ ಕಾನೂನನ್ನು ತರುವ ಮತ್ತು ತಿದ್ದುಪಡಿ ಮಾಡುವ ಅಂತರ್ಗತ ಅಧಿಕಾರ ಇದೆ. ಆ ಪ್ರಕಾರವಾಗಿ ಈ ಕಾನೂನಿಗೆ ಕೆಲವು ತಿದ್ದುಪಡಿ ತಂದಿದ್ದೇವೆ. ಈ ತಿದ್ದುಪಡಿಯ ಸಿಂಧುತ್ವ ಅಥವಾ ಆ ಸಿಂಧುತ್ವದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ತೀರ್ಪು ಕಾಯ್ದಿರಿಸಲ್ಪಟ್ಟಿದೆ. ತಮ್ಮ ದೃಷ್ಟಿಯಿಂದ ಇದು ಅಸಿಂಧು ಎಂದು ಆಗಿದ್ದರೆ ಅದರ ನಿರ್ಣಯ ಆಗತಕ್ಕಂಥದ್ದು ಇಲ್ಲಿ ಅಲ್ಲ, ನ್ಯಾಯಾಲಯದಲ್ಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸಂವಿಧಾನದ ವಿರುದ್ಧವಾಗಿ ಇರತಕ್ಕಂಥದ್ದು ನೀವು ಒಪ್ಪಿಕೊಳ್ಳುತ್ತಿಲ್ಲ. ನಾಳೆ ಯಾರೋ ಹತ್ತು ಕೇಸ್ ಹಾಕುತ್ತಾರೆ. Then are you going to stop the entire Act.

ಶ್ರೀ ವಾಟಾಳ್ ನಾಗರಾಜ್ :— ಈ ಸದನ ನ್ಯಾಯಾಲಯಕ್ಕಿಂತ ಬಹಳ ಹೆಚ್ಚು ಎಂದು ನಮ್ಮ ಭಾವನೆ. ಆದ್ದರಿಂದ, ತಾವು ಅಲ್ಲಿ ಅಂದರೆ, ಈ ಸದನದಲ್ಲಿ ಚರ್ಚೆ ಏಕೆ ಆಗಬೇಕು? ತೀರ್ಮಾನ ಏಕೆ ಆಗಬೇಕು?

ಶ್ರೀ ಎಂ.ಪಿ. ಪ್ರಕಾಶ್ :— ಈ ರೀತಿಯಾಗಿ ನಾವು ಉತ್ತರ ಕೊಡುವುದಕ್ಕೆ ನೀವು ಅವಕಾಶ ಕೊಡದೆ ಇದ್ದರೆ ಹೇಗೆ? You should come to our rescue.

ಅಧ್ಯಕ್ಷರು :— ಮಾನ್ಯ ಮಂತ್ರಿಗಳು ಹೇಳುವುದು ಇಷ್ಟೆ. ಈ ಸದನ ರಚನೆ ಮಾಡಿರತಕ್ಕಂತಹ ಯಾವುದಾದರೂ ಒಂದು ಶಾಸನವನ್ನು ತಿದ್ದುಪಡಿ ಮಾಡತಕ್ಕಂತಹ ಅಂತರ್ಗತ ಅಧಿಕಾರ ಈ ಶಾಸನ ಸಭೆಗೆ ಇದೆಯೇ ಇಲ್ಲವೇ ಅನ್ನುವುದೇ ಅವರ ಮೂಲಭೂತವಾದಂಥ ಪ್ರಶ್ನೆ. ಈ ಶಾಸನ ರಚನೆಯಾಗಿದ್ದು ಈ ಸದನದಲ್ಲಿ. ಅದಕ್ಕೆ ತಿದ್ದುಪಡಿಯನ್ನು ನಾವು ಆಲೋಚನೆ ಮಾಡಿದ್ದೇವೆ. ಅದರ ಪರಿಣಾಮವಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :— ಪ್ರಶ್ನೆ ಬಂದಿರತಕ್ಕಂಥದ್ದು ಕೆಲವು ಶಾಸಕರಿಗೆ ತಪ್ಪು ಅಭಿಪ್ರಾಯ ಆಗಿದ್ದರೆ ಸರಿಪಡಿಸಬೇಕು. ಮತ್ತೊಂದು ಸಾರಿ ಪುನರ್ ಉಚ್ಛಾರ ಮಾಡುತ್ತೇನೆ. ಯಾವುದಾದರೂ ಕಾನೂನನ್ನು ತರುವಂತಹ ಆ ಕಾನೂನಿಗೆ ತಿದ್ದುಪಡಿ ಮಾಡುವಂತಹ ಅಂತರ್ಗತವಾದ ಅಧಿಕಾರ ಈ ಶಾಸನ ಸಭೆಗೆ ಇದೆ. ಈ ಶಾಸನಸಭೆ ಈ ತಿದ್ದುಪಡಿಯನ್ನು ತಂದಿದೆ. ಈ ತಿದ್ದುಪಡಿ ಕಾನೂನುಬದ್ಧವಾಗಿ ಇದೆಯೋ ನ್ಯಾಯಾಂಗಬದ್ಧವಾಗಿ ಇದೆಯೋ ಸಂವಿಧಾನಕ್ಕೆ ವಿರುದ್ಧವಾಗಿದೆಯೋ ಎಂದು ತೀರ್ಮಾನ ಮಾಡತಕ್ಕಂಥದ್ದು ಅಲ್ಲಿ ನ್ಯಾಯಾಲಯ. ಈ ಸದನಕ್ಕೆ ನಾವು ಅಗೌರವ ತೋರಿಸಿದ್ದೇವೆ ಅನ್ನುವ ಮಾತು ಅಲ್ಲ.

ಶ್ರೀ ಎಂ.ವೈ. ಘೋರ್ಪಡೆ :— ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ :— ತಾವು ಎಷ್ಟೇ ವಿಧವಾಗಿ ಹೇಳಿದರೂ ನೀವು ನಮ್ಮ ವಿಚಾರಕ್ಕೆ ಒಪ್ಪುವುದಕ್ಕೆ ತಯಾರಿಲ್ಲ. ನಾನು ಇನ್ನು ಸರಳವಾಗಿ ಹೇಳುತ್ತೇನೆ. ನಾವು ಒಂದು ಕಾನೂನು ಮಾಡಿದ್ದೇವೆ. ಆ ಕಾನೂನನ್ನು ತಿದ್ದುಪಡಿ ನೀವು ಮಾಡಿದಿರಿ ಆ ತಿದ್ದುಪಡಿ ಮಾಡಿದ್ದರ ಪ್ರಕಾರ ಪಂಚಾಯಿತಿಗಳು ಬಹಳ ಕೆಟ್ಟ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದವು. ಅದನ್ನು ಸರಿಪಡಿಸುವುದಕ್ಕೋಸ್ಕರ ಈ ತಿದ್ದುಪಡಿ ತಂದೆವು. ಮೊದಲು ಗ್ರಾಮ ಪಂಚಾಯಿತಿ ಹಾಗೂ ಮಂಡಲ ಪಂಚಾಯಿತಿಗಳು ಹೇಗೆ ಕೆಲಸ ಮಾಡುತ್ತಿದ್ದವು, ಜಿಲ್ಲಾ ಪಂಚಾಯಿತಿಗಳು ಹೇಗೆ ಕೆಲಸ ಮಾಡುತ್ತಿದ್ದವು, ಪ್ರತಿಯೊಬ್ಬ ಶಾಸಕರಿಗೂ ಗೊತ್ತಿದೆ. ನಾವು ಕಳೆದ ನಮ್ಮ ಎರಡು-ಮೂರು ವರ್ಷಗಳ ನಮ್ಮ ಅನುಭವದಲ್ಲಿ ಏನಾಗಿದೆ, ಶ್ರೀಮಾನ್ ಶ್ರೀರಾಮರೆಡ್ಡಿಯವರು ಭಾಷಣ ಮಾಡುತ್ತಿದ್ದಾಗ ಕೇಳಿದೆ ಯಾವಾಗಲೂ ಆರ್ಥಿಕವಾಗಿ ಪಂಚಾಯಿತಿಗಳಿಗೆ ಏನೂ ಸಾಮರ್ಥ್ಯ ಇಲ್ಲ. ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಈಗಿರುವ ಗ್ರಾಮ ಪಂಚಾಯಿತಿಗಳಿಗೆ ಆರ್ಥಿಕವಾಗಿ ಸಾಮರ್ಥ್ಯವೇ ಇಲ್ಲದೇ ಒಂದು ಸಣ್ಣ ಮೋರಿ ತೆಗೆಸುವ ಕಾರ್ಯವನ್ನು ಕೂಡ ಮಾಡುವುದಕ್ಕಾಗುತ್ತಿಲ್ಲವೆಂದರು ಇದರ ಜೊತೆಗೆ ಪಂಚಾಯತಿಗಳ ದುಸ್ಥಿತಿಯನ್ನು ವಿಧವಿಧವಾಗಿ ವರ್ಣಿಸಿದರು. ಅದನ್ನು ತಿದ್ದುಪಡಿ ಮಾಡುವುದಕ್ಕೋಸ್ಕರವೇ ಇದನ್ನು ತಂದಿದ್ದೇವೆ ಎಂದರೂ ಕೂಡ ಅದನ್ನು ಅರಿಯದೇ ನಮಗೇ ಇವರು ಸೇವಿಂಗ್ ಕ್ಲಾಸ್ ಉಪಯೋಗಿಸಿದ್ದೀರ, ಸ್ಟ್ಯಾಟುಟರಿ ಪ್ರಾವಿಶನ್ ಉಪಯೋಗಿಸಿದ್ದೀರ ಎಂದು ಎನ್ನುವುದಲ್ಲದೇ ಅದರೊಳಗೆ ತಿದ್ದಬಹುದಾಗಿತ್ತು ಎನ್ನುತ್ತೀರಿ. ಆದರೆ ಅದರೊಳಗೆ ಇದನ್ನು ತಿದ್ದುವುದಕ್ಕೆ ಬರುವುದಿಲ್ಲ. ಅದಕ್ಕೇ ಮಾನ್ಯ ಸಚಿವರು ಏನು ಹೇಳಿದರೆಂದರೆ ರಿ-ಕಾನ್ಸ್ಟಿಟ್ಯೂಯೆನ್ಸಿ ದೊಡ್ಡದಾಗಬೇಕಾಗುತ್ತದೆಂದರು. ಅವುಗಳಿಗೆ ಮತ್ತೆ ಪ್ರೋಸೀಜರ್ ಪ್ರಕಾರ ಹೆಚ್ಚು ಸಮಯ ಬೇಕಾಗುತ್ತದೆ. ಅದಕ್ಕೋಸ್ಕರ ನಾವು ಚುನಾವಣೆ ದಿವಸ ಹತ್ತಿರ ಬರಲಿ ಎನ್ನುವವರೆಗೂ ಕಾದು ಈಗಿರುವ ವ್ಯವಸ್ಥೆಯನ್ನು ಬದಲಾವಣೆ ಮಾಡದೇ ಇದ್ದರೆ ಮೊದಲಿನ ದುರ್ವ್ಯವಸ್ಥೆಯೇ ಮುಂದುವರಿಯುತ್ತದೆ ಎನ್ನುವ ಕಾರಣಕ್ಕೋಸ್ಕರ ಇದನ್ನು ತಂದೆವು. ಏಕೆಂದರೆ ನಾವೂ ಕೂಡ ಹಳ್ಳಿಗಾಡಿನವರಾಗಿದ್ದು ನಮಗೂ ಕೂಡ ಗ್ರಾಮ ಪಂಚಾಯತಿ ವ್ಯವಸ್ಥೆ ಬಗ್ಗೆ ಗೊತ್ತಿದೆ. ಹಿಂದಿನ ವ್ಯವಸ್ಥೆಯಲ್ಲಿ ಹಿಂದಿನವರು ಮಾಡಿದ ವಿಕಾರವನ್ನು ತಿದ್ದುವುದಕ್ಕೋಸ್ಕರ ಇದನ್ನು ತಂದಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದು ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಅವರವರ ಅಭಿಪ್ರಾಯ ಸದನದಲ್ಲಿ ಹೇಳುವುದಕ್ಕೆ ಸದಸ್ಯರಿಗೆಲ್ಲರಿಗೂ ಹಕ್ಕಿದೆ. ಈಗ ಗ್ರಾಮ ಪಂಚಾಯಿತಿಗಳ ಬಗ್ಗೆ ತಾವು ಮಾಡುವ ಬದಲಾವಣೆ ಬಗ್ಗೆ ಹೇಳಿದಿರಿ. ತಾಲ್ಲೂಕು ಪಂಚಾಯತಿಗೂ ಅದೇ ರೀತಿ ಅಧಿಕಾರಿಗಳನ್ನು ಮಾಡುತ್ತೀರೇನು. ಆ ರೀತಿ ನೀವು ಮಾಡುವುದಿಲ್ಲ. ಈಗ ನೀವೇನು ಹಲವಾರು ಹಳ್ಳಿಗಳನ್ನು ಒಂದುಗೂಡಿಸಿ

ದೊಡ್ಡ ಪಂಚಾಯತಿ ಮಾಡುತ್ತೇವೆ ಎಂದು ನೀವೇನು ಹೇಳುತ್ತಿದ್ದೀರಲ್ಲ ಅದರಲ್ಲಿ ತ್ರೀ ಟೈರ್ ಸಿಸ್ಟಂಗೆ ಧಕ್ಕೆ ಇಲ್ಲ ಎಂದ ಹಾಗಾಯಿತು. ಧಕ್ಕೆ ಇಲ್ಲವೆಂದಾಗ ನೀವು ಕುಂಟು ನೆಪವಾಗಿ ಏನು ತೆಗೆದುಕೊಂಡಿರೆಂದರೆ ಸೆಕ್ಷನ್ 4 ಮತ್ತು 5 ರಲ್ಲಿ ಪರಿಶಿಷ್ಟ ಜಾತಿಯವರಿಗೆ ಹೆಚ್ಚಿಗೆ ಸೀಟ್‌ಗಳು ಸಿಗುತ್ತಿವೆ ಅಥವಾ ಆ ಜನಾಂಗವಿಲ್ಲದೆಯೇ ರೆಪ್ರೆಸೆಂಟೇಶನ್ ಕೊಡುತ್ತಿದ್ದಾರೆ, ಅದಕ್ಕಾಗಿ ಈ ಅನಾಮಲಿಯನ್ನು ತೆಗೆದುಹಾಕಬೇಕು ಎನ್ನುವ ದೃಷ್ಟಿಯಿಂದ ಸೆಕ್ಷನ್ 4 ಮತ್ತು 5ಕ್ಕೆ ಅಮೆಂಡ್‌ಮೆಂಟ್ ತಂದಿದ್ದೇವೆ ಎಂದು ಹೇಳಬಹುದು. ಇದರಿಂದ ಎರಡು ಪಂಚಾಯಿತಿ ಸೇರಿಸಿಕೊಂಡು ಒಂದು ಪಂಚಾಯಿತಿ ಮಾಡುವುದರಿಂದ ಸುಧಾರಣೆ ಆಗುತ್ತದೆ ಎನ್ನುವ ಭಾವನೆ ನಿಮ್ಮದಾಗಿದೆ. ನಮ್ಮ ಅಭಿಪ್ರಾಯವೇನೆಂದರೆ ಈಗ ತಾವೇನು ಸಮಸ್ಯೆಯನ್ನು ಸೃಷ್ಟಿ ಮಾಡುತ್ತಿದ್ದೀರೋ ಆ ಸಮಸ್ಯೆಗೆ ಆರ್ಟಿಕಲ್ 321 ರಲ್ಲಿ ಯಾವುದೇ ಪರಿಹಾರವಿಲ್ಲವಾಗಿದೆ. ಇದು ಕಾನೂನುಬಾಹಿರ ಎನ್ನತಕ್ಕಂಥದ್ದೇ ನಮ್ಮ ವಾದವಾಗಿದೆ. ಈ ರೀತಿ ಹೇಳಿದರೆ ನೀವು ಕಾನೂನು ಮತ್ತು ಸಂವಿಧಾನ ಎಂದೆಲ್ಲಾ ಹೇಳುತ್ತೀರಿ. ಇಲ್ಲಿಗೆ ಎಲ್ಲರೂ ಸಂವಿಧಾನದ ಪ್ರಕಾರ ನಡೆದುಕೊಳ್ಳುವುದಾಗಿಯೇ ಬಂದಿರುವುದು. ಆದುದರಿಂದ ಸಂವಿಧಾನದ ವಿರುದ್ಧವಾಗಿ ನೀವು ಕಾನೂನು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :— ಕಾನೂನಿನ ಬಗ್ಗೆ ಸರ್ಕಾರ ನಿರ್ಣಯ ಮಾಡುವುದಕ್ಕೆ ಬಹುಮತದ ಅಧಿಕಾರ ಕೊಟ್ಟಿದ್ದರೆ ನ್ಯಾಯಾಲಯಗಳು ಇರಬೇಕಾದ ಅಗತ್ಯವಿರುತ್ತಿರಲಿಲ್ಲ. ಬಹುಮತದ ಬಗ್ಗೆ ಅದು ಸಿಂಧುವೋ ಅಥವಾ ಅಸಿಂಧುವೋ ಎಂಬುದಕ್ಕೆ ಓಟ್ ತೆಗೆದುಕೊಂಡು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸೆಕ್ಷನ್ 243(ಇ)ನಲ್ಲಿ ಅದರ ಬಗ್ಗೆ ಕ್ಲಿಯರ್ ವಿವರಣೆಗಳಿವೆ.

ಶ್ರೀ ಎಂ.ಪಿ. ಪ್ರಕಾಶ್ :— ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗ ಇರತಕ್ಕಂಥದ್ದರ ಕಾರಣವಿಷ್ಟೆ. ಶಾಸಕಾಂಗ ಮಾಡಿದ ತೀರ್ಮಾನಗಳು ರಾಜ್ಯಾಂಗಬದ್ಧವಾಗಿ ಇಲ್ಲದೇ ಇದ್ದರೆ ಅಥವಾ ಇದೆಯೇ ಎಂಬ ಬಗ್ಗೆ ಚರ್ಚೆ ಮಾಡುವುದು ನ್ಯಾಯಾಂಗದವರಿಗೆ ಬಿಟ್ಟ ವಿಚಾರ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆರ್ಟಿಕಲ್ 243ಕ್ಕೆ ಸಂಬಂಧಪಟ್ಟಂತೆ ಇದು ಕಂಪ್ಲೀಟ್ ವಯಲೇಶನ್ ರೀತಿಯಲ್ಲಿದ್ದಾಗ ಮತ್ತು ಮ್ಯಾನ್‌ಡೇಟರಿ ಪ್ರಾವಿಶನ್ ಇದ್ದಾಗ ಇದನ್ನು ಹೇಗೆ ಹೇಳುವುದಕ್ಕಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಈಗ ಇವರು ಏನು ತಿದ್ದುಪಡಿ ತಂದಿದ್ದಾರೆ ಅದು ಸಂವಿಧಾನಕ್ಕೆ ವಿರುದ್ಧವಾಗಿದೆ. ಇನ್ನು 321ರ ಬಗ್ಗೆ ಹೇಳಬೇಕಾದರೆ ಈಗ ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ

ಆಕ್ಟ್ ಕೆಳಗಡೆ ಶೆಲ್ಟರ್ ತೆಗೆದುಕೊಳ್ಳುತ್ತಿದ್ದಾರೆ, ಅದೂ ಕೂಡ ಸತ್ಯಕ್ಕೆ ದೂರವಾದ ವಿಚಾರವಾಗಿದೆ. ಅದಕ್ಕೆ ಯಾವ ಸಂಬಂಧ ಕೂಡ ಇಲ್ಲ. ಇನ್ನು ಮೂರನೆಯದಾಗಿ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಹಾಗೆ ಚುನಾವಣೆಗಳು ಬರುತ್ತವೆ, ಸಧ್ಯಕ್ಕೆ ತಲೆನೋವು ಏಕೆ ಎಂದು ಯಾವುದೇ ರೀತಿಯಿಂದ ಪೋಸ್ಟ್‌ಪೋನ್ ಮಾಡಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ ಹೊರತು ಡೆಮಾಕ್ರಟಿಕ್ ಪದ್ಧತಿ ಪ್ರಕಾರ ಪುನಃ ಚುನಾವಣೆ ಆಗಬೇಕು ಎನ್ನತಕ್ಕಂಥದ್ದಿಲ್ಲ. ನೀವೇನು ಮಾಡಿದಿರಿ ಎಂದರೆ 73rd,74th ಅಮೆಂಡ್‌ಮೆಂಟ್ ಬಂದಾಗ ಪಂಚಾಯತಿಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಏನು ಹಕ್ಕು ಸಿಕ್ಕುತ್ತಿತ್ತೋ ಅದು 85 ಆಗಲಿ, 87 ಅಥವಾ 92 ಆಯ್ಯಕ್ಟ್‌ನಲ್ಲಿ ಅಷ್ಟೊಂದು ಅದಕ್ಕೆ ಇರಲಿಲ್ಲ. ಪದೇ ಪದೇ ನೀವು ಮಾತನಾಡುತ್ತ ನೀವು ಮಾಡಿದ್ದನ್ನು ನಾವು ಸರಿಪಡಿಸಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೀರಿ. ನೀವೇನು ಸರಿಪಡಿಸಿದ್ದೀರಿ? ಕಳೆದ 5 ವರ್ಷಗಳಿಂದ ನಿಮ್ಮ ಕೈಯಿಂದ ಯಾವುದನ್ನೂ ಸರಿಪಡಿಸುವುದಕ್ಕೆ ಆಗಲಿಲ್ಲ. ಈಗ ಇದನ್ನೂ ಕೂಡ ತಿರುಚು-ಮುರುಚು ಮಾಡಿ ಯಾವುದೋ ರೀತಿಯಿಂದ ಮುಂದಕ್ಕೆ ಹಾಕಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದೀರಿ. ಈಗಾಗಲೇ ಈ ಬಗ್ಗೆ ಸಾಕಷ್ಟು ಉತ್ತರವನ್ನು ಕೇಳಿಯಾಗಿದೆ. ಇನ್ನು ಮುಂದೆ ಕೂಡ ಇದರ ಬಗ್ಗೆ ಅವರ ಉತ್ತರ ಕೇಳುವುದಕ್ಕೆ ನಾವು ತಯಾರಿಲ್ಲ. ಈಗೇನು ಇವರು ತಿದ್ದುಪಡಿ ತಂದು ಪಂಚಾಯತ್ ರಾಜ್ ಕೊಲೆಯನ್ನು ಮಾಡುತ್ತಿದ್ದಾರೋ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ವಿರೋಧ ಪಕ್ಷದ ನಾಯಕರು ಮಾತನಾಡಿ ಸರಿಪಡಿಸಲಿಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲವೆಂದರು. ಅದು ನಿಜ. ಅಂದರೆ ಕಾಂಗ್ರೆಸ್ ನವರನ್ನು ಸರಿಪಡಿಸಲಿಕ್ಕೆ ಆಗಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇನೋ ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡು ಚುನಾವಣೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು ಎನ್ನುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂದು ಹೇಳಿದರು. ಆದರೆ ಐದಾರು ತಿಂಗಳ ಹಿಂದೆಯೇ ಚುನಾವಣೆಗಳನ್ನು ನಡೆಸುವುದಕ್ಕೆ ಇವರಿಗೆ ಅಧಿಕಾರವಿತ್ತಲ್ಲ. ಈಗ ಮತ್ತೆ ಏನು ಹೇಳುತ್ತಿದ್ದೀರೆಂದರೆ ಇನ್ನು 8 ತಿಂಗಳು ಇರುವಾಗ ಚುನಾವಣೆ ನಡೆಸುವುದಕ್ಕೆ ಆಗುವುದಿಲ್ಲವೆನ್ನುತ್ತೀರಿ. ಇದು ಯಾವ ನ್ಯಾಯ? ಈ ಹಿಂದೆ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನಡೆದಿಲ್ಲವೆ? ಇಂಥ ಕಾನೂನನ್ನು ಇಂಥ ಚುನಾವಣೆಗೋಸ್ಕರ ಇಂಥ ದಿನಾಂಕದಿಂದ ಎಫೆಕ್ಟ್‌ಗೆ ತರುತ್ತೇವೆ ಎಂದು ಹೇಳಿ ಕಾನೂನು ಮಾಡುವುದಕ್ಕೆ ನಿಮಗೆ ಆಗುತ್ತಿರಲಿಲ್ಲವೆ? ನಿಮಗೆ ಮೊಟ್ಟಮೊದಲನೆಯದಾಗಿ ಚುನಾವಣೆ ನಡೆಸುವುದಕ್ಕೆ

ಮನಸ್ಸಿಲ್ಲ. ನೀವು ಈಗ ಏನು ಹೇಳುತ್ತಿದ್ದೀರಿ ಅದೆಲ್ಲಾ ಕುಂಟುನೆಪ, ಈ ಹಿಂದೆ ಕಾಂಗ್ರೆಸ್ ನವರು ಏನು ತಪ್ಪು ಮಾಡಿದರು ಎಂಬುದನ್ನು ಮುಖ್ಯಮಂತ್ರಿಗಳು ಏನು ಹೇಳಿದರೋ ಅದನ್ನು ನಾನು ಮೆಚ್ಚುತ್ತೇನೆ. ಕಾಂಗ್ರೆಸ್‌ನವರು ಮಾಡಿದ ತಪ್ಪಿಗೆ ಖಂಡಿತ ನಮ್ಮ ಬೆಂಬಲವಿಲ್ಲ. ಆದರೆ ಆ ನೆಪವನ್ನು ಇಟ್ಟುಕೊಂಡು ಇಂದು ಕರ್ನಾಟಕ ರಾಜ್ಯವನ್ನು ಕಳಂಕ ಸ್ಥಿತಿಗೆ ನೀವು ಏನು ನಿಲ್ಲಿಸಿದ್ದೀರಿ ಅದನ್ನು ಪ್ರತಿಭಟಿಸಿ ನಾವುಗಳು ಇಂದು ಸಭಾತ್ಯಾಗವನ್ನು ಮಾಡಲು ತೀರ್ಮಾನ ತೆಗೆದುಕೊಂಡಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸದನದಿಂದ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:— ಈಗ ಸರ್ಕಾರ ಏನು ತಿದ್ದುಪಡಿಯನ್ನು ತಂದಿದೆ ಅದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿರುವುದರಿಂದ ಅದನ್ನು ವಿರೋಧಿಸಿ ನಾನು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಶ್ರೀವಾಟಾಳ್ ನಾಗರಾಜ್‌ರವರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ.ಯವರಿಗೆ ಈಗ ಸ್ವಲ್ಪ ಜವಾಬ್ದಾರಿ ಬಂದಿದೆಯೆಂದು ಮತ್ತು ಆ ಜವಾಬ್ದಾರಿಯಿಂದ ಅವರು ಸರಿಯಾದ ದಾರಿಯಲ್ಲಿ ನಡೆಯುತ್ತಾರೆ ಎಂದು ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ ನಾವು ಇವರನ್ನೂ ಸರಿಪಡಿಸುವುದಕ್ಕೆ ಆಗಲಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತ ತಿದ್ದುಪಡಿ ತರುವುದಕ್ಕೆ ಮೊದಲು ಮೊದಲನೇ ಸಭೆಯನ್ನು ಕರೆದ ಬಗ್ಗೆ ಹೇಳಿದರು. ತಿದ್ದುಪಡಿಯನ್ನು ತಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ತರುತ್ತೇವೆ ಎಂಬ ಬಗ್ಗೆ ಚರ್ಚೆಯನ್ನು ಎರಡನೇ ಸಭೆಯಲ್ಲಿ ಮಾಡಬಹುದಾಗಿತ್ತು. ಲೋಪದೋಷಗಳನ್ನು ತಿದ್ದುಪಡಿ ಮಾಡಿ ಯಾವ ರೀತಿಯಲ್ಲಿ ಪಂಚಾಯಿತಿಗಳನ್ನು ಮತ್ತು ಅದಕ್ಕೆ ಚುನಾವಣೆಗಳನ್ನು ಮಾಡಬಹುದು ಎಂಬುದಕ್ಕೆ ಸಂಬಂಧಪಟ್ಟಂತೆ ಎಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸುವ ಸಲುವಾಗಿ ಸಭೆಯನ್ನು ಕರೆಯಲು ಸೌಜನ್ಯತೆಯನ್ನು ಸರ್ಕಾರ ತೋರದೇ ತಪ್ಪೆಸಗಿದೆ. ಆದುದರಿಂದ ಇದನ್ನು ವಿರೋಧ ಮಾಡುತ್ತಾ ನಾನು ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ರೈತಸಂಘದ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷದವರಿಗೆ ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಎಂದು ನಂಬಿಕೆ ಮತ್ತು ಬದ್ಧತೆ ಇಲ್ಲ. ಅವರು 1992ನೇ ಇಸವಿಯಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಇಡೀ ವ್ಯವಸ್ಥೆಯನ್ನು

ವಿಕೃತಗೊಳಿಸಿದರು. ಅದು ಈಗ ಇತಿಹಾಸವಾಗಿದೆ. ಈ ದೃಷ್ಟಿಯಿಂದ ನಾವು ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಬದಲು ಯಾವುದೇ ಪಕ್ಷದ ಜನ ಪ್ರತಿನಿಧಿಗಳಾಗಿದ್ದರೂ ಕೂಡ ಅವರನ್ನೇ ನೇಮಕ ಮಾಡಿರುವ ವಿಷಯಕ್ಕೆ ಕಾಂಗ್ರೆಸ್ ನವರು ಸ್ವಾಗತ ಮಾಡಬಹುದಾಗಿತ್ತು. ಆದರೆ ಅದನ್ನೂ ಕೂಡ ಸ್ವಾಗತ ಮಾಡತಕ್ಕಂಥ ದೊಡ್ಡ ಮನಸ್ಸನ್ನು ಅವರು ತೋರಲಿಲ್ಲ. ಇದೊಂದು ದುರ್ದೈವದ ಸಂಗತಿಯೆಂದು ನಾನಾದರೂ ಭಾವಿಸುತ್ತೇನೆ. ಇನ್ನು ಎರಡನೆಯದಾಗಿ ಅವರು ಏನು ಹೇಳಿದ್ದಾರೆಂದರೆ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿ ಅಧಿಕಾರವನ್ನು ಮೊಟಕುಗೊಳಿಸಿದ್ದೇವೆಂದು ಹೇಳಿದ್ದಾರೆ. ಹೆಚ್ಚು ಸದಸ್ಯರಿರುವುದರಿಂದ ಹೆಚ್ಚು ಜನತಂತ್ರವಾಗಿರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಇವೊತ್ತು ಗೋವಾದ ಉದಾಹರಣೆ ತೆಗೆದುಕೊಂಡರೆ 15 ಸಾವಿರ ಜನಸಂಖ್ಯೆಗೆ ಒಬ್ಬರು ಎಂ.ಎಲ್.ಎ. ಆಗಿ ಆಯ್ಕೆಯಾಗಿ ಬರಬಹುದು. ಆದರೆ ನಮ್ಮ ಉತ್ತರಹಳ್ಳಿ ಕ್ಷೇತ್ರದಿಂದ 7 ಲಕ್ಷ ಜನಸಂಖ್ಯೆಗೆ ಒಬ್ಬರು ಎಂ.ಎಲ್.ಎ. ಆಗಿ ಆಯ್ಕೆಯಾಗಿ ಬರುತ್ತಾರೆ. ಕೇವಲ ಹೆಚ್ಚು ಜನ ಸದಸ್ಯರಿದ್ದಾರೆ ಎಂದಮಾತ್ರಕ್ಕೆ ಅದು ಹೆಚ್ಚು ಜನತಾಂತ್ರಿಕವಾಗಿರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬರುವುದಿಲ್ಲ. ನಾವೇಕೆ 400ರ ಬದಲು 1,000 ಎಂದು ಭಾವಿಸಿಕೊಂಡಿದ್ದೇವೆಂದರೆ ಈ ಹಿಂದೆ 1987 ರಲ್ಲಿ ಮಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಾಗ 1972ರ ಜನಗಣತಿ ಪ್ರಕಾರ ಅದನ್ನು ತೆಗೆದುಕೊಂಡ ನಿರ್ಣಯವಾಗಿತ್ತು. ಆ ನಿರ್ಣಯದಲ್ಲಿ 400 ಜನಗಳಿಗೆ ಒಬ್ಬರು ಆಯ್ಕೆಯಾಗುವ ಹಾಗೆ ಇತ್ತು. ಆದರೆ ಈಗ 1991ರ ಜನಗಣತಿ ಪ್ರಕಾರ 16 ಸಾವಿರ ಜನಸಂಖ್ಯೆ ಇರುವ ಒಂದು ಪ್ರದೇಶದಲ್ಲಿ ನಾವು 400ಕ್ಕೆ ಒಬ್ಬರನ್ನು ಆಯ್ಕೆ ಮಾಡುತ್ತಾ ಹೋದರೆ ಒಟ್ಟಾರೆ 40 ರಿಂದ 45 ಜನರು ಆಯ್ಕೆಯಾಗುತ್ತಾರೆ. ಈ ರೀತಿಯಲ್ಲಿ 40-45 ಜನಗಳು ಸದಸ್ಯರಾಗಿ ಆಯ್ಕೆಯಾಗಿ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿ ಸಭೆಗಳನ್ನು ನಡೆಸುವುದಕ್ಕೆ ಮತ್ತು ಅವರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿಯೂ ಕೂಡ ಬಹಳ ಕಷ್ಟ ಎನ್ನುವ ಕಾರಣಕ್ಕಾಗಿಯೇ ನಾವು 1,000 ಜನಗಳಿಗೆ ಒಬ್ಬರನ್ನು ಆಯ್ಕೆ ಮಾಡಿದರೆ ಸುಮಾರು 16 ರಿಂದ 17 ಜನರು ಆಯ್ಕೆಯಾಗಿ ಕೆಲಸ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯತಿ ಸಭೆಗಳನ್ನು ನಡೆಸಲು ಅನುಕೂಲವಾಗುತ್ತದೆ. ಈ ಕಾರಣಕ್ಕಾಗಿಯೇ ತಿದ್ದುಪಡಿಯನ್ನು ತಂದಿದ್ದೇವೆಯೇ ವಿನಃ ಕೇವಲ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿ ಆ ಜನರಿಗೆ ಅನ್ಯಾಯ ಮಾಡುತ್ತಿದ್ದೇವೆ ಎನ್ನುವುದನ್ನು ಹೇಳುವುದು ಕೂಡ ತಪ್ಪಾಗುತ್ತದೆ. ಇನ್ನು ಎರಡನೆಯದಾಗಿ ನಾವು ಈ ಕಾನೂನಿನ ಪ್ರಕಾರ ತಾಲ್ಲೂಕು ಪಂಚಾಯತಿಗಳನ್ನು ರದ್ದು ಮಾಡಬಹುದು ಎನ್ನುವ ಭಾವನೆಯನ್ನು ವಿರೋಧ ಪಕ್ಷದವರು ನಾವು ಮೂರು ಹಂತದ ಈ ಪಂಚಾಯತ್ ವ್ಯವಸ್ಥೆ ಸಂವಿಧಾನಬದ್ಧವಾಗಿರುವುದರಿಂದ ಯಾರಿಗೂ ಕೂಡ ಅದನ್ನು ಎರಡನೆ ಹಂತ ಮಾಡುವುದಕ್ಕೆ ಅಧಿಕಾರ ಇಲ್ಲ. ಇಲ್ಲಿ ನಾವು ತಂದಿರತಕ್ಕಂಥಾದ್ದು ದೊಡ್ಡ ಗ್ರಾಮ ಪಂಚಾಯಿತಿಗಳನ್ನು ಮಾಡುತ್ತೇವೆ, ಅದು ಒಂದು ಗ್ರಾಮ ಪಂಚಾಯಿತಿ

ಮಟ್ಟದ ಸರ್ಕಾರ. ಎರಡನೆಯದು ತಾಲ್ಲೂಕು ಮಟ್ಟದ ಸರ್ಕಾರ. ಮೂರನೆಯದು ಜಿಲ್ಲಾಪಂಚಾಯತ್ ಮಟ್ಟದ ಸರ್ಕಾರ. ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡುತ್ತಾ, ಗ್ರಾಮ ಸಭೆಗಳನ್ನು ನೀವು ನಡೆಸುತ್ತಾ ಇಲ್ಲ, ಅದಕ್ಕೆ ಹಣಕಾಸನ್ನು ನೀವು ಕೊಡುತ್ತಿಲ್ಲವೆಂದು ಹೇಳಿದರು. ಈ ಎಲ್ಲಾ ತಿದ್ದುಪಡಿಗಳನ್ನು ಕುರಿತಾಗಿ ಕೂಡ ಮಾನ್ಯ ಬಾಬಾಗೌಡ ಪಾಟೀಲರ ನೇತೃತ್ವದಲ್ಲಿ ಅವರ ಸಮ್ಮುಖದಲ್ಲಿ ಇತ್ತೀಚಿನ ದಿನಮಾನ ವರದಿ, ಅಮೆಂಡ್‌ಮೆಂಟ್ಸ್ ಟು ದಿ ಕಾನ್ಸಿಟಿಟ್ಯೂಷನ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನೆಯನ್ನು ಮಾಡಿದರು. ಇದಕ್ಕೆ ಪಶ್ಚಿಮ ಬಂಗಾಳದ ಮಂತ್ರಿಗಳು ಬಂದಿದ್ದರು, ತಮಿಳುನಾಡು ಮಂತ್ರಿಗಳು ಬಂದಿದ್ದರು. ವಿಶ್ವವಿದ್ಯಾಲಯದ ಪ್ರತಿನಿಧಿಗಳು, ಬೇರೆಬೇರೆ ಕಡೆಯಿಂದ ಆಹ್ವಾನಿಸಲ್ಪಟ್ಟ ಪರಿಣಿತರು ಆ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿದ್ದಂತಹ ಅನೇಕ ರಾಜ್ಯಾಂಗದಲ್ಲಿ ಪದ ಪ್ರಯೋಗಗಳು ಏನೇನು ಮಾಡಿದ್ದರು, ಅದು ಅನಾವಶ್ಯಕವಾದಂತಹ ತೊಂದರೆಗಳನ್ನು ಸೃಷ್ಟಿ ಮಾಡುತ್ತದೆ ಎನ್ನುವ ಕಾರಣದಿಂದಲೇ ಇದೆಲ್ಲಾ ಆಮೂಲಾಗ್ರವಾಗಿ ಬದಲಾವಣೆಯಾಗಬೇಕೆನ್ನುವ ಕಾರಣಕ್ಕಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಅಲ್ಲಿ ಮಾನ್ಯ ಬಾಬಾಗೌಡ ಪಾಟೀಲರು ಅಲ್ಲಿದ್ದರು. ಇ.ಎ.ಎಸ್. ವಿಚಾರದಲ್ಲಿ ಕೂಡ ಅವರು ಇದಕ್ಕೆ ಅಪ್ರಸ್ತುತವಾಗಿದ್ದರೂ ಕೂಡ ಆ ವಿಚಾರವನ್ನು ಅವರು ಮಾತನಾಡಿದರು. ಆದರೆ, ಆ ರೀತಿಯಾದ ಎರಡು ದಿವಸಗಳ ಕಾರ್ಯಾಗಾರದಲ್ಲಿ ಮಂತ್ರಿಗಳು ಭಾಗವಹಿಸಿರತಕ್ಕಂಥಾದ್ದು ಕಂಡರೆ, ಇದು ತಿದ್ದಲಿಕ್ಕೆ ಸಾಧ್ಯವಿದೆ ಎನ್ನುವ ಮಾತು ಕೂಡ ಇದೆ. ಇದಕ್ಕಿಂತ ಹೆಚ್ಚಾಗಿ ಗ್ರಾಮ ಸಭೆಗಳ ಕರ್ತವ್ಯಗಳ ಬಗ್ಗೆ ಕೂಡ ಮಾತನಾಡಿದರು. ಆದರೆ ಗ್ರಾಮ ಸಭೆಗಳು ಯಾವರೀತಿಯಾಗಿ ಕರ್ತವ್ಯ ನಿರ್ವಹಿಸಬೇಕು, ನಿರ್ವಹಿಸುವಂತಹ ಸಂದರ್ಭದಲ್ಲಿ ಏನು ತೊಂದರೆಯಾಗುತ್ತದೆ ಎನ್ನುವುದಕ್ಕಾಗಿ ನನ್ನ ಅಧ್ಯಕ್ಷತೆಯಲ್ಲಿ ಮೂರು ಮಂದಿ ಸದಸ್ಯರ ಒಂದು ಸಭೆಯನ್ನು ಕೇಂದ್ರ ಸರ್ಕಾರದಿಂದ ಮಾನ್ಯ ಬಾಬಾಗೌಡ ಪಾಟೀಲರು ಮಾಡಿದ್ದಾರೆ. ಅದರಲ್ಲಿ ಡಾ ಶರ್ಮ ಹಾಗೂ ಚಂದನ ದತ್ತ ಇವರಿಬ್ಬರೂ ಸದಸ್ಯರು ಇರತಕ್ಕಂಥ ಒಂದು ಸಮಿತಿಯನ್ನು ರಚನೆ ಮಾಡಿದ್ದು 2-3 ತಿಂಗಳೊಳಗಾಗಿ ನಾವು ತೀರ್ಮಾನಗಳನ್ನು ಕಾರ್ಯಾಗಾರದಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಅನುಗುಣವಾದ ರೀತಿಯಲ್ಲಿ ಕೊಡಬೇಕು ಎಂದು ಈ ಒಂದು ಸಮಿತಿಯನ್ನು ಕೇಂದ್ರ ಸರ್ಕಾರ ರಚನೆ ಮಾಡಿದೆ. ಅದಕ್ಕೆ ನಾವು ಈಗ ಶಿಫಾರಸ್ಸು ಮಾಡುವುದಕ್ಕೆ ಮೊದಲನೆ ಸಭೆಯನ್ನು ಈಗಾಗಲೇ ಬೆಂಗಳೂರಿನಲ್ಲಿ ಮಾಡಿದ್ದೇವೆ. ಎರಡು ಹಾಗೂ ಮೂರನೆ ಸಭೆ ಆದತಕ್ಷಣ ಈ ವಿಚಾರವನ್ನು ನಾವು ಅವರ ಮುಂದೆ ಇಡುವವರಿದ್ದೇವೆ. ಯಾವುದೇ ಕಾನೂನಿನ ಪರಿಭಾಷೆ ಯಾವಾಗಲೂ ಪರಿಪೂರ್ಣವಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಸಣ್ಣ ಗ್ರಾಮಪಂಚಾಯಿತಿಗಳು ಅಥವಾ ದೊಡ್ಡ ಗ್ರಾಮಪಂಚಾಯಿತಿಗಳಿಂದ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸುತ್ತೀರಿ ಎಂದು ಹೇಳುತ್ತಾರೆ. ಆದರೆ, ಅಲ್ಲಿ ಕೆಲವು ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅನುಕೂಲವಾಗುತ್ತದೆ. ಈಗ 5-10 ಕಿಲೋಮೀಟರ್

ರಸ್ತೆಗಳನ್ನು ಮಾಡಬೇಕಾಗಿದ್ದರೆ ಚಿಕ್ಕ ಗ್ರಾಮಪಂಚಾಯಿತಿಗಳು ತಮ್ಮಲ್ಲಿರತಕ್ಕಂಥ ಲಭ್ಯವಾದ ಹಣದಲ್ಲಿ ಅಂತಹ ರಸ್ತೆಯನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಸಂಪರ್ಕ ಸಾಧಿಸಿರತಕ್ಕಂತದ್ದು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಇದೇ ದೊಡ್ಡ ಗ್ರಾಮಪಂಚಾಯಿತಿಗಳು ಆದಾಗ ಹೆಚ್ಚು ಹಣ ಕೂಡ ಕೈಯಲ್ಲಿ ಸಿಗುತ್ತದೆ. ಆಗ ಮೂಲಭೂತವಾದಂತಹ ಸೌಕರ್ಯವನ್ನು ಕಲ್ಪಿಸುವುದಕ್ಕೆ, ಅಲ್ಲಿ ರಸ್ತೆ ಮಾಡತಕ್ಕಂಥ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸಂಪನ್ಮೂಲಗಳನ್ನು ಹೆಚ್ಚು ಮಾಡುವುದರ ಬಗ್ಗೆ ಅವರು ಆತಂಕ ವ್ಯಕ್ತ ಮಾಡಿದರು. ಇನ್ನು ನಿಮ್ಮ ಕಾಯಿದೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಅನುದಾನ ಕೊಡುವ ಹಾಗೆ ಇಲ್ಲ. ಆದ್ದರಿಂದ 56 ಕೋಟಿ ರೂಪಾಯಿಗಳ ಅನುದಾನವನ್ನು ತಾವು ಕೊಡುತ್ತೀರಿ. 2,600 ಗ್ರಾಮ ಪಂಚಾಯಿತಿಗಳು ಆದರೆ ಇದು 26 ಕೋಟಿ ರೂಪಾಯಿಗಳಾಗುತ್ತದೆ ಎನ್ನುವ ಮಾತನ್ನು ಮಾನ್ಯ ಘೋರ್ಪಡೆಯವರು ಈ ಬಗ್ಗೆ ಮಾತನಾಡಿದರು. ಆದರೆ ಅಂತಹ ಆತಂಕಕ್ಕೆ ಅವಕಾಶ ಇಲ್ಲ. ಈಗಾಗಲೇ ಈ ವಿಚಾರ ಪ್ರಸ್ತಾಪ ಮಾಡಿದ್ದೇವೆ. ಸರ್ಕಾರ ಗ್ರಾಮಪಂಚಾಯಿತಿ ನೌಕರರಿಗೆ ಹೆಚ್ಚು ಸಂಬಳ ಕೊಡಬೇಕು ಎನ್ನುವುದರ ಬಗ್ಗೆ ಇಷ್ಟರಲ್ಲೇ ತೀರ್ಮಾನ ತೆಗೆದುಕೊಳ್ಳತಕ್ಕಂಥಾದ್ದು ಇದೆ. ಸನ್ಮಾನ್ಯ ಹಣಕಾಸು ಸಚಿವರು ಈ 56 ಕೋಟಿ ರೂಪಾಯಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತಹ ರೀತಿಯಲ್ಲಿ ವ್ಯಾಪಕವಾದ ವೃತ್ತಿಯನ್ನು ಪಡೆದಿರುವಂತಹ ಗ್ರಾಮಪಂಚಾಯಿತಿಗಳಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಆ ದೃಷ್ಟಿಯಿಂದ ಅವರು ಏನೆಲ್ಲಾ ಪ್ರಸ್ತಾಪ ಮಾಡಿದರು, ಈ ಪ್ರಸ್ತಾಪ ಮಾಡಿರತಕ್ಕಂಥ ಎಲ್ಲಾ ವಿಷಯಗಳು ಕೂಡ ಪೂರ್ವಾಗ್ರಹ ದೃಷ್ಟಿಕೋನದಿಂದ ಮಾಡಿರತಕ್ಕಂಥಾದ್ದು. ಈಗ ಇನ್ನು ಈ ವಿಚಾರದಲ್ಲಿ ಹೈಕೋರ್ಟ್‌ನವರು ಕೊಡಬೇಕಾಗಿರತಕ್ಕಂಥ ತೀರ್ಮಾನಕ್ಕೆ ಕಾಯ್ದಿರಿಸತಕ್ಕಂಥ ತೀರ್ಪು ಇರುವುದರಿಂದ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿರತಕ್ಕಂಥಾದ್ದು ತಮ್ಮ ವಿವೇಚನೆಗೆ ಬಿಟ್ಟಿದ್ದರಿಂದ ತಾವು ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದರಿಂದ ಈ ಸೂಚನೆಯನ್ನು ತಿರಸ್ಕರಿಸಬೇಕು ಎಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಈಗ 69ರ ನಿಯಮದ ಕೆಳಗಡೆ ತೆಗೆದುಕೊಂಡಿರುವ ವಿಷಯಕ್ಕೆ ರೂಲಿಂಗ್ ಕೊಡುವುದು ಏನು ಅಗತ್ಯ ಇಲ್ಲ. The matter is closed. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು

(ಸಭೆಯು 6 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 11.3.99 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)